ಶ್ರೀ ವಿದ್ಯಾರ[illegible]

ಕರ್ನಾಟಕ ಸಾಮ್ರಾಜ್ಯ

ಸಂಪುಟ ೧—ಭಾಗ ೨



ಶ್ರೀ ವಿದ್ಯಾರಣ್ಯಮಹಾಸ್ವಾಮಿ

—ರಾ. ಹ. ದೇಶಪಾಂಡೆ, ಎಂ.ಎ.

೧೯೨೭

2921—25.

ಶ್ರೀ ವಿದ್ಯಾರಣ್ಯ ಪುಸ್ತಕಮಾಲೆ ೫.

ಕರ್ನಾಟಕ ಸಾಮ್ರಾಜ್ಯ

ಮೊದಲನೆಯ ಸಂಪುಟ, ಭಾಗ ೧

ಮುಂಬಯಿ ವಿಶ್ವವಿದ್ಯಾಲಯದ ಗೌರವ ಸಭಾಸದರಾದ
ರಾಮಚಂದ್ರ ಹಣಮಂತ ದೇಶಪಾಂಡೆ, ಎಂ.ಎ.
ಯವರು ಬರೆದುದನ್ನು

ಶ್ರೀ ವಿದ್ಯಾರಣ್ಯ ಪ್ರಕಾಶಕ ಸಂಸ್ಥೆಯ ಆಡಳಿತೆಗಾರರಾದ
ಶ್ರೀಪಾದ ರಾಮಚಂದ್ರ ದೇಶಪಾಂಡೆ, ಬಿ.ಎಸ್ ಸಿ.
ಯವರು ಪ್ರಸಿದ್ಧಪಡಿಸಿದರು.

ಮೊದಲನೆಯಾವೃತ್ತಿ

ಬೆಂಗಳೂರು ಸಿಟಿ:
ಬೆಂಗಳೂರು ಪ್ರೆಸ್, ಮೈಸೂರು ರೋಡ್
೧೯೨೭

೮

ರಾ. ಹ. ದೇಶಪಾಂಡೆಯವರು ಬರೆದ ಪುಸ್ತಕಗಳು

---

೧. ಚರಿತ್ರಸಂಗ್ರಹ, ಪೂರ್ವಾರ್ಧ, ಸಚಿತ್ರ	ಬೆಲೆ ರೂ.	೧	೪	೦
೨. ಅಕ್ಬರ ಚಕ್ರವರ್ತಿ ಚರಿತ್ರೆ ,, ..	,,	೧	೧	೦
೩. ಕಥೆಗಳನ್ನೊಳಗೊಂಡ ಬೀರಬಲ್ಲನ ಚರಿತ್ರೆ ಸಚಿತ್ರ	,,	೧	೬	೦
೪. ಛತ್ರಪತಿ ಸಿವಾಜಿ ಮಹಾರಾಜ ಸಚಿತ್ರ ..	,,	೨	೧೨	೦
೫. ಮೊಗಲ್ಬಾದಶಾಹಿ, ಪೂರ್ವಾರ್ಧ ..	,,	೦	೧೪	೦
೬. ಧರ್ಮಸ್ಥಾಪಕರೂ ಧರ್ಮಸುಧಾರಕರೂ ಸಚಿತ್ರ	,,	೦	೬	೦
೭. ಹೈದರಲ್ಲಿ ಟೀಪು ಸುಲ್ತಾನ ..	,,	೦	೫	೦
೮. ನಾನಾಫಡನವೀಸ ..	,,	೦	೪	೦
೯. ಗ್ರೇಟ್ ಬ್ರಿಟನ್ ಅಯರ್ಲಂಡ ದೇಶಗಳ ಸಂಕ್ಷಿಪ್ತ ವರ್ಣನೆ ..	,,	೦	೬	೦
೧೦. ನೂರಜಹಾನ ಮಹಾರಾಣಿ ..	ಅಚ್ಚಿನಲ್ಲಿದೆ.			

೧೧. ಕರ್ನಾಟಕ ಸಾಮ್ರಾಜ್ಯ ೨ ನೆಯ ಸಂಪುಟ, ಭಾಗ ೧ ಸಿದ್ಧವಾಗುತ್ತಲಿದೆ.

ವಿ ಷ ಯಾ ನು ಕ್ರ ಮ ಣಿ ಕೆ

ಪುಟಗಳು

ಪುಟಗಳು

ಚಿತ್ರಗಳು

ಒಪ್ಪೋಲೆ

ಪುಟ	ಸಾಲು	ತಪ್ಪು	ಒಪ್ಪು
೧೭೫	೨೪	ಅಧ್ಯಯರ್ನ	ಅಧ್ಯಯನ
೧೭೮	೧೨	ಮೇಲ್ಗೆಯ್ಯವರಾದರೆಂದು	ಮೇಲ್ಗಯ್ಯವರಾದರೆಂದು
೧೯೬	೨೬	ಪುಟ ೬೭	ಪುಟ ೬೭. ಕೊನೆಯಲ್ಲಿ ಕೊಟ್ಟ ಪರಿಶಿಷ್ಟ ನೋಡಿರಿ
೨೦೬	೨	ಸಾವಂತರನ್ನು	ಸಾಮಂತರನ್ನು
೨೦೮	೧೮–೧೯	ಮಹಾ ಪರಾಕ್ರಮಶಾಲಿಯಾದ	ಮಹಾ ಪರಾಕ್ರಮಶಾಲಿಗಳಾದ
೨೩೧	೮–೧೪	ಹರ್ಷವರ್ಧನನ್ನು	ಹರ್ಷವರ್ಧನನನ್ನು
೨೫೯	೨	ಬರೆದಿರುತ್ತೇವೆ	ಬರೆದಿರುತ್ತೇವೆ. ಪರಿಶಿಷ್ಟ ನೋಡಿರಿ.
೨೮೫	೧೯	ಕಾರ್ತೀಕ	ಕಾರ್ತಿಕ
೨೯೭	೧೫	,,	,,

ಕರ್ನಾಟಕ ಸಾಮ್ರಾಜ್ಯ

೧ ನೆಯ ಸಂಪುಟ, ಭಾಗ ೨

---

೧ ನೆಯ ಅಧ್ಯಾಯ

ಚಾಳುಕ್ಯ ವಂಶವಿಚಾರ

ನಮ್ಮ ತಾಯ್ನಾಡಿನೊಳಗೆ ಬಹು ಬುನಾದಿಕಾಲದಿಂದ ನಂದರೂ ಮೌರ್ಯರೂ ಸಾತವಾಹನರೂ ಬಾಣರೂ ಗಂಗರೂ ಪಲ್ಲವರೂ ಕದಂಬರೂ ಆಳಿದರೆಂದು ಹಿಂದಿನ ಅಧ್ಯಾಯಗಳಲ್ಲಿ ಬರೆದಿರುತ್ತೇವಷ್ಟೇ. ಇವರೊಳಗೆ ನಂದಮೌರ್ಯರು ಪಾಟಲಿಪುತ್ರದಲ್ಲಿ ಆಳುತ್ತಿದ್ದುದರಿಂದ ನಮ್ಮ ಕರ್ನಾಟಕವು ಆಳುನಾಡಾಗಿತ್ತೇ ಹೊರತು ಅರಸುನಾಡಾಗಿದ್ದಿಲ್ಲ. ಸಾತವಾಹನರ ಹಿರಿಮನೆತನದ ರಾಜಧಾನಿಯು ನಮ್ಮ ತಾಯ್ನಾಡಿನಲ್ಲಿದ್ದರೂ ಕಿರಿಮನೆತನಗಳು ಮಧ್ಯದೇಶದಲ್ಲಿ ಹೆಚ್ಚು ಪ್ರಬಲವಾದ್ದರಿಂದ ಕರ್ನಾಟಕದ ಹೆಸರು ವಿಶೇಷವಾಗಿ ಬೆಳಕಿಗೆ ಬರಲಿಲ್ಲ. ಬಾಣ ಪಲ್ಲವರ ರಾಜಧಾನಿಗಳು ತಮಿಳು ತೆಲಗು ನಾಡುಗಳಿಗೆ ಸಂಬಂಧಿಸಿದಷ್ಟು ಕರ್ನಾಟಕಕ್ಕೆ ಸಂಬಂಧಿಸಿದ್ದಿಲ್ಲ. ಗಂಗ ಕದಂಬರು ಶುದ್ಧ ಕನ್ನಡಿಗರಾಗಿ ಕರ್ನಾಟಕದಲ್ಲಿ ವೈಭವದಿಂದ ಆಳಿದರೂ ಅವರು ಕಿರಿಯರಸರಾಗಿದ್ದರೇ ಹೊರತು ಹಿರಿಯರಸ (ಸಾರ್ವಭೌಮ) ರಾಗಿದ್ದಿಲ್ಲ. ೬ ನೆಯ ಶತಮಾನದ ಮಧ್ಯಭಾಗದಲ್ಲಿ ಉದಯಕ್ಕೆ ಬಂದ ಕನ್ನಡಿಗರಾದ **ಚಾಳುಕ್ಯರು** ಕರ್ನಾಟಕದ ನಡುವಿದ್ದ ಬಾದಾಮಿ (ವಾತಾಪಿಪುರ) ಯನ್ನು ತಮ್ಮ ನೆಲೆವೀಡಾಗಿ ಮಾಡಿಕೊಂಡು, ನರ್ಮದಾನದಿಯಿಂದ ಕುಮಾರೀ ಭೂಶಿರದ ವರೆಗೆ ಇಡಿ ದಕ್ಷಿಣಾಪಥವನ್ನು ತಮ್ಮ ಸ್ವಾಧೀನವಾಗಿ ಮಾಡಿಕೊಂಡು, ಸಾರ್ವಭೌಮರೆಂದು ಹೆಸರುವಾಸಿಯಾಗಿ, ನಮ್ಮ ತಾಯ್ನಾಡಿನ ನೆಗಳ್ತೆಯನ್ನು ನಾಲ್ಕೂ ದಿಕ್ಕಿಗೂ ಹಬ್ಬಿಸಿದರೆಂದು ಬರೆಯಲಿಕ್ಕೆ ಸಂತೋಷಪಡುತ್ತೇನೆ.

ಈ ಚಾಳುಕ್ಯರು ಯಾರು ? ಇವರ ಹುಟ್ಟಿಡೆ ಎಲ್ಲಿ ? ಇವರ ಮೂಲ ಸ್ಥಾನ ಯಾವುದು ? ಇವರ ಪೂರ್ವಾವಸ್ಥೆ ಎಂತಹದು ? ಇವರ ಮೊದಲಿನ ವೃತ್ತಿ ಯಾವುದು ? ಇವರಿಗೆ ವಾತಾಪಿಯು ಹೇಗೆ ಸಿಕ್ಕಿತು ? ಇವರು ಅರಸೊತ್ತಿಗೆಯನ್ನು ಹೇಗೆ ದೊರಕಿಸಿದರು ? ಇವರ ಅರಸು ಮನೆತನವನ್ನು ನೆಲಸಿದವರಾರು ? ಈ ಮುಂತಾದ ಗೂಢ ಪ್ರಶ್ನೆಗಳನ್ನು ಸರ್ವಸಮರ್ಪಕವಾಗಿ ಬಿಡಿಸಲಿಕ್ಕೆ ಸಾಕಷ್ಟು ಸಾಧನ ಸಾಮಗ್ರಿಗಳು ನಮಗೆ ಇನ್ನೂ ದೊರೆಯದಿದ್ದರೂ ಸಾಧಾರಣವಾಗಿ ಇವುಗಳ ವಿವೇಚನವನ್ನು ಮಾಡಲಿಕ್ಕೆ ಅಡ್ಡಿಯಿಲ್ಲೆಂದು ತೋರುತ್ತದೆ.

ಈ ಚಾಳುಕ್ಯರು ಯಾರು, ಎಲ್ಲಿಯವರು ಎಂಬ ವಿಷಯವು ವಾದಗ್ರಸ್ತವಾಗಿರುತ್ತದಷ್ಟೇ. ಬೇರೆ ಬೇರೆ ಪಂಡಿತರು ಬೇರೆ ಬೇರೆ ಅಭಿಪ್ರಾಯವನ್ನು ವ್ಯಕ್ತಗೊಳಿಸಿದ್ದಾರೆ. ಅದೇಕೆ, ಚಾಳುಕ್ಯ ಸಾರ್ವಭೌಮರೇ ತಂತಮ್ಮ ಶಾಸನಗಳಲ್ಲಿ ತಮ್ಮ ಪೂರ್ವಜರ ವಂಶಾವಳಿಯನ್ನು ತಮ್ಮ ಮನೆತನದ ಪೂರ್ವವೃತ್ತಾಂತವನ್ನೂ ಭಿನ್ನ ಭಿನ್ನವಾಗಿ ಕೊರಿಸಿಟ್ಟಿದ್ದಾರೆ. ಆದಕಾರಣ ಬೇರೆ ಬೇರೆ ಜನರ ಮುಖ್ಯ ಮುಖ್ಯವಾದ ಅಭಿಪ್ರಾಯಗಳನ್ನು ಕೊಟ್ಟು, ಬಳಿಕ ಅವುಗಳಲ್ಲಿದ್ದ ತಥ್ಯಾಂಶಗಳ ಬಗ್ಗೆ ವಿಚಾರಮಾಡುವೆವು.

೧. ವಿನ್ಸೆಂಟ ಸ್ಮಿಥರ ಅಭಿಪ್ರಾಯವೇನೆಂದರೆ*:—ಚಾಳುಕ್ಯರು ತಾವು ರಜಪೂತರೆಂದು ಹೇಳಿಕೊಳ್ಳುತ್ತಿದ್ದರು. ಹಿಂದುಗಡೆ ಆಳಿದ ಕಲ್ಯಾಣದ ಚಾಳುಕ್ಯರು ತಾವು ಅಯೋಧ್ಯೆಯ ಅರಸುಮನೆತನದವರೆಂದು ಶಾಸನಗಳಲ್ಲಿ ಬರೆಯಿಸಿದುದಕ್ಕೆ ಐತಿಹಾಸಿಕ ಬೆಲೆಯಿದ್ದಂತೆ ಕಂಡುಬರುವುದಿಲ್ಲ. ಚಾಳುಕ್ಯರು ಅಥವಾ ಸೋಲಂಕಿಯವರು **ಚಾಪ**ರೆಂಬ ಗುರ್ಜರ ಬಣಕ್ಕೆ ಸೇರಿದವರಾಗಿದ್ದರೂ ಆಗಿರಬಹುದು. ಇವರು ಆ ಪಂಗಡಕ್ಕೆ ಸೇರಿದ್ದು ನಿಜವಾಗಿದ್ದರೆ ಇವರು ಪರಕೀಯ ಕುಲದ ಗುರ್ಜರಾಗಿದ್ದು ದಕ್ಷಿಣಾಪಥಕ್ಕೆ ಬಂದು ತಮ್ಮ ರಾಜ್ಯವನ್ನು ಅಲ್ಲಿ ಸ್ಥಾಪಿಸಿದರೆಂದು ಊಹಿಸ ಬಹುದು.

---

* ಭರತಖಂಡದ ಪ್ರಾಚೀನೇತಿಹಾಸ, ಪುಟ ೪೨೪.

೨. ಲುಯಿ ರಾಯಸರ ಅಭಿಪ್ರಾಯವೇನಂದರೆ*:—ಕ್ರಿಸ್ತ ಶಕದ ಆರಂಭದ ಶತಮಾನಗಳಲ್ಲಿ ಏಸಿಯಾ ಖಂಡದ ಮಧ್ಯ ಭಾಗದಲ್ಲಿ ತೈಗ್ರೀಸ ಮತ್ತು ಯುಫ್ರೇತೀಸ ಹೊಳೆಗಳ ದಂಡೆಯ ಮೇಲೆ **ಸೆಲುಸಿಡಿ, ಅರಸಿಡಿ** ಎಂಬ ಜನರು ವಾಸಿಸುತ್ತಿದ್ದರು. ಇವರೊಳಗೆ ಕಡು ಹಗೆತನವಿದ್ದುದರಿಂದ ಇವರು ಎಡೆಬಿಡದೆ ತಂತಮ್ಮೊಳಗೆ ಜಗಳಾಡುತ್ತಿದ್ದರು. ಸೆಲುಸಿಡಿಯ ಒಂದು ಪಂಗಡಕ್ಕೆ **ಸೆಲುಕಿಯಾ** ಎಂಬ ಹೆಸರಿತ್ತು ಮತ್ತು **ಪಾರ್ಥಿಯರು** ಅರಸಿಡಿ ಪಂಗಡಕ್ಕೆ ಸೇರಿದವರಾಗಿದ್ದರು. ಚಾಳುಕ್ಯರು ಈ ಸೆಲುಕಿಯಾ ಮನೆತನದವರಾದ್ದರಿಂದಲೂ ಪಲ್ಲವರು ಪಾರ್ಥಿಯರಿಗೆ ಸಂಬಂಧಿಸಿದವರಾದ್ದರಿಂದಲೂ ಚಾಳುಕ್ಯರಿಗೂ ಪಲ್ಲವರಿಗೂ ಹಾವು ಮುಂಗಲಿಗಳ ದ್ವೇಷದಂತೆ ಆನುವಂಶಿಕ ದ್ವೇಷವು ಬಿದ್ದಿತ್ತು.

೩. ಪಂಡಿತ ಹೇ. ರಾಯಚೌಧ್ರಿಯವರು ಬರೆಯುವುದೇನಂದರೆ:— ಬೃಹತ್ಸಂಹಿತೆಯ ೧೪ ನೆಯ ಖಂಡ ೮ ನೆಯ ಅಧ್ಯಾಯದಲ್ಲಿ **ಶೌಲಿಕ**ರೆಂಬವರು ವಿದರ್ಭ ಅಥವಾ ವರ್‍ಹಾಡದ ನಿವಾಸಿಗಳಾಗಿದ್ದರೆಂದು ಬರೆದಿದೆ. ಮಗಧ ರಾಜ್ಯದ ಶಾಸನಗಳಲ್ಲಿ ೬ ನೆಯ ಶತಮಾನದ ಮಧ್ಯದಲ್ಲಿ **ಶುಲಿಕ**ರೆಂಬುವರು ಅಸಂಖ್ಯ ರಾಹುತರೊಡನೆ ಆ ರಾಜ್ಯದ ಮೇಲೆ ದಾಳಿ ಮಾಡುತ್ತಿದ್ದರೆಂದು ಬರೆದಿದೆ. ಮಹಾಕೂಟದ ಜಯಸ್ತಂಭದ ಮೇಲೆ **ಚಾಲಿಕ್ಯ**ಮನೆತನದ ೧ ನೆಯ ಕೀರ್ತಿವರ್ಮನು ಅಂಗ, ವಂಗ, ಮಗಧ ದೇಶಗಳ ದಂಡನ್ನು ಸೋಲಿಸಿದನೆಂದು ಬರೆದಿದೆ. ಆದಕಾರಣ ಬೃಹತ್ಸಂಹಿತೆಯ **ಶೌಲಿಕ**ರೂ ಶಾಸನಗಳ ಶುಲಿಕ, ಸೋಲಿಕ, ಸೋಲಂಕಿ, ಚಾಲಿಕ್ಯರೂ ಬಹುಶಃ ಒಂದೇ ಆಗಿರಬಹುದು†.

೪. ಜೆ. ಜೆ. ಡುಬ್ರುಲರು ಬರೆಯುವುದೇನಂದರೆ:—**ಉಂಡಿವಾಟಿಕಾ** ಎಂಬಲ್ಲಿ ದೊರೆತ ೬ ನೆಯ ಶತಮಾನದ ಆರಂಭಕಾಲದ ಒಂದು ಶಾಸನದಲ್ಲಿ **ಜಯಸಿಂಹ**ನೆಂಬುವನು **ಹರಿವಾತ್ಸಕೊಟ್ಟದ** ಕೋಟೆಯು

---

* ಶಾಸನದಿಂದ ತಿಳಿಯುವ ಮೈಸೂರು ಕೊಡಗು ಪ್ರಾಂತಗಳು. ಪುಟ ೬೨.

† ಪ್ರಾಚೀನ ಭರತಖಂಡದ ರಾಜಕೀಯ ಇತಿಹಾಸ, ಪುಟ ೩೦೪.

ಮುಖ್ಯಸ್ಥನಾಗಿದ್ದನೆಂದು ಬರೆದಿದೆ. ಈ ಜಯಸಿಂಹನೇ ಚಾಳುಕ್ಯರ ಮೂಲಪುರುಷನಾಗಿರಬಹುದೇನು? **ಇಂದುಕಾಂತಿ** ಎಂಬ ಊರಿನವನಾದ ೧ನೆಯ ಪುಲಕೇಶಿಯು ಕದಂಬ ಹರಿವರ್ಮನ ದಂಡನ್ನು ಸೋಲಿಸಿ ವಾತಾಪಿಯನ್ನು ಹಿಡಿದುಕೊಂಡು ಅದನ್ನು ತನ್ನ ರಾಜಧಾನಿಯಾಗಿ ಮಾಡಿಕೊಂಡನೆಂದು ಊಹಿಸಲಿಕ್ಕೆ ಆಸ್ಪದ ದೊರೆಯುತ್ತದೆ*.

ಈ ನಾಲ್ಕು ಅಭಿಪ್ರಾಯಗಳಲ್ಲಿ ೨ನೆಯದಾದ ಲುಯಿ ರಾಯಸರ ಅಭಿಪ್ರಾಯವು ತೀರ ಅಗ್ರಾಹ್ಯವಾಗಿರುತ್ತದೆಂದು ವಾಚಕರು ಒಮ್ಮನಸ್ಸಿನಿಂದ ಒಡಂಬಡಬಹುದು. ಬಯಕೆಯೇ ಆರಯ್ಕೆಯ ತಂದೆ ಎಂಬ ಪಾಶ್ಚಿಮಾತ್ಯರ ನಾಣ್ಣುಡಿಯನ್ನು ಓದುವವರು ಕೇಳಿರಬಹುದು. ಈ ಗಾದೆಗನುಸರಿಸಿ ಕೆಲಪಾಶ್ಚಿಮಾತ್ಯ ಬರಹಗಾರರು ತಾವು ಪರಕೀಯರಾಗಿದ್ದುದರಿಂದಲೋ ಭಾರತೀಯರಲ್ಲಿ ದೊಡ್ಡ ಪರಾಕ್ರಮಶಾಲಿಗಳು ಹುಟ್ಟಲಾರರೆಂಬ ತಪ್ಪು ತಿಳಿವಳಿಕೆಯಿಂದಲೋ ತಾವು ಹೆಚ್ಚಿನವರೆಂಬ ದುರಭಿಮಾನದಿಂದಲೋ ನಮ್ಮೊಳಗೆ ಆಗಿ ಹೋದ ದೊಡ್ಡ ದೊಡ್ಡ ಮನೆತನಗಳು ಪರಕೀಯವೆಂದು ಕೂಗಿ ಹೇಳಲಿಕ್ಕೆ ನೆವನಗಳನ್ನು ಹುಡುಕುತ್ತಿರುತ್ತಾರೆ. ಇಂತಹರಿಗೆ ಅಷ್ಟಿ ತಪ್ಪಿ ಅಲ್ಪ ಸ್ವಲ್ಪ ಶಬ್ದರೂಪ-ಸಾಮ್ಯತೆಯು ಸಿಕ್ಕಿದರೆ ಸಾಕು, ಅವರ ಹಿಗ್ಗು ಹೊಟ್ಟೆ ಹಿಡಿಸಲಾರದಷ್ಟಾಗಿ ಅವರ ಬುದ್ಧಿಯನ್ನು ಕೆಡಿಸುವುದರಿಂದ, ನಿರಾಧಾರವಾದ ಸಿದ್ಧಾಂತಗಳು, ಹುತ್ತಿನೊಳಗಿಂದ ಇರುವೆಗಳು ಹೊರಬೀಳುವಂತೆ, ಒಂದರ ಹಿಂದೊಂದು ಬೆಳಕಿಗೆ ಬರಲಾರಂಭಿಸುತ್ತವೆ. ಪಲ್ಲವರು ಪರದೇಶದವರೆಂಬ ಬಗೆಯ ಇಂತಹದೊಂದು ಸಿದ್ಧಾಂತವು ನಿರಾಧಾರವಾದುದೆಂದು ಹಿಂದೆ ಬರೆದಿರುತ್ತೇವಷ್ಟೇ. ಚಾಳುಕ್ಯರು ಪರದೇಶದವರೆಂಬ ಸಿದ್ಧಾಂತವು ಅದಕ್ಕೂ ಹೆಚ್ಚು ನಿರಾಧಾರವಾದ್ದೆಂದು ಇಲ್ಲಿ ಸಾರಿ ಹೇಳುತ್ತೇವೆ.

ವ್ಹಿನ್ಸೆಂಟ ಸ್ಮಿಥರ ಅಭಿಪ್ರಾಯವು ಲುಯಿ ರಾಯಸರ ಅಭಿಪ್ರಾಯದ ಸೂಕ್ಷ್ಮವಾದ ಸೌಮ್ಯಸ್ವರೂಪವೆಂದು ಧಾರಾಳವಾಗಿ ಹೇಳ

---

* ಶ್ರಿತೇಂದುಕಾಂತಿರಪಿ ಶ್ರೀವಲ್ಲಭೋಪಿ । ಅಯಾಸೀತ್ವಾತಾಪಿಪುರೀವಧೂವರತಾಮ್ ॥ ಇ. ಆ, ಸ. ೫, ಪುಟ. ೬೭.

ಒಹುದು. ಚಾಳುಕ್ಯರು ಚಾಪರೆಂಬ ಗುರ್ಜರ ಜಣಕ್ಕೆ ಸೇರಿದವರೆಂಬ ಬಗ್ಗೆ ಅವರ ಬಯಕೆಯು ಹೊರತು ಬೇರೆ ಯಾವ ಸಬಲಕಾರಣಗಳು ತೋರುವುದಿಲ್ಲ. ಕಕ್ಕಿಗೆ ವಿನಾಸೆ ಬಂದಿದ್ದರೆ ಆಕೆಯು ಕಕ್ಕನಾಗುತ್ತಿದ್ದ ಳೆಂಬ ಮಾತು ನಿಜವಾದುದೇ ಸರಿ. ಚಾಳುಕ್ಯರು ಚಾಪರಾಗಿದ್ದರೆ, ಅವರು ಪರಕೀಯರೇ ಸರಿ. ಆದರೆ ಅವರು ಚಾಪರಾಗಿದ್ದರೆಂಬುದಕ್ಕೆ ಸಾಕಷ್ಟು ಆಧಾರಗಳು ಇಲ್ಲುದರಿಂದ ಚಾಳುಕ್ಯರು ಈ ದೇಶದವರು ಇಷ್ಟೇ ಅಲ್ಲ, ಕರ್ನಾಟಕದವರೇ ಆಗಿದ್ದರೆಂದು ಮುಂದೆ ಸಿದ್ಧಮಾಡಿ ತೋರಿಸುವೆವು.

ಪಂಡಿತ ರಾಯಚೌದ್ರಿಯವರು ವಿದರ್ಭದ ನಿವಾಸಿಗಳಾದ ಶೌಲಿ ಕರೇ ಮಗಧರಾಜ್ಯದ ಮೇಲೆ ದಂಡೆತ್ತಿ ಹೋದ ಶುಲಿಕರಾಗಿರಬಹು ದೆಂತಲೂ ಅವರೇ ಬಾದಾಮಿಯ ಚಾಲಿಕ್ಯರಾಗಿರಬಹುದೆಂತಲೂ ಶಬ್ದ ಸಾದೃಶ್ಯದಿಂದ ಅನುಮಾನ ಮಾಡುತ್ತಾರೆ. ಶಬ್ದಸಾದೃಶ್ಯವು ಬಲಿಷ್ಠ ವಾದ ಆಧಾರವಲ್ಲ. ಆದ್ದರಿಂದ ಹೊಸ ಶೋಧಗಳು ಹೊರಬೀಳುವ ವರೆಗೆ ಈ ಅನುಮಾನವು ವಿಚಾರಾರ್ಹವಾಗಿರುತ್ತದೆಂದು ಹೇಳಬಹುದು.

ಜಿ. ಜೆ. ಡುಬ್ರುಲರ ಬರಹದಿಂದ ಯಾವ ಅನುಮಾನವನ್ನೂ ಮಾಡಲಿಕ್ಕೆ ಬರುವಂತಿಲ್ಲ. ಹರಿವತ್ಸಕೊಟ್ಟದ್ದ ಜಯಸಿಂಹನೇ ಚಾಳುಕ್ಯ ವಂಶದ ಮೂಲಪುರುಷನಾದ ಜಯಸಿಂಹನಾಗಿದ್ದನೆಂಬುದಕ್ಕೆ ಯಾವ ಆಧಾರವು ಇನ್ನು ದೊರೆತಿಲ್ಲ. ಇದಲ್ಲದೆ ಹರಿವತ್ಸಕೊಟ್ಟವು ಎಲ್ಲಿರುತ್ತ ದೆಂಬುದು ಗೊತ್ತಾಗಿಲ್ಲ. ಇಂದುಕಾಂತಿಯು ಊರ ಹೆಸರೆಂಬುದಕ್ಕೆ ಪ್ರಮಾಣವೇನು ? ಊರಾಗಿದ್ದರೆ, ಅದು ಬಾದಾಮಿಯ ಸೆರೆಯಲ್ಲಿತ್ತೋ ಮತ್ತೆ ಎಲ್ಲಿಯಾದರೂ ಇತ್ತೋ ತಿಳಿಯುವುದಿಲ್ಲ. ಇವರು ಮಾಡಿದ ಸಂಶಯಾತ್ಮಕವಾದ ಸೂಚನೆಗಳು ಹೊಸ ಆಧಾರಗಳನ್ನು ಬೇಡುತ್ತವೆ.

ಡಾಕ್ಟರ ಭಾಂಡಾರಕರರಾಗಲಿ ಡಾಕ್ಟರ ಫ್ಲೀಟರಾಗಲಿ ಈ ಚಾಳು ಕ್ಯರು ಎಲ್ಲಿಯವರೆಂಬ ಪ್ರಶ್ನವನ್ನು ತಂತಮ್ಮ ಇತಿಹಾಸಗಳಲ್ಲಿ ಎತ್ತಿಲ್ಲ. ೧೯೦೫ ನೆಯ ಇಸ್ವಿಯ ರಾಯಲ್ ಏಸಿಯಾಟಿಕ್ ಸೊಸಾಯಿಟಿಯ ಮಾಸಪತ್ರಿಕೆಯ ೩೬೦ ನೆಯ ಪುಟದಲ್ಲಿ ಡಾ. ಫ್ಲೀಟರು ಈ ವಿಷಯ

ವಾಗಿದ್ದ ಬೇರೆ ಬೇರೆ ಜನರ ಮತಗಳನ್ನು ಖಂಡಿಸಿ, ತಮ್ಮ ಇತಿಹಾಸದಲ್ಲಿ ಚಾಳುಕ್ಯರಿಗೆ ಸಂಬಂಧಿಸಿದ ಎಲ್ಲ ಶಾಸನಗಳನ್ನು ಪರಿಶೀಲಿಸಿ, ಪುಲಕೇಶಿಯ ತಂದೆ ಮುತ್ತಪ್ಪರಾದ ರಣರಾಗ ಜಯಸಿಂಹರು ಬನವಾಸಿಯ ಕದಂಬರಸರ ದಂಡನಾಯಕರಾಗಲಿ ಮಂಡಲೇಶ್ವರರಾಗಲಿ ಆಗಿರಲಿಕ್ಕೆಬೇಕೆಂದು ನಿರ್ಣಯಿಸಿದ್ದಾರೆ *.

ಈ ಚಾಳುಕ್ಯರು ನಮ್ಮ ತಾಯ್ನಾಡಿನಲ್ಲಿ ೨ ಸಾರಿ ಘನತೆಯಿಂದ ಆಳಿದರಷ್ಟೇ. ಮೊದಲು ಆಳಿದವರೇ ಬಾದಾಮಿಯ ಚಾಳುಕ್ಯರು. ಇವರು ೫೫೦ ರಿಂದ ೭೫೭ ರ ವರೆಗೆ ರಾಜ್ಯಭಾರ ಮಾಡಿದರೆಂದು ಹೇಳಬಹುದು. ಮುಂದೆ ರಾಷ್ಟ್ರಕೂಟರು ಅವರಿಂದ ರಾಜ್ಯವನ್ನು ಕಿತ್ತಿಕೊಂಡು ೯೭೨ ರ ವರೆಗೆ ನಮ್ಮ ತಾಯ್ನಾಡನ್ನು ವೈಭವದಿಂದ ಆಳಿದರು. ೯೭೩ ರಲ್ಲಿ ಚಾಳುಕ್ಯಮನೆತನಕ್ಕೆ ಹೊಂದಿದ ೨ನೆಯ **ತೈಲನು** ರಾಷ್ಟ್ರಕೂಟರನ್ನು ಹಣಿದು, ಮತ್ತೆ ಚಾಳುಕ್ಯಸಾಮ್ರಾಜ್ಯವನ್ನು ಸ್ಥಾಪಿಸಿದನು. ಈ ತೈಲನ ವಂಶಕರೇ ಎರಡನೆಯ ಚಾಳುಕ್ಯಮನೆತನದವರು. ಇವರು ಕಲ್ಯಾಣಪಟ್ಟಣವನ್ನು ತಮ್ಮ ನೆಲೆವೀಡು (ರಾಜಧಾನಿ) ಆಗಿ ಮಾಡಿಕೊಂಡುದರಿಂದ ಇವರಿಗೆ ಕಲ್ಯಾಣದ ಚಾಳುಕ್ಯರೆಂದು ವಾಡಿಕೆಯಾಗಿ ಕರೆಯುತ್ತಾರೆ. ಈ ಬಾದಾಮಿಯ ಮತ್ತು ಕಲ್ಯಾಣದ ಚಾಳುಕ್ಯರು ಒಂದೇ ಮನೆತನದವರಾದರೂ ತಂತಮ್ಮ ಶಾಸನಗಳಲ್ಲಿ ತಮ್ಮ ಪೂರ್ವಜರ ವಿಷಯವಾಗಿ ಏನೇನು ಕೊರಿಸಿಟ್ಟಿರುತ್ತಾರೆಂಬುದನ್ನೂ ಆ ಲೇಖಗಳಲ್ಲಿ ಯಾವ ಯಾವ ಹೆಚ್ಚು ಕಡಿಮೆಗಳಿರುತ್ತವೆಂಬುದನ್ನೂ ಈ ಹೆಚ್ಚು ಕಡಿಮೆಗಳ ಕಾರಣಗಳು ಏನಿರಬಹುದೆಂಬುದನ್ನೂ ಕುರಿತು ಇಲ್ಲಿ ವಿಚಾರಮಾಡುವಾ.

ಈ ಮನೆತನದ ಅರಸರು ಶಾಸನಗಳಲ್ಲಿ ತಮ್ಮ ಅಡ್ಡ ಹೆಸರನ್ನು ಒಂದೇ ಪ್ರಕಾರವಾಗಿ ಕೊರಿಸಿಲ್ಲ. ಬೇರೆ ಬೇರೆ ಶಿಲಾಲೇಖಗಳಲ್ಲಿ ಈ ಅಡ್ಡ ಹೆಸರು ಭಿನ್ನಭಿನ್ನರೂಪವನ್ನು ತಾಳಿರುತ್ತದೆ. ಉದಾಹರಣಾರ್ಥವಾಗಿ ಈ ಅಡ್ಡ ಹೆಸರು, ಮೊದಲನೆಯ ಶಾಸನವು ಬಾದಾಮಿಯ

* ಮುಂಬಯಿ ಇಲಾಖೆಯ ಗ್ಯಾಜಟಿಯರ. ಸ. ೧. ಭಾ. ೨. ಪು. ೩೪೩.

ಗವಿಯಲ್ಲಿ ಸಿಕ್ಕಿರುತ್ತದೆ. ಇದನ್ನು ಮೊದಲನೆಯ ಕೀರ್ತಿವರ್ಮನು ೫೭೮ರಲ್ಲಿ ಕೊರಿಸಿದನು. ಈ ಶಾಸನದ ೩ನೆಯ ಮತ್ತು ೪ನೆಯ ಸಾಲಿನಲ್ಲಿ ಈ ಅಡ್ಡ ಹೆಸರು **ಚಲ್ಕ್ಯ** ಎಂದಿರುತ್ತದೆ*. ಮಂಗಲೇಶನ ೬೦೨ನೆಯ ಇಸ್ವಿಯ ಮಹಾಕೂಟದ ಶಾಸನದಲ್ಲಿ **ಚಳಿಕ್ಯ** ಎಂಬ ರೂಪವಿದೆ. ಅದೇ ಅರಸಿನ ನೆರೂರಿನ ಶಾಸನದಲ್ಲಿ **ಚಲಿಕ್ಯ** ಎಂದು ಬರೆದಿದೆ. ೨ನೆಯ ಪುಲಕೇಶಿಯ ೬೩೪ನೆಯ ಇಸ್ವಿಯ ಐಹೊಳೆಯ ಶಾಸನದಲ್ಲಿ **ಚಲುಕ್ಯ** ಎಂಬ ರೂಪು ಉಪಯೋಗಿಸಲ್ಪಟ್ಟಿದೆ. ಮುಂದೆ ಬಾದಾಮಿ ಚಾಳುಕ್ಯರ ಆಳಿಕೆಯಲ್ಲಿ ಇದೇ ರೂಪೇ ರೂಢಿಯಲ್ಲಿತ್ತು. ೮ನೆಯ ಶತಮಾನದ ಆರಂಭದಲ್ಲಿ ಚಾಳುಕ್ಯರ ಒಂದು ಶಾಖೆಯು ಗುಜರಾಥದಲ್ಲಿ ಆಳುತ್ತಿತ್ತಷ್ಟೇ. ಗುಜರಾಥದ ಚಾಳುಕ್ಯವಂಶದ ಅರಸನಾದ **ಅವನಿಜನಾಶ್ರಯ** ಪುಲಿಕೇಶಿಯು ತನ್ನ ೭೩೯ನೆಯ ಇಸ್ವಿಯ ನವಸಾರಿಯ ಶಾಸನದಲ್ಲಿ **ಚಲುಕ್ಕಿ** ಎಂಬ ರೂಪವನ್ನು ಉಪಯೋಗಿಸಿರುತ್ತಾನೆ. ಈ ರೂಪವು ಹೇಗೆ ಬಂತೊ ತಿಳಿಯುವುದಿಲ್ಲ. ಮುಂದೆ ಕಲ್ಯಾಣದ ಚಾಳುಕ್ಯರ ಮೊದಲನೆಯ ಅರಸನಾದ ೨ನೆಯ ತೈಲಪನೂ ಅವನ ಹಿಂದೆ ಆಳಿದ ಅರಸರೂ ಚಲುಕ್ಯಶಬ್ದದ ಮೊದಲನೆಯ ಸ್ವರವನ್ನು ದೀರ್ಘವಾಗಿ **ಚಾಲುಕ್ಯ** ಎಂದು ತಮ್ಮ ಅಡ್ಡ ಹೆಸರನ್ನು ಬರೆಯಲಾರಂಭಿಸಿದರು. ೨ನೆಯ ವಿಕ್ರಮಾದಿತ್ಯನ ೭೩೪ನೆಯ ಇಸ್ವಿಯ ಲಕ್ಷ್ಮೇಶ್ವರದ ಶಾಸನದಲ್ಲಿ **ಚಾಳುಕ್ಯ** ಎಂಬ ರೂಪು ಕಂಡುಬರುತ್ತದೆ. ಈ ರೂಪವನ್ನೇ ನಾವು ಈ ಇತಿಹಾಸದಲ್ಲಿ ಉಪಯೋಗಿಸಿರುತ್ತೇವೆ.

ಕದಂಬರಂತೆ ಚಾಳುಕ್ಯರು ಮಾನವ್ಯಗೋತ್ರದವರೂ ಹಾರಿತೀಪುತ್ರರೂ ಆಗಿದ್ದು ಕಾರ್ತಿಕೇಯನ ಉಪಾಸಕರಾಗಿದ್ದರು. ಸಪ್ತಮಾತೃಗಳು ಇವರ ಪೋಷಕರಾಗಿದ್ದರು†. ವರಾಹವೇ ಇವರ ಲಾಂಛನವು.

---

* ಇಂಡಿಯನ್ ಆಂಟಿಕ್ವರಿ, ಸಂ. ೧೦, ಪು. ೫೮.

† ಬ್ರಹ್ಮಾಣಿ (ಬ್ರಾಹ್ಮಿ), ಮಾಹೇಶ್ವರೀ, ಕುಮಾರೀ, ವೈಷ್ಣವೀ, ವಾರಾಹೀ, ಇಂದ್ರಾಣೀ (ಐಂದ್ರೀ ಅಥವಾ ಮಾಹೇಂದ್ರೀ), ಚಾಮುಂಡಾ ಇವರೇ ಸಪ್ತಮಾತೃಗಳಾಗಿದ್ದರು.

ಈ ಮನೆತನದ ವಿನಯಾದಿತ್ಯ-ವಿಜಯಾದಿತ್ಯರೆಂಬ ಅರಸರು ಉತ್ತರಾಪಥದ ದೊಡ್ಡ ಅರಸರನ್ನು ಗೆದ್ದು **ಪಾಲಿಧ್ವಜವನ್ನೂ** ಗಂಗಾ ಯಮುನಾನದಿಗಳ ಮೂರ್ತಿಗಳನ್ನೂ ದೊರಕಿಸಿದರು. ಇವರ ಕುಲದೇವರು ವಿಷ್ಣುವಾಗಿದ್ದರೂ ಇವರು ವೈಷ್ಣವ ಶೈವ ಜೈನರಿಗೆ ಸರಿಯಾಗಿ ಆಶ್ರಯ ಕೊಡುತ್ತಿದ್ದರು.

ಕದಂಬರೂ ಚಾಳುಕ್ಯರೂ ಮಾನವ್ಯಗೋತ್ರದವರೂ ಹಾರಿತೀಪುತ್ರರೂ ಆದ್ದರಿಂದ ಇವರಿಬ್ಬರು ಒಂದೇ ವಂಶದವರಾಗಿರಬಹುದೆಂದು ಕೆಲ ವಾಚಕರು ಸಂಶಯಗೊಳ್ಳಬಹುದು. ಆದರೆ ಇವರಿಬ್ಬರಿಗೂ ಯಾವ ತರದ ಅನುವಂಶಕಸಂಬಂಧವಿದ್ದಿಲ್ಲ. ಕದಂಬರು ಶುದ್ಧ ಬ್ರಾಹ್ಮಣರಾಗಿದ್ದರು. ಚಾಳುಕ್ಯರ ಜಾತಿ ಯಾವುದೆಂಬುದು ಇನ್ನೂ ಗೊತ್ತಾಗದಿದ್ದರೂ ಅವರು ಬ್ರಾಹ್ಮಣರಾಗಿದ್ದಿಲ್ಲೆಂದು ಸ್ಪಷ್ಟವಾಗಿ ಹೇಳಲಿಕ್ಕೆ ಅಡ್ಡಿಯಿಲ್ಲ. ಆದ್ದರಿಂದ ಈ ಕದಂಬ ಚಾಳುಕ್ಯರೊಳಗೆ ಗೋತ್ರಶಾಖಾಗಳ ಸಾದೃಶ್ಯವು ಹೇಗೆ ಬಂತೆಂಬ ಪ್ರಶ್ನವು ಇಲ್ಲಿ ಹುಟ್ಟುತ್ತದೆ. ಚಾಳುಕ್ಯ ಮನೆತನದ ಮೂಲಪುರುಷರು ಕದಂಬರ ಕಯ್ಕೆಳಗಿನ ಅಧಿಕಾರಿಗಳಿದ್ದುದರಿಂದ ಮುಂದೆ ಸ್ವತಂತ್ರರಾದ ಚಾಳುಕ್ಯರು ತಮ್ಮ ಮೊದಲಿನ ಯಜಮಾನರ ಗೋತ್ರಶಾಖೆಗಳನ್ನು ಸ್ವೀಕರಿಸಿರಬಹುದು. ಅರಸರಾದವರು ತಮ್ಮ ಪುರೋಹಿತರ ಗೋತ್ರಶಾಖೆಗಳನ್ನು ತಮ್ಮವೆಂದು ಎಣಿಸುವ ಪದ್ಧತಿಯು ಪೂರ್ವಕಾಲದಲ್ಲಿ ರೂಢಿಯಲ್ಲಿತ್ತೆಂದು ಡಾ. ಬುಲ್ಹರರು ಬರೆಯುತ್ತಾರೆ*. ಹೊಸತಾಗಿ ಅರಸರಾದ ಚಾಳುಕ್ಯರಿಗೆ ಗೋತ್ರಶಾಖೆಗಳಿಲ್ಲದುದರಿಂದ ತಮ್ಮ ಯಜಮಾನರ ಅಥವಾ ಪುರೋಹಿತರ ಗೋತ್ರಶಾಖೆಗಳನ್ನು ಅವರು ಸ್ವೀಕರಿಸಿರಬಹುದು. ಅಥವಾ ಆಗಿನ ಕಾಲದಲ್ಲಿ ಹೊಸತಾಗಿ ಅರಸರಾದ ಬ್ರಾಹ್ಮಣೇತರ ಜಾತಿಯವರಿಗೆ ಮಾನವ್ಯ (ಮನುಷ್ಯ ಜಾತಿ) ಎಂಬ ಗೋತ್ರವನ್ನೂ ಹರಿತ (ಸಿಂಹ) ಎಂಬ ಶಾಖೆಯನ್ನೂ ಬ್ರಾಹ್ಮಣರು ಕಲ್ಪಿಸಿ ಹೇಳುತ್ತಿದ್ದಿರಬಹುದು. ಈಗ ಕೂಡ ಬ್ರಾಹ್ಮಣರು ತರ್ಪಣಮಾಡುವಾಗ ತಮ್ಮ ಸತ್ತ ಆಪ್ತರ ಗೋತ್ರವು

---

* ಇಂಡಿಯನ್ ಆಂಟಿಕ್ವರಿ. ಸಂ. ೧೨. ಪು. ೨೪೦.

ಚಾಳುಕ್ಯರ ಮೂಲಪುರುಷನಾದ ೫ ನೆಯ ಅಥವಾ ೬ ನೆಯ ಶತಮಾನದ ಜಯಸಿಂಹನನ್ನು ೧೧ ನೆಯ ಶತಮಾನಕ್ಕೆ ಎಳೆದು ತಂದಿರುತ್ತಾರೆ. ೧೦೧೮ನೆಯ ಇಸ್ವಿಯ ೨ ನೆಯ ಜಯಸಿಂಹನ ಬಳಗಾವೆಯ ಶಾಸನದಲ್ಲಿ ಸತ್ಯಾಶ್ರಯನೆಂಬ ಒಬ್ಬ ಕಲ್ಪಿತ ಪುರುಷನು ನಿರ್ಮಾಣನಾಗಿರುತ್ತಾನೆ! ಧಾರವಾಡ ಜಿಲ್ಲಾ ಬಂಕಾಪುರ ತಾಲೂಕ ಕಲ್ಯಾಣದ ೧೦೨೬ ನೆಯ ಇಸ್ವಿಯ ಶಾಸನದಲ್ಲಿ ಸ್ವಯಂಭೂಮನುವಿನ ಮಗನು ಮಾನವ್ಯ ನೆಂತಲೂ ಅವನ ಮಗನು ಹರಿತನೆಂತಲೂ ಅವನ ಮಗನು ಪಂಚಶಿಖಿ ಹಾರಿತಿಯೆಂತಲೂ ಅವನ ಮಗನು **ಚಾಲುಕ್ಯ**ನೆಂತಲೂ ಚಾಳುಕ್ಯರ ವಂಶವು ಇವನಿಂದಲೇ ಸುರುವಾಯಿತೆಂತಲೂ ಬರೆದಿರುತ್ತದೆ. ಧಾರವಾಡ ಜಿಲ್ಲಾ ಗದಗಿನಲ್ಲಿಯೂ ನಿಜಾಮು ಸಂಸ್ಥಾನದ ಕಾಳಿಗೆ ಎಂಬ ಊರಲ್ಲಿಯೂ ದೊರೆತ ಶಿಲಾಲೇಖಗಳಲ್ಲಿ ಬ್ರಹ್ಮನ ಮಗನಾದ ಅತ್ರಿಯ ಕಣ್ಣಿನಿಂದ ಚಂದ್ರಮನು ಹುಟ್ಟಿದನೆಂತಲೂ ಆ ಚಂದ್ರಮನಿಂದ ಚಾಳುಕ್ಯ ವಂಶವು ಉದ್ಭವಿಸಿತೆಂತಲೂ ಬರೆದಿರುತ್ತದೆ. ನಿಜಾಮು ಸಂಸ್ಥಾನದ ಹಂಡರಿಕೆ ಎಂಬ ಹಳ್ಳಿಯಲ್ಲಿ ದೊರೆತ ಶಾಸನದಲ್ಲಿ ವಿಷ್ಣುವಿನ ನಾಭಿಕಮಲದಿಂದ ಹಿರಣ್ಯಗರ್ಭ ಬ್ರಹ್ಮನೂ ಅವನಿಂದ ಮನುವೂ ಅವನಿಂದ ಮಾಂಡವ್ಯನೂ ಅವನಿಂದ ಹರಿತನೂ ಅವನಿಂದ ಹಾರಿತಿ ಪಂಚಶಿಖಿಯೂ ಹುಟ್ಟಿದರು; ಈ ಹಾರಿತಿ ಪಂಚಶಿಖಿಯು ಅರ್ಘ್ಯ ಬಿಡುವಾಗ ಅವನ **ಚುಲುಕ**ದಿಂದ ವಿಷ್ಣುವರ್ಧನ–ವಿಜಯಾದಿತ್ಯನೆಂಬ ಒಬ್ಬ ಕಲ್ಪಿತ ಪುರುಷನು ಹುಟ್ಟಿದನು; ಇವನು ಶತ್ರುಗಳ ನಾಡುಗಳನ್ನು ಹಿಡಿದುಕೊಂಡ ಬಳಿಕ ಸತ್ಯಾಶ್ರಯ ಮೊದಲಾದ ೫೯ ಅರಸರು ಅಯೋಧ್ಯೆಯಲ್ಲಿ ಆಳಿದರು; ಮುಂದೆ ಜಯಸಿಂಹ ಮೊದಲಾದ ೧೬ ಮಂದಿ ಅರಸರು ರಾಜ್ಯಭಾರಮಾಡಿದರು; ತರುವಾಯ ರಟ್ಟರು ಅರಸುತನಗೆಯ್ದರು ಎಂದು ಬರೆದಿರುತ್ತದೆ.

೧೦ ನೆಯ ಶತಮಾನದಲ್ಲಿ ಎಲ್ಲ ದಕ್ಷಿಣಾಪಥದ ಅರಸರಿಗೆ ತಂತಮ್ಮ ವಂಶಗಳ ಕಾಲ್ಪನಿಕ ಉನ್ನತಿಯನ್ನು ತೋರಿಸುವ ಹುಚ್ಚೇ ಹಿಡಿದಿತ್ತೆಂದು ಕಂಡುಬರುತ್ತದೆ. ಆ ಶತಮಾನದಿಂದ ಕರ್ನಾಟಕ ದ್ರವಿಡಾಂಧ್ರರಸರು ತಂತಮ್ಮ ಮನೆತನಗಳಿಗೆ ಪೌರಾಣಿಕ ವ್ಯುತ್ಪತ್ತಿ

ಯನ್ನು ಕಲ್ಪಿಸತೊಡಗಿದರೆಂದು ಡಾ॥ ಫ್ಲೀಟರು ಅಭಿಪ್ರಾಯಪಡು ತ್ತಾರೆ*. ೯೭೩ ರಲ್ಲಿ ರಾಷ್ಟ್ರಕೂಟರೂ ೯೫೦ ರಲ್ಲಿ ಪಶ್ಚಿಮ ಗಂಗರೂ ೧೦೮೦ ರ ಸುಮಾರಿನಲ್ಲಿ ಚೋಳರೂ ೧೧೧೯ ರಲ್ಲಿ ಪೂರ್ವ ಗಂಗರೂ ತಂತಮ್ಮ ವಂಶಗಳು ಉತ್ತರಾಪಥದ ಅರಸುಮನೆತನಗಳಿಗೆ ಸೇರಿದ ವೆಂತಲೂ ತಂತಮ್ಮ ಮೂಲಪುರುಷರು ದೇವತಾಸಂಭೂತರೆಂತಲೂ ಇಲ್ಲದ್ದೊಂದು ಕಥೆಯನ್ನು ಕಲ್ಪಿಸಿ, ತಮ್ಮ ತಮ್ಮ ವಂಶಗಳ ಮಹತ್ವ ವನ್ನು ಶಿಲಾಲೇಖಗಳಲ್ಲಿ ಹೊಗಳಿಕೊಳ್ಳಲಾರಂಭಿಸಿದರು. ಕಲ್ಯಾಣದ ಚಾಳುಕ್ಯರು ಇದೇ ಉದ್ದೇಶದಿಂದ ಹಲವು ಕಟ್ಟುಕಥೆಗಳನ್ನು ಕಲ್ಪಿಸಿ, ಹೇಗೆ ಐತಿಹಾಸಿಕ ಕೊಲೆಯನ್ನು ಮಾಡಿರುತ್ತಾರೆಂಬುದನ್ನು ಮೇಲೆ ವಿವರಿಸಿರುತ್ತೇವಷ್ಟೆ. ಈ ಕಟ್ಟುಕಥೆಗಳನ್ನು ಕಲ್ಪಿಸುವುದರಲ್ಲಿ ಬಾದಾ ಮಿಯ ಚಾಳುಕ್ಯ ವಂಶದ ಟಿಸಳು ಮನೆತನದವರಾದ ಪೂರ್ವದ (ವೆಂಗಿಯ) ಚಾಳುಕ್ಯರು ಕಲ್ಯಾಣದ ಚಾಳುಕ್ಯರಿಗಿಂತ ಮೇಲ್ಗೈಯ್ಯವರಾದರೆಂದು ಹೇಳಲಿಕ್ಕೆ ಅಡ್ಡಿಯಿಲ್ಲ. ಈ ವೆಂಗಿಯ ಮನೆತನದ ಅರಸನಾದ ೧ ನೆಯ ವಿಷ್ಣುವರ್ಧನ ರಾಜನೆಂಬುವನು ೧೧ ನೆಯ ಶತಮಾನದ ಆರಂಭದಲ್ಲಿ ಕೊರಿಸಿದ ಶಿಲಾಲೇಖದಲ್ಲಿ ತನ್ನ ಪೂರ್ವಜರ ವೃತ್ತಾಂತವನ್ನು ಕೆಳಗೆ ಕೊಟ್ಟಂತೆ ಬರೆಯಿಸಿರುತ್ತಾನೆ:—ವಿಷ್ಣುವಿನ ನಾಭಿಕಮಲದಿಂದ ಬ್ರಹ್ಮ ದೇವನೂ ಅವನಿಂದ ಪರಂಪರೆಯಾಗಿ ಚಂದ್ರ ಬುಧರೂ ಪುರೂರವರೂ ಆಯು ಆಯುಷ ಮುಂತಾದವರೂ ಹುಟ್ಟಿದರು. ಕಡೆಯವನಾದ ಉದಯನನನ್ನು ಹಿಡಿದು ೫೯ ಮಂದಿ ಅರಸರು ಅಯೋಧ್ಯೆಯಲ್ಲಿ ಆಳಿದರು. ಈ ಅಯೋಧ್ಯೆ ಮನೆತನದ ಅರಸುಮಗನಾದ ವಿಜಯಾದಿತ್ಯ ನೆಂಬವನು ಹೊಸ ರಾಜ್ಯವನ್ನು ದೊರಕಿಸುವುದಕ್ಕೋಸ್ಕರ ತೆಂಕಲಿಗೆ ಬಂದು ತ್ರಿಲೋಚನ ಪಲ್ಲವನೆಂಬ ಅರಸಿನೊಡನೆ ಹೋರಾಟ ಮಾಡಿದನು. ಅವನು ಸಾಯುವಾಗ ಅವನ ರಾಣಿಯು ಬಸುರಿದ್ದಳು. ವಿಷ್ಣುಭಟ್ಟ ಸೋಮಯಾಜಿ ಎಂಬೊಬ್ಬ ಸಾತ್ವಿಕ ಬ್ರಾಹ್ಮಣನು ಆ ಅನಾಥೆಯನ್ನು ನೋಡಿ ಕನಿಕರಬಟ್ಟು, ವಾಲ್ಮೀಕರು ಸೀತಾದೇವಿ ಯನ್ನು ತಮ್ಮ ಆಶ್ರಮಕ್ಕೆ ಕರೆದೊಯ್ದಂತೆ, ಆಕೆಯನ್ನು ತನ್ನ

* ಮುಂಬಯಿ ಇಲಾಖೆಯ ಗ್ಯಾಜಟಿಯರ ಸಂ. ೧, ಭಾಗ ೨, ಪುಟ ೩೪೨.

ಮನೆಯಲ್ಲಿಟ್ಟುಕೊಂಡು ಜೋಪಾನಮಾಡಿದನು. ಮುದ್ದಿನಿಂದ
ಆಕೆಯು ಗಂಡುಮಗನನ್ನು ಸಕಾಲಕ್ಕೆ ಹೆತ್ತಳು. ವಿಷ್ಣುಭಟ್ಟನು
ಈ ಮಗುವಿಗೆ ವಿಷ್ಣುವರ್ಧನನೆಂಬ ನಾಮಕರಣವನ್ನು ಮಾಡಿ,
ಅವನ ವೇದಾಧ್ಯಯನವು ಮುಗಿದ ಬಳಿಕ ಕ್ಷತ್ರಿಯರಿಗೆ ಯೋಗ್ಯವಾದ
ಶಸ್ತ್ರವಿದ್ಯೆಯನ್ನು ಕಲಿಸಲಿಕ್ಕೆ ಏರ್ಪಾಡುಮಾಡಿದನು. ಅವನು ದೊಡ್ಡ
ವನಾದ ಬಳಿಕ ಕದಂಬ ಗಂಗರನ್ನು ಸೋಲಿಸಿ ಶ್ವೇತಛತ್ರ, ಶಂಖ,
ಪಂಚಮಹಾಶಬ್ದ, ಪಾಲಿಧ್ವಜ, ವರಾಹಲಾಂಛನ, ಪಿಂಛ, ಜೋಡು
ನಗಾರಿ, ಸಿಂಹಾಸನ, ಮಕರತೋರಣ, ಗಂಗಾ ಯಮುನಾ ಮೂರ್ತಿ
ಮುಂತಾದ ರಾಜಚಿಹ್ನಗಳನ್ನು ದೊರಕಿಸಿ, ಆಸೇತು ನರ್ಮದಾ
ನದಿಯ ವರೆಗೆ ಇಡಿ ದಕ್ಷಿಣಾಪಥಕ್ಕೆ ಒಡೆಯನಾದನು. ಈ ವಿಷ್ಣು
ವರ್ಧನನ ಮಗನೇ ೨ನೆಯ ವಿಜಯಾದಿತ್ಯನು; ಅವನ ಮಗನೇ
೧ನೆಯ ಪುಲಿಕೇಸಿಯು.

ಈ ಕಲ್ಯಾಣದ ಮತ್ತು ವೆಂಗಿಯ ಚಾಳುಕ್ಯ ಮನೆತನದ ಅರ
ಸರು ಶಾಸನಗಳ ಮೇಲೆ ಬರೆಯಿಸಿದ ತಮ್ಮ ವಂಶೋನ್ನತಿಯ ವರ್ಣ
ನೆಯು ಸುಳ್ಳಿನ ಹುಟ್ಟುಮನೆಯಾಗಿರುತ್ತದೆಂದು ಎಲ್ಲ ಓದುವವರು
ಒಡಂಬಡಬಹುದು. ಈ ಅರಸರಿಗೆ ತಾವು ಸಾಧಾರಣವಾದ ಸಾಮಾನ್ಯ
ಪುರುಷನಿಂದ ಹುಟ್ಟಿದವರೆಂದು ಹೇಳಲಿಕ್ಕೆ ನಾಚಿಕೆ ಬಂದುದರಿಂದ
ತಮ್ಮ ಪೂರ್ವಜರಾದ ಬಾದಾಮಿ ಚಾಳುಕ್ಯರು ಬರೆಯಿಸಿದಂತೆ ತಾವು
ಜಯಸಿಂಹ ರಣರಾಗರೆಂಬ ಸಾಮಾನ್ಯ ಪುರುಷರ ವಂಶದವರೆಂದು
ಹೇಳದೆ, ಬ್ರಹ್ಮನ ಸಂತತಿಯವರಾದ ಮನು, ಮಾನವ್ಯ, ಮಾಂಡವ್ಯ,
ಅತ್ರಿ ಮುಂತಾದ ಮಹಾತ್ಮರಿಂದ ಹುಟ್ಟಿದವರೆಂದು ಕಲ್ಪಿಸಿದರು.
ಈ ಕಟ್ಟುಕಥೆಯಿಂದ ಅವರಿಗೆ ಏನು ಮಹತ್ವಬಂತೋ ತಿಳಿಯು
ವದಿಲ್ಲ. ಏಕೆಂದರೆ, ಬ್ರಹ್ಮನೇ ಸೃಷ್ಟಿಕರ್ತನೆಂದು ಎಲ್ಲ ವೇದಶಾಸ್ತ್ರ
ಪುರಾಣೇತಿಹಾಸಗಳು ಸಾರಿ ಹೇಳುತ್ತವೆ, ಮತ್ತು ಪ್ರತಿಯೊಬ್ಬ ಮನು
ಷ್ಯನು ತಾನು ಬ್ರಹ್ಮನಿಂದ ಅಥವಾ ಮನುವಿನಿಂದ ಹುಟ್ಟಿದವನೆಂದು
ಹೇಳಲಿಕ್ಕೆ ಅಡ್ಡಿಯಿಲ್ಲ. ಇದಲ್ಲದೆ ಋಗ್ವೇದದ ಪುರುಷಸೂಕ್ತವೆಂಬ
ಋಚೆಯಲ್ಲಿ ವಿರಾಟಪುರುಷನ ಮುಖದಿಂದ ಬ್ರಾಹ್ಮಣರೂ ಬಾಹು

ಗಳಿಂದ ಕ್ಷತ್ರಿಯರೂ ತೊಡೆಗಳಿಂದ ವೈಶ್ಯರೂ ಅಡಿಗಳಿಂದ ಶೂದ್ರರೂ ಹುಟ್ಟಿದರೆಂದು ಹೇಳಿಲ್ಲವೇ? ಶ್ರೀಕೃಷ್ಣ ಪರಮಾತ್ಮನು ಭಗವದ್ಗೀತೆ ಯಲ್ಲಿ ಬ್ರಹ್ಮ ಕ್ಷತ್ರಿಯ ವೈಶ್ಯ ಶೂದ್ರ ಈ ನಾಲ್ಕುವರ್ಣಗಳನ್ನು ಗುಣ ಕರ್ಮ ವಿಭಾಗದಿಂದ ಮಾಡುವವನೂ ಮಾಡದೆ ಇರುವವನೂ ತಾನೇ ಎಂದು ಅರ್ಜುನನಿಗೆ ತಿಳಿಸಲಿಲ್ಲವೇ*? ಚಾಳುಕ್ಯರು ಅರಸೊತ್ತಿಗೆ ಯನ್ನು ದೊರಕಿಸಿ ಪ್ರಜಾಪಾಲನೆಯನ್ನು ಮಾಡತೊಡಗಿದ್ದರಿಂದ ಅವರು ವಿರಾಟಪುರುಷನ ಅಂದರೆ ಪರಮೇಶ್ವರನ ಬಾಹುಗಳಿಂದ ಹುಟ್ಟಿದ ಕ್ಷತ್ರಿಯರಾಗಲಿಲ್ಲವೇ? ತಾವು ದೇವಾದಿದೇವನಿಂದ ಹುಟ್ಟಿ ದವರೆಂದು ಹೇಳಿಕೊಂಡಿದ್ದರೆ ಆ ವರ್ಣನೆಯು ಹೆಚ್ಚು ಸತ್ಯವಾದುದೂ ಭೂಷಣಾಸ್ಪದವಾದುದೂ ಸಶಾಸ್ತ್ರವಾದುದೂ ಆಗುತ್ತಿದ್ದಿಲ್ಲವೇ? ಈ ಸರಳವಾದ ಮತ್ತು ಸುಲಭವಾದ ಮಾರ್ಗವನ್ನು ಬಿಟ್ಟು, ಕಲ್ಯಾ ಣದ ಮತ್ತು ವೆಂಗಿಯ ಚಾಳುಕ್ಯರು ಮನು, ಮಾನವ್ಯ, ಮಾಂಡವ್ಯ, ಅತ್ರಿ, ಚಂದ್ರ ಮುಂತಾದವರ ವಂಶದವರು ತಾವೆಂದು ಹೇಳಿಕೊಳ್ಳು ವುದಕ್ಕೋಸ್ಕರ ಸುಳ್ಳು ಕಥೆಗಳನ್ನು ಕಲ್ಪಿಸಲಿಕ್ಕೆ ಏನು ಕಾರಣ ಪ್ರಯತ್ನ ಪಟ್ಟರೋ ತಿಳಿಯುವುದಿಲ್ಲ.

ಈ ಚಾಳುಕ್ಯರು ತಾವು ದೇವತಾವಂಶದವರೆಂದು ಹೇಳಿಕೊಳ್ಳ ಲಿಕ್ಕೆ ಹಲವು ಸುಳ್ಳು ಕಥೆಗಳನ್ನು ಹುಟ್ಟಿಸಿದ್ದಲ್ಲದೆ, ತಮ್ಮ ೫೯ ಮಂದಿ ಪೂರ್ವಜರು ಅಯೋಧ್ಯೆಯಲ್ಲಿ ಆಳಿದರೆಂಬ ಸುಳ್ಳು ಸಂಗತಿಯನ್ನು ಶಾಸನಗಳಲ್ಲಿ ಕೊರೆಯಿಸಿಡುವ ಶ್ರಮವನ್ನು ತೆಗೆದುಕೊಂಡಿದ್ದಾರೆ. ಶ್ರೀಮದ್ರಾಮಾಯಣವು ಎಂದು ಬರೆಯಲ್ಪಟ್ಟಿತೆಂಬುದು ಇನ್ನೂ ನಿಶ್ಚಯವಾಗಿ ನಿರ್ಣಯವಾಗಿಲ್ಲ. ಕೆಲ ಯುರೋಪೀಯ ಪಂಡಿತರು ಈ ಮಹಾಗ್ರಂಥವು ಸುಮಾರು ೩೦೦೦ ವರ್ಷಗಳ ಹಿಂದೆ ಅಸ್ತಿತ್ವಕ್ಕೆ ಬಂತೆಂದು ತರ್ಕಮಾಡುತ್ತಾರೆ†. ಆದರೆ ಈ ತರ್ಕಕ್ಕೆ ಆಧಾರಗಳೇನೂ

---

* ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮವಿಭಾಗಶಃ । ತಸ್ಯಕರ್ತಾರಮಪಿ ಮಾಂ ವಿದ್ಧ್ಯಕರ್ತಾರಮವ್ಯಯಂ ॥ ಭಗವದ್ಗೀತಾ ಅಧ್ಯಾಯ ೪, ಶ್ಲೋಕ ೧೩.

† ಡಾಕ್ಟರ ಹಂಟರರ ಇಂಡಿಯಾ ಸಾಮ್ರಾಜ್ಯದ ವರ್ಣನೆ, ಪುಟ ೧೨೯.

ಇದ್ದಂತೆ ಕಂಡುಬರುವುದಿಲ್ಲ. ವಾಲ್ಮೀಕರು ಕುಶಲವರಿಗೆ ರಾಮಾಯಣವನ್ನು ಪಾಠಮಾಡಿಸಿದರೆಂಬ ಮಾತು ನಿಜವಾಗಿದ್ದರೆ, ಆ ಉದ್ಗ್ರಂಥವು ಜನರ ಬಾಯಲ್ಲೇ ಬಹಳ ವರ್ಷ ಇದ್ದಿರಬಹುದು. ಮುಂದೆ ಅದು ಗ್ರಂಥಸ್ಥವಾದ ಬಳಿಕ ಎಷ್ಟೋ ವರ್ಷಗಳ ಮೇಲೆ ದಕ್ಷಿಣಾಪಥಕ್ಕೆ ಬಂದಿರಬಹುದು. ಅಥವಾ ಕೋಲಾರ ಜಿಲ್ಲೆ ಅವಾನಿಯಲ್ಲೇ ವಾಲ್ಮೀಕಿಯು ವಾಸಮಾಡಿಕೊಂಡಿದ್ದುದೇ ನಿಜವಾದರೆ, ರಾಮಾಯಣವು ಕರ್ನಾಟಕದಲ್ಲೇ ಹುಟ್ಟಿತೆಂದು ಹೇಳಬಹುದು.

ಇನ್ನು ಉತ್ತರಾಪಥದ ವಿದ್ವಾಂಸರಾದ ಬ್ರಾಹ್ಮಣರು ದಕ್ಷಿಣಾಪಥಕ್ಕೆ ಹೇಗಾಗಿ ಎಂದು ಬಂದರೆಂಬುದನ್ನು ವಿಚಾರಿಸುವಾ. ಕ್ರಿಸ್ತಶಕದ ೬೩೬ ರಿಂದ ಮುಸಲ್ಮಾನರು ನಮ್ಮ ಭರತಖಂಡದ ಮೇಲೆ ದಾಳಿಮಾಡಲಾರಂಭಿಸಿ, ೭೧೨ ರಲ್ಲಿ ಸಿಂಧ ಪ್ರಾಂತವನ್ನು ಹಿಡಿದುಕೊಂಡರಷ್ಟೆ. ಮುಂದೆ ೧೧೬ ವರ್ಷಗಳ ತರುವಾಯ ಭಾರತೀಯರು ಮುಸಲ್ಮಾನರನ್ನು ನಮ್ಮ ದೇಶದಿಂದ ಓಡಿಸಿ ಸಿಂಧಪ್ರಾಂತವನ್ನು ತಿರುಗಿ ತೆಗೆದುಕೊಂಡರು. ಆದರೆ ಇಷ್ಟರಿಂದಲೇ ಈ ದೇಶವನ್ನು ಗೆಲ್ಲಬೇಕೆಂದಿದ್ದ ಮುಸಲ್ಮಾನರ ಕಡುಬಯಕೆಯು ಕುಗ್ಗಲಿಲ್ಲ. ಅವರು ಕೂಡಿದಾಗ ಸಿಂಧ ಪಂಜಾಬಗಳ ಮೇಲೆ ದಾಳಿಯನ್ನು ಮಾಡತೊಡಗಿದರು. ಅದನ್ನು ನೋಡಿ ತಾಳಲಾರದೆ ಲಾಹೋರದ ಅರಸನಾದ **ಜಯಪಾಲನು** ದೊಡ್ಡ ದಂಡಿನೊಡನೆ ಅಫಗಾಣಿಸ್ಥಾನದಲ್ಲಿದ್ದ ಗಜನಿಯ ಮೇಲೆ ಸಾಗಿಹೋದನು (೯೭೭). ಅಲ್ಲಿಯ ಅರಸನಾದ **ಸಬುಕ್ತಿಜಿನನು** ಅವನಿಗೆ ಎದುರಾದನು. ಎರಡೂ ದಂಡುಗಳ ನಡುವೆ ದೊಡ್ಡದೊಂದು ಕಾಳಗವೆಸಗಿತು. ಅದೇ ಕಾಲಕ್ಕೆ ದುರ್ದೈವದಿಂದ ದೊಡ್ಡ ಸೊಂಟರಗಾಳಿಯು ಭರದಿಂದ ಬೀಸತೊಡಗಿದ್ದರಿಂದ ಕಣಿವೆಯಲ್ಲಿ ಸಿಕ್ಕ ಪಂಜಾಬದ ದಂಡಿನವರು ಕಂಗೆಟ್ಟು ಕಳವಳಿಸಿದರು. ದಿಕ್ಕೆಟ್ಟ ಜಯಪಾಲನು ೫೦ ಆನೆಗಳನ್ನೂ ಎರಡೂವರೆ ಲಕ್ಷ ರೂಪಾಯಿಯ ಕಪ್ಪಗಾಣಿಕೆಯನ್ನೂ ಕೊಟ್ಟು ಪಾರಾಗಿ ತನ್ನ ರಾಜಧಾನಿಗೆ ತಿರುಗಿ ಬರಬೇಕಾದರೆ ಅವನಿಗೆ ಸಾಕುಬೇಕಾಯಿತು. ಮನುಷ್ಯನ ನೆತ್ತರದ ಸವಿಹತ್ತಿದ ಹುಲಿಯು ಸುಮ್ಮನೆ ಕೂಡ್ರುವುದೇ? ಮುಂದೆ ತುರು

ಕಾಲದಲ್ಲೇ ಸಬುಕ್ತಿಜಿನನು ಪಂಜಾಬದ ಮೇಲೆ ದಂಡೆತ್ತಿ ಬಂದು ಜಯಪಾಲನನ್ನು ಸೋಲಿಸಿ ಹೇರಳ ಕಪ್ಪಸುಲಿಗೆಗಳನ್ನು ಹೇರಿಕೊಂಡು ಪಂಜಾಬದ ಹೆಬ್ಬಾಗಿಲಾದ ಪೇಶಾವರದಲ್ಲಿ ೧೦,೦೦೦ ರಾಹುತರನ್ನು ಕಾವಲಿಟ್ಟು ಮರಳಿಹೋದನು (೯೮೦).

ಪೇಶಾವರವು ಮುಸಲ್ಮಾನರ ಕಯ್ಸೇರಿದಂದಿನಿಂದ ಪಂಜಾಬದ ಭದ್ರತೆಯೂ ಸುರಕ್ಷಿತೆಯೂ ಮಣ್ಣುಪಾಲಾದವು. ಲಾಹೋರಿನ ಮೇಲೆ ಬೇಕಾದಾಗ ದಂಡೆತ್ತಿ ಹೋಗಲಿಕ್ಕೆ ಮುಸಲ್ಮಾನರಿಗೆ ಅನುಕೂಲವಾಯಿತು. ಸಬುಕ್ತಿಜಿನನ ಹೆದರಿಕೆಯು ಪಂಜಾಬಿಯರಲ್ಲಿ ಅಂಕುರಿಸಿತು. ಸಬುಕ್ತಜಿನನು ೯೯೭ ರಲ್ಲಿ ಸಾಯಲು, ಮಹಾಪ್ರತಾಪಿಯಾದ **ಮಹಮ್ಮದ**ನೆಂಬ ಅವನ ಮಗನು ೧೦೦೧ರಿಂದ ಪಂಜಾಬದ ಮೇಲೆ ೧೩ ದಾಳಿಗಳನ್ನು ಮಾಡಿ, ಆ ನಾಡಿನ ಪಶ್ಚಿಮ ಭಾಗವನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡನು. ಮುಂದೆ ಅವನು **ಕನೋಜ, ಗ್ವಾಲ್ಹೇರ, ಸೋಮನಾಥ** ಈ ಪೊಳಲುಗಳ ಮೇಲೆ ಮಾಡಿದ ದಾಳಿಗಳು ಮೂರ್ತಿಭಂಗಕ್ಕೂ ಕುಲಗೆಡಿಸುವಿಕೆಗೂ ಕ್ರೌರ್ಯಕ್ಕೂ ಕೊಲೆಸುಲಿಗೆಗಳಿಗೂ ಹೆಸರುವಾಸಿಯಾಗಿವೆ.

ಅಧ್ಯಾತ್ಮವಿಚಾರಕ್ಕೂ ಅಧ್ಯಯನಾಧ್ಯಾಪನಗಳಿಗೂ ಜಪತಪಾನುಷ್ಠಾನಗಳಿಗೂ ನಿರ್ಭಯತ್ವವೂ ಜೀವನವೃತ್ತಿಯೂ ಕ್ಷೋಭರಾಹಿತ್ಯವೂ ಮನಸ್ವಾಸ್ಥ್ಯವೂ ಶಾಂತಿಯೂ ಅವಶ್ಯವಾಗಿ ಬೇಕಾಗಿರುತ್ತವೆಂಬುದನ್ನು ಎಲ್ಲ ಓದುವವರು ಒಮ್ಮನಸ್ಸಿನಿಂದ ಒಡಂಬಡಬಹುದು. ಜಯಪಾಲನು ಗಜನಿಗೆ ಹೋಗಿ ಸೋತು ತಿರುಗಿ ಬಂದಂದಿನಿಂದ ಮುಸಲ್ಮಾನರ ಕ್ರೌರ್ಯವನ್ನೂ ಜಾತಿದ್ವೇಷವನ್ನೂ ಕೇಳಿದ ಬ್ರಾಹ್ಮಣರ ಮನಸ್ಸಿನಲ್ಲಿ ಅವರ ಭಯವು ನಲಿದಾಡಲಾರಂಭಿಸಿತು. ಮುಂದೆ ವಿಗ್ರಹಭಂಜಕನಾದ ಮಹಮ್ಮದನ ದಾಳಿಗಳ ವೃತ್ತಾಂತವನ್ನು ಕೇಳಿದ ಬ್ರಾಹ್ಮಣರ ಎದೆಗಳು ಒಡೆದು ನೀರಾಗಿರಬಹುದು. ಇಂತಹ ದುಃಸ್ಥಿತಿಯೊಳಗೆ ಇಂತಹ ಕ್ಷುಬ್ಧಕಾಲದಲ್ಲಿ ಉಚ್ಚಧ್ಯೇಯವುಳ್ಳ, ವಿದ್ವಾಂಸರಾದ ಬ್ರಾಹ್ಮಣರು ಪಂಜಾಬದಲ್ಲಿರುವ ಬಗೆ ಹೇಗೆ? ಆ

ಕಾಲಕ್ಕೆ ತಂತಮ್ಮ ದಿನಚರ್ಯೆಯನ್ನು ಸರಿಯಾಗಿ ಸಾಗಿಸಿಕೊಳ್ಳಲಿಕ್ಕೆ ಅವರಿಗೆ ಸಾವಿರಾರು ತೊಂದರೆಗಳು ಆಗಿಂದಾಗ ಬರುತ್ತಿರಬಹುದು. ಅವರು ಮುಸಲ್ಮಾನರ ದಾಳಿಗಳಿಗೆ ಹೆದರಿ ಇಲ್ಲಿಂದಲ್ಲೆ ಅಲ್ಲಿಂದಿಲ್ಲೆ ಓಡಿಯಾಡಿ ಜೀಸತ್ತು ಬೇಜಾರಾಗಿ, ದಕ್ಷಿಣಾಪಥದ ದಾರಿಯನ್ನು ಹಿಡಿದಿರಬಹುದು. ೯೭೮ ರಿಂದ ೧೦೭೮ರ ವರೆಗೆ ಕಳೆದುಹೋದ ೫೦ ವರುಷಗಳಲ್ಲಿ ಸಾವಿರಾರು ಪಂಜಾಬದ ವಿದ್ವಾಂಸ ಬ್ರಾಹ್ಮಣರು ತಮ್ಮ ಸರ್ವಸ್ವವಾದ ಶ್ರೀಮದ್ರಾಮಾಯಣ ಮುಂತಾದ ಅಮೌಲ್ಯವಾದ ಸಂಸ್ಕೃತ ಗ್ರಂಥಗಳನ್ನು ತಮ್ಮ ಸಂಗಡ ಜತನದಿಂದ ದಕ್ಷಿಣಕ್ಕೆ ಒಯ್ದಿರಬಹುದು ಅಥವಾ ರಾಮಾಯಣವು ಕರ್ನಾಟಕದಲ್ಲೆ ಹುಟ್ಟಿದ್ದರೆ ಅದನ್ನು ನೋಡಿ ಮೆಚ್ಚಿರಬಹುದು. ಮುಂದೆ ಅವರು ರಾಜಾಶ್ರಯವನ್ನು ಸಂಪಾದಿಸಿ, ಆ ಗ್ರಂಥವನ್ನು ದಕ್ಷಿಣಾಪಥದಲ್ಲಿ ವಿಶೇಷವಾಗಿ ಕರ್ನಾಟಕದಲ್ಲಿ ಪ್ರಚಾರಗೊಳಿಸಿರಬಹುದೆಂದು ನನ್ನ ಅಲ್ಪಮತಿಗೆ ತೋರುತ್ತದೆ. ವಾಲ್ಮೀಕಿಯು ಬರೆದ ಶ್ರೀರಾಮನ ಚರಿತ್ರೆಯನ್ನು ಕೇಳಿ ಯಾವ ಮನುಷ್ಯನು ಅದಕ್ಕೆ ಮೋಹಿಸಿ ಮನಸೋಲಲಿಕ್ಕಿಲ್ಲ? ಕಲ್ಯಾಣದ ಚಾಳುಕ್ಯರೂ ವೆಂಗಿಯ ಚಾಳುಕ್ಯರೂ ಈ ರಾಮಾಯಣದ ಅಪರೂಪವಾದ ಅದ್ಭುತ ಕಥೆಯನ್ನು ಹೊಸತಾಗಿ ಕೇಳಿ, ಅದಕ್ಕೆ ಮೆಚ್ಚಿ ಮರುಳಾಗಿ, ತಾವೂ ಶ್ರೀರಾಮನ ವಂಶದವರೆಂದು ಹೇಳಲಿಕ್ಕೆ ಧೈರ್ಯ ಸಾಲದ್ದರಿಂದ ಶ್ರೀರಾಮನ ರಾಜಧಾನಿಯಾದ ಅಯೋಧ್ಯೆಯಲ್ಲಿ ತಮ್ಮ ಪೂರ್ವಜರು ಆಳಿದರೆಂಬ ಸುಳ್ಳುಮಾತನ್ನು ತಮ್ಮ ಶಾಸನಗಳಲ್ಲಿ ತುರುಕಿದರೆಂದು ತೋರುತ್ತದೆ.

ಅಯೋಧ್ಯೆಯಲ್ಲಿ ತಮ್ಮ ಪೂರ್ವಜರು ಆಳಿದರೆಂಬ ಸುಳ್ಳುಮಾತನ್ನು ಕಲ್ಯಾಣ ವೆಂಗಿಯ ಚಾಳುಕ್ಯರು ಏನು ಕಾರಣ ತಂತಮ್ಮ ಶಾಸನಗಳಲ್ಲಿ ಬರೆಯಿಸಿದರೆಂಬ ಬಗ್ಗೆ ಏನೋ ಒಂದು ಕಾರಣವನ್ನು ಊಹಿಸಿ ಮೇಲೆ ಬರೆದವಷ್ಟೇ. ಆದರೆ ತಮ್ಮ ಪೂರ್ವಜರಾದ ೫೯ ಮಂದಿ ಅರಸರು ಅಯೋಧ್ಯೆಯಲ್ಲಿ ಆಳಿದರೆಂತಲೂ ತರುವಾಯ ೧೬ ಮಂದಿ ದಕ್ಷಿಣಾಪಥದಲ್ಲಿ ಆಳಿದರೆಂತಲೂ ಸುಳ್ಳು ಸಂಖ್ಯೆಗಳನ್ನು ಏಕೆ ಕಲ್ಪಿಸಿದರೆಂಬ ಬಗ್ಗೆ ಊಹೆ ಮಾಡಲಿಕ್ಕೆ ನಮಗೆ ಯಾವ ಆಧಾರವೂ ಇನ್ನೂ

ದೊರೆತಿಲ್ಲ. ಆದ್ದರಿಂದ ಈ ಶಾಸನಸ್ಥ ವಂಶಾವಳಿಯನ್ನು ಇಷ್ಟಕ್ಕೇ ಬಿಟ್ಟು, ನಮಗೆ ಉಪಲಬ್ಧವಾದ ಗ್ರಂಥಸ್ಥ ವಂಶಾವಳಿಯಲ್ಲಿ ಹೆಚ್ಚಿನ ತಥ್ಯಾಂಶವೇನಾದರೂ ದೊರೆಯುತ್ತದೊ ಹೇಗೊ ಎಂಬುದನ್ನು ವಿಚಾರಿಸುವ.

ನಮ್ಮ ತಾಯ್ನುಡಿಯು ಬಹು ಪುರಾತನ ಕಾಲದ್ದಾಗಿದ್ದು ಕ್ರಿಸ್ತ ಶಕದ ಹಿಂದಿನ ಶತಮಾನಗಳಲ್ಲಿ ಯುರೋಪಖಂಡದೊಳಗೆ ಆ ಕಾಲಕ್ಕೆ ಅತಿ ಪ್ರಬಲ ದೇಶವಾದ **ಗ್ರೀಸ** ದೇಶದ ವರೆಗೆ ಪ್ರಯಾಣ ಬೆಳೆಸಿತ್ತೆಂಬುದು ಎಲ್ಲ ವಾಚಕರಿಗೆ ಗೊತ್ತಿದ್ದ ಮಾತೇ ಸರಿ. ಕಳೆದ ೨೦೦೦ ವರ್ಷಗಳಲ್ಲಿ ಸುಮಾರು ೧೦,೦೦೦ ಗ್ರಂಥಗಳು ನಮ್ಮ ತಾಯ್ನುಡಿಯಲ್ಲಿ ಬರೆಯಲ್ಪಟ್ಟಿರಬಹುದೆಂದು ಬರೆದರೆ ಅತಿಶಯೋಕ್ತಿಯಾಗಲಿಕ್ಕಿಲ್ಲೆಂದು ತೋರುತ್ತದೆ. ಈ ೧೦,೦೦೦ ಗ್ರಂಥಗಳಲ್ಲಿ ಸುಮಾರು ೩೦೦೦ ಗ್ರಂಥಗಳು ಮಾತ್ರ ಬಯಲಿಗೆ ಬಂದಿರುತ್ತವೆಂಬುದು ಇತ್ತಲಾಗಿ ಗೊತ್ತಾಗಿರುತ್ತದೆ*. ಮುದ್ರಿತವಾದ ಈ ೩೦೦೦ ಪುಸ್ತಕಗಳಲ್ಲಿ ಅರ್ವಾಚೀನ ಗದ್ಯಗ್ರಂಥಗಳೇ ಹೆಚ್ಚಾಗಿರುವುದರಿಂದ ಪ್ರಾಚೀನ ಗ್ರಂಥಗಳು ನೂರಿನ್ನೂರು ಸಂಖ್ಯೆಯನ್ನು ಮಿಕ್ಕಲಾರವೆಂದು ತೋರುತ್ತದೆ. ಈ ತುಸು ಹಳೆ ಹೊತ್ತಿಗೆಗಳನ್ನು ಶೋಧಿಸಿ ಮುದ್ರಿಸಿದವರಾದರು ಯಾರು? ಅವರು ನಮ್ಮ ದಕ್ಷಿಣ ಕರ್ನಾಟಕದ ಅಂದರೆ ಮೈಸೂರಿನ ವಿದ್ವಾಂಸರಲ್ಲವೇ? ಈ ತಾಯ್ನುಡಿಯ ಊಳಿಗಕ್ಕೋಸ್ಕರ ನಾವು ಅವರನ್ನು ಎಷ್ಟು ಕೊಂಡಾಡಿದರೂ ಸಾಲದು. ಉತ್ತರ ಕರ್ನಾಟಕಸ್ಥರಾದ ನಾವು ಈ ತರದ ಸೇವೆಯನ್ನು ಕಯ್ಕೊಳ್ಳದೆ ಇರುವುದು ನಮ್ಮ ತಪ್ಪಲ್ಲವೇ? ಇಷ್ಟು ದಿವಸ ನಾವು ಕರ್ತವ್ಯವಿಮುಖರಾದ್ದರಿಂದ ನಮ್ಮಲ್ಲಿ ಪಶ್ಚಾತ್ತಾಪವು ಅಂಕುರಿಸಬೇಕಲ್ಲವೇ? ಉತ್ತರ ಕರ್ನಾಟಕದ ಹಣವಂತರೂ ಪಂಡಿತರೂ ಒಟ್ಟುಗೂಡಿ ಮೂಲೆಗೆ ಬಿದ್ದ ಹಳೆ ಗ್ರಂಥ

---

* ವ್ಯವಸ್ಥಾಪಕ ಶ್ರೀ ಶಂಕರ ಕರ್ನಾಟಕ ಪುಸ್ತಕ ಭಾಂಡಾರ, ಮಾಳಮಡ್ಡಿ. ಧಾರವಾಡ ಇವರು ೫, ೬ ವರ್ಷ ಶ್ರಮಬಟ್ಟು ಇಷ್ಟು ಕನ್ನಡ ಪುಸ್ತಕಗಳು ಮಾತ್ರ ದೊರೆಯುತ್ತವೆಂದು ನಿರ್ಣಯಿಸಿದ್ದಾರೆ.

ಗಳನ್ನು ಹುಡುಕಿ ತೆಗೆದು ಅವುಗಳನ್ನು ಶೋಧಿಸಿ ಮುದ್ರಿಸುವ ಕೆಲಸವನ್ನು ಪ್ರೀತಿಯಿಂದಲೂ ಔತ್ಸುಕ್ಯದಿಂದಲೂ ಕಯ್ಕೊಂಡು ಮುಂದರಿಸಿ ತಮ್ಮ ಭಾಗಕ್ಕೆ ಬಂದ ಕಲಂಕವನ್ನು ದೂರಮಾಡಿಕೊಳ್ಳುವರೆಂದು ತುಂಬಾ ನಂಬಿದ್ದೇನೆ.

ಮೇಲೆ ಹೇಳಿದಂತೆ ನಮ್ಮ ಮೈಸೂರು ಬಂಧುಗಳು ಶೋಧಿಸಿ ಪ್ರಕಟಿಸಿದ ಹಳೆ ಗ್ರಂಥಗಳಲ್ಲಿ ಕವಿಚಕ್ರವರ್ತಿಯಾದ **ರನ್ನನ ಗದಾಯುದ್ಧ**ವು ಈ ಚಾಳುಕ್ಯರ ವಂಶಾವಳಿಯನ್ನು ಕೆಳಗೆ ಬರೆದಂತೆ ಕೊಡುತ್ತದೆ*.

"ಅವರ ಪೂರ್ವಜರಪ್ಪರಸುಗಳೊಳಗಯೋಧ್ಯಾಪುರ ಪರಮೇಶ್ವರನುಂ ಸತ್ಯಾದಿ ಗುಣಾಶ್ರಯ ವಲ್ಲಭನುಮತಿಪ್ರೌಢ ದಿಶಾದಂತಿಪ್ರಕಟ ಪ್ರಭಾವನಪ್ಪ ಸತ್ಯಾಶ್ರಯದೇವನಿಂ ವಿಷ್ಣುವರ್ಧನಾಪರನಾಮಧೇಯನಿಂ, ರಾಷ್ಟ್ರಕೂಟ ಗಜ ಘಟಾ ವಿಘಟನ ಸಿಂಹನೆನಿಸಿದ ಜಯಸಿಂಹ ದೇವನಿಂ, ಅತಿಪ್ರವರ್ಧನ ಪ್ರಜಾನುರಾಗನುಮತಿ ಪ್ರಬಲ ರಣರಾಮನುಮೆನಿಸಿದ ರಣರಂಗಸಿಂಹನಿಂ, ವಾತಾಪಿ ಪುರಪರೇಶ್ವರನುಮಶ್ವಮೇಧ ಯಜ್ಞದೀಕ್ಷಿತನುಂ ದ್ವೀಪಾಂತರ ಪ್ರಕಟ ಪ್ರಭಾವನುಮೆನಿಸಿದ ಪುಲಕೇಶಿ ದೇವನಿಂ ಪರೀಕ್ಷಿತ ಪವಿತ್ರವರ್ಮನುಮೆನಿಸಿದ ಕೀರ್ತಿವರ್ಮ ದೇವನಿಂ ತತ್ತನಯನಪ್ಪೆರಡನೆಯ ಸತ್ಯಾಶ್ರಯದೇವನಿಂ; ಅವನ ಕಿರಿಯಮಗನಪ್ಪ ಮಂಗಳಾರ್ಣವನಿಂ, ಸತ್ಯಾಶ್ರಯನಪ್ಪೆರಡನೆಯ ಸತ್ಯವ್ರತಿಯಿಂ ತತ್ತನಯನಪ್ಪಾದಿತ್ಯವರ್ಮನಿಂ, ತದಪತ್ಯನಪ್ಪ ವಿಕ್ರಮಾದಿತ್ಯನಿಂ, ತತ್ಪುತ್ರನಪ್ಪ ದುರ್ಧರಮಲ್ಲನಿಂ, ತನ್ನಂದನನಪ್ಪ ನಿರವದ್ಯಾಪರನಾಮಧೇಯನಪ್ಪ ವಿಜಯಾದಿತ್ಯಭಟ್ಟಾರಕನಿಂ, ತತ್ಸೂನುಮಿತ್ರನಪ್ಪ ವಿಕ್ರಮಾರ್ಣವನೆನಿಸಿದ ಕೊಂಕಣ ವಿಕ್ರಮಾದಿತ್ಯನಿಂ, ತತ್ಸೂನುಮಿತ್ರನಪ್ಪ ಕೀರ್ತಿವರ್ಮನಿಂ, ಆತನ ಕಿರಿಯ ಮಗನಪ್ಪ ಭೀಮ ಪರಾಕ್ರಮನಿಂ, ತಜ್ಜಾತನಪ್ಪೆರಡನೆಯ ಕೀರ್ತಿವರ್ಮನಿಂ, ತತ್ಸೂನುವಪ್ಪ ಪಿರಿಯ ತೈಲಪನಿಂ, ಆತನ ಮಗನಪ್ಪ ಮುಕುಂದಿಯ

* ಗದಾಯುದ್ಧ, ಆಶ್ವಾಸ ೨, ಪುಟ ೨೧, ೨೨, ೨೩.

ಕೊಂಡಕುಂದಿಯ ಭೀಮರಸಿಂ, ಆತನ ಮಗನಪ್ಪ ವಿಕ್ರಮಾದಿತ್ಯದೇವರಸಿಂ, ಆತನ ಮಗನಪ್ಪ ರಣರಂಗಮಲ್ಲನೆಸಿಪ್ಪಯ್ಯಣದೇವರಸಿಂ, ಆತನ ಮಗ ನುತ್ತುಂಗಮಲ್ಲನೆನಿಸಿದ ವಿಕ್ರಮಾದಿತ್ಯನಿಂ, ಚಾಳುಕ್ಯ ಕುಲೋದ್ಭವನಪ್ಪ ವಿಕ್ರಮಾದಿತ್ಯದೇವಂಗಂ ಚೈದ್ಯಕುಲೋದ್ಭವೆಯಪ್ಪ ಬೊಂಕಾದೇವಿಗಂ ಪುಟ್ಟಿದಂ ಸ್ವಸ್ತಿ ಸಮಸ್ತ ಭುವನಾಶ್ರಯಂ ಶ್ರೀಪೃಥ್ವೀವಲ್ಲಭಂ ಮಹಾರಾಜಾಧಿರಾಜಂ ರಾಜಪರಮೇಶ್ವರಂ ಪರಮಭಟ್ಟಾರಕಂ ಕರಹಟ ಭಯಂಕರಂ ಚಾದಿಳಾಂದ್ರ (ಜಾಬಲಾ?) ಕುಲೀನ ಭುವನ ಸದ್ಗುಣಮಣಿ ವಿಭೂಷಣಂ ಸಿಂಧುರಕಂಧರಾಧಿರೂಢ ಪಲ್ಲಿಕೋಟೋಲ್ಲಂಘನಂ ಭದ್ರಕವಿದ್ರಾವಣಂ ಕೊಂಕಣ ಭಯಂಕರಂ ಉಭಯಬಲ ದಲ್ಲಣಂ ಮಾರ್ಮಲೆಯಮರಿಗಜಕೇಸರಿ ಕರೀಂದ್ರಕಂಠೀರವಮಲ್ಲಂ ವೈರಿ ಫಣೀಂದ್ರಸೌಪರ್ಣಂ ಕ್ರಾಕಲಿಕರಾಜಗಜಕೇಸರಿ ರಣಕುಂಭಿಕುಂಭ ಕಂಠೀರವಂ ಯಾದವಕುಲಾಂಬರದ್ಯುಮಣಿ ರಣರಂಗಭೀಷಣಂ ರಿಪುಬಲ ಪುಂಜಗಜಘಟಾಭಂಜನನುಂ ಸಾಮಂತ–ಮೃಗಶಾರ್ದೂಲ–ರಣರಂಗ ರಾಕ್ಷಸಂ ಅಕಲಂಕರಾಮ ತಳವರ್ಗತಳಪ್ರಹಾರಂ ಅರಿಷ್ಟ ಘರಟ್ಟ ರಾಷ್ಟ್ರಕೂಟ ಕಾಳಕೂಟಂ ನಿಜಭುಜಚಕ್ರವರ್ತಿ ಪಾಂಚಾಲಮದೇಭ ಪಂಚಾನನಂ ಸಂಹಾರಸಿಂಹಿತ್ವ–ಘೂರ್ಜರ–ವಜ್ರದಾಢಾ–ಘೂರ್ಜರ ಭಯಜ್ವರ ಸಮಸ್ತ ಮಾಳವ ಸಪ್ತಾರ್ಚಿಃಶತ್ರುಗ್ರಹೋಚ್ಚಾಟನನುಂ ಮತ್ತಮನೇಕದೇಶಾಧೀಶ್ವರಂ ಪರನೃಪ ಮದಗಜ ಘಟಾಘಂಜನನು ಮುತ್ಪತ್ಯಮಲ್ಲಂ ಶ್ರೀಮನ್ನೂರ್ಮಡಿ ತೈಲಪನೆನಿಸಿದಾಹವಮಲ್ಲ ದೇವರಸಿಂ—ಉದಿತೋದಿತವಾಗಿ ಬಂದ ಚಾಳುಕ್ಯವಂಶದೊಳೆಲ್ಲಿಯು ಮಿನ್ನೆವರಗಂ ನುಡಿದು ಪುಸಿವುದಂ ಆಡಿ ಅಳುಪುವುದುಂ ಕೂಡಿ ತಪ್ಪುವುದುಂ ಬೇಡಿದರ್ಗಿಲ್ಲೆಂಬುದುಂ ಕಾದಿ ಸೋಲ್ವುದುಂ ಪೆರವಣ್ಣಂ ಪೀಡಿಸುವುದುಂ ಕನಸಿನೊಳಪ್ಪೊಡಮಿಲ್ಲಂ.''

ಕವಿಚಕ್ರವರ್ತಿ ರನ್ನನ ಬರಹದಂತೆ ಚಾಳುಕ್ಯವಂಶವೃಕ್ಷವು ಕೆಳಗೆ ಬರೆದಂತೆ ಬೆಳೆದಿತ್ತೆಂದು ಹೇಳಬಹುದು. ಕಂಸದಲ್ಲಿ ಡಾ॥ ಫ್ಲೀಟರ ವಂಶಾವಳಿಯಲ್ಲಿ ಕೊಟ್ಟ ಸರಿಯಾದ ಹೆಸರನ್ನು ಬರೆದು ಸಂಶಯವಿದ್ದಲ್ಲಿ ಪ್ರಶ್ನೆಚಿಹ್ನವನ್ನು ಹಾಕಿರುತ್ತೇನೆ.

೧. ಸತ್ಯಾಶ್ರಯದೇವ (ವಿಷ್ಣುವರ್ಧನ)

೨. ಜಯಸಿಂಹ

೩. ರಣರಂಗ

೪. ಪುಲಿಕೇಸಿ

೫. ಕೀರ್ತಿವರ್ಮ

೬. ಎರಡನೆಯ ಸತ್ಯಾಶ್ರಯ (ಪುಲಿಕೇಸಿ ?) — ಮಂಗಳಾರ್ಣವ (ಮಂಗಳೇಶ)

೭. ಎರಡನೆಯ ಸತ್ಯವ್ರತಿ (೨ ನೆಯ ಪುಲಿಕೇಸಿ ?)

೮. ಆದಿತ್ಯವರ್ಮ (?)

೯. ವಿಕ್ರಮಾದಿತ್ಯ

೧೦. ದುರ್ಧರಮಲ್ಲ (ವಿನಯಾದಿತ್ಯ?)

೧೧. ವಿಜಯಾದಿತ್ಯಭಟ್ಟಾರಕ

೧೨. ಕೊಂಕಣಿ ವಿಕ್ರಮಾದಿತ್ಯ (೨ ನೆಯ ವಿಕ್ರಮಾದಿತ್ಯ?)

೧೩. ಕೀರ್ತಿವರ್ಮ (೨ ನೆಯ ಕೀರ್ತಿವರ್ಮ ?)

೧೪. ಭೀಮ ಪರಾಕ್ರಮ

೧೫. ೨ ನೆಯ ಕೀರ್ತಿವರ್ಮ (೩ ನೆಯ ಕೀರ್ತಿವರ್ಮ ?)

೧೬. ಪಿರಿಯ ತೈಲಪ

೧೭. ಮುಕುಂದಿಯ ಕೊಂಡ

ಕುಂದಿಯ ಭೀಮ

|

೧೮. ವಿಕ್ರಮಾದಿತ್ಯ

|

ರಣರಂಗಮಲ್ಲ

|

೧೯. ಅಯ್ಯಣದೇವ

|

ಉತ್ತುಂಗಮಲ್ಲ

|

೨೦. ವಿಕ್ರಮಾದಿತ್ಯ (೩ ನೆಯ ವಿಕ್ರಮಾದಿತ್ಯ ?)

(ಬೊಂಕಾದೇವಿ)

|

೨೧. ನೂರ್ಮಡಿ ತೈಲಪ

(ಜಾಕವ್ವೆ)

ಈ ಕವಿ ರನ್ನನ ವಂಶವೃಕ್ಷವನ್ನು ಶಾಸನಗಳಿಂದ ಕಂಡುಹಿಡಿದ ವಂಶವೃಕ್ಷಕ್ಕೆ ಹೊಂದಿಸಿ ನೋಡಬೇಕಾದ್ದರಿಂದ ಪಾ॥ ಫ್ಲೀಟರು ಕೊಟ್ಟ ಚಾಳುಕ್ಯರ ವಂಶಾವಳಿಯನ್ನು ಕೆಳಗೆ ಕೊಡುತ್ತೇವೆ.

೧ ನೆಯ ಜಯಸಿಂಹ

|

ರಣರಾಗ

|

(೧) ಸತ್ಯಾಶ್ರಯ ರಣವಿಕ್ರಮ ೧ ನೆಯ ಪುಲಿಕೇಸಿ

(ದುರ್ಲಭಾದೇವಿ)

|

(೨) ರಣಪರಾಕ್ರಮ ೧ ನೆಯ ಕೀರ್ತಿವರ್ಮ (೫೬೭–೫೯೮)

(೩) ರಣವಿಕ್ರಾಂತ ಮಂಗಳೀಶ (೫೯೮–೬೧೦)

? ಸತ್ಯಾಶ್ರಯ ಧ್ರುವರಾಜ ಇಂದ್ರವರ್ಮ
(೫೯೦–೬೧೧)

(೪) ಸತ್ಯಾಶ್ರಯ ೨ ನೆಯ ಪುಲಿಕೇಸಿ (೬೦೯–೬೪೨)

ಕುಬ್ಜ ವಿಷ್ಣುವರ್ಧನ (ವೆಂಗಿ ಅರಸುಮನೆತನದ ಸ್ಥಾಪಕನು) ೬೧೫–೬೩೩

ಧರಾಶ್ರಯ ಜಯಸಿಂಹವರ್ಮ (ಇವನೇ ಗುಜರಾತದ ೨ ನೆಯ ಅರಸುಮನೆತನವನ್ನು ಸ್ಥಾಪಿಸಿರಬಹುದು)

ಆದಿತ್ಯವರ್ಮ

ಚಂದ್ರಾದಿತ್ಯ (ವಿಜಯಮಹಾದೇವಿ) ೬೫೫–೬೫೯

(೫) ಸತ್ಯಾಶ್ರಯ ರಣರಸಿಕ ಮೊದಲನೆಯ ವಿಕ್ರಮಾದಿತ್ಯ ೬೫೫–೬೮೦

ಧಾರಾಶ್ರಯ ಜಯಸಿಂಹವರ್ಮ (ಗುಜರಾತದ ೩ ನೆಯ ಅರಸುಮನೆತನವು ಆರಂಭಿಸಿತು ೬೭೧–೬೯೨)

(೬) ಸತ್ಯಾಶ್ರಯ ರಾಜಾಶ್ರಯ ವಿನಯಾದಿತ್ಯ (೬೮೦–೬೯೬)

(೭) ಸತ್ಯಾಶ್ರಯ ಸಮಸ್ತಭುವನಾಶ್ರಯ ವಿಜಯಾದಿತ್ಯ (೬೯೬–೭೩೪)

ಕುಂಕುಮ ಮಹಾದೇವಿ

(೮) ಸತ್ಯಾಶ್ರಯ ೨ ನೆಯ ವಿಕ್ರಮಾದಿತ್ಯ (ಲೋಕಮಹಾದೇವಿಯೂ ತ್ರೈಲೋಕ್ಯ ಮಹಾದೇವಿಯೂ ೭೩೪–೭೪೭)

(೯) ಸತ್ಯಾಶ್ರಯ ನೃಪಸಿಂಹ ೨ ನೆಯ ಕೀರ್ತಿವರ್ಮ (೭೪೭–೭೫೭)

ಈ ವಂಶವೃಕ್ಷದಲ್ಲಿ ಗುಜರಾತದ ಶಾಖೆಗಳ ಅರಸರ ಹೆಸರುಗಳನ್ನು ಕಾಣಿಸಿಲ್ಲ. ಇದನ್ನು ಕವಿ ರನ್ನನ ವಂಶವೃಕ್ಷಕ್ಕೆ ಹೋಲಿಸಿ ನೋಡಿದರೆ ಕೆಲವು ವ್ಯತ್ಯಾಸಗಳು ಕಂಡುಬರುತ್ತವೆ. ಕವಿ ಚಕ್ರವರ್ತಿ

ರನ್ನನು ಸೂರ್ವಡಿ ತೈಲಪನ ಮಗನ ಆಶ್ರಯದಲ್ಲಿದ್ದುದರಿಂದಲೋ ಬಾದಾವಿ ಚಾಳುಕ್ಯರ ಉತ್ಪತ್ತಿಯು ಕಾಲಧರ್ಮದಿಂದ ಮರೆತು ಹೋದುದರಿಂದಲೋ ಮತ್ತಾವ ಕಾರಣದಿಂದಲೋ ಕಲ್ಯಾಣದ ಚಾಳುಕ್ಯರು ಜಂಬಕೊಳ್ಳಿಸ್ಕರ ಹೊಸತಾಗಿ ಕಲ್ಪಿಸಿದ ಅಯೋಧ್ಯಾಪುರದ ಸಂಬಂಧವನ್ನು ಆರಂಭಕ್ಕೆ ಹೇಳಿ, ಮುಂದೆ ಕವಿರನ್ನನು ನಿಜವಾಗಿ ಇದ್ದ ಜಯಸಿಂಹನ ಹೆಸರನ್ನು ಹೇಳಿರುತ್ತಾನೆ. ಅಯೋಧ್ಯಾಪುರ ಪರಮೇಶ್ವರನಾದ ಸತ್ಯಾಶ್ರಯ ಅಥವಾ ವಿಷ್ಣುವರ್ಧನನೆಂಬ ಕಲ್ಪಿತ ಪೂರ್ವಜನ ಹೆಸರನ್ನೊಂದು ಬಿಟ್ಟರೆ ಅವನು ಕೊಟ್ಟ ಮುಂದಿನ ಹೆಸರುಗಳೂ ಡಾ॥ ಫ್ಲೀಟರ ಹೆಸರುಗಳೂ ಬಲು ಮಟ್ಟಿಗೆ ಕೂಡುತ್ತವೆಂದು ಹೇಳಬಹುದು. ಜಯಸಿಂಹನಿಗೆ ಕವಿ ರನ್ನನು "ರಾಷ್ಟ್ರಕೂಟ ಗಜಘಟಾವಿಘಟನಸಿಂಹನೆನಿಸಿದ" ಎಂಬ ವಿಶೇಷಣವನ್ನು ಹಚ್ಚಿರುತ್ತಾನೆ. ಈ ವಿಶೇಷಣವು ಜಯಸಿಂಹನ ಮೇಲೆ ಮಾಡಿದ ಮಿಥ್ಯಾರೋಪವೆಂದು ನಿಸ್ಸಂದೇಹವಾಗಿ ಹೇಳಬಹುದು. ಏಕೆಂದರೆ ರಾಷ್ಟ್ರಕೂಟರು (ನಾಡಗೌಡರು ?) ಆ ಕಾಲಕ್ಕೆ ಬಾದಾಮಿಯ ನೆರೆಹೊರೆಯಲ್ಲಿ ಪ್ರಬಲರಾಗಿದ್ದಿಲ್ಲ ಮತ್ತು ಕದಂಬರ ದಂಡನಾಯಕನಾದ ಜಯಸಿಂಹನು ಅವರನ್ನು ಮುರಿಬಡಿದನೆಂಬುದಕ್ಕೆ ಯಾವ ಆಧಾರವೂ ಇರುವುದಿಲ್ಲ. ಕವಿ ರನ್ನನ ರಣರಂಗನೂ ಡಾ॥ ಫ್ಲೀಟರ ರಣರಾಗನೂ ಭಿನ್ನಪುರುಷರಾಗಿದ್ದಿಲ್ಲ. ಅವನಿಗೆ ಕೊಟ್ಟ ವಿಶೇಷಣದಿಂದ ಅವನು ಕದಂಬರ ಕಯ್ಕೆಳಗೆ ದಂಡನಾಯಕನೂ ಮಂಡಲೇಶ್ವರನೂ ಆಗಿದ್ದನೆಂದು ತೋರುತ್ತದೆ. ಪುಲಿಕೇಶಿಯು ಸ್ವತಂತ್ರನಾಗಿ ಬಾದಾಮಿ ಚಾಳುಕ್ಯ ಮನೆತನವನ್ನು ಸ್ಥಾಪಿಸಿದನೆಂಬುದಕ್ಕೆ ಸಂದೇಹವೇ ಇಲ್ಲ. ಅವನಿಗೆ ವಾತಾಪಿಪುರವರೇಶ್ವರ, ಅಶ್ವಮೇಧಯಜ್ಞದೀಕ್ಷಿತ, ದ್ವೀಪಾಂತರಪ್ರಕಟಪ್ರಭಾವ ಎಂಬ ಮೂರು ವಿಶೇಷಣಗಳನ್ನು ಕವಿ ರನ್ನನು ಕೊಟ್ಟಿರುತ್ತಾನೆ. ಅವನ ತರುವಾಯ ಆಳಿದ ಕೀರ್ತಿವರ್ಮನಿಗೆ ಪರಿರಕ್ಷಿತಪವಿತ್ರವರ್ಮನುಮೆನಿಸಿದ ಎಂಬ ವಿಶೇಷಣವನ್ನು ಕೊಟ್ಟಿರುತ್ತಾನೆ. ಮುಂದೆ ಮಾತ್ರ ತುಸು ವ್ಯತ್ಯಾಸವು ಕಂಡುಬರುತ್ತದೆ. ೧ನೆಯ ಕೀರ್ತಿವರ್ಮನ ತರುವಾಯ ಅವನ ತಮ್ಮನಾದ ಮಂಗಳೇಶನೂ ಅವನ ಮಗನಾದ ಧ್ರುವನೂ ಅವರಿಬ್ಬರ ತರುವಾಯ

ಕೀರ್ತಿವರ್ಮನ ಮಗನಾದ ೨ ನೆಯ ಪುಲಿಕೇಸಿಯೂ ಅವನ ಮಗನಾದ ೧ ನೆಯ ವಿಕ್ರಮಾದಿತ್ಯನೂ ಆಳಿದರೆಂದು ಡಾ॥ ಫ್ಲೀಟರ ಅಭಿಪ್ರಾಯವು. ಆದರೆ ಕವಿ ರನ್ನನು ಕೊಟ್ಟ ಆಳಿಕೆಯ ಕ್ರಮವು ಇದರಿಂದ ಭಿನ್ನವಾಗಿರುತ್ತದೆ. ಅವನ ಬರಹದಂತೆ ಕೀರ್ತಿವರ್ಮನ ತರುವಾಯ ಅವನ ಮಗನಾದ ೨ ನೆಯ ಸತ್ಯಾಶ್ರಯನೂ ಅವನ ಹಿಂದೆ ಅವನ ತಮ್ಮನಾದ ಮಂಗಳಾರ್ಣವನೂ ಅವನ ತರುವಾಯ ಸತ್ಯಾಶ್ರಯನಪ್ಪೆರಡನೆಯ ಸತ್ಯವ್ರತಿಯೂ ಅವನ ತರುವಾಯ ಅವನ ಮಗನಾದ ಆದಿತ್ಯವರ್ಮನೂ ಆಳಿದರೆಂದು ತೋರುತ್ತದೆ. ಈ ೨ ನೆಯ ಸತ್ಯಾಶ್ರಯನು ಯಾರು? ಈ ೨ ನೆಯ ಸತ್ಯಾಶ್ರಯನು ಭಿನ್ನಪುರುಷನಾಗದೆ ೨ ನೆಯ ಪುಲಿಕೇಸಿಯೇ ಆಗಿದ್ದನೆಂದು ನನ್ನ ಮನೋದೇವತೆಯು ಹೇಳುತ್ತಾಳೆ. ಅವನಿಗೆ ಕವಿರನ್ನನು ೨ ನೆಯ ಸತ್ಯಾಶ್ರಯನೆಂತಲೂ ಸತ್ಯಾಶ್ರಯನಪ್ಪ ೨ ನೆಯ ಸತ್ಯವ್ರತಿಯೆಂತಲೂ ಕರೆದಿದ್ದಾನೆ. ಕೆಳಗೆ ಕೊಟ್ಟ ಕಾರಣಗಳು ಈ ಅನುಮಾನವನ್ನು ಬಲಪಡಿಸುತ್ತವೆ.

(ಅ) ಕವಿರನ್ನನು ಬಾದಾಮಿ ಚಾಳುಕ್ಯ ಮನೆತನದ ಮೂಲಪುರುಷನಾದ ವಿಷ್ಣುವರ್ಧನನಿಗೆ ಸತ್ಯಾಶ್ರಯನೆಂಬ ಬಿರುದನ್ನು ಕೊಟ್ಟು ಮುಂದೆ ಅವನ ವಂಶಜರಾದ ಜಯಸಿಂಹ ರಣರಂಗ ಪುಲಿಕೇಸಿ ಕೀರ್ತಿವರ್ಮ ಈ ನಾಲ್ವರಿಗೆ ಆ ಬಿರುದನ್ನು ಕೊಡದೆ, ೨ ನೆಯ ಪುಲಿಕೇಸಿಯ ಅತುಲಪರಾಕ್ರಮವನ್ನೂ ದಿಗ್ವಿಜಯವನ್ನೂ ರಾಜವಿಸ್ತಾರವನ್ನೂ ಲಕ್ಷ್ಯದಲ್ಲಿ ತಂದು ಅವನಿಗೆ ಆ ಬಿರುದನ್ನು ಕೊಟ್ಟಿರುತ್ತಾನೆಂದು ಹೇಳಬಹುದು.

(ಆ) ಕೌಠೆಮ್ಮದ ಶಾಸನದಲ್ಲಿ ಕೀರ್ತಿವರ್ಮನ ತರುವಾಯ ಪುಲಿಕೇಸಿಯೇ ಚಕ್ರವರ್ತಿಯಾದನೆಂತಲೂ ಅವನು ಸಣ್ಣವನಿದ್ದುದರಿಂದ ಅವನ ಕಕ್ಕನಾದ ಮಂಗಳೇಶನು ರಾಜಪಾಲಕನಾದನೆಂತಲೂ ಬರೆದಿದೆ. ಮುಂದೆ ಮಂಗಳೇಶನು ರಾಜ್ಯಲೋಭದಿಂದ ಚಿಕ್ಕ ಪುಲಿಕೇಸಿಯನ್ನು ಬದಿಗೊತ್ತಿ ಸ್ವತಂತ್ರನಾಗಿ ಆಳತೊಡಗಿದ್ದರಿಂದ ಕವಿರನ್ನನು ಕೀರ್ತಿವರ್ಮನ ತರುವಾಯ ೨ ನೆಯ ಪುಲಿಕೇಸಿಯೂ ಬಳಿಕ ಮಂಗಳಾರ್ಣವನೂ ಬಳಿಕ ಮತ್ತೆ ಪುಲಿಕೇಸಿಯೂ ಆಳಿದರೆಂದು ಬರೆದುದು ಯಥಾರ್ಥವಾದುದೇ ಸರಿ.

(ಇ) "ತತ್ತನಯನಪ್ಪ ೨ ನೆಯ ಸತ್ಯಾಶ್ರಯದೇವನಿಂ **ಅವನ** ಕಿರಿಯ ಮಗನಪ್ಪ ಮಂಗಳಾರ್ಣವನಿಂ" ಎಂದು ಕವಿರನ್ನನು ಬರೆಯುತ್ತಾನೆ. ಇಲ್ಲಿ ಅವನ ಶಬ್ದದ ಅರ್ಥವನ್ನು ೨ ನೆಯ ಸತ್ಯಾಶ್ರಯನ ಎಂದು ಮಾಡಿದರೆ ವಿಪರೀತವಾಗುವುದು. ಏಕೆಂದರೆ ೨ ನೆಯ ಸತ್ಯಾಶ್ರಯನ ಹಿರಿಯ ಮಗನಿರುವಾಗ ಕಿರಿಯಮಗನು ಪಟ್ಟವೇರುವ ಸಂಭವವೇ ಇಲ್ಲ. ಆದ್ದರಿಂದ ಅವನ ಎಂದರೆ ೧ ನೆಯ ಪುಲಿಕೇಸಿಯ ಎಂದು ಅರ್ಥಮಾಡಲಿಕ್ಕೇ ಬೇಕು.

(ಈ) ದುರ್ಲಭಾದೇವಿಯು ೧ ನೆಯ ಪುಲಿಕೇಸಿಯ ಹೆಂಡತಿಯಾಗಿದ್ದಳೆಂಬ ಬಗ್ಗೆ ಸಂಶಯವಿಲ್ಲ. ಮಂಗಳೇಶನ ಮಹಾಕೂಟದ ಗೆಲ್ಗಂಬದಲ್ಲಿ ಅವನು ತನ್ನ ತಂದೆಯ ಹೆಂಡತಿಯಾದ ದುರ್ಲಭಾದೇವಿಯನ್ನು ಕರೆಯಿಸಿದನೆಂದು ಬರೆದಿದೆ. ಆದ್ದರಿಂದ ಅವನು ೨ ನೆಯ ಪುಲಿಕೇಸಿಯ ಚಿಕ್ಕಪ್ಪನಾಗಿದ್ದನೇ ಹೊರತು ಬೇರೆ ಸಂಬಂಧಿಕನಾಗಿದ್ದಿಲ್ಲ.

(ಉ) ಕೀರ್ತಿವರ್ಮನು ಸತ್ತಕೂಡಲೆ ೨ ನೆಯ ಪುಲಿಕೇಸಿಯು ಪಟ್ಟವೇರಿರಬಹುದು. ಆದಕಾರಣ ಮಂಗಳೇಶನು ಸತ್ತ ಬಳಿಕ ಅವನ ಪಟ್ಟಾಭಿಷೇಕವಾದ ಬಗ್ಗೆ ಲೇಖವೇ ಇಲ್ಲ.

ಇಲ್ಲಿಯ ವರೆಗೆ ಡಾ॥ ಫ್ಲೀಟರ ವಂಶಾವಳಿಗೆ ಕವಿರನ್ನನ ವಂಶಾವಳಿಯು ಕೂಡುತ್ತದೆಂದು ಹೇಳಬಹುದು. ೨ ನೆಯ ಪುಲಿಕೇಸಿಯ ತರುವಾಯ ೧ ನೆಯ ವಿಕ್ರಮಾದಿತ್ಯನು ಆಳಿದನೆಂದು ಡಾ॥ ಫ್ಲೀಟರು ಬರೆಯುತ್ತಾರೆ. ಆದರೆ ಕವಿರನ್ನನು "ತತ್ತನಯನಪ್ಪಾದಿತ್ಯವರ್ಮನಿಂ" ಎಂದು ಹೇಳುತ್ತಾನೆ. ಆದಿತ್ಯವರ್ಮನು ೨ ನೆಯ ಪುಲಿಕೇಸಿಯ ಹಿರಿಯ ಮಗನೆಂದು ಒಡಂಬಟ್ಟರೂ ಅವನು ಆಳಿದನೋ ಇಲ್ಲೋ ಎಂಬ ಬಗ್ಗೆ ಡಾ॥ ಫ್ಲೀಟರು ಸಂಶಯಬಡುತ್ತಾರೆ. ಅಂದರೆ ಅವನು ಚಕ್ರವರ್ತಿಯಾಗಲಿಲ್ಲೆಂದು ಹೇಳಲಿಕ್ಕೆ ಅವರಿಗೆ ಧೈರ್ಯ ಸಾಲುವದಿಲ್ಲ. ಆದ್ದರಿಂದ ಕವಿರನ್ನನ ಅಭಿಪ್ರಾಯವೇ ಸಪ್ರಮಾಣವಾದ್ದೆಂದು ನಂಬಬಹುದು. ೧ ನೆಯ ವಿಕ್ರಮಾದಿತ್ಯನು ಆದಿತ್ಯವರ್ಮನ ಮಗ

ನೆಂದು ಬರೆದುದು ಕವಿಯ ಹಸ್ತದೋಷವಾಗಲಿ ಸ್ಮೃತಿದೋಷವಾಗಲಿ ಆಗಿರಬಹುದು. ಡಾ॥ ಫ್ಲೀಟರ ವಿನಯಾದಿತ್ಯನೇ ಕವಿ ರನ್ನನ ದುರ್ಧರಮಲ್ಲನೆಂತಲೂ ೨ ನೆಯ ವಿಕ್ರಮಾದಿತ್ಯನೇ ಕವಿರನ್ನನ ಕೊಂಕಣಿ ವಿಕ್ರಮಾದಿತ್ಯನೆಂತಲೂ ೨ ನೆಯ ಕೀರ್ತಿವರ್ಮನೇ ಕವಿರನ್ನನ ಕೀರ್ತಿವರ್ಮನೆಂತಲೂ ಎಣಿಸಿದರೆ ಎರಡೂ ವಂಶಾವಳಿಗಳು ಕೂಡಿದಂತಾಗುವವು.

ಈ ೨ ನೆಯ ಕೀರ್ತಿವರ್ಮನೇ ಬಾದಾಮಿ ಚಾಳುಕ್ಯ ಮನೆತನದ ಕಡೆಯ ಅರಸನೆಂಬ ಅರ್ವಾಚೀನ ಪಂಡಿತರ ಸಿದ್ಧಾಂತವು ನಿರ್ದುಷ್ಟವಾಗಿದ್ದರೆ, ಅವನ ತರುವಾಯ ಕವಿ ರನ್ನನು ಹೇಳಿದ ೭ ಜನರು—೧ ಭೀಮಪರಾಕ್ರಮ, ೨ ಕೀರ್ತಿವರ್ಮ, ೩ ಪಿರಿಯತೈಲಪ, ೪ ಭೀಮ, ೫ ವಿಕ್ರಮಾದಿತ್ಯ, ೬ ಅಯ್ಯಣದೇವ, ೭ ವಿಕ್ರಮಾದಿತ್ಯ—ರಾಷ್ಟ್ರಕೂಟರ ಕಯ್ಕೆಳಗಿನ ಚಿಕ್ಕ ಸಂಸ್ಥಾನಿಕರಾಗಿ ಅಥವಾ ಪೂರ್ವ ಚಾಳುಕ್ಯರ ಆಶ್ರಿತರಾಗಿ ಹೇಗಾದರೂ ಕಾಲಕ್ರಮಣ ಮಾಡುತ್ತಿದ್ದರೆಂದು ಅನುಮಾನಮಾಡಬಹುದು.

ಕವಿಚಕ್ರವರ್ತಿಯಾದ ರನ್ನನು ತನ್ನ ಗದಾಯುದ್ಧವನ್ನು ಸುಮಾರು ೯೮೨ ರಲ್ಲಿ ಮುಗಿಸಿರಬಹುದು. ಈ ಕಾಲಕ್ಕೆ ನೂರ್ಮಡಿ ತೈಲಪನು ರಾಷ್ಟ್ರಕೂಟರಿಂದ ಕರ್ನಾಟಕ ಸಾಮ್ರಾಜ್ಯವನ್ನು ಸೆಳೆದುಕೊಂಡು ೧೦ ವರ್ಷಗಳಾಗಿದ್ದವು. ಗದಾಯುದ್ಧಕ್ಕಿಂತ ೪೨ ವರ್ಷಗಳ ಹಿಂದೇ ರಚಿತವಾದ ಆದಿಪಂಪನ ವಿಕ್ರಮಾರ್ಜುನವಿಜಯ ಅಥವಾ ಪಂಪಭಾರತವೆಂಬ ಪ್ರಸಿದ್ಧವಾದ ಕನ್ನಡದ ಚಂಪೂಗ್ರಂಥದಲ್ಲಿ ಆದಿಪಂಪನು ತನ್ನ ಪೋಷಕನಾದ ಚಾಳುಕ್ಯ ಅರಿಕೇಸರಿಯನ್ನು ಅರ್ಜುನನಿಗೆ ಹೋಲಿಸುತ್ತಾನೆ. ಅವನು ಕೊಟ್ಟ ತನ್ನ ಪೋಷಕನ ವಂಶಾವಳಿಯು ಕವಿ ರನ್ನನು ಕೊಟ್ಟ ಚಾಳುಕ್ಯ ವಂಶಾವಳಿಯಿಂದ ಭಿನ್ನವಾಗಿರುವುದರಿಂದ ಕಲ್ಯಾಣದ ಚಾಳುಕ್ಯರ ಬಗ್ಗೆ ಬರೆಯುವಾಗ ಈ ವಂಶಾವಳಿಗಳ ಬಗ್ಗೆ ವಿಚಾರಮಾಡುವೆವು.

೨ನೆಯ ಅಧ್ಯಾಯ

ಪಶ್ಚಿಮ ಅಥವಾ ಬಾದಾಮಿ ಚಾಳುಕ್ಯರ ಏರುಗಾಲವು

(೫೫೦ ರಿಂದ ೬೫೨ರ ವರೆಗೆ)

ಕಲ್ಯಾಣದ ಚಾಳುಕ್ಯರು ತಮ್ಮ ವಂಶದ ಪ್ರತಿಷ್ಠೆಯನ್ನು ಬೆಳೆಸಲಿಕ್ಕೂ ತಮ್ಮ ಪೂರ್ವಜರು ದೇವಾಂಶರೆಂದು ಹೇಳಿಕೊಳ್ಳಲಿಕ್ಕೂ ಹಲವು ಕಟ್ಟುಕಥೆಗಳನ್ನು ಕಲ್ಪಿಸಿದ್ದಲ್ಲದೆ, ಎಷ್ಟೋ ಸುಳ್ಳುಮಾತು ಗಳನ್ನು ತಮ್ಮ ಶಾಸನಗಳಲ್ಲಿ ತುರುಕಿದರೆಂತಲೂ ಕವಿಚಕ್ರವರ್ತಿ ರನ್ನನು ತನ್ನ **ಗದಾಯುದ್ಧ**ದಲ್ಲಿ ಕೊಟ್ಟ ಚಾಳುಕ್ಯ ವಂಶಾವಳಿಗೂ ಶಾಸನ ಗಳಿಂದ ಕಂಡುಹಿಡಿದ ವಂಶಾವಳಿಗೂ ಕೆಲವು ವ್ಯತ್ಯಾಸಗಳು ಕಂಡು ಬಂದರೂ ಅವು ಅಪರಿಹಾರ್ಯವಾದ ವ್ಯತ್ಯಾಸಗಳಿದ್ದಂತೆ ತೋರುವ ದಿಲ್ಲೆಂತಲೂ ಹಿಂದಿನ ಅಧ್ಯಾಯದಲ್ಲಿ ಬರೆದೆವಷ್ಟೆ. ಈಗ ಯಾವ ಯಾವ ಚಾಳುಕ್ಯ ಅರಸರು ಎಷ್ಟೆಷ್ಟು ವರ್ಷ ಬಾದಾಮಿಯಲ್ಲಿ ಆಳಿದರೆಂಬುದನ್ನೂ ಅವರವರ ಆಳಿಕೆಯಲ್ಲಿ ಯಾವ ಯಾವ ದೊಡ್ಡ ರಾಜ್ಯಕಾರ್ಯಗಳು ಸಂಭವಿಸಿದವೆಂಬುದನ್ನೂ ಅವರು ತಮ್ಮ ರಾಜ್ಯವನ್ನು ಹೇಗೆ ಬೆಳೆಸಿದ ರೆಂಬುದನ್ನೂ ಈ ಅಧ್ಯಾಯದಲ್ಲಿ ವಿವರಿಸುವೆವು.

೫೯ ಮಂದಿ ಚಾಳುಕ್ಯ ಅರಸರು ಅಯೋಧ್ಯೆಯಲ್ಲಿ ಆಳಿದರೆಂಬುದು, ವಿಜಯಾದಿತ್ಯನೆಂಬವನು ದಕ್ಷಿಣಕ್ಕೆ ಬಂದು ತ್ರಿಲೋಚನ ಪಲ್ಲವನೊಡನೆ ಕಾದಿ ಸತ್ತನೆಂಬುದು, ಅವನ ಮಗನಾದ ವಿಷ್ಣುವರ್ಧನನೆಂಬವನು ಕದಂಬ ಗಂಗರನ್ನು ಸೋಲಿಸಿ ನರ್ಮದೆಯಿಂದ ಕುಮಾರೀ ಭೂಶಿರದ ವರೆಗಿದ್ದ ವಿಸ್ತಾರವಾದ ಸಾಮ್ರಾಜ್ಯಕ್ಕೆ ಒಡೆಯನಾದನೆಂಬುದು—ಇವೆಲ್ಲ ತಮ್ಮ ವಂಶದ ಮಹತ್ವವನ್ನು ಬೆಳೆಸಿಕೊಳ್ಳಲಿಕ್ಕೆ ಕಲ್ಯಾಣದ ಚಾಳುಕ್ಯರು ಹಾಕಿದ ಕಯ್ಗಂಟುಗಳೆಂದು ಹಿಂದೆ ಹೇಳಿರುತ್ತೇವಷ್ಟೆ. ೬ ನೆಯ, ೭ ನೆಯ ಮತ್ತು ೮ ನೆಯ ಶತಮಾನಗಳ ಶಾಸನಗಳು ಹೇರಳವಾಗಿ ದೊರೆತಿದ್ದರೂ ಅವುಗಳೊಳಗೆ ಒಂದರಲ್ಲಿಯಾದರೂ ಈ ಅಯೋಧ್ಯಾ ದಂಡಯಾತ್ರೆಯ ಚಕಾರ ಶಬ್ದವಿರುವುದಿಲ್ಲ. ವಿಷ್ಣುಭಟ್ಟ ಸೋಮಯಾ

ಬೆಸುಂದ ಸಂರಕ್ಷಿಸಲ್ಪಟ್ಟ ವಿಷ್ಣುವರ್ಧನನು ತನ್ನ ತಂದೆಯನ್ನು ಕೊಂದ ಪಲ್ಲವರೊಡನೆ ಕಾದನೆ, ಕದಂಬ ಗಂಗರನ್ನು ಸೋಲಿಸಿ, ಕುಮಾರೀ ಭೂಶಿರದಿಂದ ನರ್ಮದೆಯ ವರೆಗೆ ರಾಜ್ಯ–ದೊರಕಿಸಿದನೆಂಬುದು ಕೇಳಿದ ಕೂಡಲೆ ಕಲ್ಪಿತವಾದ ಕಥೆ ಇರುತ್ತದೆಂದು ಯಾರು ಬೇಕಾದವರು ನಿಸ್ಸಂದೇಹವಾಗಿ ಹೇಳಬಹುದು. ಆದಕಾರಣ ಈ ಚಾಳುಕ್ಯರು ಅಯೋಧ್ಯೆಯಿಂದಾಗಲಿ, ಉತ್ತರಾಪಥದ ಬೇರೊಂದು ಭಾಗದಿಂದಾಗಲಿ ಬಂದರೆಂದು ಹೇಳುವುದರಲ್ಲಿ ಏನೂ ಹುರುಳಿಲ್ಲೆಂದು ನಾವು ಹೇಳುತ್ತೇವೆ.

ಬಾದಾಮಿ ಚಾಳುಕ್ಯರು ಉತ್ತರಾಪಥದಿಂದ ಬರಲಿಲ್ಲೆಂಬ ಮಾತು ನಿಜವಾದರೆ ಅವರು ಎಲ್ಲಿಯವರು? ಎಲ್ಲಿದ್ದರು? ಹೇಗೆ ರಾಜ್ಯದೊರಕಿಸಿದರು? ಎಂಬ ಪ್ರಶ್ನೆಗಳು ಸ್ವಾಭಾವಿಕವಾಗಿ ಹುಟ್ಟುತ್ತವೆ. ಮೊದಲನೆಯ ೨ ಪ್ರಶ್ನೆಗಳಿಗೆ ಒಂದೇ ಉತ್ತರವು ಸಾಕಾಗಿರುತ್ತದೆ. ಏಕೆಂದರೆ, ಚಾಳುಕ್ಯರು ಎಲ್ಲಿದ್ದರೆಂಬುದು ಗೊತ್ತಾದರೆ, ಅವರು ಎಲ್ಲಿಯವರು ಎಂಬ ಪ್ರಶ್ನೆಯ ಉತ್ತರವು ನಮಗೆ ದೊರೆತಂತಾಯಿತು. ಈವರೆಗೆ ಯಾವ ಪಾಶ್ಚಾತ್ಯ ವಿಮರ್ಶಕ ವಿಚಕ್ಷಣನಾದರೂ ಈ ಚಾಳುಕ್ಯರು ಎಲ್ಲಿದ್ದರೆಂಬ ಪ್ರಶ್ನೆಯನ್ನು ಎತ್ತಿ ಅದಕ್ಕೆ ಸಮರ್ಪಕವಾದ ಉತ್ತರವನ್ನು ಕೊಡುವ ಯತ್ನಗೆಯನ್ನು ಮಾಡಿಲ್ಲ. **ಜಿ. ಜೊ. ಡುಬ್ರಿಲ**ರೆಂಬ ಫ್ರೆಂಚ ಪಂಡಿತರು ಮಾತ್ರ ಈ ವಿಷಯವಾಗಿ ಕೆಲವು ಸಂಶಯಾತ್ಮಕ ಸಂಗತಿಗಳನ್ನು ಉದ್ಧರಿಸಿ ಬರೆದಿರುತ್ತಾರೆ*. ಅವರು ಹೇಳುವುದೇನೆಂದರೆ:—೬ ನೆಯ ಶತಮಾನದ ಪೂರ್ವಭಾಗದಲ್ಲಿ **ಹರಿವಾತ್ಸಕೊಟ್ಟೆ** ಎಂಬ ಕೋಟೆಯ ಮುಖ್ಯಸ್ಥನು ಜಯಸಿಂಹನೆಂಬವನಿದ್ದನು†. ಇವನೇ ಚಾಳುಕ್ಯರ ಮೂಲಪುರುಷನಾಗಿರಬಹುದೇನು? ೧ ನೆಯ ಪುಲಿಕೇಶಿಯು **ಇಂದು ಕಾಂತಿ**ಯೆಂಬ ಪಟ್ಟಣದಿಂದ ದಂಡೆತ್ತಿ ಬಂದು ಕದಂಬ ಅರಸನಾದ ಮಧುವರ್ಮನನ್ನು ಸೋಲಿಸಿ ವಾತಾಪಿಯಲ್ಲಿ ತನ್ನ ಸಿಂಹಾಸನವನ್ನು ಸ್ಥಾಪಿಸಿದನು.

---

* ದಕ್ಷಿಣಾಪಥದ ಪ್ರಾಚೀನೇತಿಹಾಸ, ಪುಟ ೧೧೧.

† ಎಪಿಗ್ರಾಫಿಯಾ ಇಂಡಿಕಾ, ಸಂ. ೮, ಪು. ೧೬೩.

ಪಂಡಿತ ಡುಬ್ರುಲರ ಈ ಬರಹವು ಅವರ ಸಂಶಯವನ್ನು ಹೊರಗೆಡಹುತ್ತದೆ ಹೊರತು ಅವರ ಸಿದ್ಧಾಂತವಾಗಿರುವುದಿಲ್ಲ. ಪರಿಪಾತ್ರಕೊಟ್ಟವು ಯಾವುದೆಂಬುದು ಗೊತ್ತಾಗಿಲ್ಲ. ಅಲ್ಲಿದ್ದ ಕೋಟೆಯ ಮುಖ್ಯಸ್ಥನು ಜಯಸಿಂಹನೆಂಬವನಾಗಿದ್ದರೆ, ಆ ಜಯಸಿಂಹನೇ ಪುಲಿಕೇಸಿಯ ಅಜ್ಜನಾದ ಜಯಸಿಂಹನಾಗಿದ್ದನೆಂಬುದಕ್ಕೆ ಆಧಾರವೇನೂ ದೊರೆತಿಲ್ಲ. ಒಂದೇ ಹೆಸರಿನವರು ಎಷ್ಟೋ ಜನರಿರುವುದಿಲ್ಲವೆ? ಈ ಡುಬ್ರುಲರ ಸಂಶಯವು ನಿರಾಧಾರವಾಗಿರುವ ವರೆಗೆ ವಿಚಾರಾರ್ಹವಲ್ಲೆಂದು ನನಗೆ ತೋರುತ್ತದೆ. ಇದಲ್ಲದೆ ಪುಲಿಕೇಸಿಯು ಇಂದುಕಾಂತಿಯೆಂಬ ಪಟ್ಟಣದಿಂದ ಬಂದನೆಂಬುದಕ್ಕೆ ಆಧಾರಗಳೇನೂ ಇದ್ದಂತೆ ಕಂಡುಬರುವುದಿಲ್ಲ. ಅದೇಕೆ ಇಂದುಕಾಂತಿಯೆಂಬ ಪಟ್ಟಣದ ಅಸ್ತಿತ್ವವೇ ಸಂಶಯಯುಕ್ತ ವಿಷಯವಾಗಿರುತ್ತದೆಂದು ಹೇಳಬಹುದು. ಒಂದು ಶಾಸನದಲ್ಲಿ ಕೆಳಗೆಕೊಟ್ಟ ಶ್ಲೋಕಾರ್ಧವು ಕಂಡುಬರುತ್ತದೆ:—

ಶ್ರಿತೇಂದುಕಾಂತಿರಪಿ ಶ್ರೀವಲ್ಲಭೋಽಪ್ಯಯಾಸೀತ್ ವಾತಾಪಿ ಪುರೀವಧೂವರತಾಮ್ ॥ *

ಈ ಶ್ಲೋಕಾರ್ಧದಲ್ಲಿ 'ಶ್ರಿತೇಂದುಕಾಂತಿರಪಿ' ಎಂಬ ಪದದ ಅರ್ಥವನ್ನು ಪಂಡಿತ ಡುಬ್ರುಲರು "(ಪುಲಿಕೇಸಿಯು) ಇಂದುಕಾಂತಿ ಪಟ್ಟಣದಲ್ಲಿದ್ದವನಾದರೂ" ಎಂದು ಮಾಡಿರುತ್ತಾರೆ. ಈ ಅರ್ಥವು ಸರಿಯಾದದ್ದಲ್ಲೆಂದು ನನ್ನ ಅಲ್ಪಮತಿಗೆ ತೋರುತ್ತದೆ. ಏಕೆಂದರೆ ಅಪಿ ಶಬ್ದದಿಂದ ಧ್ವನಿತವಾದ ವಿರೋಧವು ಈ ಅರ್ಥದಲ್ಲಿ ಎದ್ದುಕಾಣಿಸುವುದಿಲ್ಲ. ಪುಲಿಕೇಸಿಯು ಇಂದುಕಾಂತಿಯೆಂಬ ಪಟ್ಟಣದವನಾದರೂ ವಾತಾಪಿ (ಬಾದಾಮಿ)ಯ ಒಡೆಯನಾಗಲಿಕ್ಕೆ ಅಡ್ಡಿ ಏನು? ಭಾರತೀಯರು ವಿಶೇಷವಾಗಿ ಭಾರತೀಯ ಅರಸರು ಒಬ್ಬರಿಗಿಂತ ಹೆಚ್ಚು ಜನ ಹೆಂಡಂದಿರನ್ನು ಮಾಡಿಕೊಳ್ಳುವುದಕ್ಕೆ ಶಾಸ್ತ್ರವು ಎಂದೂ ಅಡ್ಡಬಂದಿಲ್ಲ. ಆದ್ದರಿಂದ ಪುಲಿಕೇಸಿಯು ಇಂದುಕಾಂತಿಯ ಗಂಡನಾದರೂ (ಶ್ರಿತೇಂದುಕಾಂತಿರಪಿ) ಲಕ್ಷ್ಮಿಯ ಗಂಡನಾದರೂ (ಶ್ರೀವಲ್ಲಭೋಽಪಿ),

* ಇಂಡಿಯನ್ ಆಂಟಿಕ್ವೆರಿ, ಸಂಪುಟ ೫, ಪುಟ ೬೩.

ವಾತಾಪಿಪುರೀ ಎಂಬ ವಧುವಿನ ಗಂಡನಾದನು (ವಾತಾಪಿಪುರೀ ವಧೂವರತಾಮುಯಾಸೀತ್) ಎಂದು ಹೇಳುವುದರಲ್ಲಿ ಅಪಿ ಶಬ್ದದ ವಿರೋಧವೇನೂ ಕಂಡುಬರುವುದಿಲ್ಲ. ಈ ಅರ್ಥದಿಂದ ಅಪಿ ಶಬ್ದವು ಈ ಶ್ಲೋಕದಲ್ಲಿ ನಿರರ್ಥಕವಾಗಿರುತ್ತದೆಂದು ಸ್ಪಷ್ಟವಾಗಿ ಕಂಡು ಬರುತ್ತದೆ. ಆದರೆ ಕವಿಯು ಅಪಿ ಶಬ್ದವನ್ನು ಬುದ್ಧಿಪುರಸ್ಕರವಾಗಿ ಈ ಶ್ಲೋಕದಲ್ಲಿ ಉಪಯೋಗಿಸಿರುತ್ತಾನೆಂದು ನಾನು ಖಂಡಿತವಾಗಿ ಹೇಳುತ್ತೇನೆ. ಅಪಿ ಶಬ್ದವು ಸಾರ್ಥಕವಾಗಿದ್ದರೆ ಮೇಲೆಕೊಟ್ಟ ಪಂಡಿತ ಮುಪ್ಪುಲರ ಅರ್ಥವು ತಪ್ಪೆಂದು ಧಾರಾಳವಾಗಿ ಹೇಳಬಹುದು. ಈ ಅರ್ಥವು ತಪ್ಪಾದರೆ ಸರಿಯಾದ ಅರ್ಥವು ಯಾವುದು ?

"ಚಂದ್ರನ ಕಾಂತಿಯುಳ್ಳವನಾಗಿದ್ದರೂ ಅಥವಾ ಈಶ್ವರ ಸಮಾನ ನಾಗಿದ್ದರೂ ಲಕ್ಷ್ಮಿಯ ಗಂಡನಾಗಿದ್ದರೂ ಅಥವಾ ಶ್ರೀ ವಿಷ್ಣುವಿನ ಸಮಾನನಾಗಿದ್ದರೂ ಪುಲಿಕೇಶಿಯು ವಾತಾಪಿಪುರೀ ಎಂಬ ವಧುವನ್ನು ವರಿಸಿದನು" ಎಂಬುದೇ ಈ ಶ್ಲೋಕಾರ್ಥದ ನಿಜವಾದ ಅರ್ಥವೆಂದು ನನ್ನ ಬುದ್ಧಿಗೆ ತೋರುತ್ತದೆ. ಚಂದ್ರಕಾಂತಿಯು ರಾಹು ಎಂಬ ರಾಕ್ಷಸ ನಿಂದ ಆಗಿಂದಾಗ ಗ್ರಸ್ತವಾಗುತ್ತದೆಂಬುದನ್ನು ಎಲ್ಲರು ಬಲ್ಲರು. ಲಕ್ಷ್ಮಿಯು ದೇವತಾಶ್ರೇಷ್ಠಳೂ ದಾನವವಿರೋಧಿಯೂ ಆಗಿರುತ್ತಾ ಳೆಂಬುದನ್ನು ಅರಿಯದವರೇ ಇಲ್ಲ. ಇಂತಹ ಚಂದ್ರನ ಕಳೆಯುಳ್ಳವನೂ ಇಂತಹ ಲಕ್ಷ್ಮಿಯ (ಸಂಪತ್ತಿಯ) ಒಡೆಯನೂ ಆದ ೧ನೆಯ ಪುಲಿ ಕೇಶಿಯು ವಾತಾಪೀ ಎಂಬ ದುಷ್ಟ ದೈತ್ಯನ ಮಗಳು ಅಥವಾ ತಂಗಿ ಯಾದ ವಾತಾಪಿಪುರೀ ವಧುವನ್ನು ವರಿಸಿದ್ದು ಆಶ್ಚರ್ಯಕರವೇ ಸರಿ ಎಂದು ಕವಿಯು ಉತ್ಪ್ರೇಕ್ಷಿಸುತ್ತಾನೆ. ಈ ಅರ್ಥದಲ್ಲಿ ಅಪಿ ಶಬ್ದದ ವಿರೋಧವು ಸ್ಪಷ್ಟವಾಗಿ ಹೊಳೆಯುವುದಲ್ಲದೆ, ವಾತಾಪೀಪುರೀವಧುವಿನ ಉತ್ಪ್ರೇಕ್ಷೆಯು ವಾಚಕರ ಮನಸ್ಸಿನಲ್ಲಿ ಮನೋಹರವಾಗಿ ನಡುತ್ತದೆ. ಇದಲ್ಲದೆ ಪಂಡಿತ ಮುಪ್ಪುಲರು ಕಲ್ಪಿಸಿದ ಇಂದುಕಾಂತಿನಗರವು ಎಂದೂ ಎಲ್ಲಿಯೂ ಇದ್ದಿಲ್ಲೆಂದು ನಿಸ್ಸಂದೇಹವಾಗಿ ಹೇಳಬಹುದು.

ಮೇಲೆ ಕೊಟ್ಟ ವಿವರಣೆಯಿಂದ ಪುಲಿಕೇಶಿಯು ಪರಸ್ಥಳದಿಂದ ದಂಡೆತ್ತಿಬಂದು ಬಾದಾಮಿಯನ್ನು ಹಿಡಿದುಕೊಂಡನೆಂಬ ಮಾತು

ಸುಳ್ಳೆಂದು ಎಲ್ಲ ವಾಚಕರು ಒಡಂಬಡಬಹುದು. ಪುಲಿಕೇಸಿಯಾಗಲಿ ಅವನ ತಂದೆಯಜ್ಜಂದಿರಾಗಲಿ ಬೇರೆ ಕಡೆಯಿಂದ ಬಂದು ಕರ್ನಾಟಕ ವನ್ನಾಳಹತ್ತಿದರೆಂಬ ಮಾತಿನ ಕುರುಹುಬರಹಗಳಾವವೂ ಈವರೆಗೆ ಸಿಕ್ಕಿಲ್ಲ. ಅವರು ಹಾಗೆ ದಂಡಯಾತ್ರೆಯನ್ನು ಮಾಡಿ ಕದಂಬರನ್ನು ಗೆದ್ದಿದ್ದರೆ ಅವರ ಗೆಲ್ಗಂಬಗಳಾಗಲಿ ದಾನಶಾಸನಗಳಾಗಲಿ ಇರುವ ಸಂಭವವು ಬಹಳವಾಗಿತ್ತು. ಅವಾವವೂ ಇನ್ನೂ ದೊರೆಯದೇ ಇದ್ದುದ ರಿಂದ ಅವು ಇಲ್ಲವೆಂತಲೂ ಅವರು ಪರಸ್ಥಳದಿಂದ ಬರಲಿಲ್ಲೆಂತಲೂ ಧಾರಾಳವಾಗಿ ಊಹಿಸಬಹುದು. ಇವರು ಪರಕೀಯರಾಗಿದ್ದಿಲ್ಲ ಎಂಬ ಮಾತು ನಿಜವಾದರೆ ಇವರು ಕರ್ನಾಟಕಸ್ಥರೂ ಕನ್ನಡಿಗರೂ ಆಗಿದ್ದ ರೆಂದು ಹೇಳಲಿಕ್ಕೆ ಏನೂ ಅಡ್ಡಿತೋರುವುದಿಲ್ಲ. ಕದಂಬರು ಅಚ್ಚ ಕನ್ನಡಿಗರಾಗಿದ್ದನ್ನು ಎಲ್ಲರು ಒಡಂಬಡುವರಷ್ಟೇ. ಅವರಂತೆ ಚಾಳು ಕ್ಯರು ಮಾನವ್ಯ ಗೋತ್ರಜರೂ ಹಾರಿತೀಪುತ್ರರೂ ಆಗಿದ್ದಲ್ಲದೆ ಕಾರ್ತಿಕೇಯನ ಭಕ್ತರೂ ಸಪ್ತಮಾತೃ (ಕೃತ್ತಿಕಾ)ಗಳಿಂದ ಪೋಷಿಸಲ್ಪ ಟ್ಟವರೂ ಆಗಿದ್ದರು. ಪುಲಿಕೇಸಿ-ರಣರಾಗಜಯಸಿಂಹರು ಕನ್ನಡಿಗರಾಗಿ ದ್ದರೂ ಅವರ ಪೂರ್ವಜರು ಭರತಖಂಡದ ಬೇರೆ ಭಾಗದಿಂದ ಬಂದಿರ ಬಹುದೆಂದು ಕೆಲವರು ಆಕ್ಷೇಪಿಸಬಹುದು. ಯಾವ ಬಗೆಯಿಂದ ವಿಚಾರಿಸಿದರೂ ಚಾಳುಕ್ಯರು ಕನ್ನಡಿಗರಾಗಿದ್ದರೆಂದು ಕಂಡುಬರುವುದ ರಿಂದ ಅವರು ಪರಕೀಯರೆಂದು ಹೇಳುವವರು ತಮ್ಮಲ್ಲಿದ್ದ ಆಧಾರ ಗಳನ್ನು ಕೊಟ್ಟು, ತಮ್ಮ ಅಭಿಪ್ರಾಯವನ್ನು ಸರ್ವಸಮರ್ಪಕವಾಗಿ ಸಿದ್ಧಮಾಡಿಕೊಡುವ ವರೆಗೆ ಚಾಳುಕ್ಯರು ಕನ್ನಡಿಗರೇ ಆಗಿದ್ದರೆಂದು ನಾವು ದೃಢವಾಗಿ ನಂಬುವೆವು. ಮೂರುತಲೆ ಕರ್ನಾಟಕದಲ್ಲಿದ್ದವರೆಲ್ಲರು ಕನ್ನಡಿಗರೆಂದು ಎಣಿಸಿದರೆ, ಈ ಚಾಳುಕ್ಯರು ಕನ್ನಡಿಗರಾಗಿದ್ದರೆಂದು ಒರೆಯಲಿಕ್ಕೆ ಎಳ್ಳಷ್ಟಾದರೂ ಸಂಶಯಬರುವುದಿಲ್ಲ.

ಇನ್ನು ಚಾಳುಕ್ಯರು ಬಾದಾಮಿ ರಾಜ್ಯವನ್ನು ಹೇಗೆ ದೊರಕಿಸಿದ ರೆಂಬ ಪ್ರಶ್ನವು ಹಣಿಕಿಹಾಕುತ್ತದೆ. ಇವರು ಪರಸ್ಥಳದಿಂದ ಬಂದೆತ್ತಿ ಬರದೆ ಇಲ್ಲಿಯವರೇ ಆಗಿದ್ದರೆಂದು ಮೇಲೆ ಬರೆದಿರುತ್ತೇವಷ್ಟೇ. ಇವರು ಇಲ್ಲಿಯವರೇ ಆಗಿದ್ದರೆ ೬ ನೆಯ ಶತಮಾನದ ಆರಂಭದಲ್ಲಿ

ಕರ್ನಾಟಕದ ಪೊಲಬು (ಪರಿಸ್ಥಿತಿಯು) ಹೇಗಿತ್ತು? ಜಯಸಿಂಹ ರಣರಾಗರು ಯಾವ ಸ್ಥಿತಿಯಲ್ಲಿದ್ದರು? ಹೊಸ ರಾಜ್ಯವನ್ನು ಸ್ಥಾಪಿಸಲಿಕ್ಕೆ ಅವರಿಗೆ ಯಾವ ಅನುಕೂಲತೆಗಳು ದೊರೆತವು? ಎಂಬ ಪ್ರಶ್ನೆಗಳು ತಮ್ಮಷ್ಟಕ್ಕೆ ತಾವೇ ತಲೆದೋರುತ್ತವೆ. ಈ ವಿಷಯವಾಗಿ ಡಾ|| ಫ್ಲೀಟರು ಕೊಟ್ಟ ಅಭಿಪ್ರಾಯವು ಸರ್ವಸಮ್ಮತವಾದುದೆಂದು ನನಗೆ ತೋರುತ್ತದೆ. ಅವರು ಹೇಳುವುದೇನಂದರೆ:—ಬಾದಾಮಿ ಚಾಳುಕ್ಯ ಅರಸರ ಪೂರ್ವಿಕರ ಎರಡು ಹೆಸರುಗಳು ಮಾತ್ರ ನಮಗೆ ಶಾಸನಗಳಿಂದ ತಿಳಿಯುತ್ತವೆ. ಅವಾವವೆಂದರೆ **ಜಯಸಿಂಹ, ರಣರಾಗ** (ಅಥವಾ **ರಣರಂಗ**). ಇವರಿಬ್ಬರ ಕಾಲದ ಶಾಸನಗಳಾವುವು ಇನ್ನೂ ದೊರೆತಿಲ್ಲ. ಮಂಗಳೇಶನ ಕಾಲದ ಮಹಾಕೂಟದ ಶಾಸನದಲ್ಲಿಯೂ ೨ ನೆಯ ಪುಲಿಕೇಶಿಯ ಕಾಲದ ಐಹೊಳೆಯ ಶಿಲಾಲೇಖದಲ್ಲಿಯೂ ಇವರ ಹೆಸರುಗಳು ಕಂಡುಬರುತ್ತವೆ. ಇವುಗಳಲ್ಲಿ ಜಯಸಿಂಹನ ಹೆಸರಿನ ಹಿಂದೆ 'ವಲ್ಲಭೇಂದ್ರ', 'ವಲ್ಲಭ' ಎಂಬ ಶಬ್ದಗಳನ್ನು ಬರೆದಿರುತ್ತಾರೆ. ಮುಂದೆ ೪೦೦ ವರ್ಷಗಳ ತರುವಾಯ ಕಲ್ಯಾಣದ ಚಾಳುಕ್ಯರಿಂದ ಕೊರೆಯಿಸಲ್ಪಟ್ಟ **ಕೌಠೆಮ್ಮ**ದ ಶಾಸನದಲ್ಲಿ ಜಯಸಿಂಹನ ಹೆಸರು ಕಂಡುಬಂದರೂ ಅದರಲ್ಲಿ ಇತಿಹಾಸೋಪಮರ್ದಕ ಸಂಗತಿಗಳು ಅವನ ವಿಷಯವಾಗಿ ಬರೆಯಲ್ಪಟ್ಟಿವೆ (೧೦೦೯). ಕೆಲಕಾಲ ಅಜ್ಞಾತವಾಸದಲ್ಲಿ ಕಳೆದು ೧ ನೆಯ ಜಯಸಿಂಹನು ರಾಷ್ಟ್ರಕೂಟ ಸಾರ್ವಭೌಮನೂ ಕೃಷ್ಣರಾಜೇಂದ್ರನ ಮಗನೂ ಆದ ಇಂದ್ರನನ್ನು ಸೋಲಿಸಿ ಚಾಳುಕ್ಯ ಸಾಮ್ರಾಜ್ಯವನ್ನು ಮರಳಿ ಸ್ಥಾಪಿಸಿದನೆಂಬ ಅಬದ್ಧವಾದ ಮಾತು ಈ ಶಾಸನದಲ್ಲಿ ಎಡೆಗೊಂಡಿದೆ. ಈ ವರ್ಣನೆಯು ೮ ನೆಯ ಶತಮಾನದಲ್ಲಿ ಪ್ರಸಿದ್ಧಿಗೆ ಬಂದ ೨ ನೆಯ ಅಥವಾ ನೂರ್ಮಡಿ ತೈಲಪನಿಗೆ ಸಂಬಂಧಿಸಿದ್ದುದರಿಂದ ೧ ನೆಯ ಜಯಸಿಂಹನಿಗೆ ಎಂದೂ ಅನ್ವಯಿಸಲಾರದು. ಆದಕಾರಣ ಜಯಸಿಂಹ ರಣರಾಗರು ಕದಂಬರ ಕಯ್ಕೆಳಗಿನ ಮಂಡಲೇಶ್ವರರು ಅಥವಾ ದಂಡನಾಯಕರು ಆಗಿದ್ದರೆಂಬ ಊಹೆಯೇ ಸಯುಕ್ತಿಕವಾದ್ದೆಂದು ತೋರುತ್ತದೆ. ರಣರಾಗನ ಕಯ್ಯಲ್ಲಿ ಇಂತಹದೊಂದು ದೊಡ್ಡ ಅಧಿಕಾರವಿದ್ದುದರಿಂದಲೇ ರಣರಾಗನ ಮಗನಾದ

ಪುಲಿಕೇಸಿಯು ತಾನು ಸ್ವತಂತ್ರನಾದ ಅರಸನೆಂದು ಬಾದಾಮಿಯಲ್ಲಿ ಸಾರಲಿಕ್ಕೆ ತುಂಬಾ ಅನುಕೂಲವಾಯಿತೆಂದು ತೋರುತ್ತದೆ*.

ಡಾಕ್ಟರ ಫ್ಲೀಟರು ಕೊಟ್ಟ ಈ ಅಭಿಪ್ರಾಯವು ಅತಿನಿರ್ದುಷ್ಟವಾದ ಊಹೆಯಾಗಿರುತ್ತದೆಂದು ಧಾರಾಳವಾಗಿ ಹೇಳಬಹುದು. ಕವಿಚಕ್ರವರ್ತಿಯಾದ ರನ್ನನು ತನ್ನ ಗದಾಯುದ್ಧದ ಜಯಸಿಂಹ ರಣರಾಗರ ವಿಷಯವಾಗಿ ಕೌಠೆಮ್ಮ ಶಾಸನದಲ್ಲಿದ್ದ ವಂಶಾವಳಿಯನ್ನು ಅನುಸರಿಸಿದರೂ ಪುಲಿಕೇಸಿಯ ವಿಷಯವಾಗಿದ್ದ ಅವನ ವರ್ಣನೆಯು ಡಾ॥ ಫ್ಲೀಟರ ಅಭಿಪ್ರಾಯವನ್ನು ಎತ್ತಿಹಿಡಿಯುತ್ತದೆ. "ವಾತಾಪಿಪುರವರೇಶ್ವರನ ಮಶ್ವಮೇಧ ದೀಕ್ಷಿತನುಂ ದ್ವೀಪಾಂತರ ಪ್ರಕಟ ಪ್ರಭಾವನುಮೆನಿಸಿದ ಪುಲಿಕೇಶಿ ದೇವನಿಂ" ಎಂದು ಗದಾಯುದ್ಧದಲ್ಲಿ ಬರೆದಿದೆ. ಕವಿ ರನ್ನನ ಈ ಬರಹವು ಡಾ॥ ಫ್ಲೀಟರ ಊಹೆಯನ್ನು ಬಲಪಡಿಸುವದರಿಂದ ಪುಲಿಕೇಸಿಯೇ ಬಾದಾಮಿ ಚಾಳುಕ್ಯರ ಮೊದಲನೆಯ ಅರಸನಾಗಿ ಬಾದಾಮಿಯನ್ನು ತನ್ನ ರಾಜಧಾನಿಯನ್ನು ಮಾಡಿಕೊಂಡನೆಂದು ನಿಸ್ಸಂದೇಹವಾಗಿ ಹೇಳಬಹುದು.

ಕಾರಣವಿಲ್ಲದೆ ಯಾವ ಕಾರ್ಯವು ಆಗುವದಿಲ್ಲೆಂಬ ಸೃಷ್ಟಿ ನಿಯಮವು ತ್ರಿಕಾಲದಲ್ಲಿಯೂ ಅಬಾಧಿತವಾಗಿರುತ್ತದೆಂಬುದನ್ನು ಎಂದೂ ಮರೆಯಕೂಡದು. ನಾವು ಆರೋಗ್ಯದ ನೇಮಗಳನ್ನು ಮುರಿದ ಕೂಡಲೆ ಉರಿ ಕೆಮ್ಮು ನೆಗಡಿ ಮುಂತಾದ ಸಣ್ಣ ದೊಡ್ಡ ಜೇನೆಗಳು ಹುಟ್ಟಿ, ನಮ್ಮ ಮೈಯ್ಯೊಳಗೆ ಕೂಡಿ ಜಿದ್ದ ಹೊಲಸುಗಳನ್ನು ಹೊರಗೆತ ವಲಿಕ್ಕೆ ಹೆಣಗುತ್ತವೆ. ಸಂಚಿತ ದೋಷಗಳ ಬಲವು ದೇಹಶಕ್ತಿಯನ್ನು ಮೀರಿದ್ದರೆ ಮಾತ್ರ ಅಂಗೋಪಾಂಗಗಳ ವ್ಯಾಪಾರವು ಕಟ್ಟಾಗಿ ಮನುಷ್ಯನು ಸಾವಿಗೆ ತುತ್ತಾಗುತ್ತಾನೆಂಬುದನ್ನು ನಾವು ದಿನಾಲು ನೋಡುತ್ತೇವೆ. ಅದರಂತೆಯೇ ರಾಜ್ಯಚಾಲಕರು ತಂತಮ್ಮ ರಾಜ್ಯವೆಂಬ ದೇಹವನ್ನು ಸರಿಯಾಗಿ ಕಾಪಾಡಿಕೊಳ್ಳದಿದ್ದರೆ ಅಸಂತೋಷ ರಾಜದ್ರೋಹ ದಾರಿದ್ರ್ಯ ಪರಚಕ್ರಾಭಿಯೋಗ ಮುಂತಾದ ರೋಗಗಳು

---

* ಮುಂಬಯಿ ಇಲಾಖೆಯ ಗ್ಯಾಜಟಿಯರ ಸಂಪುಟ ೧, ಭಾಗ ೨. ಪುಟ ೩೪೨-೪೩.

ಉತ್ಪನ್ನವಾಗಿ ಒಮ್ಮೊಮ್ಮೆ ಆ ರಾಜ್ಯವೆಂಬ ದೇಹವನ್ನು ನಷ್ಟಪಡಿಸುತ್ತ ವೆಂಬುದು ಇತಿಹಾಸ ಪ್ರಸಿದ್ಧವಾದ ಸಂಗತಿಯಾಗಿರುತ್ತದೆ. ೬ ನೆಯ ಶತಮಾನದ ಆರಂಭದಲ್ಲಿ ನಮ್ಮ ತಾಯ್ನಾಡಿನೊಳಗೆ ೩ ಮಂದಿ ರಾಜರು ಅಹಂಕಾರಾಸೂಯಾಸ್ವಾರ್ಥಪರತ್ವಗಳಿಗೆ ಒಳಗಾಗಿ ತಂತಮ್ಮೊಳಗೆ ಕಡಿದಾಡುತ್ತಿದ್ದರು. ಗಂಗರು ಕದಂಬರೊಡನೆಯೂ ಪಲ್ಲವರು ಗಂಗ ಕದಂಬರೊಡನೆಯೂ ರಾಜ್ಯಲೋಭಕ್ಕಾಗಿ ಒಂದೇಸವನೆ ಬಡಿದಾಡುತ್ತಿದ್ದುದರಿಂದ ಕದಂಬರು ದಿನೇದಿನೇ ಕ್ಷೀಣ ಬಲರಾಗತೊಡಗಿದ್ದರು. ಇದೇ ಸಂಧಿಯನ್ನು ಸಾಧಿಸಿ ಜಯಸಿಂಹ ರಣರಾಗರು ಮುಚ್ಚುಮರೆಯಿಂದ ತಮ್ಮ ಒಡೆಯರಾದ ಕದಂಬರ ಅಧಿಕಾರವನ್ನು ಲೆಕ್ಕಿಸದಂತಾಗಿರಬಹುದು. ಮುಂದೆ ಪುಲಿಕೇಶಿಯಂತೂ ಕದಂಬರ ಒಡೆತನವನ್ನು ಹಾರುಹೊಡೆದು ತಾನು ಸ್ವತಂತ್ರನಾದ ಅರಸನೆಂದು ಸಾರಿದನು (೫೫೦). ಜಯಸಿಂಹನು ಕದಂಬರ ದಂಡನಾಯಕನಾಗಿ ಪಲ್ಲವರೊಡನೆ ಕಾದಿ ಮಡಿದನೆಂತಲೂ ರಣರಾಗನು ಅವರೊಡನೆ ಸ್ನೇಹ ಬೆಳೆಸಿ ಅವರ ಅರಸುಮಗಳನ್ನು ಮದುವೆಮಾಡಿಕೊಂಡನೆಂತಲೂ ಕೆಲ ಪಂಡಿತರು ಬರೆಯುತ್ತಾರೆ.

೧. ಮೊದಲನೆಯ ಪುಲಿಕೇಶಿ

(೫೫೦–೫೬೬)

ಪುಲಿಕೇಶಿಯೇ ಬಾದಾಮಿಯ ಚಾಳುಕ್ಯ ಅರಸುಮನೆತನವನ್ನು ಸ್ಥಾಪಿಸಿದನೆಂದು ಬರೆಯಲಿಕ್ಕೆ ಏನೂ ಅಡ್ಡಿಯಿಲ್ಲ. ಮಹಾಕೂಟದ ಶಿಲಾಲೇಖದಲ್ಲಿ ಇವನು ರಣರಾಗನ ಪ್ರಿಯತನಯ(ಮಗ)ನಾಗಿದ್ದನೆಂದು ಸ್ಪಷ್ಟವಾಗಿ ಬರೆದಿದೆ. ಇವನ ಹೆಸರಿನ ನಿಜವಾದ ರೂಪವು ಏನಿತ್ತೆಂಬುದನ್ನು ಕಂಡುಹಿಡಿಯುವುದು ಬಲುಜರಿಯಾಗಿದೆ. **ಪೊಲೆಕೇಶಿನ್, ಪೊಲಿಕೇಶಿನ್, ಪುಲಿಕೇಶಿನ್, ಪುಲಕೇಶಿನ್** ಎಂಬ ನಾಲ್ಕು ರೂಪಗಳು ಅಲ್ಲಲ್ಲಿ ಕಂಡುಬರುತ್ತವೆ. ಇವನನ್ನು ಹೆತ್ತವರು ಸೋತು ಓಡಿಹೋಗುವಾಗ ಇವನು ಬಾದಾಮಿ ಗುಡ್ಡದಲ್ಲಿ ಹುಟ್ಟಿದನೆಂತಲೂ ಇವನನ್ನು ಒಯ್ಯಲಿಕ್ಕಾಗದ್ದರಿಂದ ತಂದೆತಾಯಿಗಳು ಅಲ್ಲೇ ಬಿಟ್ಟುಹೋದರೆಂತಲೂ ಒಂದು ಹೆಣ್ಣುಹುಲಿಯು ಮೊಲೆಕೊಟ್ಟು

ಅವನನ್ನು ಕೆಲಕಾಲ ಸಾಕಿತೆಂತಲೂ ನಮ್ಮ ನಾಡಿನಲ್ಲಿ ದಂತ ಕಥೆಯು ಹಬ್ಬಿರುತ್ತದಷ್ಟೇ. ಆದರೆ ಈ ದಂತಕಥೆಯು ಬೆಂಬಲವಾದ ಬಲಹುಕುರುಹುಗಳು ಇನ್ನೂ ದೊರೆಯದ್ದರಿಂದ ಇದರ ನಿಜತ್ವವು ಸಂಶಯಾಸ್ಪದವಾದರೂ ಪುಲಿಕೇಸಿಯು ಶುದ್ಧ ಕನ್ನಡಿಗನೂ ಕನ್ನಡಿಗರ ಪ್ರೀತಿಗೆ ಪಾತ್ರನೂ ಆಗಿದ್ದನೆಂದು ಇದರಿಂದ ಊಹಿಸಬಹುದು. ಅವನ ಹೆಸರಿನ ೪ ರೂಪಗಳಲ್ಲಿ ಒಂದರೊಳಗೆ ಮಾತ್ರ ಪುಲಿ (ಹುಲಿ) ಎಂಬ ಕನ್ನಡ ಶಬ್ದವೂ ಕೇಶಿನ್ (ಕೂದಲುಳ್ಳವ) ಎಂಬ ಸಂಸ್ಕೃತ ಶಬ್ದವೂ ಕೂಡಿರುತ್ತವೆ. ಈ ಅರಿಸಮಾಸದ ಅರ್ಥವು ಹುಲಿಯಂತೆ ಅಥವಾ ಹುಲಿಯಂತಹ ಕೂದಲುಳ್ಳವನೆಂದು ಆಗುವುದೆ ಹೊರತು ಹುಲಿ ಯಿಂದ ಸಾಕಲ್ಪಟ್ಟವನೆಂದು ಆಗಲಾರದು. ಪೊಲೆ (ಲಿ) ಕೇಶಿ ಎಂದರೆ ಹೊಲಸು ಕೂದಲುಳ್ಳವನೆಂದು ಅರ್ಥವಾಗಬಹುದು. ಕೌಥೆಮ್ಮದ ಶಾಸನದಲ್ಲಿ ಪುಲಿಕೇಶಿನ್ ಎಂಬ ರೂಪು ಕಂಡುಬರುತ್ತದೆ. ಯಾವನ ವರ್ಣನೆಯನ್ನು ಕೇಳಿ ಜನರ ಕೂದಲುಗಳು ಸಂತೋಷದಿಂದ ಎದ್ದು ನಿಲ್ಲುತ್ತವೆಯೋ ಅಂತಹನು ಎಂದು ಕೆಲವರು ಈ ರೂಪಿನ ಅರ್ಥಮಾಡು ತ್ತಾರೆ. ಆದರೆ ಈ ಅರ್ಥವು ಸಂಸ್ಕೃತ ಪಂಡಿತರ ಕೇವಲ ಕಾಲ್ಪನಿಕವಾದ ಅರ್ಥವೆಂದು ನಿಸ್ಸಂದೇಹವಾಗಿ ಹೇಳಬಹುದು. ಈ ನಾಲ್ಕು ರೂಪ ಗಳಲ್ಲಿ ಪುಲಿಕೇಶಿ ಎಂಬುದೇ ಹೆಚ್ಚು ಸಮಂಜಸವಾಗಿರುವುದರಿಂದ ಅರಿಸಮಾಸದೋಷ-ಪರಿಹಾರಾರ್ಥವಾಗಿ ಪುಲಿಕೇಸಿ ಎಂಬ ರೂಪನ್ನೇ ನಾವು ಉಪಯೋಗಿಸುವೆವು.

ಈ ಪುಲಿಕೇಸಿಯ ಕಾಲದ ಒಂದಾದರೂ ಶಾಸನವು ನಮಗೆ ಇನ್ನೂ ದೊರೆತಿಲ್ಲ. ಆದಕಾರಣ ನಾವು ಅವನ ಮಕ್ಕಳ ಮತ್ತು ಮೊಮ್ಮ ಕ್ಕಳ ಶಾಸನಗಳಲ್ಲಿ ಅವನ ವಿಷಯವಾಗಿ ಸಿಕ್ಕಿದ ಅಲ್ಪಸ್ವಲ್ಪ ಸಂಗತಿ ಗಳನ್ನು ಆಧಾರವಾಗಿಟ್ಟುಕೊಂಡು ಅವನ ಆಳಿಕೆಯನ್ನು ವರ್ಣಿಸ ಬೇಕಾಗಿದೆ. ಈ ಪುಲಿಕೇಸಿಗೆ **ಸತ್ಯಾಶ್ರಯ, ರಣವಿಕ್ರಮ** ಎಂಬ ಬಿರುದುಗಳಿದ್ದುವು. ಮಹಾಕೂಟದ ಗೆಲ್ಗಂಬದಲ್ಲಿ ಇವನ ಹೆಸರಿಗೆ **ಶ್ರೀ ಪೃಥ್ವೀವಲ್ಲಭ** ಎಂಬ ವಿಶೇಷಣವನ್ನು ಹಚ್ಚಿದ್ದಾರೆ. ಐಹೊಳೆಯ ಶಿಲಾಲೇಖದಲ್ಲಿ **ಶ್ರೀ ವಲ್ಲಭ** ಪುಲಿಕೇಶಿಯೆಂದು ಬರೆದಿರುತ್ತದೆ. ಹೈದ್ರಾ

ಬಾದಾಮಿ-ನೆರೂರುಗಳ ಶಾಸನಗಳಲ್ಲಿ **ವಲ್ಲಭ**ನೆಂದು ಮಾತ್ರ ಸಂಬೋಧಿಸಿರುತ್ತಾರೆ. ಮಹಾಕೂಟದ ಶಾಸನದಿಂದ **ಬಟ್ಪೂರ** * ಮನೆತನದ **ದುರ್ಲಭದೇವಿ**ಯು ಇವನ ರಾಣಿಯಾಗಿದ್ದಳೆಂತಲೂ ಇವನು ಅಗ್ನಿಷ್ಟೋಮ ಅಗ್ನಿಚಯನ ವಾಜಪೇಯ ಬಹುಸುವರ್ಣ ಪೌಂಡರೀಕ ಅಶ್ವಮೇಧ ಈ ಯಜ್ಞಗಳನ್ನು ಮಾಡಿದನೆಂತಲೂ ಬರೆದಿದೆ. ಮಂಗಳೇಶನ ನೆರೂರಿನ ಶಾಸನದಲ್ಲಿ ಅಗ್ನಿಚಯನ ಯಾಗದ ಹೊರತು ಉಳಿದ ಎಲ್ಲ ಯಜ್ಞಗಳನ್ನು ಇವನು ಮಾಡಿದನೆಂತಲೂ ಮನುಧರ್ಮಶಾಸ್ತ್ರವನ್ನೂ ಪುರಾಣಗಳನ್ನೂ ರಾಮಾಯಣ ಭಾರತಗಳೆಂಬ ಇತಿಹಾಸಗಳನ್ನೂ ಇವನು ಕೇಳಿದ್ದನೆಂತಲೂ ಕಾಣಿಸಿದೆ. ಮೇಲೆ ಹೇಳಿದ ೬ ಯಜ್ಞಗಳಲ್ಲಿ ಮೊದಲಿನ ೫ ಯಜ್ಞಗಳನ್ನು ಪುಲಿಕೇಸಿಯು ಮಾಡಿದನೊ ಇಲ್ಲೊ ಎಂಬ ಬಗ್ಗೆ ಸಂಶಯಬರುತ್ತದೆ. ಏಕೆಂದರೆ ಐಹೊಳೆಯ ಶಾಸನದಲ್ಲಿಯೂ ಗದಾಯುದ್ಧದಲ್ಲಿಯೂ ಅಶ್ವಮೇಧ ಯಜ್ಞವೊಂದನ್ನು ಮಾತ್ರ ಇವನ ವಿಷಯವಾಗಿ ಹೇಳಿರುತ್ತಾರೆ. ಈ ಯಜ್ಞವನ್ನು ಇವನು ಮಾಡಿದನೆಂಬುದಕ್ಕೆ ಏನೂ ಸಂಶಯವಿಲ್ಲ. ಏಕೆಂದರೆ ಎಲ್ಲ ಶಾಸನಗಳಲ್ಲಿಯೂ ಇವನು ಅಶ್ವಮೇಧ ಯಜ್ಞವನ್ನು ಮಾಡಿದನೆಂದು ಬರೆದಿರುವುದಲ್ಲದೆ, ಕನ್ನಡ ವಾಙ್ಮಯದಲ್ಲಿ ಕೂಡ ಇದರ ಉಲ್ಲೇಖವು ಕೆಲಮಟ್ಟಿಗೆ ಬಂದಿರುತ್ತದೆ. ೧೨ ನೆಯ ಶತಮಾನದ ಮಧ್ಯಭಾಗದಲ್ಲಿದ್ದ ನಾಗವರ್ಮನೆಂಬ ಕನ್ನಡ ಪಂಡಿತನು ತನ್ನ ಕಾವ್ಯಾವಲೋಕನವೆಂಬ ಗ್ರಂಥದ ೧೧೫ ನೆಯ ಸೂತ್ರಕ್ಕೆ ಉದಾಹರಣೆಯಾಗಿ ಬೇರೆ ಗ್ರಂಥದಿಂದ ಉದ್ಧರಿಸಿದ ಒಂದು ಶ್ಲೋಕವನ್ನು ಕೊಟ್ಟಿರುತ್ತಾನೆ. ಆ ಶ್ಲೋಕವನ್ನು ಕೆಳಗೆ ಕೊಡುತ್ತೇನೆ:—

ವಿಕ್ರಮ ಮಪ್ಪಿ ಮುನ್ನುಳಿದುರ್ಕೆಕೊಂಡುದು ತನ್ನನಿಜಂ
ಗಡಶ್ವಮೇ।
ಧಕ್ರತು ಧೂಮಮಾದುದು ಗಡಂ ಬಳಿಯಂ ಶಿಖಿ ಧೂಮ
ಯೋನಿಯೆಂ॥

---

* ಬಟ್ಪೂರ ಮನೆತನದ ಅರಸರು ಗೋವೆಯ ನೆರೆಯಲ್ಲಿದ್ದ ರೇವತೀ ದ್ವೀಪದಲ್ಲಿ ಆಳುತ್ತಿದ್ದರೆಂದು ಜಿ. ಜೆ. ಡುಬ್ರಿಲರು ಬರೆಯುತ್ತಾರೆ. ದಕ್ಷಿಣಾಪಥದ ಪ್ರಾಚೀನೇತಿಹಾಸ, ಪುಟ ೧೧೨.

ಜೇ ಕ್ರಮಮೆಂತು ಪೇೞ್ಗೆನೆ ವಿಕ್ರಮ ಯಜ್ಞ ವಿಧಾನ
ಮಂ ಧರಾ।
ಚಕ್ರಮೆ ಮೆಚ್ಚೆ ಬಣ್ಣಿಸೆ ಜಸಂ ಬಡೆದಂ ಪೊಲಕೇಶಿ ವಲ್ಲಭಂ॥

ಈ ಪದ್ಯದಲ್ಲಿ ಪುಲಿಕೇಸಿಯ ಹೆಸರಿನ ಮೇಲೆ ಕೊಟ್ಟ ೪ ಶಾಸನ ರೂಪಗಳ ಹೊರತು ಪೊಲಕೇಶಿ ಎಂಬ ೫ನೆಯ ರೂಪವು ಕಂಡು ಬರುತ್ತದೆ. ಇದು ಮತ್ತೊಂದು ಅರಿಸಮಾಸವು. ಪೊಲ ಎಂದರೆ ಹೊಲ, ಕೇಶಿ ಎಂದರೆ ಕೂದಲುಳ್ಳವ. ಪೊಲಕೇಶಿ=ಹೊಲವೇ ಕೂದಲಗಳಾಗಿಯುಳ್ಳವ, ತನ್ನ ಮೆಯ್ಗೂದಲನ್ನು ಕಾಪಾಡುವಂತೆ ಹೊಲಗಳನ್ನು ಕಾಪಾಡುವವ, ಕೃಷಿಕರ್ಮಕ್ಕೆ ಅಥವಾ ವ್ಯವಸಾಯಕ್ಕೆ ತನ್ನಿಂದಾದಷ್ಟು ನೆರವಾಗುವವನು ಎಂಬುದೇ ಈ ಹೆಸರಿನ ಅರ್ಥವು. ಈ ಶ್ಲೋಕವು ೧ ನೆಯ ಪುಲಿಕೇಸಿಯನ್ನುದ್ದೇಶಿಸಿ ಬರೆದುದೆಂದು ಧಾರಾಳವಾಗಿ ಹೇಳಬಹುದು. ಏಕೆಂದರೆ ಇವನ ಹೊರತು ಬೇರೆ ಯಾವ ಚಾಳುಕ್ಯ ಸಾರ್ವಭೌಮರು ಅಶ್ವಮೇಧ ಯಜ್ಞವನ್ನು ಕಯ್ಕೊಳ್ಳಲಿಲ್ಲ. ಆದರೆ ಈ ಪದ್ಯದಲ್ಲಿ ಹೇಳಿದ ಮುನಿಯು ಯಾವನೆಂಬುದಾಗಲಿ ಈ ಶ್ಲೋಕವು ಯಾವ ಗ್ರಂಥದಿಂದ ಉದ್ಧರಿಸಲ್ಪಟ್ಟಿದೆಂಬುದಾಗಲಿ ಆ ಗ್ರಂಥವನ್ನು ಯಾರು ಬರೆದರೆಂಬುದಾಗಲಿ ಇನ್ನೂ ಗೊತ್ತಾಗಿಲ್ಲ.

ಅಶ್ವಮೇಧ ಯಜ್ಞದ ಹೆಸರು ನಮ್ಮ ಕಿವಿಯಲ್ಲಿ ಬಿದ್ದ ಕೂಡಲೆ ವರ ಕವಿಯಾದ ಲಕ್ಷ್ಮೀಶನು ಸರಸವಾಗಿ ವರ್ಣಿಸಿದ ಧರ್ಮರಾಜನ ಯಜ್ಞವು ನಮ್ಮ ನೆನಪಿಗೆ ಬರುತ್ತದೆ. ಜಯಮಿನಿ ಭಾರತದಲ್ಲಿ ವಿವರಿಸಿದ ಆ ಯಜ್ಞಾಶ್ವದ ಅಪರೂಪವಾದ ಲಕ್ಷಣಗಳೂ ಆ ಮುಂಜೋಡಣೆಯೂ ಆ ಮಹಾತ್ಮರಾದ ಋತ್ವಿಜರೂ ಕನ್ಯಾಕುಮಾರಿಯ ವರೆಗೆ ಆ ಕುದುರೆಯ ಸುಳಿದಾಟವೂ ಬೆಂಬಲಿಗರಾದ ಭೀಮಾರ್ಜುನ ವೃಷಕೇತುಗಳ ಶೌರ್ಯಸಾಹಸಗಳೂ ಶ್ರೀ ಕೃಷ್ಣನ ಯುಕ್ತಿ ಪ್ರಯುಕ್ತಿಗಳೂ ಪ್ರೌಢಪ್ರತಾಪಿಗಳಾದ ಸುಧನ್ವ ಬಭ್ರುವಾಹನರ ಭಯಂಕರವಾದ ಬಾಣಗಳ ಕಡಕಡಾಟವೂ ಅಗ್ರಪೂಜೆಯ ವಿಷಯವಾಗಿ ಎದ್ದ ಜಗಳವೂ ನಮ್ಮ ಸ್ಮೃತಿಪಥದಲ್ಲಿ ನಲಿದಾಡಿ ಆ ಯಜ್ಞದ ಅಂಗೋಪಾಂಗಗಳನ್ನು ಎಳೆದು ತಂದು ನಮ್ಮ ಕಣ್ಣಮುಂದೆ ಕಟ್ಟುವುದಲ್ಲದೆ ಅಂತಹ

ಮತ್ತೊಂದು ಯಜ್ಞ ಸಮಾರಂಭವನ್ನು ಕಣ್ಣಿಲಿ ನೋಡಬೇಕು ಅಥವಾ ವರ್ಣನೆಯನ್ನು ಕಿವಿಯಲಿ ಕೇಳಬೇಕೆಂಬ ಕುತೂಹಲವನ್ನು ನಮ್ಮ ಹೃದಯದಲ್ಲಿ ಹುಟ್ಟಿಸುತ್ತದೆ. "..ವಿಕ್ರಮ ಯಜ್ಞವಿಧಾನಮಂಧರಾ! ಚಕ್ರಮೆ ಮೆಚ್ಚೆ ಬಣ್ಣಿಸೆ...." ಎಂಬುದನ್ನು ಓದಿದ ಕೂಡಲೆ ಆ ಗ್ರಂಥವನ್ನು ಹುಡುಕಿ ಹೊರಗೆಡವಬೇಕೆಂಬ ಲವಲವಿಕೆಯು ಯಾವ ಕನ್ನಡಿಗನಲ್ಲಿ ಹುಟ್ಟಲಿಕ್ಕಿಲ್ಲ? ನಾವು ವಿಶ್ವಪ್ರಯತ್ನಮಾಡಿ ಆ ಕಾವ್ಯವನ್ನು ಹುಡುಕಿ ತೆಗೆದು ಶೋಧಿಸಿ ಅಚ್ಚುಹಾಕಿಸಿ ಪ್ರಸಿದ್ಧಮಾಡಿದ ದಿವಸವೇ ಕರ್ನಾಟಕದ ಅತಿಶುಭದಿವಸವೆಂದು ನಾನು ಸಾರಿ ಹೇಳುತ್ತೇನೆ.


ಕದಂಬ ಅರಸನಾದ ಕೃಷ್ಣವರ್ಮನು ಒಂದು ಅಶ್ವಮೇಧ ಯಜ್ಞವನ್ನು ಮಾಡಿದನೆಂದು ಹಿಂದೆ ಬರೆದಿರುತ್ತೇವಷ್ಟೇ*. ಆ ಯಜ್ಞಕ್ಕೂ ಪುಲಿಕೇಸಿಯು ಮಾಡಿದ ಅಶ್ವಮೇಧ ಯಜ್ಞಕ್ಕೂ ಅಜಗಜಾಂತರವಿತ್ತೆಂದು ಧಾರಾಳವಾಗಿ ಹೇಳಬಹುದು. ಪುಲಿಕೇಸಿಯ ಯಜ್ಞವು ಹೆಚ್ಚು ವೈಭವದಿಂದಲೂ ಹೆಚ್ಚು ವಿಜೃಂಭಣೆಯಿಂದಲೂ ನಡೆದುದರಿಂದ ಧರಾಚಕ್ರವು ಮೆಚ್ಚುವಂತೆ ಅದನ್ನು ಬಣ್ಣಿಸುವ ಸಾಮರ್ಥ್ಯವು ಕವಿಗೆ ಬಂದಿರಲಿಕ್ಕೆ ಬೇಕು. ಈ ಅಶ್ವಮೇಧವು ಅತಿವೈಭವದಿಂದ ಸಾಗಬೇಕಾದರೆ ಪುಲಿಕೇಸಿಯ ರಾಜ್ಯವು ವಿಸ್ತಾರವಾದುದು ಇರಲಿಕ್ಕೆ ಬೇಕು. ಆದರೆ ಐಹೊಳೆಯ ಶಾಸನದಲ್ಲಿ ಪುಲಿಕೇಸಿಯು ಬಾದಾಮಿಯನ್ನು ಹಿಡಿದುಕೊಂಡನೆಂಬುದೊಂದೇ ಐತಿಹಾಸಿಕ ಸಂಗತಿಯು ಇರುತ್ತದೆ. ಇದರ ಆಧಾರದಿಂದ ಪುಲಿಕೇಸಿಯ ರಾಜ್ಯವು ಬಾದಾಮಿಯನ್ನೂ ಅದರ ನೆರೆಹಳ್ಳಿಗಳನ್ನೂ ಮಾತ್ರ ಒಳಗೊಂಡಿತ್ತೆಂದು ಡಾ|| ಫ್ಲೀಟರು ಊಹಿಸುತ್ತಾರೆ†. ಈ ಅಶ್ವಮೇಧ ಯಜ್ಞದ ವೈಭವದ ವರ್ಣನೆಯಿಂದಲೂ ೨ನೆಯ ಪುಲಿಕೇಸಿಯ ಕಾಲದಿಂದ ಕೊರೆಯಿಸಿದ ಎಲ್ಲ ಶಾಸನಗಳಲ್ಲಿಯೂ ಇವನಿಗೆ ಮಹಾರಾಜನೆಂಬ ಬಿರುದುಕೊಟ್ಟಿರುವುದರಿಂದಲೂ ಡಾ| ಫ್ಲೀಟರ ಊಹೆಯು ತಪ್ಪಾಗಿರಬಹುದೆಂದು ತೋರುತ್ತದೆ. ಪುಲಿಕೇಸಿಯು ಕೆಚ್ಚೆದೆಯ ಕಲಿಯೂ ಒಳ್ಳೆಯ ಮುತ್ಸದ್ದಿಯೂ ಆದ್ದರಿಂದ

* ಹಿಂದೆ ಅಧ್ಯಾಯ ೬, ಪುಟ ೧೨೩.

† ಮುಂಬಯಿ ಇಲಾಖೆಯ ಗ್ಯಾಜಿಟಿಯರ, ಸಂ. ೧, ಭಾ. ೨, ಪುಟ ೩೪೪.

ಅಶ್ವಮೇಧ ಯಜ್ಞವನ್ನು ಹೂಡಿ ಸಾಮದಾನದಂಡಭೇದೋಪಾಯ ಗಳಿಂದ ಕದಂಬ ಗಂಗ ಪಲ್ಲವರ ಸಾಮಂತರನ್ನು ತನ್ನ ಮಾಂಡಲಿಕರಾಗಿ ಮಾಡಿಕೊಂಡು ತನ್ನ ರಾಜ್ಯವನ್ನು ಬೆಳಿಸಿಕೊಂಡನೆಂದು ಊಹಿಸ ಬಹುದು.

ಹೆಸರುವಾಸಿಯಾದ ಬಾದಾಮಿಯ ಕೋಟೆಯನ್ನು ಪುಲಿಕೇಸಿಯು ಕಟ್ಟಿಸಿದನೊ ಅಥವಾ ಕದಂಬ ಅರಸರು ಇವನಿಗಿಂತ ಮೊದಲೇ ಕಟ್ಟಿ ಸಿದ್ದರೊ ಎಂಬ ಪ್ರಶ್ನವು ಇಲ್ಲಿ ತನ್ನಷ್ಟಕ್ಕೆ ತಾನೇ ಹೊರಡುತ್ತದೆ. ಇದರ ವಿಷಯವಾಗಿ ಈವರೆಗೆ ಯಾವ ಲೇಖವೂ ದೊರೆತಿಲ್ಲ. ಇವನಿ ಗಿಂತ ಮುಂಚಿತವಾಗಲಿ ಇವನ ತರುವಾಯವಾಗಲಿ ಯಾರೂ ಈ ಕೋಟೆಯನ್ನು ಕಟ್ಟಿಸಿದಂತೆ ಕಂಡುಬರುವುದಿಲ್ಲಾದ್ದರಿಂದ ಇವನೇ ಬಾದಾಮಿಯನ್ನು ತನ್ನ ರಾಜಧಾನಿಯಾಗಿ ಮಾಡಿಕೊಂಡು ಅದರ ಸಂರಕ್ಷಣಾರ್ಥವಾಗಿ ಹೊಸತಾಗಿ ಒಂದು ಕೋಟೆಯನ್ನು ಕಟ್ಟಿಸಿದ ನೆಂದಾಗಲಿ ಮೊದಲಿದ್ದ ಹಳೆ ಕೋಟೆಯನ್ನು ಗಟ್ಟಿಮಾಡಿಸಿದನೆಂದಾಗಲಿ ಊಹಿಸಬಹುದು.



ಬಾದಾಮಿಯ ಕೋಟೆ.

ಪುಲಿಕೇಶಿಯ ಆಳಿಕೆಯ ಕಾಲವನ್ನು ಕಂಡುಹಿಡಿಯಲಿಕ್ಕೆ ಸರ್ವಸಮರ್ಪಕವಾದ ಆಧಾರಗಳಾವವೂ ನಮಗೆ ಇನ್ನೂ ದೊರೆತಿಲ್ಲ. ಈತನ ಹಿರಿಮಗನು ೫೬೭ರಲ್ಲಿ ಬಾದಾಮಿಯ ಪಟ್ಟವೇರಿದನೆಂದು ನಿಶ್ಚಯವಾಗಿ ತಿಳಿಯುವುದರಿಂದ ಇವನು ೫೫೦ ರಿಂದ ೫೬೭ ರ ವರೆಗೆ ೧೭ ವರ್ಷ ಸ್ವತಂತ್ರವಾಗಿ ರಾಜ್ಯಭಾರವಮಾಡಿದನೆಂದು ಡಾ॥ ಫ್ಲೀಟರು ಊಹಿಸುತ್ತಾರೆ. ಈ ಊಹೆಯೇ ಸರಿಯಾದ್ದೆಂದು ಎಣಿಸಬಹುದು.

ಪುಲಿಕೇಶಿಯ ಕಾಲದವೆಂದು ಸಂಶಯಗೊಳಿಸುವ ೨ ತಾಮ್ರ ಶಾಸನಗಳಿರುತ್ತವೆ. ಒಂದು ೩೧೧ ಶಕದ್ದು ಮತ್ತೊಂದು ೪೧೧ ಶಕದ್ದು. ೧ ನೆಯದರಲ್ಲಿ ಸತ್ಯಾಶ್ರಯನೆಂಬವನು ಖಾನದೇಶ ಜಿಲ್ಲೆಯ ಪಿಪ್ಪಲನಗರವೆಂಬ ಊರನ್ನು ಒಬ್ಬ ಬ್ರಾಹ್ಮಣನಿಗೆ ದಾನಕೊಟ್ಟನೆಂದು ಬರೆದಿದೆ. ೨ ನೆಯದರಲ್ಲಿ ಕರ್ನಾಟಕದೊಳಗಿನ ಕುಹುಂಡಿ ವಿಷಯ (ಬೆಳಗಾವಿ ಜಿಲ್ಲೆಯ ಮೂಡಣ ಭಾಗ) ದಲ್ಲಿದ್ದ ಅಲಕ್ತಕನಗರಿಯಲ್ಲಿ ಸಾಮಿಯಾರನೆಂಬ ಪುಲಿಕೇಶಿಯ ಸಾಮಂತನು ಒಂದು ಜೈನ ಗುಡಿಯನ್ನು ಕಟ್ಟಿಸಿ ಅದಕ್ಕೆ ಕೆಲ ಭೂಮಿಯನ್ನು ಹಾಕಿಕೊಟ್ಟನೆಂದು ಲೇಖವಿದೆ (ಶಕ ೪೧೧). ಊಹಿಸಿದ ಪುಲಿಕೇಶಿಯ ಕಾಲಕ್ಕಿಂತ ಈ ಶಾಸನಗಳು ಬಹಳ ಹಿಂದಿನವಾದ್ದರಿಂದಲೂ ಇವುಗಳನ್ನು ಬಲಪಡಿಸುವ ಬೇರೆ ಯಾವ ಲೇಖಗಳು ದೊರೆಯದೆ ಇದ್ದುದರಿಂದಲೂ ಡಾ॥ ಫ್ಲೀಟರು ಇವು ಸುಳ್ಳು ಶಾಸನಗಳೆಂದು ಬಿಟ್ಟುಕೊಟ್ಟಿದ್ದಾರೆ*. ಪ್ರಾಚೀನೇತಿಹಾಸದಲ್ಲಿ ಕಲ್ಪನೆಯ ಕಟ್ಟುಗಳೇ ಹೆಚ್ಚಾಗಿರುವುದರಿಂದ ಕಲ್ಪಿತ ಸಿದ್ಧಾಂತಕ್ಕೆ ವಿರುದ್ಧವಾದ ಲೇಖಗಳನ್ನು ಅಲ್ಲಗಳೆಯುವುದು ಸರಿಯಲ್ಲೆಂದು ನನ್ನ ಅಲ್ಪಮತಿಗೆ ತೋರುತ್ತದೆ. ಆದ್ದರಿಂದ ಕರ್ನಾಟಕದ ಪ್ರಾಕ್ತನ ವಿಮರ್ಶ ವಿಚಕ್ಷಣರು ಈ ಶಾಸನಗಳನ್ನು ಮತ್ತೊಮ್ಮೆ ಪರಿಶೋಧಿಸಿ ನೋಡಬೇಕೆಂದು ನನ್ನ ವಿನಯದ ಪ್ರಾರ್ಥನೆ.

ಕವಿ ಚಕ್ರವರ್ತಿಯಾದ ರನ್ನನು ತನ್ನ ಗದಾಯುದ್ಧದಲ್ಲಿ ಪುಲಿಕೇಶಿಗೆ ೩ ವಿಶೇಷಣಗಳನ್ನು ಕೊಟ್ಟಿದ್ದಾನೆ:—೧. ವಾತಾಪೀಪುರವರೇ

* ಮುಂಬಯಿ ಇಲಾಖೆಯ ಗ್ಯಾಜಟಿಯರ ಸಂ. ೧, ಭಾಗ ೨, ಪು. ೩೪೪, ಅಡಿಟಿಪ್ಪಣಿ ೬.

ಶ್ವರನುಂ, ೨. ಅಶ್ವಮೇಧಯಜ್ಞದೀಕ್ಷಿತನುಂ, ೩. ದ್ವೀಪಾಂತರ ಪ್ರಕಟ ಪ್ರಭಾವನುಂ. ಮೊದಲಿನೆರಡು ವಿಶೇಷಣಗಳ ಒಗ್ಗೆ ಮೇಲೆ ಬರೆದಿರುವುದ ರಿಂದ ೩ ನೆಯ ವಿಶೇಷಣವನ್ನು ಕುರಿತು ಇಲ್ಲಿ ವಿಚಾರಿಸುವಾ.—ಪುಲಿ ಕೇಸಿಯು ದ್ವೀಪಾಂತರಕ್ಕೆ ಹೋದ ಬಗ್ಗೆ ಬೇರೆ ಯಾವ ಆಧಾರವೂ ಇನ್ನೂವರೆಗೆ ದೊರೆತಿಲ್ಲ. ಇವನು ರೇವತೀ ದ್ವೀಪದ ಅರಸುಮಗಳನ್ನು ಮದುವೆಮಾಡಿಕೊಂಡನೇನೋ ನಿಜ. ಇವನು ರೇವತೀ ದ್ವೀಪದ ಅರಸನನ್ನು ಸೋಲಿಸಿ ಅವನ ಮಗಳನ್ನು ಮದುವೆಮಾಡಿಕೊಂಡನೆಂದು ಎಣಿಸಿದರೆ ಮಾತ್ರ ಕವಿ ರನ್ನನ ೩ ನೆಯ ವಿಶೇಷಣವು ಮೊದಲನೆಯ ಪುಲಿಕೇಸಿಗೆ ಸರಿಯಾಗಿ ಅನ್ವಯಿಸುತ್ತದೆ. ಇಲ್ಲವಾದರೆ ೨ ನೆಯ ಪುಲಿಕೇಸಿಗೆ ಅನ್ವಯಿಸುವ ಈ ವಿಶೇಷಣವನ್ನು ಕವಿ ರನ್ನನು ತಪ್ಪು ತಿಳಿವಳಿಕೆಯಿಂದ ೧ ನೆಯ ಪುಲಿಕೇಸಿಯ ಮೇಲೆ ಆರೋಪಿಸಿರುತ್ತಾ ನೆಂದು ಹೇಳಬೇಕಾಗುತ್ತದೆ.

ಪುಲಿಕೇಸಿಗೆ ಇಬ್ಬರು ಗಂಡುಮಕ್ಕಳಿದ್ದರು—೧. ಕೀರ್ತಿವರ್ಮ, ೨. ಮಂಗಳೇಶ.

೨. ಮೊದಲನೆಯ ಕೀರ್ತಿವರ್ಮ

(೫೬೭–೫೯೭)

ಪುಲಿಕೇಸಿಯ ತರುವಾಯ ಅವನ ಹಿರಿಮಗನಾದ **ಕೀರ್ತಿ ವರ್ಮ**ನು ಬಾದಾಮಿಯ ಪಟ್ಟವೇರಿದನು (೫೬೭). ಮಹಾಪರಾಕ್ರಮ ಶಾಲಿಯಾದ ಪುಲಿಕೇಸಿ ಕೀರ್ತಿವರ್ಮರು ಸ್ವಂತವಾಗಿ ಕೊರೆಯಿಸಿದ ಒಂದು ಶಾಸನವಾದರು ಇನ್ನೂ ದೊರೆಯದೆ ಇರುವುದು ನಮ್ಮ ದುರ್ಭಾಗ್ಯವೆಂದು ಹೇಳಬಹುದು. ಅದ್ದರಿಂದ ಪುಲಿಕೇಸಿಯ ಆಳಿಕೆ ಯನ್ನು ಬರೆದಂತೆ ಕೀರ್ತಿವರ್ಮನ ಚರಿತ್ರೆಯನ್ನಾದರೂ ಅವನ ತಮ್ಮನೂ ಅವನ ಮಕ್ಕಳುಮೊಮ್ಮಕ್ಕಳೂ ಕೊರೆಯಿಸಿದ ಶಾಸನ ಗಳನ್ನು ಆಧಾರವಾಗಿಟ್ಟುಕೊಂಡು ಬರೆಯಬೇಕಾಗಿದೆ.

ಕವಿ ಚಕ್ರವರ್ತಿಯಾದ ರನ್ನನು ಇವನ ಹೆಸರಿನ ಹಿಂದೆ "ಪರಿ ರಕ್ಷಿತ ಪವಿತ್ರವರ್ಮನುಮೆನಿಸಿದ" ಎಂಬ ವಿಶೇಷಣವನ್ನು ಜೋಡಿಸಿ

ರುತ್ತಾನೆ. ಇವನ ವರ್ಮ ಅಥವಾ ಮೆಯ್ಗೋಡು (ಚಿಲಕತ್ತು) ಶುದ್ಧವಾದುದೂ ಸಂರಕ್ಷಿಸಲ್ಪಟ್ಟುದೂ ಆಗಿತ್ತೆಂಬುದೇ ಈ ವಿಶೇಷಣದ ಭಾವವು. ಇವನು ಕಯ್ಕೊಂಡ ಎಲ್ಲ ದಂಡಯಾತ್ರೆಗಳಲ್ಲಿ ಇವನಿಗೆ ಪೂರ್ಣವಾದ ಗೆಲವು ಬಂತೆಂದು ಹೇಳುವ ಉದ್ದೇಶದಿಂದಲೇ ಕವಿ ರನ್ನನು ಈ ವಿಶೇಷಣವನ್ನು ಉಪಯೋಗಿಸಿರಬಹುದೆಂದು ತೋರುತ್ತದೆ. ಪುಲಿಕೇಶಿಯು ಕದಂಬರ ಸಾಮಂತರನ್ನೆಲ್ಲ ತನ್ನ ಮಾಂಡಲಿಕರಾಗಿ ಮಾಡಿಕೊಂಡುದರಿಂದ ಬನವಾಸಿಯ ಕದಂಬರು ಕೊಂಬೆಗಳನ್ನು ಕಡಿದ ಮೋಟ ಮರದಂತೆ ಸಾಹಾಯಶೂನ್ಯರಾಗಿದ್ದರು. ಆದಕಾರಣ ಕೀರ್ತಿವರ್ಮನು ಬನವಾಸಿಯ ಮೇಲೆ ದಂಡೆತ್ತಿ ಹೋಗಿ ಕದಂಬರನ್ನು ಸೋಲಿಸಿ ಅವರನ್ನು ತನ್ನ ಮಂಡಲೇಶ್ವರರಾಗಿ ಮಾಡಿಕೊಂಡನು. ಕದಂಬರ ನಾಡೆಲ್ಲ ಕಯ್ವಶವಾದ ಬಳಿಕ ಕೀರ್ತಿವರ್ಮನು ಬಹುಕಾಲದಿಂದ ಮೌರ್ಯರು ಆಳುತ್ತಿದ್ದ ಕೊಂಕಣದ ಮೇಲೆ ದಂಡೆತ್ತಿ ಹೋದನು. ನಿಸ್ಸತ್ವರಾದ ಕೊಂಕಣಿಗರು ಏರೆನಾಡಿನ ಕನ್ನಡಿಗರ ಹೊಡೆತವನ್ನು ತಾಳಲಾರದೆ ಬೆನ್ನುತೋರಿಸಿ ಕಾಲಿಗೆ ಬುದ್ಧಿಹೇಳತೊಡಗಿದರು. ಮೌರ್ಯರು ದಿಕ್ಕುಪಾಲಾಗಿ ಓಡಿ ಹೋದ್ದರಿಂದ ಜಯಶಾಲಿಯಾದ ಕೀರ್ತಿವರ್ಮನು ತಾನು ಗೆದ್ದ ಕೊಂಕಣ ಪ್ರದೇಶಕ್ಕೆ ತನ್ನೊಬ್ಬ ಆಪ್ತನಾದ **ಸತ್ಯಾಶ್ರಯ ಧ್ರುವರಾಜ ಇಂದುವರ್ಮನೆಂಬವನನ್ನು** ಕೊಂಕಣದ ಅಧಿಪತಿಯಾಗಿ ನಿಯಮಿಸಿ, ಜಯಭೇರಿಯನ್ನು ಹೊಡಿಸುತ್ತ ತನ್ನ ರಾಜಧಾನಿಯಾದ ಬಾದಾಮಿಗೆ ಮರಳಿ ಬಂದನು (೫೯೦).

ಅಸಂತುಷ್ಟರಾದ ದ್ವಿಜರೂ, ಸಂತುಷ್ಟರಾದ ಅರಸರೂ ಕೆಲಕಾಲದಲ್ಲಿ ನಾಶಹೊಂದುತ್ತಾರೆಂದು ಒಂದು ಸಂಸ್ಕೃತ ಶ್ಲೋಕದಲ್ಲಿ ಹೇಳಿದ ಮಾತು ಸುಳ್ಳಲ್ಲ*. ಯಾಚಕನಾದ ಬ್ರಾಹ್ಮಣನು ತನಗೆ ಕೊಟ್ಟ ದಾನದಿಂದ ತೃಪ್ತನಾಗದೆ ಹೆಚ್ಚೆಚ್ಚು ಬೇಡತೊಡಗಿದರೆ ದಾತೃವು ಸಿಟ್ಟಿಗೆದ್ದು ಕಯ್ಬಿಗಿ ಹಿಡಿಯುವುದರಿಂದ ಆ ಬ್ರಾಹ್ಮಣನು 'ಹೊಟ್ಟೆಗಿಲ್ಲದೆ ಬಳಲಬಹುದು. ಅದರಂತೆಯೇ ಅರಸರು ತಮಗಿದ್ದ ರಾಜ್ಯ

* ಅಸಂತುಷ್ಟಾ ದ್ವಿಜಾ ನಷ್ಟಾಃ ಸಂತುಷ್ಟಾ ಇವ ಪಾರ್ಥಿವಾಃ |
ಸಲಜ್ಜಾ ಗಣಿಕಾ ನಷ್ಟಾಃ ನಿರ್ಲಜ್ಜಾಶ್ಚ ಕುಲಸ್ತ್ರಿಯಃ ||

ಲಕ್ಷ್ಮಿಯಿಂದ ಸಂತುಷ್ಟರಾದರೆ, ರಾಜದ್ರೋಹಿಗಳೂ ಹಗೆಗಳೂ ಸಂಧಿಸಾಧಿಸಿ, ಅವರ ರಾಜ್ಯಸಂಪತ್ತಿಯನ್ನು ಸೆಳೆದುಕೊಳ್ಳಬಹುದು. ಬ್ರಾಹ್ಮಣರು ಅಸಂತೋಷದಿಂದ ಕೆಡುವಂತೆಯೇ ಅರಸರು ಅಲ್ಪಸಂತೋಷದಿಂದ ಕೆಡುತ್ತಾರೆಂಬುದೇ ಈ ಮಾತಿನ ಅಭಿಪ್ರಾಯವು. ಕೀರ್ತಿವರ್ಮನು ತನ್ನ ತಂದೆಯಿಂದ ಬಂದ ರಾಜ್ಯದಿಂದ ಸಂತುಷ್ಟನಾಗದೆ ನೈರುತ್ಯ ದಿಕ್ಕಿಗೆ ದಂಡೆತ್ತಿಹೋಗಿ ಬನವಾಸಿ ಕೊಂಕಣ ಪ್ರಾಂತಗಳನ್ನು ಗೆದ್ದರೂ ಅವನ ಮನಸ್ಸು ತಣಿಯಲಿಲ್ಲ. ಅವನು ಹೆಬ್ಬಯಕೆಯುಳ್ಳವನೂ ಬಲಶಾಲಿಯೂ ಆದ್ದರಿಂದ ರಾಜಧಾನಿಯಲ್ಲಿ ಸುಮ್ಮನೆ ಕುಳಿತು ಅದನ್ನು ಸಿಂಗರಿಸುವುದರಲ್ಲಿ ಕಾಲಕಳೆಯದೆ ಆ ಕೆಲಸವನ್ನು ತನ್ನ ಮಲತಮ್ಮನಾದ ಮಂಗಳೇಶನಿಗೆ ಒಪ್ಪಿಸಿ, ಆಗ್ನೇಯ ದಿಕ್ಕಿನಲ್ಲಿರುವ ನಳರ ನಾಡನ್ನು ಒಳಸುಗ್ಗಿದನು. ಈ ನಳರು ಬಳ್ಳಾರಿ ಕರ್ನೂಲ ಪ್ರಾಂತದಲ್ಲಿ ಆಳುತ್ತಿದ್ದರೆಂದು ಹಿಂದೆ ೪ನೆಯ ಅಧ್ಯಾಯದಲ್ಲಿ ಬರೆದಿರುತ್ತೇವಷ್ಟೇ. ನಳರು ಮೌರ್ಯರಂತೆ ಕಿರಿಯರಸರಾದ್ದರಿಂದ ಅವರನ್ನು ಶರಣು ಬರಮಾಡಿಕೊಳ್ಳಲಿಕ್ಕೆ ಹೆಚ್ಚು ಶ್ರಮವೇನು ತಗಲಲಿಲ್ಲ. ಒಂದೆರಡು ಸಣ್ಣಪುಟ್ಟ ಕಾಳಗಗಳಲ್ಲಿ ಅವರನ್ನು ಸೋಲಿಸಿ ತನ್ನ ಮಾಂಡಲಿಕರನ್ನಾಗಿ ಮಾಡಿಕೊಂಡು, ಕೀರ್ತಿವರ್ಮನು ಜಯಭೇರಿಯನ್ನು ಹೊಡಿಸುತ್ತ ತನ್ನ ನೆಲೆವೀಡಾದ ಬಾದಾಮಿಗೆ ತಿರುಗಿ ಬಂದನು. ಮುಂದೆ ಅನಾರೋಗ್ಯತೆಯ ಮೂಲಕವಾಗಿಯೊ ಮತ್ತಾವ ಕಾರಣದಿಂದಲೊ ಇವನು ಹೊಸ ದಂಡಯಾತ್ರೆಯನ್ನು ಕಯ್ಕೊಳ್ಳದೆ ರಾಜಧಾನಿಯಲ್ಲೇ ನಿಂತು ಅದನ್ನು ಸುಶೋಭಿತವಾಗಿ ಮಾಡುವುದಕ್ಕೋಸ್ಕರ ಕೆರೆ ಬಾವಿಗಳನ್ನೂ, ಗುಡಿಗುಂಡಾರಗಳನ್ನೂ, ಅರಮನೆ ಕಚೇರಿಗಳನ್ನೂ ಪೇಟೆಗಳನ್ನೂ ಕಟ್ಟಿಸುವುದರಲ್ಲಿ ತನ್ನ ಉಳಿದ ಆಯುಷ್ಯವನ್ನು ಕಳೆದಿರಬಹುದೆಂದು ತೋರುತ್ತದೆ.


ಕೀರ್ತಿವರ್ಮನು ತನ್ನ ತಂದೆಯಂತೆ ಆರ್ಯಧರ್ಮದ ಕರ್ಮಕಾಂಡದಲ್ಲಿ ಶ್ರದ್ಧೆಯುಳ್ಳವನಾಗಿದ್ದನು. ಇವನು ತನ್ನ ತಂದೆಯಂತೆ ಅಶ್ವಮೇಧ ಯಜ್ಞವನ್ನು ಮಾಡದಿದ್ದರೂ ಇವನು ಬಹುಸುವರ್ಣ-ಅಗ್ನಿಷ್ಟೋಮ ಯಜ್ಞಗಳನ್ನು ಮಾಡಿದನೆಂತಲೂ ಇವನು **ಪುರು**ರಣ

ಪರಾಕ್ರಮನು (ಕಾಳಗದಲ್ಲಿ ಪುರುಷನಂತೆ ಪರಾಕ್ರಮಶಾಲಿ) ಆಗಿದ್ದನೆಂತಲೂ ಮಹಾಕೂಟದ ಗಲ್ಲಿಂಬದ ಮೇಲೆ ಬರೆದಿರುತ್ತದೆ. ಅದೇ ಶಿಲಾಲೇಖದಲ್ಲಿ ಇವನು ಅಂಗ, ವಂಗ, ಕಲಿಂಗ, ವಟ್ಟೂರ, ಮಗಧ, ಮದ್ರಕ, ಕೇರಳ, ಗಂಗ, ಮೂಷಕ, ಪಾಂಡ್ಯ, ದ್ರಮಿಳ, ಚೋಳೀಯ, ಅಳುಕ, ವೈಜಯಂತಿ ಪ್ರಾಂತಗಳನ್ನು ಗೆದ್ದನೆಂದು ಬರೆದಿರುತ್ತದೆ. ಇವನು ವೈಜಯಂತಿ (ಬನವಾಸಿ)ಯ ಕದಂಬರಸರನ್ನು ಗೆದ್ದನೆಂಬುದಕ್ಕೆ ಸಂಶಯವಿಲ್ಲ. ಗಂಗರ ರಾಜ್ಯವು ನೆರೆನಾಡಾದ್ದರಿಂದ ಅವರನ್ನಾದರೂ ಇವನು ಸೋಲಿಸಿ ಅವರ ರಾಜ್ಯದ ಕೆಲ ಭಾಗವನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡಿರಬಹುದು. ಆದರೆ ಉತ್ತರದಲ್ಲಿ ಬಹುದೂರಿನ ನಾಡುಗಳಾದ ಅಂಗ, ವಂಗ, ಮಗಧ ಮುಂತಾದ ನಾಡುಗಳನ್ನು ಇವನು ಒಳಸುಗ್ಗಿದನೆಂಬುದಾಗಲಿ ದಕ್ಷಿಣದ ದೂರಿನ ಪ್ರದೇಶಗಳಾದ ಪಾಂಡ್ಯ, ದ್ರಮಿಳ, ಚೋಳೀಯ ಮುಂತಾದ ಪ್ರಾಂತಗಳ ಅರಸರನ್ನು ಇವನು ಸೋಲಿಸಿದನೆಂಬುದಾಗಲಿ ಹುರುಳಿಲ್ಲದ ಅತಿಶಯೋಕ್ತಿ ಎಂದು ಹೇಳಲಿಕ್ಕೆ ಅಡ್ಡಿಯಿಲ್ಲ. ನಿರ್ಪಾಣದ ಶಾಸನದಲ್ಲಿ **ಸತ್ಯಾಶ್ರಯ**ನೆಂತಲೂ ಕೆಲ ಶಾಸನಗಳಲ್ಲಿ **ವಲ್ಲಭ** ಅಥವಾ **ಪೃಥ್ವೀವಲ್ಲಭ**ನೆಂತಲೂ ಎಲ್ಲ ಶಾಸನಗಳಲ್ಲಿ **ಮಹಾರಾಜ**ನೆಂತಲೂ ಇವನಿಗೆ ಬಿರುದುಗಳನ್ನು ಕೊಟ್ಟಿದ್ದಾರೆ.

೨ನೆಯ ಪುಲಕೇಶಿಯ ಕಾಲದ ರತ್ನಾಗಿರಿ ಜಿಲ್ಲೆ ಚಿಪಳೂಣದ ಒಂದು ಶಾಸನದಲ್ಲಿ ಸೇಂದ್ರಕ ಮನೆತನದ ರಾಜಾ ಶ್ರೀವಲ್ಲಭಸೇನಾನಂದನ ತಂಗಿಯು ಈ ಕೀರ್ತಿವರ್ಮನ ಹೆಂಡತಿಯಾಗಿದ್ದಳೆಂದು ಬರೆದಿದೆ. ಆದರೆ ಅವಳ ಹೆಸರೇನಿತ್ತೆಂಬುದು ಇನ್ನೂ ಗೊತ್ತಾಗಿಲ್ಲ. ಇವನಿಗೆ ೧. ಪುಲಿಕೇಶಿ, ೨. ಕುಬ್ಜ ವಿಷ್ಣುವರ್ಧನ, ೩. ಜಯಸಿಂಹವರ್ಮ ಎಂಬ ಮೂರು ಮಂದಿ ಗಂಡುಮಕ್ಕಳಿದ್ದರು. ಕೀರ್ತಿವರ್ಮನು ಸತ್ತಾಗ ಇವರು ಚಿಕ್ಕ ವಯಸ್ಸಿನವರಾಗಿದ್ದರೆಂದು ತೋರುತ್ತದೆ.

ಕೀರ್ತಿವರ್ಮನು ಸನಾತನ ಧರ್ಮದಲ್ಲಿ ಶ್ರದ್ಧೆಯುಳ್ಳವನಾಗಿದ್ದನೆಂದು ಮೇಲೆ ಬರೆದಿರುತ್ತೇವಷ್ಟೆ. ಇವನ ಕಾಲದಲ್ಲೇ ಇವನ ಮಲ

ತಮ್ಮನಾದ ಮಂಗಳೇಶನು ಕೀರ್ತಿವರ್ಮನ ಆಳಿಕೆಯ ೧೨ನೆಯ ವರ್ಷ ಅಂದರೆ ಶಕೆ ೫೦೦ ಕಾರ್ತಿಕ ಶುದ್ಧ ೧೫ ದಿವಸ (೩೧ ಅಕ್ಟೋಬರ ೫೭೮) ಬಾದಾಮಿಯ ಗುಡ್ಡದಲ್ಲಿ ಕೊರಿಸಿದ ಒಂದು ಗವಿಯೊಳಗೆ ವಿಷ್ಣುವಿನ ಮೂರ್ತಿಯ ಪ್ರತಿಷ್ಠಾಪನೆಯನ್ನು ಮಾಡಿಸಿ, ಬ್ರಾಹ್ಮಣರಿಗೆ



ಬಾದಾಮಿ ವಿಷ್ಣು ಗವಿಯಲ್ಲಿದ್ದ ನಾರಸಿಂಹಮೂರ್ತಿ.

ಭೂಮಿದಾನವನ್ನು ಕೊಟ್ಟಿದಲ್ಲದೆ, ಆ ದೇವರ ಪೂಜಾನೈವೇದ್ಯಕ್ಕೋಸ್ಕರ ಲಂಜೀಶ್ವರವೆಂಬ ಹಳ್ಳಿಯನ್ನು ಇನಾಮು ಹಾಕಿಕೊಟ್ಟನು. ಬಾದಾಮಿಯ ಹತ್ತಿರವಿದ್ದ ನಂದೀಕೇಶ್ವರವೆಂಬ ಹಳ್ಳಿಯೇ ಈ ಶಾಸನದ ಲಂಜೀಶ್ವರವೆಂಬ ಊರಾಗಿತ್ತು.

ವಿಜಾಪುರ ಜಿಲ್ಲಾ ಹುನಗುಂದ ತಾಲೂಕಿನಲ್ಲಿ ಅಯ್ಹೊಳೆಯೆಂಬ* ಪುರಾತನ ಕಾಲದ ಪ್ರಸಿದ್ಧವಾದ ಗ್ರಾಮವಿರುತ್ತದಷ್ಟೇ. ಅಲ್ಲಿ ಚಾಳುಕ್ಯರ ಕಾಲದ ಒಂದು ಗುಡಿಯಿದ್ದು ಅದರ ವಿಗ್ರಹವು ಇಲ್ಲದಾದ್ದರಿಂದ

* ಅಯ್ + ಪೊಳಲ್ = ಅಯ್ಪೊಳಲ್ = ಅಯ್ಹೊಳೆ = (ಸಂಸ್ಕೃತ) ಆರ್ಯಪುರ.

ಅದಕ್ಕೆ **ಲಾಡಖಾನ** ಗುಡಿಯೆಂದು ಈಗ ಕರೆಯುತ್ತಾರೆ. ಆ ಗುಡಿಯ ಮುಖಮಂಟಪದ ಮೂಡಣ ಗೋಡೆಯಲ್ಲಿ ಒಂದು ಕನ್ನಡ ಶಿಲಾ ಲೇಖವಿರುತ್ತದೆ. ಈ ಶಾಸನವು ಮಹತ್ವದ್ದಿದ್ದುದರಿಂದ ಅದನ್ನು ಕೆಳಗೆ ಕೊಡುತ್ತೇವೆ:—

ಸ್ವಸ್ತಿ ಆರ್ಯಜನಸಮುದಯೋದಿತ ವರಾರ್ಯಪುರಾಧಿಷ್ಠಾನದಾ ಶ್ರೀ ಮಹಾ ಚತುರ್ವಿದ್ಯಾ ಸಮುದಯ ಐನೂರ್ವರ್ಕ್ಕಂ ಜೆಣ್ಣಮ್ಮ ಸೋ(ಮ)ಯಾಜಿಗಳ್ ಕೊಟ್ಟ ದಾನಂ ಅನ್ನಪ್ರಾಶನಕ್ಕಂ ಪುಂಸವನಕ್ಕಂ ಚೌಲಕ್ಕಂ ಧರಣಂ, ಉಪನಯನ(ಕ್ಕಂ) ಸಮಾವರ್ತನಕ್ಕಂ ಗದ್ಯಾಣಂ ಮದುವೆಗಂ ಆಧಾನಕ್ಕಂ ಪುರುಟಿಜ್ಞಮೆರಡುಗದ್ಯಾಣಂ ಚಾತುರ್ಮಾಸಕ್ಕೆ ಮೂಱು ಗದ್ಯಾಣಂ ಅಗ್ನಿಷ್ಟೋಮಕ್ಕೆ ಐದು ಗದ್ಯಾಣ ಅವಳಿಯುಮಿಪ್ಪರ್ವರ್ಗೆ ಕೊಟ್ಟುದು.

ಅದೇ ಸ್ಥಳದಲ್ಲಿದ್ದ ಗೌಡರ ಗುಡಿಯೆಂಬ ಕಟ್ಟಡದ ತೊಲೆಯ ಮೇಲೆ ಕೆಳಗೆ ಕೊಟ್ಟ ಚಿಕ್ಕ ಶಾಸನವಿರುತ್ತದೆ:—

ಸ್ವಸ್ತಿ ಶ್ರೀಮದಾರ್ಯಪುರದಾ ಶ್ರೀಮಹಾಚತುರ್ವಿದ್ಯಸಮುದಯಮುಮಯ್ನೂಱುಂ ಮಹಾಜನಮುಂ ಎಂಟುನ್ನಗರಮುಂ ನೂಱಾಇಪ್ಪರ್ ನಿಸ್ಸರು ಊರಾಳಿಗಳುಂ ಇಸಿತ್ತಱುಂ ಶ್ರೀ ಧೂರ್ತಘಟಿದ್ಯುತ ಮಂಡಲಮೆಲ್ಲಂ ನಿವೇದ್ಯಮಾನಾ ದುರ್ಗಾಭಪತಿಯರ್ಕೆ ಇತಿಶ್ರೋರಾ.

ಈ ಎರಡು ಶಾಸನಗಳ ಆಧಾರದಿಂದ ಕೆಳಗೆ ಬರೆದ ಅನುಮಾನಗಳನ್ನು ಮಾಡಬಹುದು:—

೧. ಐಹೊಳೆಗೆ ಮೊದಲು **ಆರ್ಯಪುರ**ವೆಂಬ ಹೆಸರಿತ್ತು.

೨. ಪೂರ್ವಕಾಲದಲ್ಲಿ ಐಹೊಳೆಯು ಒಂದು ದೊಡ್ಡಪಟ್ಟಣವಾಗಿತ್ತು.

೩. ಆ ಕಾಲಕ್ಕೆ ಆರ್ಯಪುರದಲ್ಲಿ ಚತುರ್ವಿದ್ಯಗಳೊಳಗೆ ಮಹಾಪಂಡಿತರಾದ ೫೦೦ ವಿದ್ವಾಂಸರಿದ್ದರು.

೪. ಇಷ್ಟು ಜನ ವಿದ್ವಾಂಸರು ಒಂದೇ ಸ್ಥಳದಲ್ಲಿ ಇರಬೇಕಾದರೆ ಆರ್ಯಪುರವು ನಳಂದ, ತಕ್ಷಶಿಲೆ, ನವದ್ವೀಪಗಳಂತೆ ಕರ್ನಾಟಕದ ಮಹಾ ವಿದ್ಯಾಪೀಠವಾಗಿತ್ತೆಂದು ಊಹಿಸಬಹುದು.

೫. ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರ ಈ ನಾಲ್ಕು ವರ್ಣಗಳಿಗೆ ತಕ್ಕವಾದ ವಿದ್ಯೆಗಳೇ ಚತುರ್ವಿದ್ಯೆಗಳಾಗಿದ್ದವೆಂದು ಎಣಿಸಬಹುದು.

೬. ಆ ಕಾಲಕ್ಕೆ ನಾಲ್ಕುವರ್ಣಗಳ ಜನರನ್ನು ಒಟ್ಟುಗೂಡಿಸಲಿಕ್ಕೆ ಸನಾತನ ಧರ್ಮವೂ ವಿದ್ಯಾದಾನವೂ ದೇವತಾರಾಧನೆಗಳೂ ಮುಖ್ಯ ಸಾಧನಗಳಾಗಿದ್ದವೆಂದು ಅನುಮಾನಮಾಡಬಹುದು.

೭. ಜೆಣ್ಣಾಮ (ವಿಷ್ಣು) ಸೋಮಯಾಜಿಯು ಆರ್ಯಪುರದ ಧರ್ಮಾಧಿಕಾರಿಯಾಗಿದ್ದನೆಂದು ತೋರುತ್ತದೆ.

ಮೇಲೆಕೊಟ್ಟ ಎರಡು ಶಾಸನಗಳಲ್ಲಿ ಕಾಲನಿರ್ದೇಶವು ಇಲ್ಲದುದೊಂದು ನಮ್ಮ ದುರ್ಭಾಗ್ಯವೇ ಸರಿ. ಶಕ ಸಂವತ್ಸರಗಳನ್ನು ಹೇಳದಿದ್ದಾಗ ಕಾಲವನ್ನು ಕಂಡುಹಿಡಿಯಲಿಕ್ಕೆ ಅಕ್ಷರಗಳ ರೂಪು ಒಂದು ಮಾತ್ರ ತಕ್ಕ ಸಾಧನವಾಗಿರುತ್ತದಷ್ಟೇ. ೪ ರಿಂದ ೬ ನೆಯ ಶತಮಾನದ ವರೆಗಿನ ಅಕ್ಷರಗಳು ಈ ಶಾಸನಗಳಲ್ಲಿರುತ್ತವೆಂದು ತಜ್ಞರು ಅಭಿಪ್ರಾಯಪಡುವುದರಿಂದ ಈ ಶಾಸನಗಳು ಪುಲಿಕೇಶಿ ಕೀರ್ತಿವರ್ಮ ಮಂಗಳೇಶರ ಕಾಲದವಾಗಲಿ ಅವರ ಹಿಂದಿನ ಕಾಲದವಾಗಲಿ ಆಗಿರಬಹುದೆಂದು ತೋರುತ್ತದೆ. ಚಾಳುಕ್ಯರ ಹಿಂದೆ ಬನವಾಸಿ ನಾಡು ಶಾತವಾಹನರ ಮತ್ತು ಕದಂಬರ ವಶದಲ್ಲಿತ್ತು. ಆದರೆ ಅವರಿಬ್ಬರ ರಾಜಧಾನಿಯು ಬನವಾಸಿಯಾದ್ದರಿಂದ ಆ ಪಟ್ಟಣದಿಂದ ಇಷ್ಟು ದೂರವಾಗಿದ್ದ ಐಹೊಳೆಯಲ್ಲಿ ಅವರು ಅಗ್ರಹಾರವನ್ನಾಗಲಿ ವಿದ್ಯಾಪೀಠವನ್ನಾಗಲಿ ಸ್ಥಾಪಿಸುವ ಸಂಭವವು ಎಷ್ಟು ಮಾತ್ರವೂ ಇಲ್ಲ. ಆದಕಾರಣ ಪುಲಿಕೇಶಿ ಕೀರ್ತಿವರ್ಮ ಮಂಗಳೇಶರ ಆಳಿಕೆಯಲ್ಲೇ ಈ ವಿದ್ಯಾಪೀಠವು ಹುಟ್ಟಿತೆಂದು ಅನುಮಾನಮಾಡಬಹುದು. ಈ ಶಾಸನಗಳ ಕಾಲದಲ್ಲಿ ಈ ಆರ್ಯಪುರ ಮಹಾವಿದ್ಯಾಪೀಠವು ಶೈಶವಾವಸ್ಥೆಯಲ್ಲಿರದೆ ಬಾಲ್ಯ ಅಥವಾ

ಉನ್ನತಾವಸ್ಥೆಯಲ್ಲಿತ್ತೆಂದು ಶಾಸನಗಳ ಒಕ್ಕಣಿಕೆಯಿಂದ ಸ್ಪಷ್ಟವಾಗಿ ಕಂಡುಬರುತ್ತದೆ. ಆದ್ದರಿಂದ ಈ ಶಾಸನಗಳು ಕೀರ್ತಿವರ್ಮ ಮಂಗಳೇಶರ ಕಾಲದವಾಗಿದ್ದು ಆರ್ಯಪುರದ ವಿದ್ಯಾಪೀಠವು ಪುಲಿಕೇಸಿಯ ಕಾಲದಲ್ಲಿ ಆಗಿತ್ತೆಂದು ಧಾರಾಳವಾಗಿ ಹೇಳಬಹುದು. ಏಕೆಂದರೆ ೫೦೦ ಮಂದಿ ಚತುರ್ವಿದ್ಯಾಪಂಡಿತರು ಒಂದೇ ಸ್ಥಳದಲ್ಲಿ ಸೇರಲಿಕ್ಕೂ ಚೆಣ್ಣಮ ಸೋಮಯಾಜಿಯು ಬ್ರಾಹ್ಮಣರ ದಶಕರ್ಮಗಳ ಮೇಲೆ ತೆರಿಗೆಯನ್ನು ಹೇರಲಿಕ್ಕೆ ಸಾಕಷ್ಟು ಅಧಿಕಾರವನ್ನು ಹೊಂದಲಿಕ್ಕೂ ನಾಲ್ಕು ವರ್ಗಗಳ ಪ್ರಮುಖರು ಕೂಡಿ ದುರ್ಗಾಭವಾನಿಗೆ ನೈವೇದ್ಯವನ್ನು ಕೊಡುವಷ್ಟು ಒಕ್ಕಟ್ಟು ಆ ಪೊಳಲಲ್ಲಿ ಹುಟ್ಟಲಿಕ್ಕೂ ಕೆಲ ಕಾಲಾವಧಿಯು ಅವಶ್ಯವಾಗಿ ಬೇಕಲ್ಲವೇ? ಧರಾಚಕ್ರವು ಮೆಚ್ಚುವಂತೆ ಪುಲಿಕೇಸಿಯು ಅಶ್ವಮೇಧ ಯಜ್ಞವನ್ನು ಮಾಡಿದನೆಂದು ಒಬ್ಬ ಕನ್ನಡ ಕವಿಯು ವರ್ಣಿಸಿದ್ದಾನೆಂದು ಹಿಂದೆ ಬರೆದಿರುತ್ತೇವಷ್ಟೇ. ಆ ಯಜ್ಞಕ್ಕೆ ಭರತಖಂಡದ ಬೇರೆ ಬೇರೆ ಭಾಗದ ಮಹಾಮಹಾವಿದ್ವಾಂಸರು ಬಂದಿರಬಹುದು. ಅವರ ಪಾಂಡಿತ್ಯಕ್ಕೂ ಸೌಜನ್ಯಕ್ಕೂ ತಪೋಬಲಕ್ಕೂ ಸ್ವಾರ್ಥತ್ಯಾಗಕ್ಕೂ ಸತ್ಯಪ್ರೀತಿಗೂ ಮೆಚ್ಚಿ ಮರುಳಾದ ಧರ್ಮಶ್ರದ್ಧೆಯುಳ್ಳ ಪುಲಿಕೇಸಿಯು ಅವರನ್ನು ಅಯ್ವೊಳೆಯಲ್ಲಿರಲಿಕ್ಕೆ ಒಡಂಬಡಿಸಿ, ಅದಕ್ಕೆ ಸಂಸ್ಕೃತದ ಆರ್ಯಪುರವೆಂಬ ಹೊಸ ನಾಮಕರಣವನ್ನು ಮಾಡಿ, ಅಲ್ಲಿಯೊಂದು ಮಹಾವಿದ್ಯಾಲಯವನ್ನು ನಡಿಸಲಿಕ್ಕೆ ಬೇಕಾದ ತಕ್ಕ ಅನುಕೂಲತೆಗಳನ್ನು ಮಾಡಿಕೊಟ್ಟಿರಬಹುದೆಂದು ನನಗೆ ಹೊಳೆಯುತ್ತದೆ. ಮುಂದೆ ಪುಲಿಕೇಸಿಯ ಮಕ್ಕಳೂ ಮೊಮ್ಮಕ್ಕಳೂ ಈ ಮಹಾವಿದ್ಯಾಲಯದ ಅಭಿಮಾನವನ್ನು ಹಿಡಿದು ಅದಕ್ಕೆ ರಾಜಾಶ್ರಯವನ್ನಿತ್ತು ಅದನ್ನು ವೃದ್ಧಿಗೊಳಿಸಿರಬಹುದೆಂದು ತೋರುತ್ತದೆ. ಪುಲಿಕೇಸಿ ಕೀರ್ತಿವರ್ಮರ ಶಾಸನಗಳೂ ಇನ್ನೂ ದೊರೆಯದೆ ಇದ್ದುದರಿಂದ ಈ ವಿಷಯವನ್ನು ಕುರಿತು ಹೆಚ್ಚಿಗೆ ಬರೆಯಲಿಕ್ಕೆ ಮಾರ್ಗವಿಲ್ಲ. ನನ್ನ ಕನ್ನಡ ಬಂಧುಗಳ ಸಾಹಸಪ್ರಯತ್ನಗಳಿಂದ ಹೊಸ ಶಾಸನಗಳು ದೊರೆತು ಈ ಆರ್ಯಪುರದ ವಿದ್ಯಾಪೀಠದ ವಿಷಯವಾಗಿ ಹೊಸ ಸಂಗತಿಗಳು ತಿಳಿಯಬಂದರೆ, ನಮ್ಮ ತಾಯ್ನಾಡಾದ ಕರ್ನಾಟಕದ ಗೌರವವು ಹೆಚ್ಚುವು

ದಲ್ಲದೆ ಆ ವಿದ್ಯಾಲಯಕ್ಕೆ ಮನಸ್ಸುಟ್ಟು ಆಶ್ರಯಕೊಟ್ಟು ಅದನ್ನು ವೃದ್ಧಿಗೊಳಿಸಿದ ಚಾಳುಕ್ಯ ಸಾರ್ವಭೌಮರ ಕೀರ್ತಿಯು ಅಜರಾಮರವಾಗಿ ಉಳಿಯುವುದೆನ್ನಲಿಕ್ಕೆ ಅಡ್ಡಿಯಿಲ್ಲ. ಏಕೆಂದರೆ ಕೊಲ್ಲುವವನಿಗಿಂತ ಕಾಯುವವನು ದೊಡ್ಡವನೆಂಬ ಗಾದೆಯಂತೆ ಕಾಳೆಗಗಳಲ್ಲಿ ಹಗೆಗಳನ್ನು ಕೊಂದು ಗೆಲವನ್ನೂ ಹೊಸ ನಾಡನ್ನೂ ದೊರಕಿಸುವುದಕ್ಕಿಂತ ಜನರಲ್ಲಿ ಸರಿಯಾದ ವಿದ್ಯೆಯ ಪ್ರಸಾರವನ್ನು ಮಾಡಿ ಅವರನ್ನು ಸ್ವಾಭಿಮಾನಿಗಳಾಗಿಯೂ ಸ್ವಜನ ಪ್ರೀತಿಯುಳ್ಳವರಾಗಿಯೂ ಸ್ವಾರ್ಥತ್ಯಾಗಿಗಳಾಗಿಯೂ ಸ್ವಾವಲಂಬಿಗಳಾಗಿಯೂ ಮಾಡುವುದು ಹೆಚ್ಚು ಶ್ರೇಯಸ್ಕರವಾದ ಕೆಲಸವೆಂದು ಎಲ್ಲರೂ ಒಡಂಬಡುವರು.

೧ ನೆಯ ಕೀರ್ತಿವರ್ಮನು ೫೯೭ ರಲ್ಲಿ ದಿವಂಗತನಾದನು.

೩. ೨ ನೆಯ ಪುಲಿಕೇಸಿ, ರಾಜ್ಯಪಾಲಕ ಮಂಗಳೇಶ

(೫೯೮–೬೦೮)

ಮೊದಲನೆಯ ಕೀರ್ತಿವರ್ಮನು ಮರಣಹೊಂದಿದಾಗ ಅವನ ಹಿರಿಮಗನಾದ ಪುಲಿಕೇಸಿಯು ಅಕಬರನಂತೆ ಚಿಕ್ಕ ಬಾಲಕನಾಗಿದ್ದನು. ಆದಕಾರಣ ಬಹಿರಾಮಖಾನನು ಚಿಕ್ಕ ಅಕಬರನ ಪಾಲಕನಾಗಿ ಮೊಗಲ ರಾಜ್ಯಭಾರವನ್ನು ಕಯ್ಕೊಂಡಂತೆ, ಕೀರ್ತಿವರ್ಮನ ಮಲತಮ್ಮನಾದ ಮಂಗಳೇಶನು ಸಣ್ಣ ಪುಲಿಕೇಸಿಯ ಸಂರಕ್ಷಕನಾಗಿ ರಾಜ್ಯಸೂತ್ರವನ್ನು ತನ್ನ ಕಯ್ಯಲ್ಲಿ ತೆಗೆದುಕೊಂಡನು. ಡಾ॥ ಭಾಂಡಾರಕರ ಫ್ಲೀಟರು ಮಂಗಳೇಶನು ಪಟ್ಟವೇರಿದನೆಂದು ಅಭಿಪ್ರಾಯವುಳ್ಳವರಾಗಿದ್ದರೆಂದು ಅವರ ಬರಹದಿಂದ ಕಂಡುಬರುತ್ತದೆ. ಆದರೆ ಕೆಳಗೆ ಕೊಟ್ಟ ಕಾರಣಗಳ ಮೂಲಕವಾಗಿ ಅವನು ಪಟ್ಟವೇರಲಿಲ್ಲನೆಂತಲೂ ಪುಲಿಕೇಸಿಯೇ ಪಟ್ಟವೇರಿದನೆಂತಲೂ ನಾನು ಊಹಿಸುತ್ತೇನೆ.

೧. ಹನ್ನೊಂದನೆಯ ಶತಮಾನದ ಕೌತೆಮ್ಮದ ಶಾಸನದಲ್ಲಿ ಮಂಗಳೇಶನು ಪುಲಿಕೇಸಿಯ ಪಾಲಕನಾಗಿ ರಾಜ್ಯವನ್ನು ಆಳುತ್ತಿದ್ದನೆಂತಲೂ ಅವನು ದೊಡ್ಡವನಾದ ಬಳಿಕ ಸುಸೂತ್ರವಾಗಿ ಆಡಳಿತವನ್ನು ಬಿಟ್ಟುಕೊಟ್ಟನೆಂತಲೂ ಈ ಶಿಷ್ಟಸಾಂಪ್ರದಾಯವನ್ನು ಯಮಾ

ಪ್ರಾಮಾಣಿಕನಾದ ಚಾಳುಕ್ಯನು ಮುರಿಯಲಾರನೆಂತಲೂ ಒರೆದಿರುತ್ತದೆ.

೨. ಎರಡನೆಯ ಪುಲಿಕೇಶಿಯ ಕಾಲದ ಅಯ್ಹೊಳೆಯಲ್ಲಿದ್ದ ಮೇಗುಟಿಯೆಂಬ ಜೈನ ಗುಡಿಯ ಶಿಲಾಲೇಖದಲ್ಲಿ (೬೩೪), ಕೀರ್ತಿವರ್ಮನು ಸತ್ತ ಬಳಿಕ ಮಂಗಳೇಶನು ರಾಜ್ಯವಾಳಲಾರಂಭಿಸಿದನು ಎಂದು ಮಾತ್ರ ಬರೆದಿದೆ. ಅದರಿಂದ ಮಂಗಳೇಶನು ತನ್ನ ಅಣ್ಣನ ಮಕ್ಕಳನ್ನು ವಿರೋಧಿಸಿದನೆಂದಾಗಲಿ ಅವರ ಹಕ್ಕುಬಾಧ್ಯತೆಯನ್ನು ಲಕ್ಷಿಸಲಿಲ್ಲವೆಂದಾಗಲಿ ಊಹಿಸಲಿಕ್ಕೆ ಆಸ್ಪದವಿಲ್ಲ.

೩. ಮಂಗಳೇಶನ ಸ್ವಭಾವವು ಅವನ ತಂದೆಯಣ್ಣಂದಿರಿಂದ ತೀರ ಭಿನ್ನವಾಗಿತ್ತು. ಅವರಿಗೆ ಡಬಡ್ಡಾಳಿಕೆಯು ಸೇರುತ್ತಿದ್ದಿಲ್ಲವಾದ್ದರಿಂದ ಅವರು ಒಂದು ಶಾಸನವನ್ನಾದರೂ ಕೊರೆಯಿಸಲಿಲ್ಲೆಂದು ತೋರುತ್ತದೆ. ಮಂಗಳೇಶನಾದರೋ ಅತಿಜಂಬದವನೂ ಬಾಹ್ಯಾಡಂಬರಕ್ಕೆ ಮೆಚ್ಚಿದವನೂ ಹೆಬ್ಬಯಕೆಯವನೂ ಆಗಿದ್ದನು. ಅವನು ಬಾದಾವಿಗವಿಯಲ್ಲಿ ಕೊರೆಯಿಸಿದ ಸಕ್ಕದ ಕನ್ನಡ ಶಾಸನಗಳೇ ಬಾದಾವಿ ಚಾಳುಕ್ಯರ ಮೊದಲನೆಯ ಶಾಸನಗಳೆಂದು ಧಾರಾಳವಾಗಿ ಹೇಳಬಹುದು. ಅವನು ಉತ್ತರಾಪಥವನ್ನು ಗೆಲ್ಲಬೇಕೆಂದು ಯೋಚಿಸಿ ಅದನ್ನು ಗೆಲ್ಲುವದಕ್ಕಿಂತ ಮೊದಲೇ ಧರ್ಮದ ನೆವನಮಾಡಿ ಮಹಾಕೂಟದಲ್ಲಿ ಒಂದು ಗೆಲ್ಗಂಬವನ್ನು ನಿಲ್ಲಿಸಿದನು. ಇಂತಹ ಜಂಬದವನು ಪಟ್ಟಾಭಿಷಿಕ್ತನಾಗಿದ್ದರೆ ಆ ಸಂಗತಿಯನ್ನು ಏನಾದರೂ ನೆವನಮಾಡಿ ಕಲ್ಲಿನ ಮೇಲೆ ಕೊರೆಯಿಸದೆ ಬಿಡುತ್ತಿದ್ದಿಲ್ಲ. ಅಂತಹ ಶಾಸನವು ಇನ್ನೂ ದೊರೆತಿಲ್ಲವಾದ್ದರಿಂದ ಅವನು ಪಟ್ಟವೇರಲಿಲ್ಲೆಂದು ಹೇಳಬಹುದು.

೪. ಮಂಗಳೇಶನು ಸ್ವತಂತ್ರನಾದ ಅರಸನಾಗಿದ್ದರೆ, ಮಕುಟೇಶ್ವರನಾಥನಿಗೆ ೧೦ ಹಳ್ಳಿಗಳನ್ನು ಉಂಬಳಿ ಹಾಕಿಕೊಡುವದಕ್ಕೋಸ್ಕರ ತನ್ನ ಮಲತಾಯಿಯಾದ ದುರ್ಲಭದೇವಿಯ ಸಮ್ಮತಿಯನ್ನು ಕೇಳುತ್ತಿದ್ದಿಲ್ಲ.

೫. ಮಂಗಳೇಶನು ಕಾಳೆಗಗಳಲ್ಲಿ ಶೂರನೂ ಎದೆಗಾರನೂ ಆಗಿದ್ದರೂ ತನ್ನ ಆಪ್ತೇಷ್ಟರ ಮತ್ತು ಮಂತ್ರಿ ದಂಡನಾಯಕರ ಇಚ್ಛೆಯ

ವಿರುದ್ಧವಾಗಿ ಪುಲಿಕೇಸಿಯ ರಾಜ್ಯವನ್ನು ನುಂಗಿಬಿಡುವಷ್ಟು ಎಗ್ಗಿಲ್ಲ ದವನಾಗಿದ್ದಿಲ್ಲ.

೬. ಕವಿ ರನ್ನನು ತನ್ನ ಗದಾಯುದ್ಧದಲ್ಲಿ ಕೀರ್ತಿವರ್ಮನ ತರುವಾಯ "ತತ್ತನಯನಪ್ಪರಡನೆಯ ಸತ್ಯಾಶ್ರಯ ದೇವನಿಂ ಅವನ ಕಿರಿಯಮಗನಪ್ಪ ಮಂಗಳಾರ್ಣವನಿಂ ಸತ್ಯಾಶ್ರಯನಪ್ಪೆರಡನೆಯ ಸತ್ಯವ್ರತಿಯಿಂ" ಎಂದು ಬರೆದಿರುತ್ತಾನೆ. ೨ನೆಯ ಸತ್ಯಾಶ್ರಯ, ೨ನೆಯ ಸತ್ಯವ್ರತಿ ಎಂಬ ಹೆಸರುಗಳು ೨ನೆಯ ಪುಲಿಕೇಶಿಯ ಅನ್ವರ್ಥಕನಾಮಗಳಾಗಿದ್ದವೆಂದು ತೋರುತ್ತದೆ.

ಹೊರಗೆ ಬಸಪ್ಪಾ ಒಳಗೆ ವಿಷಪ್ಪಾ ಎಂಬ ಗಾದೆಯನ್ನು ಓದು ವವರು ಕೇಳಿರಬಹುದು. ಮಂಗಳೇಶನು ಹೊರಗೆ ನಿಸ್ವಾರ್ಥಿಯಾದ ಸಾಧುಪುರುಷನಂತೆ ತೋರಿಸಿಕೊಳ್ಳುತ್ತಿದ್ದರೂ ತನ್ನ ಅಣ್ಣನ ರಾಜ್ಯ ವನ್ನು ಅಪಹರಿಸಬೇಕೆಂಬ ದುರಾಶೆಯು ಅವನ ಹೊಟ್ಟೆಯೊಳಗೆ ಕುದಿ ಯುತ್ತಿತ್ತು. ಆದ್ದರಿಂದ ಅವನು ಮುಂಚಿನ್ನುಮರೆಯಾದ ಯುಕ್ತಿ ಪ್ರಯುಕ್ತಿಗಳಿಂದ ತನ್ನ ರಾಜ್ಯಾಧಿಕಾರವನ್ನು ಸ್ಥಿರಗೊಳಿಸಲಿಕ್ಕೆ ವಿಶ್ವ ಪ್ರಯತ್ನ ಮಾಡತೊಡಗಿದನು. ತನ್ನ ಅಧಿಕಾರವು ಪೂರ್ಣವಾಗಿ ನೆಲಗೊಂಡ ಬಳಿಕ ತನ್ನ ಅಣ್ಣನ ಮಕ್ಕಳನ್ನು ಮೂಲೆಗೊತ್ತಿ, ತಾನೇ ಚಾಳುಕ್ಯ ಚಕ್ರವರ್ತಿಯಾಗಬೇಕೆಂದು ಮನಸ್ಸಿನಲ್ಲಿ ನಿಶ್ಚಯಿಸಿ, ಆ ತನ್ನ ಮನೋರಥವು ನೆರವೇರಲಿಕ್ಕೆ ಬೇಕಾದ ಸಾಧನಗಳನ್ನು ಹುಡುಕ ತೊಡಗಿದನು.

ಪರಮೇಶ್ವರನು ಮನುಷ್ಯನಿಗೆ ಎರಡು ತರದ ಶಕ್ತಿಗಳನ್ನು— ೧. ಆತ್ಮಿಕ ಅಥವಾ ನೈತಿಕ ಶಕ್ತಿ, ೨. ಕಾಯಿಕಶಕ್ತಿ—ದಯಪಾಲಿ ಸಿರುತ್ತಾನಷ್ಟೇ. ಇವೆರಡೂ ಮನುಷ್ಯನ ಹುಟ್ಟುಗುಣಗಳಾದ್ದರಿಂದ ಹೆಚ್ಚುಕಡಮೆ ಪ್ರಮಾಣದಿಂದ ಎಲ್ಲರಲ್ಲಿಯೂ ಇರುತ್ತವೆ ಮತ್ತು ಬುದ್ಧಿ ಶಕ್ತಿಯು ಇವೆರಡಕ್ಕೂ ಮಾರ್ಗದರ್ಶಿಯಾಗಿರುತ್ತದೆ. ಆದರೆ ಮನು ಷ್ಯನು ಇವುಗಳೊಳಗೆ ಒಂದನ್ನಾಗಲಿ, ಎರಡನ್ನಾಗಲಿ ಬೇಕಾದಷ್ಟು ಬೆಳಸಿಕೊಳ್ಳಬಹುದು. **ವಸಿಷ್ಠ, ಗೌತಮಬುದ್ಧ, ಶಂಕರಾಚಾರ್ಯ,**

ಝೊರೋಸ್ತ್ರರ, ಕ್ರಿಸ್ತ, ಮುಹಮ್ಮದ ಮುಂತಾದವರು ಆತ್ಮಿಕ ಶಕ್ತಿಯನ್ನು ಬೆಳಸಿಕೊಂಡುದರಿಂದ ಅವರನ್ನು ಜನರು ದೇವರಿಗೆ ಹೋಲಿಸಿ ಪೂಜಿಸುತ್ತಾರೆ. ರೋಮದ ಸೀಝರ, ಗ್ರೀಸದ ದೊಡ್ಡ ಸಿಕಂದರ ಬಾದಶಹ, ಭಾರತೀಯನಾದ ಸಮುದ್ರಗುಪ್ತ ಮುಂತಾದವರು ಕಾಯಿಕ ಶಕ್ತಿಯನ್ನು ಬೆಳೆಸಿಕೊಂಡು ಸೋಲಿಲ್ಲದವರೆಂದು ಹೊಗಳಿಸಿಕೊಂಡರು. **ಜನಕ, ಅಶೋಕ, ಅಕಬರರು** ಎರಡೂ ಶಕ್ತಿಗಳನ್ನು ಬಹಳವಾಗಿ ಬೆಳೆಸಿಕೊಂಡುದರಿಂದ ಅವರನ್ನು ಜನರು ಈಗಲೂ ಪ್ರೀತಿಯಿಂದ ನೆನೆಸುತ್ತಾರೆ. ಆತ್ಮಿಕ ಕಾಯಿಕ ಶಕ್ತಿಗಳಲ್ಲಿ ಆತ್ಮಿಕ ಶಕ್ತಿಯೇ ಹೆಚ್ಚಿನದೆಂದು ವಸಿಷ್ಠ ವಿಶ್ವಾಮಿತ್ರರ ಜಗಳದಿಂದ ಸ್ಪಷ್ಟವಾಗಿ ಕಂಡುಬರುತ್ತದೆ. ತನ್ನ ಅಸಂಖ್ಯೇಯ ಬಲವು ಚದರಿ ಚೆದರಿ ದಿಕ್ಕುಪಾಲಾದುದನ್ನು ನೋಡಿ "ಕ್ಷತ್ರಿಯ ಬಲಕ್ಕೆ ಧಿಕ್ಕಾರವಿರಲಿ, ಬ್ರಹ್ಮತೇಜೋ ಬಲವೇ ನಿಜವಾದ ಬಲವು" ಎಂದು ವಿಶ್ವಾಮಿತ್ರನು ಕೂಗಿದನು*.

ಮಂಗಳೇಶನು ಪುರಾಣಪುಣ್ಯಕಥೆಗಳನ್ನು ಕೇಳಿದವನಾದ್ದರಿಂದ ತನ್ನ ಆತ್ಮಿಕ ಕಾಯಿಕ ಶಕ್ತಿಗಳನ್ನು ಬೆಳಿಸಿಕೊಳ್ಳಲಿಕ್ಕೆ ಹವಣಿಸಿದನು. ಬಾದಾಮಿಯ ಗುಡ್ಡದಲ್ಲಿ ಗವಿಯನ್ನು ಕೊರೆಯಿಸಿ ಅದರೊಳಗೆ ವಿಷ್ಣುಮೂರ್ತಿಗಳನ್ನು ಪ್ರತಿಷ್ಠಾಪಿಸಿದ್ದೂ ಮಹಾಕೂಟದಲ್ಲಿ ಧರ್ಮದ ಜಯಸ್ತಂಭವನ್ನು ನಿಲ್ಲಿಸಿದ್ದೂ ನೈತಿಕ ಶಕ್ತಿಯನ್ನು ಬೆಳಿಸಿಕೊಳ್ಳುವುದಕ್ಕೋಸ್ಕರ ಮಂಗಳೇಶನು ಮಾಡಿದ ಪ್ರಯತ್ನಗಳೇ ಆಗಿರಬಹುದು. ರಾಜ್ಯಸೂತ್ರವು ತನ್ನ ಕಯ್ಯಲ್ಲಿ ಬಂದ ಬಳಿಕ ಅವನು ತನ್ನ ಕಾಯಿಕ ಶಕ್ತಿಯನ್ನು ಬೆಳಿಸಿಕೊಳ್ಳುವ ಸಲುವಾಗಿ ಕಾರಣವನ್ನು ಹುಡುಕತೊಡಗಿದನು.

ಅರಸನೇ ಆಗಲಿ, ವ್ಯಕ್ತಿಯೇ ಆಗಲಿ ನೆರೆಹೊರೆಯವರೊಡನೆ ಕಾಲುಕೆದರಿ ಜಗಳ ತೆಗೆಯಬೇಕೆಂದು ಬಯಸಿದ ಕೂಡಲೆ ಬೇಕಾದಷ್ಟು ಕಾರಣಗಳು ದೊರೆಯುತ್ತವೆಂಬುದು ಅನುಭವಸಿದ್ಧವಾದ ಮಾತೇ ಸರಿ.

---

* ಧಿಗ್ಬಲಂ ಕ್ಷತ್ರಿಯಬಲಂ ಬ್ರಹ್ಮತೇಜೋಬಲಂ ಬಲಂ ॥

ಮಂಗಳೇಶನು ಎಲ್ಲಿಯಾದರೂ ದಂಡಯಾತ್ರೆಯನ್ನು ಮಾಡಬೇಕೆಂದು ಆಲೋಚಿಸುತ್ತಿರುವಾಗ ಬೇಹಿನವರು ಬಂದು, ಕಲಚುರಿ ಮನೆತನದ ಶಂಕರಗಣನ ಮಗನಾದ ಬುದ್ಧರಾಜನು ಕೊಂಕಣದಲ್ಲಿ ಚಾಳುಕ್ಯರ ಅಧಿಕಾರಿಯಾದ ಸ್ವಾಮಿರಾಜನೆಂಬುವನನ್ನು ಒಡೆಕೊಂಡು, ವೆಂಗುರ್ಲೆಯಿಂದ ೮ ಮೈಲಿನ ಮೇಲಿರುವ ಚಾಳುಕ್ಯರ ವಶದಲ್ಲಿದ್ದ ರೇವತಿ ದ್ವೀಪವನ್ನು ಹಿಡಿದುಕೊಂಡನೆಂದು ಸುದ್ದಿಯನ್ನು ಹೇಳಿದರು. ರೋಗಿ ಬಯಸಿದ್ದು ಹಾಲೋಗರ, ವೈದ್ಯ ಹೇಳಿದ್ದು ಹಾಲೋಗರ ಎಂಬ ಗಾದೆಯಂತೆ ಮಂಗಳೇಶನು ಹಾರೈಸಿದ ಸುಸಂಧಿಯು ತಾನಾಗಿ ಬಂದೊದಗಿದ್ದರಿಂದ ಅವನ ಹಿಗ್ಗು ಹಿಡಿಯಲಾರದಷ್ಟಾಯಿತು. ಕೂಡಲೆ ಅವನು ತನ್ನ ದಂಡನ್ನು ಸಜ್ಜುಗೊಳಿಸಿ, ದಂಡಯಾತ್ರೆಯ ಜೋಡಣೆಯನ್ನೆಲ್ಲ ಮುಗಿಸಿಕೊಂಡು, ವೆಂಗುರ್ಲೆಗ ಹೋಗಿ, ರೇವತಿ ದ್ವೀಪವನ್ನು ಮುತ್ತಿದನು. ಚಾಳುಕ್ಯರ ದಂಡಿನ ಪ್ರತಿಬಿಂಬವು ಸಮುದ್ರದ ನೀರಿನಲ್ಲಿ ಕಾಣಿಸುತ್ತಿದ್ದುದರಿಂದ ವರುಣನ ದಂಡೇ ಮಂಗಳೇಶನ ನೆರವಿಗೆ ಬಂದಿತ್ತೋ ಏನೋ ಎಂಬಂತೆ ಕಾಣುತ್ತಿತ್ತೆಂದು ಅಯ್ಹೊಳೆಯ ಶಾಸನವು ಈ ಮುತ್ತಿಗೆಯನ್ನು ಬಣ್ಣಿಸುತ್ತದೆ. ತುಸು ದಿವಸದಲ್ಲೇ ರೇವತಿ ದ್ವೀಪವು ಮಂಗಳೇಶನ ಕಯ್ಸೇರಿತು. ಬಳಿಕ ಅವನು ಬುದ್ಧರಾಜನನ್ನು ಬೆನ್ನಟ್ಟಿ ಹೋಗಿ ಅವನನ್ನು ನೆರೆಸೋಲಿಸಿ, ಕಿಮ್ಮ ಅಥವಾ ಮಹಿನದಿಯ ವರೆಗಿದ್ದ ಅವನ ರಾಜ್ಯವನ್ನೆಲ್ಲ ಗೆದ್ದುಕೊಂಡನು (೬೦೨). ತರುವಾಯ ಅವನು ತಾನು ತಿರುಗಿ ಗೆದ್ದ ಕೊಂಕಣ ಪ್ರಾಂತಕ್ಕೆ ಒಬ್ಬ ಮಂಡಲೇಶ್ವರನನ್ನು ನಿಯಮಿಸಿ, ರಾಜದ್ರೋಹಿಯಾದ ಸ್ವಾಮಿರಾಜನನ್ನು ಹಿಡಿತರಿಸಿ ಕೊಲ್ಲಿಸಿ, ಜಯಭೇರಿಯನ್ನು ಹೊಡಿಸುತ್ತ ಮರಳಿ ಬಾದಾಮಿಗೆ ಬಂದನು (೬೦೧).

ಬುದ್ಧರಾಜನ ಮೇಲೆ ಮಾಡಿದ ದಂಡಯಾತ್ರೆಯು ಫಲಿಸ್ಸಿಯಾದ್ದರಿಂದ ಮಂಗಳೇಶನು ಉಬ್ಬಿದನು. ತಾನು ದೊಡ್ಡ ಶೂರನೆಂಬ ಭ್ರಮೆಯು ಅವನಲ್ಲಿ ಹುಟ್ಟಿತು. ಅವನ ಅಹಂಕಾರವು ಹೆಚ್ಚಿತು. ಅವನು **ಉರುರಣವಿಕ್ರಾಂತ** ಎಂಬ ಬಿರುದನ್ನು ಧರಿಸಿದನು. ಉತ್ತರಾಪಥದ ಮೇಲೆ ದಂಡೆತ್ತಿಹೋಗಿ ಭಾಗೀರಥಿಯ ದಂಡೆಯ ಮೇಲೆ

ಒಂದು ಗೆಲ್ಗಂಬವನ್ನು ನಿಲಿಸಬೇಕೆಂಬ ಹೆಮ್ಮೆಯು ಅವನಲ್ಲಿ ಮೊಳೆಯಿತು. ಆದರೆ ಉತ್ತರ ಪ್ರಾಂತದ ದೌವಿಗಂತ ರಾಜಧಾನಿಯಲ್ಲಿದ್ದ ಪ್ರಮುಖರನ್ನು ತನ್ನ ಕಡೆಯವರಾಗಿ ಮಾಡಿಕೊಳ್ಳುವುದು ಸ್ವೋತ್ಕರ್ಷಕ್ಕೆ ಹೆಚ್ಚು ಅನುಕೂಲವಾದ ಸಂಗತಿ ಎಂದು ಅವನಿಗೆ ಹೊಳೆದುದರಿಂದ ದಾಳಿಯ ವಿಚಾರವನ್ನು ಬದಿಗೊತ್ತಿ, ಮಹಾಕೂಟದಲ್ಲಿ ಒಂದು ಧರ್ಮಜಯಸ್ತಂಭವನ್ನು ನಿಲ್ಲಿಸುವ ಪ್ರಯಾಸದಲ್ಲಿ ತೊಡಗಿದನು. ಈ ಕಾಲಕ್ಕೆ ಅವನು ತನ್ನ ತಂದೆಯ ಹೆಂಡತಿ (ಮಲತಾಯಿ) ಯಾದ ದುರ್ಲಭದೇವಿಯನ್ನು ಕರೆಯಿಸಿ ಅವಳಿಗೆ ಹೇಳಿದ್ದೇನೆಂದರೆ—"ನಾನು ಕಲಚುರಿ ಮನೆತನದ ಬುದ್ಧರಾಜನನ್ನು ಗೆದ್ದು ತಂದ ಸಂಪತ್ತೆಲ್ಲ ಬೇರೆ ತರದಿಂದ ವೆಚ್ಚವಾಗಿ ಹೋಯಿತು. ನನ್ನ ತಂದೆಯೂ ಅಣ್ಣನೂ ಶ್ರೀ ಮಕುಟೇಶ್ವರನಾಥನಿಗೆ ಹಾಕಿಕೊಟ್ಟ ಉಂಬಳಿಯು ಆ ದೇವಸ್ಥಾನದ ಖರ್ಚಿಗೆ ಸಾಲುವುದಿಲ್ಲ. ಆದಕಾರಣ ನಾನು ಈಗ ಶ್ರೀಯಂಬಾಟಕ, ಪ್ರಿಹಿಮ್ಮುಖಗ್ರಾಮ, ಕಿಸವೊಳಲ (ಪಟ್ಟದಕಲ್ಲು), ಕೆಂದೋರ ಮಹಾಸ್ತ, ನಂದಿಗ್ರಾಮ ಮುಂತಾದ ೧೦ ಹಳ್ಳಿಗಳನ್ನು ಆ ದೇವರಿಗೆ ದಾನವಾಗಿ ಹಾಕಿಕೊಡುತ್ತೇನೆ." ಮಹಾಕೂಟದ ಗೆಲ್ಗಂಬದ ಮೇಲೆ ಕೊರೆಯಿಸಿದ ಲೇಖದಲ್ಲಿ ಈ ಸಂಗತಿಯು ಬರೆಯಲ್ಪಟ್ಟಿದೆ. (ಶಕೆ ೫೨೫ ಸಿದ್ಧಾರ್ಥಿ ಸಂವತ್ಸರ ವೈಶಾಖ ಶುದ್ಧ ೧೫, ಎಪ್ರಿಲ ೧೨, ಇಸ್ವಿ ೬೦೨).

ಮಂಗಳೇಶನು ಸ್ವತಂತ್ರನಾದ ಅರಸನಾಗಿದ್ದರೆ ದುರ್ಲಭದೇವಿಯನ್ನು ಕರೆಯಿಸಿ ಆಕೆಯ ಮುಂದೆ ತನಗಿದ್ದ ಅಡಚಣೆಗಳನ್ನೆಲ್ಲ ಹೇಳಿ ಶ್ರೀ ಮಕುಟೇಶ್ವರನಾಥನಿಗೆ ೧೦ ಹಳ್ಳಿಗಳನ್ನು ಕೊಡಲಿಕ್ಕೆ ಕಾರಣವೇನಿತ್ತೆಂಬ ಸಂಶಯವು ಇಲ್ಲಿ ಹಣಕಿಹಾಕುತ್ತದೆ. ಈ ವಿಷಯವಾಗಿ ಕೆಳಗೆ ಬರೆದ ಕಲ್ಪನೆಗಳು ಒಂದರಹಿಂದೊಂದು ತಲೆದೋರುತ್ತವೆ :—

೧. ಮಂಗಳೇಶನು ತನ್ನ ತಂದೆಯ ಹೆಂಡತಿಯನ್ನು ಕರೆಯಿಸಿದನೆಂದು ಶಾಸನದಲ್ಲಿ ಬರೆದಿರುವುದರಿಂದ ದುರ್ಲಭದೇವಿಯು ಮಂಗಳೇಶನ ಮಲತಾಯಿ ಆಗಿದ್ದಳೆಂಬುದಕ್ಕೆ ಸಂಶಯವಿಲ್ಲ.

೨. ಮಂಗಳೇಶನು ಪಟ್ಟಾಭಿಷಿಕ್ತನಾದ ಸ್ವತಂತ್ರರಾಜನಾಗಿದ್ದರೆ ತಾನು ಶ್ರೀ ಮಕುಟೇಶ್ವರನಾಥನಿಗೆ ಉಂಬಳಿ ಹಾಕಿಕೊಡುವಾಗ ದುರ್ಲಭದೇವಿಯನ್ನು ಕರೆಯಿಸುವ ಕಾರಣವಿದ್ದಿಲ್ಲ.

೩. ಚಿಕ್ಕ ಪುಲಿಕೇಶಿಯೇ ನಿಜವಾಗಿ ಪಟ್ಟಾಭಿಷಿಕ್ತನಾದ ಅರಸನೆಂತಲೂ ತಾನು ರಾಜ್ಯಪಾಲಕನು ಮಾತ್ರ ಆಗಿರುತ್ತೇನೆಂತಲೂ ಮಂಗಳೇಶನ ತಿಳಿವಳಿಕೆ ಇದ್ದುದರಿಂದಲೇ ಅವನು ಕಲಚುರ್ಯರ ಸಂಪತ್ತು ಬೇರೆ ತರದಿಂದ ವೆಚ್ಚವಾಯಿತೆಂತಲೂ ತನ್ನ ಅಣ್ಣ ತಂದೆಯಂದಿರು ಕೊಟ್ಟ ದೇವಸ್ವವು ಸಾಕಾಗುವುದಿಲ್ಲೆಂತಲೂ ಎರಡು ಕಾರಣಗಳನ್ನು ಕೊಟ್ಟು, ಹೊಸ ಉಂಬಳಿಯನ್ನು ಕೊಡುವುದಕ್ಕೆ ಚಿಕ್ಕ ಪುಲಿಕೇಶಿಯ ದೇಹಪಾಲಕಳ ಸಮ್ಮತಿಯನ್ನು ಕೇಳುವುದು ಧರ್ಮದೃಷ್ಟಿಯಿಂದಲೂ ರಾಜನೀತಿಯಿಂದಲೂ ಅವನಿಗೆ ಅಗತ್ಯವು ಇದ್ದಿರಬಹುದು.

೪. ಸಾಮಾನ್ಯನೇಮದಂತೆ ಚಿಕ್ಕ ಪುಲಿಕೇಶಿಯ ಹಡೆದ ತಾಯಿಯೇ ಅವನ ದೇಹಪಾಲಕಳಾದ್ದರಿಂದ ಆಕೆಯನ್ನು ಮಂಗಳೇಶನು ಕರೆಯಿಸಬೇಕಾಗಿತ್ತು. ಆಕೆಯನ್ನು ಕರೆಯಿಸಲಿಲ್ಲಾದ್ದರಿಂದ ಆಕೆಯು ಈ ಮೊದಲೇ ಸತ್ತುಹೋಗಿದ್ದಳೆಂದು ಧಾರಾಳವಾಗಿ ಊಹಿಸಬಹುದು.

೧೨ ಏಪ್ರಿಲ ೬೦೨ ನೆಯ ಇಸ್ವಿಯ ದಿವಸ ಮಹಾಕೂಟದ ಗೆಲ್ಗಂಬವು ನಿಂತಿತು. ಆವೊತ್ತು ತಾನು ಧನ್ಯನಾದೆನೆಂದು ಮಂಗಳೇಶನು ಹಿಗ್ಗಿದನು. ಆದರೆ ದೈವವು ಅತಿವಿಚಿತ್ರವಾದುದು. ಏಕೆಂದರೆ ಅದೇ ದಿವಸ ಅವನ ವಿನಾಶದ ಬೀಜವು ಬಿತ್ತಲ್ಪಟ್ಟಿತು. ಕೆಲಕಾಲದಿಂದ ಅರಮನೆಯಲ್ಲಿ ಹೊತ್ತುತ್ತಿದ್ದ ಮನಸ್ತಾಪಾಗ್ನಿಯು ಈ ಜಂಬದ ಗೆಲ್ಗಂಬದ ಗಾಳಿ ತಾಕಿ ಉರಿಗೊಂಡಿತು. ಹುಟ್ಟಿದ ಜಿಂಕೆಯು ಹುದುಗಬಲ್ಲದೆ? ತಾನೇ ತನ್ನ ಹಗೆಯು * ಎಂಬ ಭಗವದ್ವಾಕ್ಯದಂತೆ ಮಂಗಳೇಶನು ಅಹಂಕಾರದಿಂದ ತನ್ನ ಕೇಡನ್ನು ತಾನೇ ತಂದುಕೊಳ್ಳಲಾರಂಭಿಸಿದನು.

---

* ಉದ್ಧರೇದಾತ್ಮನಾಽಽತ್ಮಾನಂ ನಾತ್ಮಾನಮವಸಾದಯೇತ್ ।
ಆತ್ಮೈವ ಹ್ಯಾತ್ಮನೋ ಬಂಧುರಾತ್ಮೈವ ರಿಪುರಾತ್ಮನಃ ॥

ಭಗವದ್ಗೀತಾ, ಅ. ೬, ಶ್ಲೋ. ೫.

ತನಗೆ ಎದುರಾಗುವಷ್ಟು ಸಾಮರ್ಥ್ಯವುಳ್ಳವರು ಯಾರೂ ಇಲ್ಲೆಂಬ ಹೆಮ್ಮೆಯು ಅವನಲ್ಲಿ ದಿನದಿನಕ್ಕೆ ಹೆಚ್ಚುತ್ತ ನಡೆಯಿತು. ಅವನ ದ್ರೋಹದ ವಿಚಾರಗಳು ಒಂದೊಂದೇ ಹೊರಹೊರಡ ತೊಡಗಿದವು. ಅರಮನೆಯ ಅಗ್ನಿಯ ಜಳವು ರಾಜಸಭೆಯನ್ನು ಹೊಕ್ಕಿತು. ರಾಜಸಭೆಯ ಬೆಂಕಿಯು ರಾಜಧಾನಿಯನ್ನು ವ್ಯಾಪಿಸಿತು. ರಾಜಧಾನಿಯ ವಹ್ನಿಯು ಚಾಳುಕ್ಯ ರಾಜ್ಯದಲ್ಲೆಲ್ಲ ಹರಡಿತು. ರಾಜ್ಯಾಧಿಕಾರದಿಂದ ಮದಾಂಧನಾದ ಮಂಗಳೇಶನು ಪುಲಿಕೇಸಿಯ ಪಕ್ಷದವರೆಂದು ಕಂಡುಬಂದ ಅಧಿಕಾರಿಗಳನ್ನೂ ಆಳುಗಳನ್ನೂ ಪರಿಪರಿಯಿಂದ ಪೀಡಿಸತೊಡಗಿದನು. ಸಾಮಾನ್ಯವಾಗಿ ಎಲ್ಲ ಸಜ್ಜನರೂ ಪುಲಿಕೇಸಿಯು ನಿಜವಾದ ಅರಸನೆಂತಲೂ ಮಂಗಳೇಶನು ರಾಜದ್ರೋಹಿಯಾದ ಗೋಮುಖವ್ಯಾಘ್ರನೆಂತಲೂ ಎಣಿಸತೊಡಗಿದರು. ಈ ಕಾಲಕ್ಕೆ ರಾಜಧಾನಿಯಲ್ಲಿ ನಾಲ್ಕು ರಾಜಕೀಯ ಪಂಗಡಗಳಾದವು—೧. ಪುಲಿಕೇಸಿಯ ಪಕ್ಷದವರು, ೨. ಮಂಗಳೇಶನ ಪಕ್ಷದವರು, ೩. ಪುಲಿಕೇಸಿಯ ಪಕ್ಷದವರಾದರೂ ಮಂಗಳೇಶನ ವಿರುದ್ಧವಾಗಿ ಮಾತಾಡಲಿಕ್ಕೆ ಹೆದರುವವರು, ೪. ಯಾವ ಪಕ್ಷವನ್ನೂ ಸೇರದೆ ಅಂಜಿಕೊಂಡು ತಟಸ್ಥರಾಗಿದ್ದವರು. ಮಂಗಳೇಶನ ದ್ರೋಹವೂ ಸಂಶಯವೂ ಕ್ರೌರ್ಯವೂ ದಿನದಿನಕ್ಕೆ ಹೆಚ್ಚುತ್ತ ನಡೆದವು. ಪ್ರಜೆಗಳ ಹಿಂಸೆಯೂ ಗೋಳಾಟವೂ ತಡೆಯಲಾರದಷ್ಟು ಬೆಳೆದವು.

ಈ ಸಂಧಿಯಲ್ಲಿ ತರುಣನಾದ ಪುಲಿಕೇಸಿಯು ಒಂದು ಅಪೂರ್ವವಾದ ಬಲೆಯನ್ನೊಡ್ಡಿ ಮಂಗಳೇಶನೆಂಬ ಗೋಮುಖವ್ಯಾಘ್ರನನ್ನು ಹಿಡಿದನೆಂದು ಬರೆಯಲಿಕ್ಕೆ ಸಂತೋಷಪಡುತ್ತೇನೆ. ತನ್ನ ಕಕ್ಕನು ರಾಜ್ಯಲೋಭ-ತೃಷ್ಣೆಯಿಂದ ಮಾಡುತ್ತಿದ್ದ ಪ್ರಜಾಪೀಡೆಯನ್ನು ನಿಲ್ಲಿಸುವುದಕ್ಕೋಸ್ಕರ ಅವನು ಒಂದು ಹಂಚಿಕೆಯನ್ನು ಮಾಡಿದನು. ತನಗೆ ರಾಜ್ಯವು ಬೇಕಾಗಿಲ್ಲೆಂತಲೂ ತಾನು ತನ್ನ ಉಳಿದ ಆಯುಷ್ಯವನ್ನು ತೀರ್ಥಯಾತ್ರಾಟನದಲ್ಲಿಯೂ ದೇವತಾರಾಧನೆಯಲ್ಲಿಯೂ ಕಳೆಯುವೆನೆಂತಲೂ ರಾಜಸಭೆಯಲ್ಲಿ ಸಾರಿ ಹೇಳಿ, ತನ್ನ ಯಾತ್ರೆಗೆ ಬೇಕಾದ ಜೋಡಣೆಯನ್ನು ಮಾಡಿಕೊಂಡು ರಾಜಧಾನಿಯನ್ನು ಬಿಟ್ಟು ಹೊರ

ಟನು*. ಮಂಗಳೇಶನ ಹಿಗ್ಗು ಹಿಡಿಯಲಾರದಷ್ಟಾಯಿತು. ಅವನು ಸಂತೋಷ ಸಮುದ್ರದಲ್ಲಿ ಮುಳುಗಿ ತೇಲಲಾರಂಭಿಸಿದನು. ಅವನು ಅತ್ಯಾನಂದದಿಂದ ಪುಲಿಕೇಸಿಯನ್ನು ಕಳಿಸಲಿಕ್ಕೆ ಪರಿವಾರ ಸಹಿತವಾಗಿ ರಾಜಧಾನಿಯ ಹೊರಗೆ ತುಸು ದೂರ ಹೋದನು. ಶ್ರೀರಾಮನು ವನವಾಸಕ್ಕೆ ಹೋಗುವಾಗ ಅಯೋಧ್ಯೆಯ ಜನರು ದುಃಖಿಸಿದಂತೆ ಪುಲಿಕೇಸಿಯು ರಾಜಧಾನಿಯನ್ನು ಬಿಡುವಾಗ ಬಾದಾಮಿಯ ಜನರು ಸಣ್ಣವರೂ ದೊಡ್ಡವರೂ ಗಂಡಸರೂ ಹೆಂಗಸರೂ ಮರಮರ ಮರುಗಿ ಕಣ್ಣೀರುಸುರಿಸಿದರು. ಬಾದಾಮಿಯು ನಗರವೆಲ್ಲ ಗೋಳಿಟ್ಟಿತು.

ತರುಣ ಪುಲಿಕೇಸಿಯು ತುಸು ದೂರ ಹೋಗುವಷ್ಟರಲ್ಲಿ ಮಂತ್ರಿಗಳೂ ಪ್ರಮುಖ ಪುರಜನರೂ ಅವನಿದ್ದೆಡೆಗೆ ಅವಸರದಿಂದ ಬಂದು, ಮಂಗಳೇಶನು ಸತ್ತನೆಂತಲೂ ಪುಲಿಕೇಸಿಯು ತಿರುಗಿ ಬಂದು ರಾಜ್ಯಸೂತ್ರವನ್ನು ಕಯ್ಕೊಳ್ಳಬೇಕೆಂತಲೂ ವಿನಯಪೂರ್ವಕವಾಗಿ ಬಿನ್ನವಿಸಿದರು. ಪುಲಿಕೇಸಿಯು ಅವರ ವಿನಂತಿಯನ್ನು ಮಾನ್ಯಮಾಡಿ ತಿರುಗಿ ಹೋದನು. ಮುಂದೆ ಅವನು ತನ್ನ ಕಕ್ಕನನ್ನು ಯಾರು ಏನು ಕಾರಣವಾಗಿ ಹೇಗೆ ಕೊಂದರೆಂಬುದನ್ನು ವಿಚಾರಿಸಿದ ಬಗ್ಗೆ ಯಾವ ಶಾಬ್ದ ಪ್ರಮಾಣವು ಇನ್ನೂವರೆಗೆ ದೊರೆತಿಲ್ಲ. ಆದ್ದರಿಂದ ಮಂಗಳೇಶನ ಮರಣದ ಬಗ್ಗೆ ಅನುಮಾನದ ಹೊರತು ನಮಗೆ ಬೇರೆ ಯಾವ ಸಾಧನವೂ ಇಲ್ಲ. ಮಂಗಳೇಶನು ಸಂತೋಷದಿಂದ ಉಬ್ಬಿ ಎಚ್ಚರಗೇಡಿಯಾಗಿದ್ದಾಗ ಪುಲಿಕೇಸಿಯ ಪಕ್ಷದವನೊಬ್ಬನು ಅವನನ್ನು ಕತ್ತಿಯಿಂದ ಇರಿದು ಕೊಂದಿರಬಹುದು ಅಥವಾ ವಿಷ ಪ್ರಯೋಗದಿಂದ ಅವನು ಸತ್ತಿರಬಹುದು ಎಂದು ಅನುಮಾನವು ಹೊರಡುತ್ತದೆ. ಈ ಸಾವಿನಲ್ಲಿ ಪುಲಿಕೇಸಿಯ ಅಂಗವಿತ್ತೋ ಇಲ್ಲೋ ಎಂಬುದನ್ನು ನಿರ್ಣಯಿಸಲಿಕ್ಕೆ ಮಾರ್ಗವಿಲ್ಲ. ಆದಕಾರಣ ಅವನಿಗೆ ಗೊತ್ತಿಲ್ಲದೆ ಈ ಮರಣವು ಸಂಭವಿಸಿ

---

* ೬೩೪ ನೆಯ ಇಸ್ವಿಯ ಪುಲಿಕೇಶಿಯ ಐಹೊಳೆಯ ಶಾಸನ. ಇಂಡಿಯನ್ ಆಂಟಿಕ್ವರಿ, ಸಂ. ೬, ಪು. ೪. ಜಿ. ಜೆ. ಡುಬ್ರಿಲರ ದಕ್ಷಿಣಾಪಥದ ಪ್ರಾಚೀನೇತಿಹಾಸ. ಪುಟ ೧೧೩.

ತೆಂದು ಬರೆಯುವುದೇ ಸುರಕ್ಷಿತವಾದ್ದೆಂದು ತೋರುತ್ತದೆ. ಮಂಗಳೇಶನು ೬೧೦ ರಲ್ಲಿ ಸತ್ತನು.

೪. ಎರಡನೆಯ ಪುಲಿಕೇಶಿ

(೬೦೯–೬೪೨)

೨ನೆಯ ಪುಲಿಕೇಶಿಯು ಹೇಗೆ ಚಾಳುಕ್ಯ ಸಾಮ್ರಾಜ್ಯದ ಚಕ್ರವರ್ತಿಯಾದನೆಂಬುದನ್ನು ಹಿಂದಿನ ಅಧ್ಯಾಯದಲ್ಲಿ ವಿವರಿಸಿರುತ್ತೇವಷ್ಟೇ. ಮಂಗಳೇಶನಿರುವಾಗಲೇ ಚಾಳುಕ್ಯ ಮನೆತನದಲ್ಲಿ ಒಡಕು ಹುಟ್ಟಿರುತ್ತದೆಂಬ ಸುದ್ದಿಯು ನಾಡಿನಲ್ಲೆಲ್ಲ ಹಬ್ಬಿತ್ತು. ಹೆಬ್ಬಯಕೆಯುಳ್ಳ ಎಷ್ಟೋ ಮಂದಿ ಮಾಂಡಲಿಕರು ಸ್ವತಂತ್ರರಾಗುವ ಮತ್ತು ಚಾಳುಕ್ಯರಾಜ್ಯವನ್ನು ಸೆಳೆದುಕೊಳ್ಳುವ ಎಣಿಕೆಯಲ್ಲಿದ್ದರು. ಮಂಗಳೇಶನಾದರೋ ತಂತಮ್ಮ ದಂಡುಗಳನ್ನು ಸಜ್ಜುಮಾಡಿಕೊಂಡಿರಬೇಕೆಂತಲೂ ತಾನು ಹೇಳಿಕಳುಹಿದ ಕೂಡಲೆ ತನ್ನ ನೆರವಿಗೆ ಬರಬೇಕೆಂತಲೂ ಎಷ್ಟೋ ಮಂದಿ ನಂಬುಗಸ್ಥರಾದ ಮಂಡಲೇಶ್ವರರೊಡನೆ ಗುಪ್ತ ಪತ್ರವ್ಯವಹಾರವನ್ನು ನಡೆಯಿಸಿದ್ದನು. ಇವರೊಳಗೆ ಭೀಮಾ ನದಿಯ ಉತ್ತರ ಪ್ರದೇಶದಲ್ಲಿ ಪ್ರಬಲ ಮಂಡಲೇಶ್ವರರಾಗಿದ್ದ ೧ ಅಪ್ಪಾಯಿಕ, ೨ ಗೋವಿಂದ ಎಂಬ ಇಬ್ಬರು ಮಾಂಡಲಿಕರು ಬಿಡೆಗಾರರೂ ಮಹತ್ವಾಕಾಂಕ್ಷಿಗಳೂ ಆಗಿದ್ದರು. ಮಂಗಳೇಶನ ಕರೆಯನ್ನು ಎದುರುನೋಡುತ್ತ ಕುಳಿತ ಈ ಮಂಡಲೇಶ್ವರರಿಗೆ ಮಂಗಳೇಶನ ಸಾವಿನ ಸುದ್ದಿಯು ಆಕಾಶದ ಕೊಡಲಿಯಂತೆ ಪರಿಣಮಿಸಿತು. ಅವರ ಬುದ್ಧಿಯು ಭ್ರಂಶಿಸಿತು. ಅವರಿಗೆ ಏನೂ ತೋಚದಂತಾಯಿತು. ದೇಶಕಾಲ ಸ್ಥಿತಿಯನ್ನು ವಿಚಾರಿಸುವಷ್ಟು ಮನಸ್ಸಿನ ಸಾಮರ್ಥ್ಯವು ಅವರಲ್ಲಿ ಉಳಿಯಲಿಲ್ಲ. ಆದ್ದರಿಂದ ಅವರು ಬಾದಾಮಿಯ ಮೇಲೆ ದಂಡೆತ್ತಿ ಹೋದರು. ಮೊದಲು ಗೋವಿಂದನು ಬಂದನು. ಕುಶಲನಾದ ತರುಣ ಪುಲಿಕೇಶಿಯು ಅವನನ್ನು ಸಾಮದಾನ ಭೇದೋಪಾಯಗಳಿಂದ ಒಡಂಬಡಿಸಿ, ತನ್ನ ಗೆಳೆಯನಾಗಿ ಮಾಡಿಕೊಂಡನು. ಬಳಿಕ ಅಪ್ಪಾಯಿಕನು ಬರಲು ವೀರನಾದ ಪುಲಿಕೇಶಿಯು ಅವನ ದಂಡಿನ ಮೇಲೆ ಬಿದ್ದು ಅವನನ್ನು ಸೋಲಿಸಿ ಹಿಂದಕ್ಕಟ್ಟಿದನು.

ಈ ಆಖ್ಯಾಯಿಕ ಗೋವಿಂದರು ಯಾರೆಂಬುದು ಇನ್ನೂ ಚೆನ್ನಾಗಿ
ಗೊತ್ತಾಗಿಲ್ಲ. ಈ ಗೋವಿಂದನು ರಾಷ್ಟ್ರಕೂಟ ವಂಶದ ೧ ನೆಯ
ಗೋವಿಂದನಾಗಿರಬಹುದೆಂದು ಡಾ॥ ಭಾಂಡಾರಕರರು ಊಹಿಸುತ್ತಾರೆ.
ಆದರೆ ೧ ನೆಯ ಗೋವಿಂದನಿಗೆ ಅರಸುತನವಿದ್ದಿಲ್ಲೆಂತಲೂ ಅವನು
ಇಷ್ಟು ಪೂರ್ವಕಾಲದವನಾಗಿದ್ದಿಲ್ಲೆಂತಲೂ ಬರೆದು, ಡಾ॥ ಫ್ಲೀಟರು ಆ
ಊಹೆಯನ್ನು ಅಲ್ಲಗಳೆಯುತ್ತಾರೆ*.

ಗೂಳಿ ಬಿದ್ದರೆ ಆಳಿಗೊಂದು ಕಲ್ಲೆಂಬ ಗಾದೆಯನ್ನು ವಾಚಕರು
ಕೇಳಿರಬಹುದು. ಚಾಳುಕ್ಯ ವಂಶದಲ್ಲಿ ಹುಟ್ಟಿದ ಒಡಕಿನ ಸುದ್ದಿ
ಯನ್ನು ಕೇಳಿ ತಂತಮ್ಮ ದಂಡುಗಳನ್ನು ಸಿದ್ಧಮಾಡಿಕೊಂಡು ಕುಳಿತ
ಮಂಡಲೇಶ್ವರರು ಮಂಗಳೇಶನು ಅಕಸ್ಮಾತ್ತಾಗಿ ಸತ್ತ ಒಸಗೆ
ಯನ್ನು ಕೇಳಿ ಎದ್ದು ಕುಳಿತುದು ಸ್ವಾಭಾವಿಕವಾದ ಮಾತೇ ಸರಿ.
ಇಡಿ ರಾಜ್ಯದೊಳಗೆ ತುಂಟರ ಜಗಳಗಳೂ ಪುಂಡರ ಹಾವಳಿಗಳೂ
ಮಾಂಡಲಿಕರ ದಂಡುಗಳ ಸುಳಿದಾಟವೂ ಎಲ್ಲ ಕಡೆಯಲ್ಲಿಯೂ ಹೆಚ್ಚಿ
ದ್ದವು. ಎಲ್ಲಿ ನೋಡಿದರೂ ಅರಾಜಕತೆಯೇ ಕಂಗೊಳಿಸುತ್ತಿತ್ತು.
ಆದ್ದರಿಂದ ಪುಲಿಕೇಶಿಯ ಅಯ್ಹೊಳೆಯ ಶಾಸನದಲ್ಲಿ ಹಗೆಗಳ ಕತ್ತಲೆ
ಯಿಂದ ಇಡಿ ಜಗತ್ತು ಕವಿದಿತ್ತೆಂದು ಆ ಕಾಲದ ಸ್ಥಿತಿಯನ್ನು ವರ್ಣಿ
ಸಿರುತ್ತಾರೆ†. ಬಹುಶಃ ಎಲ್ಲ ಮಂಡಲೇಶ್ವರರು ತಿರುಗಿಬಿದ್ದುದರಿಂ
ಪುಲಿಕೇಶಿಯ ಕಕ್ಕ ತಂದೆ ಅಜ್ಜಂದಿರು ನಾನಾತರದ ಕಷ್ಟಗಳನ್ನು
ಸಹಿಸಿ, ನೂರಾರು ಕಾಳಗಗಳಲ್ಲಿ ಪ್ರಾಣಸಂಕಟಕ್ಕೆ ಗುರಿಯಾಗಿ ಗೆ
ಪ್ರಾಂತಗಳೆಲ್ಲ ಕಯ್ಮೀರುವ ಲಕ್ಷಣವು ತೋರುತ್ತಿತ್ತು. ಅಂತ
ಕಠಿಣ ಪ್ರಸಂಗದಲ್ಲಿ ನಮ್ಮ ತರುಣ ಪುಲಿಕೇಶಿಯು ತೋರಿಸಿ
ಧೈರ್ಯ ಶೌರ್ಯ ಸಾಹಸ ಚಾತುರ್ಯಾದಿ ಗುಣಗಳೂ ಕನ್ನ
ದಳವಾಯಿ ದಂಡಾಳುಗಳು ತೋರಿಸಿದ ಸ್ವಾರ್ಥತ್ಯಾಗ ದೇಶಾ
ಮಾನ ನಿಸ್ಸೀಮಸ್ವಾಮಿಭಕ್ತಿಗಳೂ ಅತಿವರ್ಣನೀಯವಾಗಿದ್ದುವೆಂ
ನಿಸ್ಸಂದೇಹವಾಗಿ ಹೇಳಬಹುದು.

* ಮುಂಬಯಿ ಇಲಾಖೆಯ ಗ್ಯಾಜಟಿಯರ ಸಂ. ೧, ಭಾಗ ೨, ಪು. ೩
ಅಡಿ ಟಿಪ್ಪಣಿ ೨. † ಪರಿಶಿಷ್ಟ ಅ ನೋಡಿರಿ.

ವೇಸಾಯದಲ್ಲಿಯಾಗಲಿ ವೇಪಾರದಲ್ಲಿಯಾಗಲಿ, ಅಧ್ಯಯನದಲ್ಲಿಯಾಗಲಿ ಯುದ್ಧದಲ್ಲಿಯಾಗಲಿ, ತಕ್ಕ ಕಾಲದಲ್ಲಿ ಮಾಡಿದ ತಕ್ಕ ಕೆಲಸವು ಸಫಲವಾಗುತ್ತದೆಂಬುದನ್ನು ಮರೆಯಕೂಡದು. ಈ ತತ್ವವನ್ನರಿತ ತರುಣ ಪುಲಿಕೇಶಿಯು ಅಪ್ಪಾಯಿಕನನ್ನು ಸೋಲಿಸಿ ಓಡಿಸಿದ್ದರಿಂದ ರಾಜಧಾನಿಗೆ ಬಂದ ಕುತ್ತು ಪರಿಹಾರವಾಯಿತೆಂದು ಸಂತೋಷಪಟ್ಟು ಸುಮ್ಮನೆ ಕುಳ್ಳಿರಲಿಲ್ಲ. ಮಂಗಲೇಶ್ವರರು ಮುಳಿತು ನಿಂತಾಗ ರಾಜಧಾನಿಯು ಸುರಕ್ಷಿತವಾಗಿರುವ ಸಂಭವವೆಲ್ಲಿ? ತಿರುಗಿಬಿದ್ದ ಮಂಗಲೇಶ್ವರರು ತಮ್ಮೆಲ್ಲರ ದಂಡುಗಳನ್ನು ಒಟ್ಟುಗೂಡಿಸಿ ಬಾದಾಮಿಯ ಮೇಲೆ ಸಾಗಿ ಹೋಗಬೇಕೆಂದು ಹೆಣಗುತ್ತಿದ್ದರು. ಪುಲಿಕೇಶಿಯು ತನ್ನ ಸೋಮಾರಿತನದಿಂದ ಅವರಿಗೆ ಸಾಕಷ್ಟು ಸಮಯವನ್ನು ಒದಗಿಸಿ ಕೊಟ್ಟಿದ್ದರೆ ಚಾಳುಕ್ಯ ಮನೆತನದ ಅಳಿಗಾಲವನ್ನೇ ತಂದುಕೊಳ್ಳುತ್ತಿದ್ದನೆಂದು ಹೇಳಬಹುದು. ಆದರೆ ಅವನು ಅಲಸಿಕನಾಗದೆ ಜಾಗರೂಕನೂ ಚುರುಕನೂ ದೂರದರ್ಶಿಯೂ ಆದ್ದರಿಂದ ಹಗೆಗಳಿಗೆ ಒಟ್ಟುಗೂಡಲಿಕ್ಕೆ ಅವಕ್ಷಣದ ಪುರಸೊತ್ತನ್ನಾದರೂ ಕೊಡದೆ, ನಿದ್ದೆನೀರಡಿಕೆಯನ್ನು ಬದಿಗೊತ್ತಿ, ದಂಡಿನವರನ್ನು ಹುರಿದುಂಬಿಸಿ, ತನ್ನ ಬಲಿಷ್ಠ ಶತ್ರುಗಳಾದ ಕದಂಬರ ರಾಜಧಾನಿಯ ಮೇಲೆ ಮೊದಲು ದಂಡೆತ್ತಿ ಹೋದನು. ಆ ಮಂಗಲೇಶ್ವರರ ದಂಡು ಹೊರಟಿತು, ಈ ಮಂಗಲೇಶ್ವರರ ದಂಡು ದಾರಿಯಲ್ಲಿದೆ, ಇಂದು ಕದಂಬರು ನಿರೀಕ್ಷಿಸುತ್ತಿರುವಾಗ ಪುಲಿಕೇಶಿಯ ದಂಡು ಬನವಾಸಿಯನ್ನು ಸಮೀಪಿಸಿತೆಂಬ ಸುದ್ದಿಯು ಬಂದು ಅಪ್ಪಳಿಸಿತು.

ಆ ಕಾಲಕ್ಕೆ ಈಗಿನಂತೆ ಬನವಾಸಿಯು ಒಂದು ಹಾಳುಹಳ್ಳಿಯಾಗಿದ್ದಿಲ್ಲ. ಅದು ಬಲು ಅನಾದಿಕಾಲದಿಂದ ರಾಜಧಾನಿಯ ಪಟ್ಟಣವಾದ್ದರಿಂದ ದಟ್ಟವಾದ ಜನವಸ್ತಿಯುಳ್ಳದ್ದಾಗಿತ್ತು. ಅದರ ವಿಸ್ತಾರವಾದ ರಾಜಬೀದಿಗಳಲ್ಲಿ ಜನರ ಸಂದಣಿಯು ಕಿಕ್ಕಿರಿಸುತ್ತಿತ್ತು. ಭವ್ಯವಾದ ಕಟ್ಟಡಗಳೂ ಎತ್ತರವಾದ ಅಂತಸ್ತುಗಳೂ ಗಗನಚುಂಬಿಗಳಾದ ಗುಡಿಗೋಪುರಗಳೂ ಅಲ್ಲಲ್ಲಿ ಕಂಗೊಳಿಸುತ್ತಿದ್ದವು. ರಮ್ಯವಾದ ಉದ್ಯಾನಗಳೂ ಹರವಾದ ಸರೋವರಗಳೂ ಚಂದವಾದ ಪೇಟೆಯ ಬೀದಿಗಳೂ

ಆಗಾಗ ನಡೆಯುತ್ತಿದ್ದ ಆಟನೋಟಗಳೂ ಜನರ ಚಿತ್ತಾಕರ್ಷಣವನ್ನು ಎಡೆಬಿಡದೆ ಮಾಡುತ್ತಿದ್ದುವು. ಆ ಕಾಲಕ್ಕೆ ಬನವಾಸಿಯ ಸುತ್ತಲು ಭದ್ರವಾದ ಕೋಟೆಯು ಗೋಡೆಯಿತ್ತು. ಅದರ ಸುತ್ತಲಿದ್ದ ಬಿಂದಕದಲ್ಲಿ ಭದ್ರಾನದಿಯ ಕಾಲಿವೆಯಿಂದ ತಂದ ನೀರು ತುಂಬಿತುಳುಕುತ್ತಿತ್ತು.

ವೀರ ಪುಲಿಕೇಸಿಯು ಹತ್ತಿರದಲ್ಲೇ ಪಾಳೆಯ ಹಾಕಿದ್ದನ್ನು ಕೇಳಿ, ಕದಂಬ ಅರಸನು ಕಂಗೆಟ್ಟನು. ಚಾಳುಕ್ಯರ ಪ್ರಬಲವಾದ ಪಡೆಯನ್ನು ತಡೆಯುವಷ್ಟು ಸಾಮರ್ಥ್ಯವು ಅವನಲ್ಲಿದ್ದಿಲ್ಲ. ಪುಲಿಕೇಸಿಯ ಚಪಲತೆಯ ಮೂಲಕವಾಗಿ ಅವನ ಸಾಹಾಯ್ಯಕರಾರಿಗೂ ಬರಲಿಕ್ಕೆ ಅವಕಾಶದೊರೆಯಲಿಲ್ಲ. ಆದ್ದರಿಂದ ಅವನು ರಾಜಧಾನಿಯ ಸಂರಕ್ಷಣಕ್ಕೋಸ್ಕರ ತನ ದಂಡನ್ನಿಟ್ಟುಕೊಂಡು, ಉಳಿದ ದಂಡನ್ನು ಪುಲಿಕೇಸಿಗೆ ತೊಂದರೆಕೊಡುವ ಉದ್ದೇಶದಿಂದ ಹೊರಗೆ ಕಳಿಸಿಕೊಟ್ಟನು. ಆಗಿನ ಕಾಲದ ಪುರನಿವಾಸಿಗಳು ಈಗಿನವರಂತೆ ಹೇಡಿಗಳಾಗಿದ್ದಿಲ್ಲ. ಅವರು ತಮ್ಮ ಹೆಂಡರುಮಕ್ಕಳನ್ನು ಸುರಕ್ಷಿತವಾಗಿರಿಸಿ, ಹಗೆಗಳೊಡನೆ ಹೋರಾಡಲಿಕ್ಕೆ ಟೊಂಕಕಟ್ಟಿದರು. ಕದಂಬರ ಸೊಟ್ಟ ದಂಡು ಪರಾಕ್ರಮಶಾಲಿಯಾದ ಪುಲಿಕೇಸಿಯ ದಂಡನ್ನು ತಡೆಯಬಲ್ಲದೆ? ೨।೩ ಕಾಳಗಗಳಲ್ಲಿ ಅವನು ಅವನ್ನು ಧ್ವಸ್ತಮಾಡಿ ಬನವಾಸಿಯನ್ನು ಮುತ್ತಿದನು. ಮುಂಜೋಡಣೆಯು ಇಲ್ಲದುದರಿಂದ ಅನ್ನಸಾಮಗ್ರಿಯು ತೀರಿಹೋಯಿತು. ಕೂಳಿಲ್ಲದೆ ಜನರು ಬಕಬಕ ಬಾಯಿಬಿಡಲಾರಂಭಿಸಿದರು. ಹಗೆಗಳ ಹೊಡತದಿಂದ ಸಾಯುವವರಿಗಿಂತ ಹೊಟ್ಟೆಗಿಲ್ಲದೆ ಸಾಯುವವರ ಸಂಖ್ಯೆಯು ದಿನದಿನಕ್ಕೆ ಹೆಚ್ಚಲಾರಂಭಿಸಿತು. ಈ ನಿಷ್ಕಾರಣವಾದ ಸಾವನ್ನು ನೋಡಿ ಕನಿಕರಪಟ್ಟ ಕದಂಬ ಅರಸನು ಪುಲಿಕೇಸಿಗೆ ಶರಣುಹೋದನು. ದಯಾರ್ದ್ರಹೃದಯನಾದ ಪುಲಿಕೇಸಿಯು ಕದಂಬರಸನನ್ನು ಅಡವಿಸಿ ಅವನಿಂದ ಬನವಾಸಿನಾಡನ್ನು ಕಿತ್ತುಕೊಂಡು, ಕೊಲಿಸುಲಿಗೆಮಾಡಕೂಡದೆಂದು ತನ್ನ ದಂಡಾಳುಗಳಿಗೆ ಕಟ್ಟಪ್ಪಣೆಯನಿತ್ತು, ಬನವಾಸಿ ಪ್ರಾಂತಕ್ಕೆ ತನ್ನೆಚ್ಚಿನ ದಂಡನಾಯಕನನ್ನು ಮಂಡಲೇಶ್ವರನಾಗಿ ನಿಯಮಿಸಿ, ಬನವಾಸಿಯಲ್ಲಿ

ಕೆಲ ದಿವಸ ವಿಶ್ರಾಂತಿಯನ್ನು ತೆಗೆದುಕೊಂಡು, ಕದಂಬರಿಗೆ ನೆರವಾಗಲೆಳಸಿದ ಗಂಗರನ್ನು ದಂಡಿಸಲಿಕ್ಕೆ ದಂಡೆತ್ತಿ ಹೊರಟನು.

ಈ ಕಾಲಕ್ಕೆ ಪುಲಿಕೇಶಿಯು ಮಹಾ ಪರಾಕ್ರಮಶಾಲಿಯೆಂತಲೂ ಅವನನ್ನು ಎದುರಿಸುವದು ಕಷ್ಟತರವಾದ ಕೆಲಸವೆಂತಲೂ ಪ್ರತೀತಿಯು ದಕ್ಷಿಣ ಕರ್ನಾಟಕದಲ್ಲೆಲ್ಲ ಹಬ್ಬಿತ್ತು. ಆದಕಾರಣ ಗಂಗರಸನು ಅವನನ್ನು ಎದುರಿಸುವ ಆಲೋಚನೆಯನ್ನು ಬಿಟ್ಟು, ಅವನೊಡನೆ ಒಡಂಬಡಿಕೆಯನ್ನು ಮಾಡಿಕೊಳ್ಳಲಿಕ್ಕೆ ರಾಯಭಾರಿಯನ್ನು ಕಳಿಸಿದನು. ವಿವೇಕಿಯಾದ ಪುಲಿಕೇಶಿಯು ಅವನು ಕೊಡಲೊಪ್ಪಿದ ಪೇರಳವಾದ ಕಪ್ಪಗಾಣಿಕೆಯನ್ನು ಅವರಿಂದ ಸ್ವೀಕರಿಸಿ, ಗಂಗರಸನನ್ನು ತನ್ನ ಮಿತ್ರನಾಗ ಮಾಡಿಕೊಂಡನು. ಇದೇ ಸಮಯದಲ್ಲಿ ಬನವಾಸಿಯ ಈಶಾನ್ಯದಲ್ಲಿದ್ದ ಇತ್ವೊಳಲ ವಿಷಯವನ್ನು ಆಳುತ್ತಿದ್ದ ನಾಗಜಾತಿಯ ಅಳೂಪ ಅರಸನು ಶರಣುಬಂದುದರಿಂದ ದೊಡ್ಡಮನಸ್ಸಿನವನಾದ ಪುಲಿಕೇಶಿಯು ಆ ಅಳೂಪ ಅರಸನಿಗೆ ಅವನ ಪ್ರಾಂತದ ಮಂಡಲೇಶ್ವರತ್ವವನ್ನು ದಯಪಾಲಿಸಿ, ಅವನನ್ನು ತನ್ನ ಅನುಯಾಯಿಯನ್ನಾಗಿ ಮಾಡಿಕೊಂಡನು. ಸಹ್ಯಾದ್ರಿಯ ಮರೆಗಿದ್ದ ಎಲ್ಲ ಪ್ರದೇಶವು ತನ್ನ ಪ್ರಭುತ್ವಕ್ಕೆ ಒಳಗಾದ ಬಳಿಕ ಜಯಶಾಲಿಯಾದ ಪುಲಿಕೇಶಿಯು ಕೊಂಕಣವನ್ನು ಒಳನುಗ್ಗಿದನು. ತನ್ನ ತಂದೆಯು ಗೆದ್ದ ಇಲ್ಲಿಯ ಮೌರ್ಯ ಅರಸರೇ ಈ ಕಾಲಕ್ಕೆ ತಿರುಗಿಬಿದ್ದಿದ್ದರು. ಈ ಮೌರ್ಯರು ದಂಡಸಾಧ್ಯರಾದ್ದರಿಂದ ವೀರ ಪುಲಿಕೇಶಿಯು ಇವರನ್ನು ತಿರುತಿರುಗಿ ಸೋಲಿಸಿ, ಹಣಿದು ಹಣ್ಣುಮಾಡಬೇಕಾಯಿತು. ಕೊನೆಗೆ ಅವನು ಹಡಗುಗಳ ಸಹಾಯದಿಂದ ಅವರ ರಾಜಧಾನಿಯಾದ ಪುರಿಯನ್ನು ಮುತ್ತಿಹಿಡಿದುಕೊಂಡನು*. ಮೌರ್ಯರು ಸೋತು ಸತ್ತ್ವದಿಂದಲೋ,

* ಈ ಪುರಿಯು ಯಾವ ಊರೆಂಬುದು ಇನ್ನೂ ನಿಶ್ಚಯವಾಗಿ ಗೊತ್ತಾಗಿಲ್ಲ. ಠಾಣೆ, ಘಾರಪುರಿ (ಎಲಿಫಂಟಾ), ಕುಲಾಬಾ ಜಿಲ್ಹೆಯಲ್ಲಿದ್ದ ರಾಜಾಪುರಿ, ರತ್ನಾಗಿರಿ ಜಿಲ್ಹೆಯಲ್ಲಿದ್ದ ರಾಜಾಪುರ ಈ ೪ ರೊಳಗೆ ಒಂದು ಆಗಿರಬಹುದೆಂದು ಡಾ| ಫ್ಲೀಟರು ಅನುಮಾನಮಾಡುತ್ತಾರೆ.

ಅವರು ನಮ್ಮ ವೀರ ಪುಲಿಕೇಶಿಯನ್ನು ಬಹಳವಾಗಿ ಕಾಡಿದ್ದರಿಂದಲೋ, ಅವರಿಗೆ ಅವರ ರಾಜ್ಯವನ್ನು ತಿರುಗಿಕೊಡದೆ, ನಮ್ಮ ವೀರ ಶಿರೋಮಣಿಯು ತಾನು ಗೆದ್ದ ಕೊಂಕಣ ಪ್ರಾಂತಕ್ಕೆ ತನ್ನೊಬ್ಬ ದಂಡನಾಯಕನನ್ನು ಮಂಡಲೇಶ್ವರನಾಗಿ ನಿಯಮಿಸಿದನು.

ಧನತೃಷ್ಣೆಯು ಸಾಮಾನ್ಯ ಜನರನ್ನು ಬಲವತ್ತರವಾಗಿ ಬಾಧಿಸುವಂತೆ, ರಾಜ್ಯತೃಷ್ಣೆಯು ಅರಸರನ್ನು ಬಾಧಿಸುವುದು ಸ್ವಾಭಾವಿಕವಾದ ಸಂಗತಿಯೇ ಸರಿ. ಇಲ್ಲಿಯ ವರೆಗೆ ನಮ್ಮ ವೀರ ಪುಲಿಕೇಶಿಯು ತನ್ನ ಕಯ್ಬಿಟ್ಟು ಹೋಗುತ್ತಿದ್ದ ತನ್ನ ಪಿತ್ರಾರ್ಜಿತ ರಾಜ್ಯವನ್ನು ತನ್ನ ಸ್ವಾಧೀನದಲ್ಲಿಟ್ಟುಕೊಳ್ಳಲಿಕ್ಕೆ ಹೆಣಗಿದನು. ಈಗ ಪುಲಿಕೇಶಿಯು ಗೆದ್ದ ಪ್ರಾಂತಗಳನ್ನೆಲ್ಲ ಅವನ ತಂದೆಯಾದ ಕೀರ್ತಿವರ್ಮನು ಮೊದಲೇ ಗೆದ್ದಿದ್ದನೆಂದು ಹಿಂದೆ ಬರೆದುದು ವಾಚಕರ ನೆನಪಿನಲ್ಲಿರಬಹುದು. ಇನ್ನು ಮುಂದೆ ಪುಲಿಕೇಶಿಯು ಗೆದ್ದ ಪ್ರದೇಶಗಳೆಲ್ಲ ಅವನು ಮಾಡಿದ ಹೊಸ ಸಂಪಾದನೆಯೆನ್ನಲಿಕ್ಕೆ ಅಡ್ಡಿಯಿಲ್ಲ. ಮರಿಯು ಕಯ್ವಶವಾದ ಬಳಿಕ ನಮ್ಮ ವೀರ ಶಿರೋಮಣಿಯು **ಲಾಟರನ್ನೂ ಮಾಳವರನ್ನೂ ಗುರ್ಜರನ್ನೂ** ಸೋಲಿಸಿ ಅವರನ್ನು ತನ್ನ ಮಾಂಡಲಿಕರಾಗಿ ಮಾಡಿಕೊಂಡನೆಂದು ೬೩೪ನೆಯ ಇಸ್ವಿಯ ಅಯ್ಹೊಳೆಯ ಶಾಸನವು ಹೇಳುತ್ತದೆ. ಆದರೆ ಏನು ಕಾರಣ ಪುಲಿಕೇಶಿಯು ಈ ಪ್ರಾಂತಗಳ ಮೇಲೆ ದಂಡೆತ್ತಿ ಹೋದನೆಂಬುದು ನಿಶ್ಚಯವಾಗಿ ಗೊತ್ತಾಗುವುದಿಲ್ಲ. ತಿರುಗಿಬಿದ್ದ ಮಂಡಲೇಶ್ವರರೊಳಗೆ ಕೊಂಕಣದ ಮೌರ್ಯರು ನಮ್ಮ ವೀರ ಶಿರೋಮಣಿಯನ್ನು ಕಾಡಿದಷ್ಟು ಮತ್ತೆ ಯಾರೂ ಕಾಡಲಿಲ್ಲವಷ್ಟೇ. ಲಾಟ ಮಾಳವ ಗುರ್ಜರರು ಬಿಕ್ಕಟ್ಟಿ ಮೌರ್ಯರಿಗೆ ಆಶ್ರಯಕೊಟ್ಟು ಅವರ ಬೆನ್ನುಕಟ್ಟಿ ಚಾಳುಕ್ಯರೊಡನೆ ಕಾದಲನುವಾದ್ದರಿಂದ ಸಿಟ್ಟಿಗೆದ್ದ ನಮ್ಮ ಪರಾಕ್ರಮಶಾಲಿಯು ಅವರವರ ನಾಡುಗಳನ್ನೊಳನುಗ್ಗಿ ಸೋಲಿಸಿ, ಅವರನ್ನು ತನ್ನ ಮಾಂಡಲಿಕರಾಗಿ ಮಾಡಿಕೊಂಡಿರಬಹುದೆಂದು ಅನುಮಾನ ಮಾಡಲಿಕ್ಕೆ ಆಸ್ಪದದೊರೆಯುತ್ತದೆ. ಅದು ಹೇಗೇ ಇರಲಿ, ಲಾಟ ಮಾಳವ ಗುರ್ಜರರು ಸೋತು ಶರಣುಬಂದು ಕಪ್ಪುಗಾಣಿಕೆಯನ್ನೊಪ್ಪಿಸಿ, ಪುಲಿಕೇಶಿಯು ತಮ್ಮ ಅಧಿರಾಜನೆಂದು

ಬಿಟ್ಟುಕೊಂಡರೆಂದು ಬರೆಯಲಿಕ್ಕೆ ಅಡ್ಡಿಯಿಲ್ಲ. ರೇವಾ (ನರ್ಮದಾ) ನದಿಯವರೆಗಿನ ಎಲ್ಲ ಬಡಗಣ ನಾಡು ನಮ್ಮ ವೀರಶಿರೋಮಣಿಯ ಕಯ್ಸೇರಿತು.

ಹೀಗೆ ವಿಜಯ ದಂಡಯಾತ್ರೆಯು ಮುಗಿದ ಬಳಿಕ ನಮ್ಮ ಮಹಾವೀರನಾದ ಪುಲಿಕೇಶಿಗೆ ಪಟ್ಟಾಭಿಷೇಕವಾಯಿತೆಂಬ ಮಹತ್ವದ ಪ್ರಶ್ನದ ಊಹಾಪೋಹವನ್ನು ಡಾ॥ ಫ್ಲೀಟರು ಮಾಡಿರುತ್ತಾರೆ. ೬೩೪ ನೆಯ ಇಸ್ವಿಯಲ್ಲಿ ಐಹೊಳೆಯ ಶಾಸನವು ಕೊರಿಸಲ್ಪಟ್ಟಿತಷ್ಟೇ. ಅದರಲ್ಲಿ ಉತ್ತರಾಪಥದ ಸಾರ್ವಭೌಮನಾದ ಹರ್ಷವರ್ಧನನ್ನು ನಮ್ಮ ವೀರ ಪುಲಿಕೇಶಿಯು ಸೋಲಿಸಿದ ಸಂಗತಿಯೊಂದನ್ನು ಬಿಟ್ಟು ಉಳಿದ ಎಲ್ಲ ವಿಜಯ ದಂಡಯಾತ್ರೆಗಳು ಒಟ್ಟಾಗಿ ಹೇಳಲ್ಪಟ್ಟಿವೆ. ಆದ್ದರಿಂದ ಪಟ್ಟಾಭಿಷೇಕದ ಕಾಲದ ವಿಷಯವಾಗಿ ಇತಿಹಾಸ ಶೋಧಕರಲ್ಲಿ ಮತಭೇದವು ಕಂಡುಬರುತ್ತದೆ. ಲಾಟ ಮಾಳವ ಗುರ್ಜರನ್ನು ತನ್ನ ಮಾಂಡಲಿಕರಾಗಿ ಮಾಡಿಕೊಂಡು ಉಬ್ಬಿನಿಂದ ದೊಡ್ಡ ದಂಡೆತ್ತಿ ಬಂದ ಸಾರ್ವಭೌಮನಾದ ಹರ್ಷವರ್ಧನನ್ನು ಸೋಲಿಸಿ ಹಿಂದಟ್ಟಿ, ಬಾದಾವಿಗೆ ತಿರುಗಿಬಂದು ವೀರ ಪುಲಿಕೇಶಿಯು ಪಟ್ಟಾಭಿಷಕ್ತನಾದನೆಂದು ಡಾ॥ ಫ್ಲೀಟರು ಬರೆಯುತ್ತಾರೆ*. ಪಂಡಿತ ಡುಬ್ರುಲರು ಬರೆಯುವಂತೆ ಹರ್ಷವರ್ಧನನ ದಂಡಯಾತ್ರೆಯ ಪ್ರಸ್ತಾಪವೇ ಅಯ್ಹೊಳೆಯ ಶಾಸನದಲ್ಲಿ ಕಂಡುಬರುವದಿಲ್ಲ. ಆದಕಾರಣ ಡಾ॥ ಫ್ಲೀಟರ ಅಭಿಪ್ರಾಯವು ತಪ್ಪೆಂತಲೂ ಲಾಟ ಮಾಳವ ಗುರ್ಜರಾಥ ವಿಂಧ್ಯಪ್ರದೇಶ ಕಲಿಂಗ ಕೋಶಲ ಕಾಂಚಿ ಚೋಳ ಕೇರಳ ಪಾಂಡ್ಯ ಈ ನಾಡುಗಳ ದಂಡಯಾತ್ರೆಯನ್ನು ಮುಗಿಸಿಕೊಂಡು ರಾಜಧಾನಿಗೆ ತಿರುಗಿಬಂದು ನಮ್ಮ ವೀರಶಿರೋಮಣಿಯು ಪಟ್ಟಾಭಿಷಿಕ್ತನಾದನೆಂತಲೂ ೬೩೭ ಅಥವಾ ೬೩೮ ನೆಯ ಇಸ್ವಿಯಲ್ಲಿ ಅವನು ಹರ್ಷವರ್ಧನನನ್ನು ಸೋಲಿಸಿದನೆಂತಲೂ ಪಂಡಿತ ಡುಬ್ರುಲರು ಬರೆಯುತ್ತಾರೆ†.

* ಮುಂಬಯಿ ಇಲಾಖೆಯ ಗ್ಯಾಜಟಿಯರ ಸಂ. ೧, ಭಾಗ ೨, ಪು. ೩೫೦.

† ಜಿ ಜೆ. ಡುಬ್ರಿಲರ ದಕ್ಷಿಣಾಪಥದ ಪ್ರಾಚೀನೇತಿಹಾಸ, ಪು. ೧೧೩.

ಪುಲಿಕೇಸಿಯ ರಾಜ್ಯಾಭಿಷೇಕವು ಶಕೆ ೫೩೧ ಭಾದ್ರಪದ ಶುದ್ಧ ೧ (೬೦೯) ರಿಂದ ಶಕೆ ೫೩೩ ಪೌರ್ಣಿಮಾಂತ ಭಾದ್ರಪದ ಕೃಷ್ಣ ೩೦ ರೊಳಗೆ ಆಯಿತೆಂತಲೂ ಅದು ಬಹುಶಃ ೬೦೯ ನೆಯ ಇಸ್ವಿಯಲ್ಲೇ ಆಗಿರಬಹುದೆಂತಲೂ ಡಾ॥ ಫ್ಲೀಟರು ಬರೆಯುತ್ತಾರೆ*. ಲಾಟ ಪ್ರಾಂತದಿಂದ ಚೋಳ ಪಾಂಡ್ಯರಾಜ್ಯದ ವರೆಗೆ ಪುಲಿಕೇಸಿಯ ವಿಜಯದಂಡಯಾತ್ರೆಯು ೬೦೯ ರಲ್ಲೇ ಆಯಿತೆಂದು ಪಂಡಿತ ಹುಯಿಲರು ಬರೆಯುತ್ತಾರೆ. ಮಂಗಳೇಶನು ೬೦೮ ನೆಯ ಇಸ್ವಿಯ ಅಂತ್ಯದಲ್ಲಿ ಮಡಿದುದೇ ನಿಜವಾದರೆ, ವೀರ ಪುಲಿಕೇಸಿಯು ದಂಡೆತ್ತಿ ಬಂದ ಗೋವಿಂದನನ್ನು ಗೆಳೆಯನಾಗಿ ಮಾಡಿಕೊಂಡು, ಆಪ್ಯಾಯಿಕನನ್ನು ಹಿಂದಟ್ಟಿ ಕದಂಬ ಗಂಗ ಅಲುಪ ಮೌರ್ಯ ಲಾಟ ಮಾಳವ ಗುರ್ಜರನ್ನು ಗೆದ್ದು ಕಲಿಂಗ ಕೋಶಲ ನಾಡುಗಳನ್ನೊಳಸುಗ್ಗಿ, ಪಲ್ಲವ ಚೋಳ ಕೇರಳ ಪಾಂಡ್ಯರಾಜ್ಯಗಳ ಮೇಲೆ ವಿಜಯದಂಡಯಾತ್ರೆಯನ್ನು ಮಾಡಿಕೊಂಡು ತಿರುಗಿ ಬಾದಾವಿಗೆ ಬರಬೇಕಾದರೆ ಆ ಕಾಲಕ್ಕೆ ಎಷ್ಟು ವರ್ಷಗಳು ಬೇಕಾಗುವವೆಂಬುದನ್ನು ವಾಚಕರೇ ವಿಚಾರಮಾಡಬಹುದು. ೭ ನೆಯ ಶತಮಾನದ ಆರಂಭದಲ್ಲಿ ಮೋಟರಗಳಾಗಲಿ ಉಗಿಬಂಡಿಗಳಾಗಲಿ ವಿಮಾನಗಳಾಗಲಿ ಚೆಲೊ ಹಾದಿಗಳಾಗಲಿ ಇದ್ದಿಲ್ಲ. ಒಬ್ಬ ಮನುಷ್ಯನು ಅಷ್ಟು ವಿಸ್ತಾರವಾದ ಪ್ರದೇಶವನ್ನು ಸಂಚರಿಸಲಿಕ್ಕೆ ಕನಿಷ್ಠಪಕ್ಷಕ್ಕೆ ೪ ವರ್ಷಗಳಾದರೂ ಬೇಕಾಗುವವೆಂದು ನಿಶ್ಚಯವಾಗಿ ಹೇಳಬಹುದು. ಹೀಗಿದ್ದು ನಮ್ಮ ವೀರ ಪುಲಿಕೇಸಿಯು ದೊಡ್ಡ ದಂಡಿನೊಡನೆ ಹೊರಟು, ಈ ಎಲ್ಲ ಪ್ರದೇಶಗಳನ್ನು ಗೆದ್ದು ಒಂದು ಅಥವಾ ಒಂದೂಕಾಲು ವರ್ಷದಲ್ಲಿ ಬಾದಾವಿಗೆ ತಿರುಗಿಬಂದನೆಂಬುದು ಅಸಂಭವವೆಂದು ತೋರುತ್ತದೆ. ಇದು ನೀಲಿಕೆಟ್ಟ ಸುದ್ದಿಯೇ ಸರಿ. ಇದು ನಂಬುಗೆಗೆ ಅರ್ಹವಾದ ಮಾತಲ್ಲ. ಆದಕಾರಣ ಹಿಂದೆ ಸೂಚಿಸಿದಂತೆ ಕೀರ್ತಿವರ್ಮನು ಸತ್ತ ಕೂಡಲೆ ಚಿಕ್ಕ ಬಾಲಕನಾದ ಪುಲಿಕೇಸಿಯು ಪಟ್ಟಾಭಿಷಿಕ್ತನಾದ್ದರಿಂದ ಮಂಗಳೇಶನು ಸತ್ತ ಬಳಿಕ ಮತ್ತೆ ಪಟ್ಟಾಭಿಷೇಕ ಮಾಡಿಕೊಳ್ಳಬೇಕ್ಕೆ

* ಮುಂಬಯಿ ಇಲಾಖೆಯ ಗ್ಯಾಜಿಟಿಯರ ಸಂ. ೧, ಭಾ. ೨, ಪು. ೩೫೧.

ಕಾರಣವೇ ಇದ್ದಿಲ್ಲೆಂದು ನನ್ನ ಅಲ್ಪಮತಿಗೆ ಹೊಳೆಯುತ್ತದೆ. ಕವಿರನ್ನನು ಕೊಟ್ಟ ವಂಶಾವಳಿಯು ಈ ಅಭಿಪ್ರಾಯವನ್ನು ಬಲಪಡಿಸುತ್ತದೆ*.

---

* ಬಾದಾಮಿಯ ನೆರೆಯಲ್ಲಿ ಅದರ ಮೂಡಲಿಗೆ ಮಲಪ್ರಭಾನದಿಯ ದಂಡೆಯಲ್ಲಿ ಪಟ್ಟದಕಲ್ಲೆಂಬದೊಂದು ಹಾಳು ಹಳ್ಳಿಯು ಈಗ ಇರುತ್ತದಷ್ಟೇ. ಅಯ್ಹೊಳೆಯು ಪೂರ್ವಕಾಲದಲ್ಲಿ ಪ್ರಸಿದ್ಧವಾದ ಪಟ್ಟಣವಾಗಿತ್ತೆಂತಲೂ ಅಲ್ಲಿಯೊಂದು ಅಗ್ರಹಾರವೂ ವಿದ್ಯಾಪೀಠವೂ ಇದ್ದವೆಂತಲೂ ಅದಕ್ಕೆ ಆರ್ಯಪುರವೆಂಬ ಹೆಸರಿತ್ತೆಂತಲೂ ಹಿಂದೆ ಬರೆದಿರುತ್ತೇವೆ. ಆರ್ಯಪುರ ಬಾದಾಮಿ ಇವುಗಳ ನಡುವೆ ಹೊಳೆಯ ದಂಡೆಯಮೇಲೆ ಪಟ್ಟದಕಲ್ಲು ಇರುವುದರಿಂದ, ಚಿಕ್ಕ ಬಾಲಕನಾದ ನಮ್ಮ ವೀರ ಪುಲಿಕೇಶಿಯ ರಾಜ್ಯಾಭಿಷೇಕ ಸಮಾರಂಭವು ಅತಿವಿಜೃಂಭಣೆಯಿಂದ ಇಲ್ಲಿ ನಡೆದುದರಿಂದ ಈ ಸ್ಥಳಕ್ಕೆ ಪಟ್ಟದಕಲ್ಲೆಂಬ ಹೆಸರು ಬಂದಿದ್ದರೂ ಬಂದಿರಬಹುದು. ಈ ಊಹೆಗೆ ಶಾಬ್ದಪ್ರಮಾಣವು ದೊರೆಯುವ ವರೆಗೆ ಇದು ಗೃಹೀತಕೃತವಾಗಿ ಎಣಿಸಲ್ಪಡಬೇಕೆಂದು ನನ್ನ ಸವಿನಯ ಪ್ರಾರ್ಥನೆಯುಂಟು. ಏಕೆಂದರೆ ಈ ಊರಿಗೆ ಪಟ್ಟದಕಲ್ಲೆಂಬ ಹೆಸರು ಏಕೆ ಮತ್ತು ಎಂದು ಬಂತೆಂಬುದನ್ನು ಈವರೆಗೆ ಯಾರೂ ವಿಚಾರಿಸಿಲ್ಲ. ಇಲ್ಲಿ ಇದ್ದ ಯಾವುದೋ ಒಂದು ಪುಣ್ಯತಿಥಿಯ ಮೇಲೆ ಯಾವನೋ ಒಬ್ಬ ದೊಡ್ಡ ಅರಸನ ಪಟ್ಟಾಭಿಷೇಕವಾದ್ದರಿಂದಲೇ ಈ ಊರಿಗೆ ಪಟ್ಟದಕಲ್ಲೆಂಬ ಹೆಸರು ಬಿದ್ದಿರಬೇಕೆಂಬುದರಲ್ಲಿ ಸಂದೇಹವಿಲ್ಲ. ಶಾತವಾಹನ ಪಲ್ಲವ ಕದಂಬರ ರಾಜಧಾನಿಗಳು ದೂರವಾಗಿರುವುದರಿಂದ ಅವರ ಪಟ್ಟಾಭಿಷೇಕವು ಇಲ್ಲಿ ಆಗುವುದು ಎಷ್ಟುಮಾತ್ರವೂ ಸಂಭವವಿಲ್ಲ. ಪಶ್ಚಿಮ ಚಾಳುಕ್ಯರ ರಾಜಧಾನಿಯು ಮಾತ್ರ ಬಾದಾಮಿಯಾಗಿರುವುದರಿಂದ ಇವರೊಳಗಿನೊಬ್ಬ ತೇಜಸ್ವಿಯಾದ ಅರಸನ ಪಟ್ಟಾಭಿಷೇಕವು ಇಲ್ಲಿ ಆದ್ದರಿಂದಲೇ ಈ ಹೆಸರು ಈ ಊರಿಗೆ ಬಂದಿರಲಿಕ್ಕೆ ಬೇಕು. ಬಾದಾಮಿ ಚಾಳುಕ್ಯ ಮನೆತನದಲ್ಲಿ ಮಹಾ ಪರಾಕ್ರಮಶಾಲಿಯಾದ ಅರಸನು ೨ನೆಯ ಪುಲಿಕೇಶಿಯೇ ಆದ್ದರಿಂದ ಇವನ ರಾಜ್ಯಾಭಿಷೇಕವನ್ನು ಮಂಗಳೇಶನು ಇಲ್ಲಿ ಅತಿವೈಭವದಿಂದ ಮಾಡಿರಬಹುದೆಂಬುದೇ ನನ್ನ ಅನುಮಾನವು. ಸಬಲವಾದ ಶಾಬ್ದಪ್ರಮಾಣವು ದೊರೆಯುವ ವರೆಗೆ ಇದು ಐತಿಹಾಸಿಕ ಸಿದ್ಧಾಂತವಾಗಲಾರದು. ಸಂಭೋಗ ಶಿಲಾಭೋಗ ಎಂಬ ಗಾದೆಯಾದರೂ ಈ ಪಟ್ಟದಕಲ್ಲಿನಿಂದ ಹುಟ್ಟಿದ್ದರೂ ಹುಟ್ಟಿರಬಹುದು. ಹಿಂದೆ ಪು. ೧೯೧—೯೨ ಮತ್ತು ೨೧೩—೧೮ ನೋಡಿರಿ.

ದಿಗ್ವಿಜಯ ಮಾಡಿಕೊಂಡು ತಿರುಗಿಬಂದ ಬಳಿಕಾದರೂ ನಮ್ಮ ವೀರ ಶಿರೋಮಣಿಯಾದ ಪುಲಿಕೇಸಿಗೆ ವಿಶ್ರಾಂತಿಯೇ ಇದ್ದಿಲ್ಲ. ಎರಡನೆಯವರ ನಾಡುಗಳನ್ನು ಸೆಳೆದುಕೊಳ್ಳಲೆಳಸುವವರಿಗೆ ಬಿಡುವು ಸಿಕ್ಕುವ ಬಗೆಯೆಲ್ಲಿ? ನಮ್ಮ ಜಯಶಾಲಿಯು ಲಾಟ ಮಾಳವ ಗುರ್ಜರನ್ನು ಸೋಲಿಸಿ ಶರಣುಬರಮಾಡಿಕೊಂಡನೆಂದು ಮೇಲೆ ಬರೆದಿರುತ್ತೇವಷ್ಟೇ. ಈ ಅರಸರು ಸಂಯುಕ್ತಪ್ರಾಂತ ಫರಖಾಬಾದ ಜಿಲ್ಲೆಯಲ್ಲಿದ್ದ **ಕನೋಜ** ಪಟ್ಟಣದ ಸಾರ್ವಭೌಮನಾದ ಹರ್ಷವರ್ಧನನೆಂಬ ಬಲಾಢ್ಯ ಚಕ್ರವರ್ತಿಯ ಮಾಂಡಲಿಕರಾಗಿದ್ದರು. ಇಲಿಯನ್ನು ಬಡಿದರೆ ಗಣೇಶನಿಗೆ ಪೆಟ್ಟೆಂಬ ಗಾದೆಯು ವಾಚಕರಿಗೆ ಗೊತ್ತಿರಬಹುದು. ನಮ್ಮ ವೀರ ಪುಲಿಕೇಸಿಯು ತನ್ನ ಮಾಂಡಲಿಕರ ನಾಡುಗಳನ್ನೊಳನುಗ್ಗಿದನೆಂಬ ಸುದ್ದಿಯನ್ನು ಕೇಳಿ ಹರ್ಷವರ್ಧನನಿಗೆ ಕೆಂಡದಂತಹ ಸಿಟ್ಟುಬಂತು. ಅವನು ಕೂಡಲೆ ತನ್ನ ವಿಸ್ತಾರವಾದ ರಾಜ್ಯದ ಎಲ್ಲ ಭಾಗಗಳಿಂದ ದಂಡುತರಿಸಿ, ಪುಲಿಕೇಸಿಯನ್ನು ದಂಡಿಸುವದಕ್ಕೋಸ್ಕರ ಅಸಂಖ್ಯ ಸೇನೆಯೊಡನೆ ದಕ್ಷಿಣಾಪಥವನ್ನು ಒಳನುಗ್ಗುವ ಉದ್ದೇಶದಿಂದ ಜೋಡಣೆಯನ್ನು ಮಾಡತೊಡಗಿದ್ದಾನೆಂಬ ಸುದ್ದಿಯು ಬಾದಾಮಿಗೆ ಬಂತು. ನಮ್ಮ ವೀರಶಿಖಾಮಣಿಯು ಇಂತಹ ಅಬ್ಬರಕ್ಕೆ ಹೆದರುವನೇ? ಚಪಲನಾದ ಪುಲಿಕೇಸಿಯು ತುಸು ದಿವಸದಲ್ಲೇ ತನ್ನ ದಂಡನ್ನು ಸಜ್ಜುಗೊಳಿಸಿಕೊಂಡು, ತನ್ನ ತಮ್ಮನಾದ ವಿಷ್ಣುವರ್ಧನನ್ನು ರಾಜ್ಯಪಾಲಕನಾಗಿ ನಿಯಮಿಸಿ, ಹರ್ಷವರ್ಧನನು ಬರುವ ದಾರಿಯನ್ನು ಬೇಹಿನವರ ಮುಖಾಂತರವಾಗಿ ತಿಳಿದುಕೊಂಡು, ಉತ್ತರಕ್ಕೆ ಸಾಗಿ ಹೋಗಿ, ನರ್ಮದಾನದಿಯ ತೆಂಕಣ ದಂಡೆಯ ಮೇಲೆ ತನ್ನ ಪಾಳೆಯವನ್ನು ಬಿಟ್ಟು, ಕನೋಜದ ದಂಡನ್ನು ಎದುರುನೋಡುತ್ತ ಕುಳಿತನು. ಮನಸ್ಸಿನಲ್ಲಿ ಮಂಡಿಗೆಮಾಡುತ್ತಿದ್ದ ಹರ್ಷವರ್ಧನನು ತನ್ನ ಅಪಾರ ದಂಡಿನೊಡನೆ ಅಲ್ಲಿಗೆ ಬಂದು ನರ್ಮದಾನದಿಯ ಬಡಗಣ ದಂಡೆಯ ಮೇಲೆ ಪಾಳೆಯಹಾಕಿದನು. ನಾಲ್ಕಾರು ದಿವಸ ಎರಡೂ ದಂಡುಗಳು ಸ್ತಬ್ಧವಾಗಿದ್ದವು. ಕರ್ನಾಟಕರೂ ಕನೋಜಿಯರೂ ತಂತಮ್ಮ ಹಗೆಗಳ ಮಟ್ಟನ್ನು ತಿಳಿದುಕೊಳ್ಳಲಿಕ್ಕೆ ಹಲವು ಬಗೆಯ ಹಂಚಿಕೆಗಳನ್ನು

ದನಾಯಿದರು. ರಾಯಭಾರಿಗಳೂ ಗುಪ್ತಚಾರರೂ ಆ ದಂಡೆಯಿಂದ ಈ ದಂಡೆಯ ವರೆಗೂ, ಈ ದಂಡೆಯಿಂದ ಆ ದಂಡೆಯ ವರೆಗೂ ಹಲವು ಸಾರಿ ಎಡೆತಾಕಿದರು. ಕನ್ನಡಿಗರ ಕಲಿತನವೂ ಎದೆಗಾರಿಕೆಯೂ ಸ್ವಾಮಿಭಕ್ತಿಯೂ ಮದಾಂಧನಾದ ಹರ್ಷವರ್ಧನನಿಗೆ ಕಾಣಿಸದಂತಾದವು. ಪುಲಿಕೇಶಿಯು ಅನನ್ಯಗತಿಯನಾಗಿ ಶರಣುಬಂದು ತನ್ನ ಚರಣವನ್ನು ತನಗೆ ಅರ್ಪಣವಾಗಬೇಕೆಂದು ಅವನು ಹಟಹಿಡಿದನು. ನರ್ಮದಾನದಿಯು ತೆಂಕಲಿಗಿದ್ದ ಪ್ರದೇಶವೆಲ್ಲ ತನ್ನದೇ ಎಂದು ಹರ್ಷವರ್ಧನನು ಬಯಸಬೇಕೆಂದು ನಮ್ಮ ಕನ್ನಡ ಕಲಿಯು ಅವನಿಗೆ ಬಿಂಬಿತವಾಗಿ ಹೇಳಿ ಕಳುಹಿದನು. ಸಾಮದಾನ-ಭೇದೋಪಾಯಗಳು ನಿಷ್ಫಲವಾದ ಬಳಿಕ ದಂಡೋಪಾಯವೊಂದೇ ಉಳಿಯಲಿಲ್ಲವೇ? ಹರ್ಷವರ್ಧನನು ಹೊಳೆಯನ್ನು ದಾಟಲಿಕ್ಕೆ ತನ್ನ ದಂಡಿನವರಿಗೆ ಅಪ್ಪಣೆಯಿತ್ತನು. ಅವರು ದಾಟಬಹುದ ಸ್ಥಳಗಳಲ್ಲೆಲ್ಲ ಸುಶಿಕ್ಷಿತ ದಂಡಾಳುಗಳನ್ನೂ ನಂಬಿಗಸ್ತರಾದ ದಳವಾಯಿಗಳನ್ನೂ ಇಟ್ಟು, ನಮ್ಮ ಕನ್ನಡ ಕಲಿಯು ಕೆಲವರು ದಂಡಾಳುಗಳೊಡನೆ ಅವರಿಗೆ ನೆರವಾಗಲಿಕ್ಕೆ ಅತ್ತಿಂದಿತ್ತ ಇತ್ತಿಂದತ್ತ ಸಂಚರಿಸತೊಡಗಿದನು. ಕನೋಜದ ದಂಡು ಒಂದೆರಡು ಬೇರೆ ಬೇರೆಯಾದ ಸ್ಥಳಗಳಲ್ಲಿ ಹೊಳೆಯನ್ನು ದಾಟಲಿಕ್ಕೆ ಹೊರಟಿತು. ಎರಡು ಮೂರು ಎಡೆಗಳಲ್ಲಿ ಕನೋಜರ ಕಡವು ಹೆಚ್ಚಾದ್ದರಿಂದ ಕನ್ನಡಿಗರು ಹಿಂಜರಿದರು. ಕೂಡಲೆ ನಮ್ಮ ವೀರನು ಅಲ್ಲಲ್ಲಿಗೆ ಹೋಗಿ ಅಧಿಕ ಸಹಾಯಸೇನೆಯನ್ನು ಕಳುಹಿ, ಕನೋಜರನ್ನು ಹಿಂದಿರುಗಿಸಿ ಹಿಂದಕ್ಕಟ್ಟಿದನು. ನಮ್ಮ ಕನ್ನಡ ಬಂಟರು ಬಾಣಗಳ ಸುರಿಮಳೆಯಿಂದಲೂ ತುಪಾಕಿಗಳ ಗುರಿಹೊಡೆತದಿಂದಲೂ ಕತ್ತಿಯಿರಿಗಳ ಕಡುಕಡಿತದಿಂದಲೂ ಒಬ್ಬ ಹಗೆದಂಡಾಳನ್ನಾದರೂ ಈಚೆಯ ದಂಡೆಯ ಮೇಲೆ ಇರಗೊಡಲಿಲ್ಲ. ಹರ್ಷವರ್ಧನನೂ ಅವನ ದಳವಾಯಿಗಳೂ ಬಗೆಬಗೆಯಿಂದ ಹುರಿದುಂಬಿಸಿ ಕಳಿಸಿದ ಕನೋಜರು ಕನ್ನಡಿಗರ ಕತ್ತಿಗೆ ತುತ್ತಾದರು. ನದಿಯು ನೀರೆಲ್ಲ ರಕ್ತಮಯವಾಯಿತು. ಹೆಣಗಳ ರಾಶಿಗಳು ಪರ್ವತಪ್ರಾಯವಾಗಿ ಅಲ್ಲಲ್ಲಿ ಬಿದ್ದವು. ಕನ್ನಡಿಗರ ಈ ಅತ್ಯದ್ಭುತವಾದ ಗುರಿಹೊಡೆತದ ಬಗೆಯನ್ನು ಅವರ ಸೋಜಿಗವಾದ

ಹುರುಪನ್ನೂ ಅವರ ಅಚ್ಚರಗೊಳಿಸುವಂತಹ ವೀರಾವೇಶವನ್ನೂ ಕಂಡು ಕಂಗೆಟ್ಟು ಕನೋಜರು ಒದೆಹೊಡೆಕೊಂಡರು. ದಳವಾಯಿಗಳು ಎಷ್ಟು ಬಡಕೊಂಡರೂ ಹರ್ಷವರ್ಧನನು ಎಷ್ಟು ಅಂಗಲಾಚಿ ಬೇಡಿಕೊಂಡರೂ ಕನೋಜರು ಮುಂದೆ ಕಾಲಿಡಲಿಕ್ಕೆ ಒಡೆಗೊಳ್ಳಲಿಲ್ಲ. ಇದೇ ಸಂಧಿಯನ್ನು ಸಾಧಿಸಿ, ನಮ್ಮ ವೀರ ಕನ್ನಡ ಕಲಿಯು ಆಸರಿಕೆಬೇಸರಿಕೆಯಿಲ್ಲದೆ ಹರ್ಷವರ್ಧನನ ಪಾಳೆಯದ ಮೇಲೆ ಹೋಗಿ ಬಿದ್ದನು. ಆ ಕಾಲಕ್ಕೆ ಕನೋಜರಲ್ಲಿ ಆದ ಹಾಹಾಕಾರವನ್ನು ಬಣ್ಣಿಸಲಳವಲ್ಲ. ಹರ್ಷವರ್ಧನನೂ ಅವನ ದಳವಾಯಿಗಳೂ ಉಳಿದ ದಂಡೂ ಜೀವವುಳಿಸಿಕೊಂಡು ಪಾರಾಗಬೇಕಾದರೆ ಸಾಕುಬೇಕಾಯಿತು*. ಗೆಲವಿನಿಂದ ಉಬ್ಬಿದ ಕನ್ನಡಿಗರು ತಮಗೆ ಸಿಕ್ಕ ಬೆಲೆಯುಳ್ಳ ಅಪಾರವಾದ ಸುಲಿಗೆಯನ್ನು ಹೊತ್ತುಕೊಂಡು ಜಯಭೇರಿಯನ್ನು ಹೊಡಿಸುತ್ತ ಮರಳಿ ತಮ್ಮ ಪಾಳೆಯಕ್ಕೆ ಬಂದರು (೬೧೫?).

ಈ ನರ್ಮದಾ ಹೋಳಿಯ ಕಾಳಗವು ನಮ್ಮ ತಾಯ್ನಾಡಿನ ಇತಿಹಾಸದಲ್ಲಿ ಅತಿಮಹತ್ವದ ಕಾಳಗವೆಂದು ಹೇಳಲಿಕ್ಕೆ ಏನೂ ಅಡ್ಡಿಯಿಲ್ಲ. ಇಷ್ಟು ದಿವಸ ಉತ್ತರಾಪಥದವರು ದಾಕ್ಷಿಣಾತ್ಯರು ಹೇಡಿಗಳಾದ ಕಾಡುಜನರೆಂದು ಭಾವಿಸಿದ್ದರು. ಈ ನರ್ಮದಾ ಹೋಳಿಯ ಕಾಳಗದಿಂದ ಈ ತಪ್ಪುತಿಳಿವಳಿಕೆಯು ದೂರಾದ್ದಲ್ಲದೆ, ಕನ್ನಡಿಗರ ಶೌರ್ಯ-ವೀರ್ಯಗಳ ಕೀರ್ತಿಯು ಉತ್ತರಾಪಥದಲ್ಲಿ ಹಿಮಾಚಲದವರೆಗೆ ಹಬ್ಬಿತು. ಎರಡೂ ಪ್ರದೇಶಗಳ ನಡುವಿನ ಬಳಕೆಯು ಹೆಚ್ಚಿತು, ಮತ್ತು ವ್ಯಾಪಾರವು ಬಲಿಯಿತು. ಒಂದು ಪ್ರದೇಶದ ನಡೆನುಡಿಗಳೂ ಆಚಾರವಿಚಾರಗಳೂ ಮತ್ತೊಂದು ಪ್ರದೇಶದಲ್ಲಿ ಆದರಣೀಯವಾದವು. ಉತ್ತರದ ದೊಡ್ಡದೊಡ್ಡ ವಿದ್ವಾಂಸರು ದಕ್ಷಿಣಕ್ಕೆ ಬಂದು ಕರ್ನಾಟಕದಲ್ಲಿ ವಾಸಮಾಡತೊಡಗಿದರು; ದಾಕ್ಷಿಣಾತ್ಯರು ಹಲವು ಕಾರಣಗಳ

---

* ಅಪರಿಮಿತ ವಿಭೂತಿಸ್ಫುರಿತ ಸಾಮಂತ ಸೇನಾ ಮಕುಟ ಮಣಿಮಯೂಖಾಕ್ರಾಂತ ಪಾದಾರವಿಂದಃ । ಯುಧಿಪತಿತ ಗಜೇಂದ್ರಾನೀಕಬೀಭತ್ಸಭೂತೋ ಭಯವಿಗಲಿತಹರ್ಷೋ ಯೇನ ಚಾಕಾರಿ ಹರ್ಷಃ । ಇಂಡಿಯನ್ ಆಂಟಿಕ್ವೆರಿ ಸಂ. ೫, ಪು. ೭೩.

ಸುಖವಾಗಿ ಉತ್ತರಾಪಥಕ್ಕೆ ಹೋಗಲಾರಂಭಿಸಿದರು. ಈ ಕಾಳೆಗದಿಂದ ನರ್ಮದಾ ನದಿಯೇ ಚಾಳುಕ್ಯ ಸಾಮ್ರಾಜ್ಯದ ಉತ್ತರ ಮೇರೆಯಾಯಿತು.

ಕನೋಜದ ಸಾರ್ವಭೌಮನ ದಾಳಿಯನ್ನು ತಡೆಯಲಿಕ್ಕೆ ಬಂದ ನಮ್ಮ ವೀರ ಪುಲಿಕೇಶಿಯು ಈ ನರ್ಮದಾ ಹೊಳೆಯ ಗೆಲವಿನಿಂದ ಉಬ್ಬಿದನು. ಅವನ ಜಯತೃಷ್ಣೆಯು ಹೆಚ್ಚಿತು ಮತ್ತು ಅವನ ಹೆಬ್ಬಯಕೆಯು ಬೆಳೆಯಿತು. ಅವನು ಸುವಿಚಾರಿಯೂ ದೂರದರ್ಶಿಯೂ ಆದ್ದರಿಂದ ಹರ್ಷವರ್ಧನನನ್ನು ಬೆನ್ನಟ್ಟಿ ಕನೋಜದ ಮೇಲೆ ದಂಡೆತ್ತಿಹೋಗುವುದು ಕ್ಷೇಮಕರವಲ್ಲವೆಂದು ಕೂಡಲೆ ಕಂಡುಹಿಡಿದನು. ಬಂದ ದಾರಿಯಿಂದ ತಿರುಗಿ ಹೋಗಲಿಕ್ಕೆ ಅವನ ವೀರಶ್ರೀಯು ಒಡಂಬಡಲಿಲ್ಲ. ಆದ್ದರಿಂದ ಅವನು ಹರ್ಷವರ್ಧನನಿಗೆ ತಾನು ಹೇಳಿಕಳುಹಿದಂತೆ ನರ್ಮದಾ ನದಿಯ ತೆಂಕಲಿಗಿದ್ದ ಎಲ್ಲ ಪ್ರದೇಶವನ್ನು ಗೆಲ್ಲಬೇಕೆಂದು ನಿಶ್ಚಯಿಸಿ, ನರ್ಮದಾ ದಂಡೆಗುಂಟ ಪೂರ್ವಾಭಿಮುಖವಾಗಿ ಹೊರಟನು. ನರ್ಮದಾ ನದಿಯ ಉಗಮದ ಹತ್ತಿರ ವಿಂಧ್ಯ ಪರ್ವತದ ಆಗ್ನೇಯಕ್ಕಿದ್ದ ಪ್ರದೇಶಕ್ಕೆ ಆ ಕಾಲದಲ್ಲಿ **ಕೋಶಲ ರಾಜ್ಯ**ವೆಂಬ ಹೆಸರಿತ್ತು. ಈಗ ಮಧ್ಯಪ್ರಾಂತದಲ್ಲಿದ್ದ ರಾಯಪುರ ಸಂಬಳಪುರ ಕಟಕ ಈ ಪಟ್ಟಣಗಳ ಸುತ್ತಲಿನ ಪ್ರದೇಶವೇ ಆ ಕಾಲದ ಕೋಶಲ ರಾಜ್ಯವಾಗಿತ್ತು. ಅಲ್ಲಿಯೊಬ್ಬ ಸಣ್ಣ ಅರಸನು ಆಳುತ್ತಿದ್ದನು. ಅವನು ಹರ್ಷವರ್ಧನನ ಮಾಂಡಲಿಕನಾಗಿದ್ದರೂ ಆಗಿರಬಹುದು. ನಮ್ಮ ವೀರ ಶಿರೋಮಣಿಯು ಈ ಕೋಶಲ ರಾಜ್ಯವನ್ನು ಒಳಸುಗ್ಗಿದನು. ಹರ್ಷವರ್ಧನ ಸಾರ್ವಭೌಮನನ್ನು ಸೋಲಿಸಿ ಓಡಿಸಿದ ನಮ್ಮ ಪ್ರೌಢ ಪ್ರತಾಪಿಯ ದಂಡನ್ನು ಎದುರಿಸುವಷ್ಟು ಎದೆಯು ಈ ಸಣ್ಣ ಅರಸನಿಗೆ ಎಲ್ಲಿಂದ ಬರಬೇಕು? ಅವನು ಕೂಡಲೆ ಶರಣುಬಂದು ಕಪ್ಪಗಾಣಿಕೆಯನ್ನು ಕೊಟ್ಟು, ಮಾಂಡಲಿಕನಾಗಿರಲಿಕ್ಕೆ ಒಪ್ಪಿಕೊಂಡನು. ನಮ್ಮ ವೀರಶಿಖಾಮಣಿಯು ಕೆಲದಿನ ಕೋಶಲರಾಜನ ಆತಿಥ್ಯವನ್ನು ಕೈಕೊಂಡು ಆಗ್ನೇಯಾಭಿಮುಖನಾಗಿ ಕಲಿಂಗ ರಾಜ್ಯದ ಮೇಲೆ ದಂಡೆತ್ತಿಹೋದನು (೬೧೭?).

ಕಲಿಂಗವು ಬಹುಪುರಾತನಕಾಲದಿಂದ ಹೆಸರುವಾಸಿಯಾದ ರಾಜ್ಯವೇ ಸರಿ. ಮಹಾಭಾರತ ಕೂರ್ಮಪುರಾಣ ರಘುವಂಶಗಳಲ್ಲಿ ಅದರ ಹೆಸರು ಬಂದಿದೆ. ವೈತರ್ಣಿ ನದಿಯು ಅದರ ಬಡಗಣ ಮೇರೆಯಾಗಿಯೂ ಅಮರಕಂಟಕ ಪರ್ವತಾವಳಿಯು ಅದರ ಪಡುವಣ ಮೇರೆಯಾಗಿಯೂ ಮಹೇಂದ್ರಗಿರಿಯು ಅದರ ತೆಂಕಣ ಮೇರೆಯಾಗಿಯೂ ಮೂಡಣಗಡಲು ಅದರ ಪೂರ್ವ ಮೇರೆಯಾಗಿಯೂ ಇದ್ದುವು. ಅಶೋಕ ಮಹಾರಾಜನು ಗೆದ್ದಾಗ ಕಲಿಂಗ ದೇಶದ ವಿಸ್ತಾರವು ಎಷ್ಟಿತ್ತೆಂಬುದು ಗೊತ್ತಾಗುವುದಿಲ್ಲ. ಈ ದೇಶದ ಮೇರೆಗಳು ಆಗಿಂದಾಗ ಬದಲಾಗುತ್ತಿದ್ದವೆಂದು ತೋರುತ್ತದೆ. ಈಗ ಮದ್ರಾಸ ಇಲಾಖೆಗೆ ಸೇರಿದ ಗುಂಟೂರು, ಕೃಷ್ಣಾ, ಗೋದಾವರಿ, ವಿಶಾಖಾಪಟ್ಟಮ್, ಗಂಜಮ ಈ ೫ ಜಿಲ್ಲೆಗಳನ್ನೊಳಗೊಂಡ ಕೃಷ್ಣಾ ಮಹಾನದಿಗಳ ನಡುವೆ ಪೂರ್ವ ಸಮುದ್ರದ ದಂಡೆಗುಂಟ ಹಬ್ಬಿರುವ ಪ್ರದೇಶಕ್ಕೆ ಕಲಿಂಗದೇಶವೆನ್ನುತ್ತಿದ್ದರೆಂದು ಈಗಿನ ಜನರು ಹೇಳುತ್ತಾರೆ. ಪುಲಿಕೇಶಿಯ ಕಾಲದಲ್ಲಿ ಈ ಕಲಿಂಗ ದೇಶದ ವಿಸ್ತಾರವು ಎಷ್ಟಿತ್ತೆಂಬುದನ್ನು ತಿಳಿದುಕೊಳ್ಳಲಿಕ್ಕೆ ನಮಗೆ ಸಾಧನವಿಲ್ಲ. ನಮ್ಮ ವೀರಶಿಖಾಮಣಿಯು ಕಲಿಂಗ ದೇಶದ ಹತ್ತಿರ ಬರುವದಕ್ಕಿಂತ ಮೊದಲೇ ಅವನ ಕೀರ್ತಿಯು ಆ ನಾಡಿನಲ್ಲೆಲ್ಲ ಹಬ್ಬಿತ್ತು. ಆದ್ದರಿಂದ ಅವನನ್ನು ಎದುರಿಸುವದು ವ್ಯರ್ಥಶ್ರಮವೆಂದು ಮನಗಂಡ ಕಲಿಂಗೇಶ್ವರನು ಅವನಿಗೆ ಶರಣುಬಂದು ಕಪ್ಪುಗಾಣಿಕೆಯನ್ನೊಪ್ಪಿಸಿ, ಅವನ ಸಾಮಂತನಾಗಲಿಕ್ಕೆ ಒಡಂಬಟ್ಟನು. ಈ ಮೇರೆಗೆ ತನ್ನ ವಿಜಯ ದಂಡಯಾತ್ರೆಯನ್ನು ಮುಗಿಸಿಕೊಂಡು ನಮ್ಮ ವೀರ ಶಿಖಾಮಣಿಯು ತನ್ನ ರಾಜಧಾನಿಗೆ ವೈಭವದಿಂದ ತಿರುಗಿ ಬಂದನು (೬೩೦ ?).

ಕೋಸಲ ಕಲಿಂಗ ರಾಜರು ನಮ್ಮ ಕನ್ನಡ ಕಲಿಯ ಅಧಿರಾಜತ್ವವನ್ನೊಡಂಬಟ್ಟು ಅವನ ಮಾಂಡಲಿಕರಾದರಷ್ಟೇ. ಈ ಗೆಲವಿನಿಂದ ಸಾಮಂತರ ಸಂಖ್ಯೆಯು ಹೆಚ್ಚಿತು. ಸಾಮಂತರ ನಾಡಿಗಿಂತ ಸಾರ್ವಭೌಮರ ನಾಡು ಹೆಚ್ಚು ದೊಡ್ಡದಿರಬೇಕಲ್ಲವೇ? ನಮ್ಮ ವೀರ ಪುಲಿಕೇಶಿಯು ರಾಜಧಾನಿಯಲ್ಲಿ ನಾಲ್ಕಾರು ತಿಂಗಳ ಇರುವಷ್ಟರಲ್ಲೇ ಅವನ

ಮನಸ್ಸಿನಲ್ಲಿ ತನ್ನ ರಾಜ್ಯವನ್ನು ಬೆಳಸುವ ವಿಚಾರವು ಹುಟ್ಟಿತು. ಏಕೆಂದರೆ ಅವನಿಗೆ ವಿಷಯೋಪಭೋಗದಲ್ಲಿಯೂ ಆಟನೋಟಗಳಲ್ಲಿಯೂ ರಾಜ್ಯದ ಕಟ್ಟುಪಾಡುಗಳನ್ನು ಬಿಗಿಯಾಗಿ ನಡೆಸುವುದರಲ್ಲಿಯೂ ಹೆಚ್ಚು ಆಸಕ್ತಿಯು ಇರದೆ, ರಣಾಂಗಣದಲ್ಲಿ ತನ್ನ ಪರಾಕ್ರಮ ಕೌಶಲ್ಯಗಳನ್ನು ತೋರಿಸುವುದು ಅವನಿಗೆ ಹೆಚ್ಚು ಸೇರುತ್ತಿತ್ತು. ಆದ್ದರಿಂದ ಅವನು ತನ್ನ ದಂಡನ್ನು ಸಜ್ಜುಮಾಡಿಕೊಂಡು, ತನ್ನ ತಮ್ಮನಾದ ಕುಬ್ಜ ವಿಷ್ಣುವರ್ಧನನನ್ನು ರಾಜಧಾನಿಯಲ್ಲಿರಿಸಿ, ಆಗ್ನೇಯಾಭಿಮುಖನಾಗಿ ಕಲಿಂಗದೇಶದ ತೆಂಕಣನಾಡನ್ನು ಗೆಲ್ಲಬೇಕೆಂದು ಹೊರಟನು (೬೨೨?).

ನಮ್ಮ ವೀರಗಲಿಯು ದಂಡೆತ್ತಿಹೋದ ನಾಡು ಯಾವ ಅರಸನ ಅಥವಾ ಪಿರಿಯರಸನ ಆಳಿಕೆಗೆ ಒಳಗಾಗಿತ್ತೆಂಬುದು ಗೊತ್ತಾಗುವುದಿಲ್ಲ. ಬಹುಶಃ ಕಂಚಿ ಪಲ್ಲವರೇ ಅದರ ಒಡೆಯರಾಗಿದ್ದರೆಂದು ಅನುಮಾನ ಮಾಡಬಹುದು. ಈ ನಾಡಿನೊಳಗೆ ಆ ಕಾಲಕ್ಕೆ **ಪಿಷ್ಟಪುರ**ವೆಂಬದೊಂದು ಭದ್ರವಾದ ಕೋಟೆಯಿತ್ತು. ಮದ್ರಾಸ ಇಲಾಖೆ ಗೋದಾವರಿ ಜಿಲ್ಲೆಯಲ್ಲಿ ಕೋಕೊನಾಡಸಿಂದ ೧೨ ಮೈಲಿನ ಮೇಲಿದ್ದ ಪಿಟ್ಯಾಪುರಮ್ ಎಂಬ ಹಳ್ಳಿಯೇ ಈ ಪ್ರಾಚೀನ ಕಾಲದ ಪಿಷ್ಟಪುರವಾಗಿತ್ತೆಂದು ನಿಶ್ಚಯವಾಗಿ ಹೇಳಬಹುದು. ಈ ಕೋಟೆಯು ಭದ್ರವಾಗಿದ್ದುದರಿಂದಲೂ ಅದರ ಕಾವಲುಗಾರರು ಶೂರರೂ ಸ್ವಾಮಿಭಕ್ತರೂ ಆದ್ದರಿಂದಲೂ ಆ ಕಾಲದಲ್ಲಿ ತೋಪು ಸಿಡಿಮದ್ದು ಮುಂತಾದ ಭಯಂಕರ ಯುದ್ಧಸಾಧನಗಳು ಇಲ್ಲದುದರಿಂದಲೂ ನಮ್ಮ ಕನ್ನಡಕರಿಗೆ ಆ ಕೋಟೆಯನ್ನು ಹಿಡಿದುಕೊಳ್ಳಲಿಕ್ಕೆ ೬-೭ ತಿಂಗಳುಗಳು ತಗಲಿದವು. ಅದು ಕಯ್ವಶವಾದ ಬಳಿಕ ಗೋದಾವರಿಯಿಂದ ವಿಸ್ನಾರದ ವರೆಗೆ ಸಮುದ್ರದ ದಂಡೆಗುಂಟ ಹಬ್ಬಿದ ಎಲ್ಲ ಪ್ರದೇಶವನ್ನು ನಮ್ಮ ವೀರ ಪುಲಿಕೇಶಿಯು ಲೀಲಾಮಾತ್ರದಿಂದ ಗೆದ್ದುಕೊಂಡು, ಈ ಹೊಸ ಪ್ರಾಂತಕ್ಕೆ ತನ್ನ ತಮ್ಮನಾದ **ಕುಬ್ಜ ವಿಷ್ಣುವರ್ಧನ**ನನ್ನು ಮಂಡಲೇಶ್ವರನಾಗಿ ನಿಯಮಿಸಿ, ತಾನು ಬಾದಾಮಿಗೆ ತಿರುಗಿಹೋದನು (೬೨೪?). ಮುಂದೆ ಈ ವಿಷ್ಣುವರ್ಧನನು ಗೋದಾವರಿ ಜಿಲ್ಲೆಯಲ್ಲಿದ್ದ

ವೆಂಗಿ ಎಂಬ ಊರನ್ನು ತನ್ನ ನೆಲೆವೀಡಾಗಿ ಮಾಡಿಕೊಂಡು, ಸ್ವತಂತ್ರನಾಗಿ ಆಳತೊಡಗಿ ಪೂರ್ವ ಚಾಳುಕ್ಯರ ಅರಸುಮನೆತನಕ್ಕೆ ಮೂಲಪುರುಷನಾದನು. ನಮ್ಮ ವೀರ ಪುಲಿಕೇಸಿಯ ಆಳಿಕೆಯಲ್ಲೇ ಅಂದರೆ ೬೩೨ ಕ್ಕಿಂತ ಮೊದಲೇ ವಿಷ್ಣುವರ್ಧನನು ಸ್ವತಂತ್ರನಾಗಿದ್ದನೆಂತಲೂ ಈ ಪೂರ್ವ ಚಾಳುಕ್ಯ ಮನೆತನವು ಮುಂದೆ ೫೦೦ ವರ್ಷಗಳ ವರೆಗೆ ಘನತೆಯಿಂದ ಆಳಿತೆಂತಲೂ ಡಾ|| ಫ್ಲೀಟರು ಬರೆಯುತ್ತಾರೆ*. ಆ ಕಾಲಕ್ಕೆ ರಾಜಧಾನಿಯಾಗಿ ೫೦೦ ವರ್ಷ ಮೆರೆದ ವೆಂಗಿಯು ಈಗ ಎಳೂರು ತಾಲೂಕಿನಲ್ಲಿ **ವೆಗಿ** ಅಥವಾ **ಪೆದ್ದವೆಗಿ** ಎಂಬ ಹೆಸರಿನ ಒಂದು ಹಾಳುಹಳ್ಳಿಯಾಗಿರುತ್ತದೆ. ಕಾಲಮಹಿಮೆಯು ಅತಿವಿಚಿತ್ರವಾದುದು!!!

ನಮ್ಮ ಕನ್ನಡಕಲಿಯು ರಣಾಂಗಣಕ್ಕೆ ಮೆಚ್ಚಿದವನಾದ್ದರಿಂದ ಸುಮ್ಮನೆ ರಾಜಧಾನಿಯಲ್ಲಿ ಕೂಡ್ರುವದಾಗಲಿ ರಾಜ್ಯದ ಅಂತರ್ವ್ಯವಸ್ಥೆಯ ಕಟ್ಟುನಿಟ್ಟುಗಳನ್ನು ಸೂಕ್ಷ್ಮರೀತಿಯಿಂದ ವಿಚಾರಿಸುವದಾಗಲಿ ಅವನಿಗೆ ಸೇರುತ್ತಿದ್ದಿಲ್ಲ. ಅವನು ತನ್ನ ದಂಡಿನೊಡನೆ ಸಂಚರಿಸುವದರಲ್ಲಿ ಸುಖಪಟ್ಟಷ್ಟು ಬೇರೆ ಯಾವ ಕೆಲಸದಲ್ಲಿಯೂ ಸುಖಪಡುತ್ತಿದ್ದಿಲ್ಲ. ಆದ್ದರಿಂದ ಅವನು ಬಹಳ ದಿವಸ ಬಾದಾಮಿಯಲ್ಲಿರದೆ ತನ್ನ ರಾಜ್ಯದಲ್ಲೇ ಸಂಚಾರಮಾಡುವ ಉದ್ದೇಶದಿಂದ ಉತ್ತರಾಭಿಮುಖನಾಗಿ ತನ್ನ ದಂಡಿನೊಡನೆ ಹೊರಟನು (೬೨೯?).

ನರ್ಮದಾ ನದಿಯ ಕಾಳಗದಲ್ಲಿ ಹರ್ಷವರ್ಧನ ಸಾರ್ವಭೌಮನನ್ನು ಸೋಲಿಸಿ ಕೋಶಲ ಕಲಿಂಗ ದೇಶಗಳ ಒಡೆಯನಾದಂದಿನಿಂದ ನಮ್ಮ ವೀರಗನ್ನಡಿಗನ ಕೀರ್ತಿಯು ಭರತಖಂಡದಲ್ಲಿಷ್ಟೇ ಅಲ್ಲ, ಅದರ ಆಚೆಗಿರುವ ದೇಶಗಳಲ್ಲಿ ಕೂಡ ಹಬ್ಬಿತು. ಅವನು ಈಗ ೩ ಮಹಾರಾಷ್ಟ್ರಗಳ† ಸಾರ್ವಭೌಮನೆಂದು ಹೊಗಳಿಸಿಕೊಳ್ಳುತ್ತಿದ್ದನು.

---

* ಮುಂಬಯಿ ಇಲಾಖೆಯ ಗ್ಯಾಜೆಟಿಯರ ಸಂ ೧. ಭಾಗ ೨, ಪು. ೩೫೨.

† ೧ ಕರ್ನಾಟಕ (ಕರು=ಮಹಾ+ನಾಡು=ರಾಷ್ಟ್ರ+ಅಕ)=ಮಹಾರಾಷ್ಟ್ರ. ೨ ಗುಜರಾತ ೩ ಕೋಶಲ ಕಲಿಂಗರಾಜ್ಯ. ಇವೇ ಮೂರು ಮಹಾರಾಷ್ಟ್ರಗಳಾಗಿದ್ದವೆಂದು ತೋರುತ್ತದೆ. ಕೊಂಕಣವು ಕರ್ನಾಟಕದಲ್ಲಿ ಸೇರಿತ್ತು. ಈಗಿನ ಮರಾಟನಾಡು ಕರ್ನಾಟಕ ಗುಜರಾತಗಳಲ್ಲಿ ಅಂತರ್ಧಾನವಾಗಿತ್ತೆಂದು ತೋರುತ್ತದೆ. ಅದಕ್ಕೆ ಸ್ವತಂತ್ರವಾದ ಅಸ್ತಿತ್ವವೇ ಇದ್ದಿಲ್ಲ.

ಸತ್ಯಾಶ್ರಯ ಶ್ರೀ ಪೃಥ್ವೀವಲ್ಲಭ, ಪರಮಭಟ್ಟಾರಕ, ಪರಮ ಮಹೇಶ್ವರ, ಮಹಾರಾಜಾಧಿರಾಜ ಎಂಬುವೇ ಅವನ ಬಿರುದಾವಳಿಗಳಾಗಿದ್ದುವು. ಅವನನ್ನು ಎದುರಿಸಲೆಳಸುವಷ್ಟು ಎದೆಗಾರರಾದ ಅರಸರು ಆ ಕಾಲಕ್ಕೆ ಯಾರೂ ಇದ್ದಿಲ್ಲೆಂದರೆ ಅತಿಶಯೋಕ್ತಿಯಾಗಲಾರದು.

ಇದೇ ಸುಮಾರಿನಲ್ಲಿ ಏಸಿಯಾ ಯುರೋಪ ಖಂಡಗಳ ನಡುವೆ ಒಂದು ಭಯಂಕರವಾದ ತುಮುಲಯುದ್ಧವು ನಡೆದಿತ್ತು. ಯುರೋಪ ಖಂಡದೊಳಗಿನ ಇಟಲಿಯೆಂಬ ದೇಶದವರಾದ ರೋಮಾಯರು ಅತಿ ಪ್ರಬಲರಾಗಿ ಪೂರ್ವಕಾಲದಿಂದ ಐಶ್ವರ್ಯಾಧಿಕಾರಗಳಿಂದ ಮೆರೆಯುತ್ತಿದ್ದ ಇರಾಣದ ಸಾಮ್ರಾಜ್ಯವನ್ನೊಳಸುಗ್ಗಿ, ಅಲ್ಲಿಯ ಚಕ್ರವರ್ತಿಯ ದಂಡನ್ನು ಎಡೆಬಿಡದೆ ಸೋಲಿಸ ತೊಡಗಿದ್ದರು. ಆ ಕಾಲಕ್ಕೆ **೨ ನೆಯ ಖುಶ್ರು** ಎಂಬವನು ಇರಾಣದ ಸಾರ್ವಭೌಮನಾಗಿದ್ದನು. ರೋಮಾಯರ ಬದ್ದಲಗಟ್ಟವನ್ನು ತಪ್ಪಿಸಿಕೊಳ್ಳಲಿಕ್ಕೆ ಉಪಾಯಾಂತರವನ್ನು ಕಾಣದ ಖುಶ್ರುವಿಗೆ ಪ್ರೌಢ ಪ್ರತಾಪಿಯಾದ ಪರಚಕ್ರವರ್ತಿಯ ನೆರವು ಅತ್ಯವಶ್ಯವಾಗಿ ಬೇಕಾಯಿತು. ಇಂತಹ ಬಲಾಢ್ಯನಾದ ಸಾರ್ವಭೌಮನು ಯಾರಿರಬಹುದೆಂದು ಅವನು ಪರಿಶ್ರಮಬಟ್ಟು ಪರಿಶೋಧಿಸಲು, ನಮ್ಮ ಕನ್ನಡ ಕಲಿಯೇ ತನ್ನನ್ನು ತನಗೆ ಬಂದ ಅನಿವಾರ್ಯವಾದ ಕುತ್ತಿನಿಂದ ಪಾರುಮಾಡುವಷ್ಟು ಸಾಮರ್ಥ್ಯವುಳ್ಳವನೆಂದು ಅವನ ಮನವರಿಕೆಯಾಯಿತು. ಕೂಡಲೆ ಅವನು ಅಪರೂಪವಾದ ಮತ್ತು ಅಮೌಲ್ಯವಾದ ಕಯ್ಗಾಣಿಕೆಯ ಒಡವೆಗಳನ್ನೂ ತನಗೆ ಪರಕೀಯರಿಂದ ಪ್ರಾಪ್ತವಾದ ಪೀಡೆಯನ್ನು ಪರಿಹರಿಸಿಕೊಳ್ಳಲಿಕ್ಕೆ ದೊಡ್ಡ ದಂಡಿನೊಡನೆ ಬಂದು ನೆರವಾಗಬೇಕೆಂದು ಅಂಗಲಾಚಿ ಬೇಡಿಕೊಂಡ ಥೈಲಿ (ರಾಜರ ಪತ್ರ) ಯನ್ನೂ ಕೊಟ್ಟು ತನ್ನೊಬ್ಬ ರಾಯಭಾರಿಯನ್ನು ಸಾಕಷ್ಟು ಪರಿವಾರದೊಡನೆ ನಮ್ಮ ವೀರ ಪುಲಕೇಸಿಯು ಇದ್ದೆಡೆಗೆ ಕಳುಹಿದನು. ಅವನು ಆ ಕಾಲಕ್ಕೆ ಇರಾಣದ ರಾಜಧಾನಿಯಾದ ಇಸ್ಪಿಹಾನವನ್ನು ಬಿಟ್ಟು, ಇರಾಣದ ಮಳಲಿನಲ್ಲಿ ತೊಳಲಿ ಬಳಲಿ, ಹಿಮಾಲಯದ ತಪ್ಪಲದಲ್ಲಿದ್ದ ಕಾಡುಜನರ ಕಡುಕಾಟದಿಂದ ನೊಂದು ಬೆಂದು, ನಮ್ಮ ಕನ್ನಡ ಕಲಿಯನ್ನು ಅರಿಸುತ್ತ ಕರ್ನಾಟಕಕ್ಕೆ ಬಂದನು. ಈ ರಾಯಭಾರಿಯು

ನಮ್ಮ ವೀರ ಪುಲಿಕೇಶಿಯನ್ನು ಎಂದು ಎಲ್ಲಿ ಕಂಡು ತಾನು ತಂದ ಬೆಲೆಯುಳ್ಳ ಕಾಣಿಕೆಯನ್ನು ಅರ್ಪಿಸಿದನೆಂಬುದನ್ನಾಗಲಿ ನಮ್ಮ ಕನ್ನಡ ಕಲಿಯು ಅವನಿಗೆ ಏನು ಉತ್ತರವನ್ನು ಕೊಟ್ಟನೆಂಬುದನ್ನಾಗಲಿ ತಿಳಿದುಕೊಳ್ಳುವ ನಿಶ್ಚಯವಾದ ಸಾಧನಗಳಾವವೂ ನಮಗೆ ಇನ್ನೂ ದೊರೆತಿಲ್ಲ. ಆದರೆ ನಮ್ಮ ವೀರಶಿಖಾಮಣಿಯು ಒಂದು ದೊಡ್ಡ ಒಡ್ಡೋಲಗದಲ್ಲಿ ಇರಾಣದ ರಾಯಭಾರಿಗೆ ಕಾಣಿಸಿಕೊಂಡು ಅವನು ತಂದ ಬಲು ಬೆಲೆ ಬಾಳುವ ಕಾಣಿಕೆಯನ್ನೂ ಪತ್ರವನ್ನೂ ಸ್ವೀಕರಿಸಿದನೆಂದು ಊಹಿಸಿ ಬರೆಯಲಿಕ್ಕೆ ಅಡ್ಡಿಯಿಲ್ಲ. ಏಕೆಂದರೆ ಚಿರಸ್ಮರಣೀಯವಾದ ಮತ್ತು ನಮ್ಮ ಕನ್ನಡಿಗರ ಅಭಿಮಾನವನ್ನು ಅಪರಂಪರವಾಗಿ ಹೆಚ್ಚಿಸುವ ಈ ದೊಡ್ಡ ಒಡ್ಡೋಲಗದ ಅಪರೂಪವಾದ ನೋಟವನ್ನು ಅಜಂತೆಯ ಗುಡ್ಡದಲ್ಲಿ* ಕೊರೆದ ಒಂದು ಗವಿಯಲ್ಲಿ ಗೋಡೆಯ ಮೇಲೆ ಕಟಿದ ಭವ್ಯವಾದ ಚಿತ್ರದಲ್ಲಿ ಈಗಲೂ ನೋಡಬಹುದು.



೨ ನೆಯ ಪುಲಿಕೇಶಿಯು ಇರಾಣದ ರಾಯಭಾರಿಗೆ ಕಾಣಿಸಿಕೊಂಡ ಒಡ್ಡೋಲಗವು.

* ಈ ಗವಿಗಳು ನಿಜಾಮನ ರಾಜ್ಯದೊಳಗೆ ವರ್‍ಹಾಡ ಖಾನದೇಶಗಳ ಮೇರೆಯಲ್ಲಿ ಅವರಂಗಾಬಾದಿನ ವಾಯವ್ಯಕ್ಕೆ ೫೫ ಮೈಲಿನ ಮೇಲಿರುತ್ತವೆ.

ಈ ಚಿತ್ರದಲ್ಲಿದ್ದ ನಮ್ಮ ವೀರಶಿಖಾಮಣಿಯ ಮೋರೆಯನ್ನು ಯಾವನೋ ಒಬ್ಬ ದುಷ್ಟನು ಕೆಡಿಸಿ ವಿದ್ರೂಪವಾಗಿ ಮಾಡಿರುತ್ತಾನೆಂದು ಬರೆಯಲಿಕ್ಕೆ ಅತ್ಯಂತವಾಗಿ ವಿಷಾದಿಸುತ್ತೇನೆ. ದುಷ್ಟಜನರು ಮಾಡುತ್ತಬಂದ ಕೆಡಕನ್ನು ಸಹಿಸಿ, ಅವರು ಮುಂದೆ ಅಂತಹ ಕೇಡನ್ನು ಮಾಡದಂತೆ ಏರ್ಪಾಡುಮಾಡುವುದೇ ಪುರಾತನಕಾಲದಿಂದ ಶಿಷ್ಟರ ಕರ್ತವ್ಯವು ಆಗಿರುವುದಿಲ್ಲವೇ? ನಮ್ಮ ವೀರಶಿರೋಮಣಿಯು ಖುಶ್ರುವಿನ ಪತ್ರಕ್ಕೆ ಏನು ಉತ್ತರ ಬರೆಯಿಸಿದನೆಂಬುದನ್ನು ತಿಳಿದುಕೊಳ್ಳಲಿಕ್ಕೆ ಮಾರ್ಗವಿಲ್ಲ. ವೀರ ಪುಲಿಕೇಸಿಯು ಇರಾಣದ ರಾಯಭಾರಿಯನ್ನು ಉಚಿತ ಪ್ರಕಾರದಿಂದ ಸತ್ಕರಿಸಿ, ಸಾಮೋಪಚಾರದ ಉತ್ತರವನ್ನು ಬರೆಯಿಸಿ ತನ್ನ ರಾಜವೈಭವಕ್ಕೆ ಸರಿಯಾದ ಕಾಣಿಕೆಯನಿತ್ತು ಕಳುಹಿಕೊಟ್ಟನೆಂಬುದಕ್ಕೆ ಸಂದೇಹವಿಲ್ಲ (೬೨೫–೨೬). ನಮ್ಮ ಕನ್ನಡ ದಂಡಾಳುಗಳು ಯುರೋಪ ಖಂಡದ ರೋಮಾಯರೊಡನೆ ಕಾದಿ ಅವರನ್ನು ಮುರಿಬಡಿದು ಜಯಭೇರಿಯನ್ನು ಹೊಡಿಸುತ್ತ ಕರ್ನಾಟಕಕ್ಕೆ ತಿರುಗಿಬರುವ ಸುಯೋಗವು ಏನೋ ಕಾರಣದಿಂದ ತಪ್ಪಿತು ಎಂದು ಈಗ ನಾವು ಹಳಹಳಿಸಬೇಕಾಗಿದೆ.

ನಮ್ಮ ವೀರ ಪುಲಿಕೇಸಿಯು ಅಜಂತೆಯ ಸೆರೆಯಲ್ಲಿ ಸಂಚರಿಸುತ್ತಿರುವಾಗ ಅವನ ತಮ್ಮನೂ ವೆಂಗಿಯ ಮಂಡಲೇಶ್ವರನೂ ಆದ ಕುಬ್ಜ ವಿಷ್ಣುವರ್ಧನನು ರಾಜಾಜ್ಞೆಯನ್ನು ಲೆಕ್ಕಿಸದೆ ಸ್ವತಂತ್ರನಾಗಲಿಕ್ಕೆ ಹವಣಿಸುತ್ತಾನೆಂತಲೂ ಕಂಚಿಯ ಪಲ್ಲವರು ಕೊಬ್ಬೇರಿದವರಾಗಿ ಚಾಳುಕ್ಯ ರಾಜ್ಯವನ್ನೊಳಸುಗ್ಗಲಿಕ್ಕೆ ಜೋಡಣೆಯನ್ನು ಮಾಡತೊಡಗಿದ್ದಾರೆಂತಲೂ ಸುದ್ದಿಯು ಬಂತು. ಆದ್ದರಿಂದ ನಮ್ಮ ಕನ್ನಡ ಕಲಿಯು ತನ್ನ ಸಂಚಾರವನ್ನು ಮುಗಿಸಿಕೊಂಡು ಲಗುಬಗೆಯಿಂದ ತನ್ನ ರಾಜಧಾನಿಗೆ ತಿರುಗಿಬಂದನು (೬೨೮?). ಮುಂದೆ ಅಣ್ಣ ತಮ್ಮಂದಿರ ನಡುವೆ ಪತ್ರವ್ಯವಹಾರವು ಸುರುವಾಯಿತು. ಸ್ವಾರರೂ ಆಪ್ತೇಷ್ಟರೂ ವೆಂಗಿಯಿಂದ ಬಾದಾಮಿಯ ವರೆಗೂ ಬಾದಾಮಿಯಿಂದ ವೆಂಗಿಯ ವರೆಗೂ ನಾಲ್ಕೆಂಟು ಸಾರಿ ಎಡೆತಾಕಿದರು. ಕೊನೆಗೆ ಭ್ರಾತೃವಾತ್ಸಲ್ಯವೂ

ರಾಜಧರ್ಮವೂ ಗೆದ್ದವು. ವಿಷ್ಣುವರ್ಧನನು ವಿಧೇಯನಾಗಿ ನಡೆಯು ಲಿಕ್ಕೆ ಒಡಂಬಟ್ಟನು (೬೨೯?).

ಕಿರೀಟಧಾರಿಯಾದ ತಲೆಯು ಯಾವಾಗಲೂ ಅಸ್ವಸ್ಥವಾಗಿರು ತ್ತದೆಂಬ ಪಾಶ್ಚಿಮಾತ್ಯರ ನಾಣ್ಣುಡಿಯು ಸಟಿಯಾದ್ದಲ್ಲ. ಅದೇ ಅನು ಭವವನ್ನು ನಮ್ಮ ಪೂರ್ವಜರು "ಎಷ್ಟು ವ್ಯಾಪ, ಅಷ್ಟು ತಾಪ" ಎಂಬ ಗಾದೆಯಿಂದ ವ್ಯಕ್ತಪಡಿಸಿದ್ದಾರೆ. ಸಾಧುಸಂತರ ವ್ಯಾಪವು ಅತಿ ಸ್ವಲ್ಪವಾಗಿರುವಂತೆ ಅರಸರ ಮತ್ತು ಹಿರಿಯರಸರ ವ್ಯಾಪವು ಅತಿ ವಿಸ್ತೃತವಾಗಿರುತ್ತದೆ. ಆದ್ದರಿಂದ ಒಂದಿಲ್ಲೊಂದು ದುಗುಡು ಸಾರ್ವ ಭೌಮರ ತಲೆಯನ್ನು ಸದಾ ನೋಯಿಸುತ್ತಿರುತ್ತದೆ. ತನಗೆ ದಿಗ್ವಿ ಜಯವು ದೊರೆತು ತನ್ನ ತಮ್ಮನು ವಿಧೇಯನಾಗಿರಲಿಕ್ಕೆ ಒಪಂಬಟ್ಟ ನೆಂದು ಪುಲಿಕೇಸಿಯು ಹಿಗ್ಗುವಷ್ಟರಲ್ಲಿ ವಿಷ್ಟಪುರವು ಹೋದಂದಿನಿಂದ ಹೊಂಚುಹಾಕಿಕೊಂಡಿದ್ದ ಕಂಚಿಯ ಪಲ್ಲವರು ದೊಡ್ಡ ದಂಡಿನೊಡನೆ ಬಂದು ತನ್ನ ರಾಜ್ಯವನ್ನು ಒಳಸುಗ್ಗಿರುತ್ತಾರೆಂಬ ಸುದ್ದಿಯು ಬಂತು (೬೩೦?). ಚಪಲನಾದ ಪುಲಿಕೇಸಿಯು ಹೊತ್ತುಗಳೆಯದೆ ಯುದ್ಧ ಸಾಮುಗ್ರಿಗಳನ್ನೆಲ್ಲ ಒದಗಿಸಿಕೊಂಡು ಕಾಳೆಗದಲ್ಲಿ ಸುರಿತ ತನ್ನ ದಂಡನ್ನು ಸಜ್ಜುಮಾಡಿಕೊಂಡು ಪಲ್ಲವರ ರಾಜ್ಯದ ಮೇಲೆ ದಂಡೆತ್ತಿಹೋದನು. ಚಾಳುಕ್ಯ ಪಲ್ಲವ ನಾಡುಗಳ ಮೇರೆಯ ಮೇಲೆ ಎರಡೂ ದಂಡುಗಳು ಕೂಡಿದವು. ಸುಸಂಧಿಯನ್ನು ನೋಡಿ ವೀರ ಪುಲಿಕೇಸಿಯು ಪಲ್ಲವರ ದಂಡಿನ ಮೇಲೆ ಬಿದ್ದನು. ಭಯಂಕರವಾದ ಕಾಳೆಗವು ನಡೆಯಿತು. ಎರಡೂ ದಂಡುಗಳು ಹುರುಪಿನಿಂದ ಕಾದಿದವು. ನಮ್ಮ ಕನ್ನಡ ದಂಡಾಳುಗಳ ಶೌರ್ಯ ಧೈರ್ಯ ಸಾಹಸಗಳಿಗೆ ಮೆಚ್ಚಿದ ಜಯ ಲಕ್ಷ್ಮಿಯು ನಮ್ಮ ಕನ್ನಡ ಕಲಿಯ ಕೊರಳೊಳಗೆ ಮಾಲೆಯನ್ನು ಹಾಕಿದಳು. ಕನ್ನಡಿಗರ ಕಡುಕಡಿತವನ್ನೂ ಗುರಿಹೊಡೆತವನ್ನೂ ತಾಳ ಲಾರದ ತಮಿಳರು ಕಾಲಿಗೆ ಬುದ್ಧಿಹೇಳತೊಡಗಿದರು. ವೀರ ಪುಲಿ ಕೇಸಿಯು ಪಲಾಯನಮಾಡುವ ಪಲ್ಲವರನ್ನು ಬೆನ್ನಟ್ಟಿ, ಸಂಧಿ ಸಿಕ್ಕಲ್ಲಿ ಅವರನ್ನು ಮುರಿಬಡಿದು, ಕಂಚಿ ರಾಜಧಾನಿಯ ನೆರೆಯಲ್ಲಿದ್ದ **ಪುಳ್ಳಲೂ ರೆಂಬ** ಹಳ್ಳಿಯ ವರೆಗೆ ಹೋದನು. ಇಲ್ಲಿ ಮತ್ತೊಂದು ಕಾಳಗವಾಯಿ

ತೆಂದು ತೋರುತ್ತದೆ. ಈ ಕಾಳಗದ ಪರಿಣಾಮದ ವಿಷಯವಾಗಿ ಭಿನ್ನಾಭಿಪ್ರಾಯಗಳಿರುತ್ತವೆ. ಏಕೆಂದರೆ, ೨ ನೆಯ ಪುಲಿಕೇಶಿಯು ಕಂಚಿ ಪಟ್ಟಣವನ್ನು ಮುತ್ತಿ ಅಥವಾ ಅದನ್ನು ಸುಟ್ಟು ಪಲ್ಲವ ಅರಸನಾದ ೧ ನೆಯ ಮಹೇಂದ್ರವರ್ಮನನ್ನು ಶರಣು ಬರಮಾಡಿಕೊಂಡನೆಂದು ಅಯ್ಹೊಳೆಯ ಶಾಸನದಿಂದ ಧ್ವನಿತವಾಗುತ್ತದೆ. ಆದರೆ ಮಹೇಂದ್ರವರ್ಮನು ಪುಳ್ಳಲೂರಿನಲ್ಲಿ ಪುಲಿಕೇಶಿಯನ್ನು ಸೋಲಿಸಿ ಓಡಿಸಿದೆನೆಂದು ತನ್ನ ಶಾಸನಗಳಲ್ಲಿ ಹೇಳಿಕೊಂಡಿರುತ್ತಾನೆ. ಈ ವಿರುದ್ಧವಾದ ಮಾತುಗಳನ್ನು ಹೇಗೆ ಕೂಡಿಸಿಕೊಳ್ಳಬೇಕೆಂಬುದೊಂದು ಬಿಕ್ಕಟ್ಟಿನ ಪ್ರಶ್ನವು ಇಲ್ಲಿ ಹುಟ್ಟುತ್ತದೆ. ಡಾ॥ ಫ್ಲೀಟರು ಇದನ್ನು ಬಿಡಿಸುವ ಗೋಜಿಗೆ ಹೋಗದೆ, ೨ ನೆಯ ಪುಲಿಕೇಶಿಯು ಕಂಚಿಯವರೆಗೆ ಹೋಗಿದ್ದನೆಂಬುದನ್ನು ಪಲ್ಲವರು ಕೂಡ ಒಡಂಬಡುತ್ತಾರೆಂದು ಹೇಳಿ, ಮುಂದಕ್ಕೆ ಸಾಗುತ್ತಾರೆ*. ಆದರೆ ಅಯ್ಹೊಳೆಯ ಶಾಸನವೇ ನಿಜವಾದ ಸಂಗತಿಯನ್ನು ತಿಳಿಸುತ್ತದೆಂದು ನನ್ನ ಅಭಿಮತಿಗೆ ತೋರುತ್ತದೆ. ಪೊಳ್ಳಲೂರಿನಲ್ಲಿ ಮಹೇಂದ್ರವರ್ಮನು ಪುಲಿಕೇಶಿಯ ದಂಡಿನ ಒಂದು ಸಣ್ಣ ಭಾಗವನ್ನು ಸೋಲಿಸಿದ್ದರೂ ಸೋಲಿಸಿರಬಹುದು. ಆ ಸುದ್ದಿಯನ್ನು ಕೇಳಿ ನಮ್ಮ ಕನ್ನಡಗಲಿಯು ಉಳಿದ ದಂಡಿನೊಡನೆ ಹೋಗಿ ಮಹೇಂದ್ರವರ್ಮನನ್ನು ಮುರಿದು ಅವನನ್ನು ಕಂಚಿ ಕೋಟೆಯೊಳಗೆ ಹೊಗಿಸಿ, ಆ ಕೋಟೆಯನ್ನು ಮುತ್ತಿ ಅವನನ್ನು ಶರಣು ಬರಮಾಡಿಕೊಂಡಿರಬಹುದೆಂದು ನನ್ನ ಅಭಿಪ್ರಾಯವು. ಈ ಅಭಿಪ್ರಾಯವನ್ನು ಕೆಳಗೆ ಕೊಟ್ಟ ಕಾರಣಗಳು ಎಷ್ಟು ಮಟ್ಟಿಗೆ ಪುಷ್ಟೀಕರಿಸುತ್ತವೆಂಬುದನ್ನು ಓದುವವರೇ ವಿಚಾರ ಮಾಡಬಹುದು.

೧. ಅಯ್ಹೊಳೆಯ ಶಾಸನವು ಚಾಳುಕ್ಯ ಚಕ್ರವರ್ತಿಗಳು ತಮ್ಮ ಬಡಾಯಿ ಹೇಳಿಕೊಳ್ಳಲಿಕ್ಕೆ ಕೊರೆಯಿಸಿದ ಶಾಸನವಲ್ಲ. ಇದನ್ನು ಪರಧರ್ಮೀಯನಾದ ರವಿಕೀರ್ತಿಯೆಂಬ ಒಬ್ಬ ಜೈನ ವಿದ್ವಾಂಸನು ಕೊರೆ

* ಮುಂಬಯಿ ಇಲಾಖೆಯ ಗ್ಯಾಜಟಿಯರ ಸಂ. ೧, ಭಾಗ ೨, ಪು. ೩೫೦.

ಯಿಸಿರುತ್ತಾನೆ. ಈ ರವಿಕೀರ್ತಿಯು ಸುಪ್ರಸಿದ್ಧ ಸಂಸ್ಕೃತ ಕವಿಗಳಾದ ಕಾಲಿದಾಸ ಭಾರವಿಯರಿಗೆ ತಾನು ಸಮಾನನೆಂದು ಹೊಗಳಿಕೊಂಡಿದ್ದಾನೆ. ಇಂತಹ ಪಂಡಿತನು ತಪ್ಪು ಸಂಗತಿಗಳನ್ನು ಬರೆಯಲಾರನು.

೨. ಈ ಶಾಸನದಲ್ಲಿ ಬರೆದ ಉಳಿದ ಎಲ್ಲ ಸಂಗತಿಗಳು ನಿಜವಾಗಿದ್ದು ಈ ಕಂಚಿಯ ವಿಜಯಯಾತ್ರೆಯೊಂದು ಸುಳ್ಳಾಗಿರುವ ಸಂಭವವು ಇಲ್ಲ.

೩. ಮಹೇಂದ್ರವರ್ಮನು ಪುಳ್ಳಲೂರಿನಲ್ಲಿ ೨ ನೆಯ ಪುಲಿಕೇಸಿಯನ್ನು ಪೂರ್ಣವಾಗಿ ಸೋಲಿಸಿ ಹಿಂದಕ್ಕೆ ಅಟ್ಟಿದ್ದೇ ನಿಜವಾಗಿದ್ದರೆ, ನಮ್ಮ ಕನ್ನಡ ಕಲಿಯು ಕಂಚಿಯಿಂದ ಮುಂದಕ್ಕೆ ಹೋಗಿ ಚೇರ ಚೋಳ ಪಾಂಡ್ಯ ಅರಸರನ್ನು ಶರಣು ಬರಮಾಡಿಕೊಳ್ಳುವುದು ಅತ್ಯಸಂಭವನೀಯವಾಗಿತ್ತೆಂದು ಧಾರಾಳವಾಗಿ ಹೇಳಬಹುದು.

೪. ಮೈಸೂರು ಸಂಸ್ಥಾನದಲ್ಲಿ **ಭಾರಂಗಿ** ಎಂಬ ಊರಿನಲ್ಲಿ ೧೧೧೮ ನೆಯ ಇಸ್ವಿಯ ೧ ನೆಯ ಸೋಮೇಶ್ವರನ ಕಾಲದ ಒಂದು ಶಾಸನವಿರುತ್ತದಷ್ಟೇ. ಅದರ ಬರಹದಿಂದ ೨ ನೆಯ ಪುಲಿಕೇಸಿಯು ಕಂಚಿಪಟ್ಟಣವನ್ನು ಸುಟ್ಟಿದ್ದರೆ, ಸೇಡುತೀರಿಸಿಕೊಳ್ಳುವುದಕ್ಕೋಸ್ಕರ ಆ ಕಾಲದ ಕಂಚಿಯ ಒಡೆಯನಾದ ಚೋಳರಸನು ಚಾಳುಕ್ಯರ ರಾಜಧಾನಿಯಾದ ಕಲ್ಯಾಣವನ್ನು ಸುಟ್ಟನೆಂಬರ್ಥವು ಧ್ವನಿತವಾಗುತ್ತದೆ*. ಇದು ನಿಜವಾಗಿದ್ದರೆ, ನಮ್ಮ ವೀರ ಪುಲಿಕೇಸಿಯು ಕಂಚಿಯನ್ನು ಹಿಡಿದುಕೊಂಡು ಅದನ್ನು ಸುಟ್ಟನೆಂದು ಹೇಳಬಹುದು.

ಈ ನಾಲ್ಕು ಕಾರಣಗಳನ್ನು ಆಧಾರವಾಗಿಟ್ಟುಕೊಂಡು, ಮಹೇಂದ್ರವರ್ಮನ ಬಡಾಯಿಯನ್ನು ಬದಿಗೊತ್ತಿ, ಪುಳ್ಳಲೂರಿನ ಕಾಳಗವಾದ ಬಳಿಕ ನಮ್ಮ ವೀರಶಿಖಾಮಣಿಯು ಕಂಚಿಪಟ್ಟಣವನ್ನು ಮುತ್ತಿ ಅದರ

---

* ಮುಂಬಯಿ ಇಲಾಖೆಯ ಗ್ಯಾಜಟಿಯರ ಸಂ. ೧, ಭಾಗ ೨, ಪುಟ ೩೫೦, ಟಿಪ್ಪಣಿ ೮.

ಅಲ್ಪಭಾಗವನ್ನು ಮುಟ್ಟಿ ಮಹೇಂದ್ರವರ್ಮನನ್ನು ಹಣ್ಣುಮಾಡಿ ಶರಣುಬರಮಾಡಿಕೊಂಡು, ಅವನ ರಾಜ್ಯದ ಕೆಲಭಾಗವನ್ನು ಅಂದರೆ ಪಲ್ಲವರ ಕೆಲನಾಡನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡು, ಕಾವೇರಿಯನ್ನು ದಾಟಿ, ಚೋಳ ರಾಜ್ಯವನ್ನು ಸೇರಿದನು (೬೩೩?) ಎಂದು ಬರೆಯಲಿಕ್ಕೆ ನಾನು ಎದೆಗೊಳ್ಳುತ್ತೇನೆ.



ಕಂಚಿಯ ಪಲ್ಲವ ಅರಸನಾದ ೧ ನೆಯ ಮಹೇಂದ್ರವರ್ಮನೂ
ಅವನ ಇಬ್ಬರು ರಾಣಿಯರೂ.

ನಮ್ಮ ವೀರ ಪುಲಕೇಸಿಯನ್ನು ಎದುರಿಸುವಷ್ಟು ಸಾಮರ್ಥ್ಯವು ದಕ್ಷಿಣದೊಳಗಿನ ಯಾವ ಅರಸರಿಗೂ ಇದ್ದಿಲ್ಲ. ಪಲ್ಲವ ರಾಜ್ಯಕ್ಕೆ

ಸೇರಿದ ಪಿಷ್ಟಪುರ ಪ್ರಾಂತವನ್ನು ನಮ್ಮ ವೀರ ಪುಲಿಕೇಸಿಯು ಕಿತ್ತುಕೊಂಡುದರಿಂದ ಹೊಟ್ಟೆಯುರಿದ ಮಹೇಂದ್ರವರ್ಮನು ಸಿಟ್ಟಿನ ಕಯ್ಯಲ್ಲಿ ಬುದ್ಧಿಯನ್ನು ಕೊಟ್ಟು ಅವನನ್ನು ಕೆಣಕಿ ಕೆಟ್ಟನು. ಚೋಳರಸನಿಗೆ ಅಂತಹದೇನು ಕಾರಣವಿಲ್ಲದುದರಿಂದ ಅವನು ಕೂಡಲೆ ಶರಣು ಬಂದು ಸಾಮಂತನಾಗಲಿಕ್ಕೆ ಒಡಂಬಟ್ಟು, ಕಪ್ಪುಕಾಣಿಕೆಯನ್ನೊಪ್ಪಿಸಿದನು. ಕೇರಳ ಪಾಂಡ್ಯರಸರಾದರೂ ನಮ್ಮ ವೀರ ಪುಲಿಕೇಸಿಯ ಅಧಿರಾಜತ್ವವನ್ನು ವಿರೋಧಿಸುವವರಲ್ಲೆಂದು ಕಂಡುಬಂದುದರಿಂದ ನಮ್ಮ ವೀರ ಶಿರೋಮಣಿಯು ಆ ಎರಡು ನಾಡುಗಳಿಗೆ ರಾಯಭಾರಿಗಳನ್ನು ಕಳುಹಿ ಒಡಂಬಡಿಕೆಯನ್ನು ಮಾಡಿ, ಅವರಿಂದ ಅಧಿರಾಜನೆಂದು ಹೊಗಳಿಸಿಕೊಂಡು, ಮರಳಿ ತನ್ನ ರಾಜಧಾನಿಗೆ ತಿರುಗಿ ಬಂದನು (೬೩೪). ಮುಂದೆ ತುಸು ದಿವಸದಲ್ಲೇ ಅಯ್ಹೊಳೆಯ ಶಾಸನವು ಕೊರೆಯಿಸಲ್ಪಟ್ಟಿತು.

ಇಬ್ಬರ ನ್ಯಾಯ ಒಬ್ಬರಿಗಾಯ ಎಂಬ ಗಾದೆಯ ಅನುಭವವು ನಮ್ಮೆಲ್ಲರಿಗೂ ಆಗಿಂದಾಗ ಬರುತ್ತದಷ್ಟೇ. ಪುಲಿಕೇಸಿ ಮಹೇಂದ್ರವರ್ಮರು ತಂತಮ್ಮ ಹೆಚ್ಚಳದ ಸಲುವಾಗಿ ಜೀವದ ಎಚ್ಚರಿಲ್ಲದೆ ಕಾದುತ್ತಿರುವಾಗ ಕಾರ್ಯಸಾಧಕನಾದ ಕುಬ್ಜ ವಿಷ್ಣುವರ್ಧನನು ಪಲ್ಲವರ ಕೆಲ ನಾಡನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡು, ತಾನು ಸ್ವತಂತ್ರನಾದ ಅರಸನೆಂದು ಸಾರಿ ರಾಜಾಧಿರಾಜನೆಂಬ ಬಿರುದನ್ನು ಧರಿಸಿದನು (೬೩೨?). ನಮ್ಮ ವೀರಶಿರೋಮಣಿಯು ತನ್ನ ವಿಜಯದಂಡಯಾತ್ರೆಯನ್ನು ಮುಗಿಸಿಕೊಂಡು ತಿರುಗಿ ಬಂದ ಬಳಿಕ ಈ ಸುದ್ದಿಯು ಅವನ ಕಿವಿಗೆ ಬಿತ್ತು. ಕೂಡಲೆ ಅವನು ತನ್ನೊಬ್ಬ ಆಪ್ತಮಂತ್ರಿಯನ್ನು ತನ್ನ ತಮ್ಮನ ಬಳಿಗೆ ಕಳುಹಿದನು. ಅಣ್ಣನು ಏನು ಹೇಳಿದರೂ ಎಷ್ಟು ಹೆದರಿಸಿದರೂ ವಿಷ್ಣುವರ್ಧನನು ಹಾದಿಗೆ ಬರಲಿಲ್ಲ. ಸಾಮದಾನ ಭೇದೋಪಾಯಗಳು ವ್ಯರ್ಥವಾದ್ದರಿಂದ ದಂಡೋಪಾಯವೊಂದೇ ಉಳಿಯಿತು. ಆದರೆ ನಮ್ಮ ವೀರ ಪುಲಿಕೇಸಿಯು ಕಾಳಗದಲ್ಲಿ ಕಲ್ಲೆದೆಯವನಾದರೂ ಬಳಗದವರಲ್ಲಿ ಅಳ್ಕೆದೆಯವನಾಗಿದ್ದನು. ರಾಜ್ಯಲೋಭಕ್ಕೊಳಗಾಗಿ ತನ್ನ ಬೆನ್ನಿಲಿಬಿದ್ದ ತಮ್ಮನೊಡನೆ ಕಾದಲಿಕ್ಕೆ ಅವನ ಮನಸ್ಸು ಹೇಸಿತು. ವೆಂಗಿಯ ರಾಜ್ಯದಷ್ಟು ಅಥವಾ ಅದಕ್ಕು ದೊಡ್ಡ

ರಾಜ್ಯವನ್ನು ಕ್ಷಣಮಾತ್ರದಲ್ಲಿ ಸಂಪಾದಿಸುವಷ್ಟು ಸಾಮರ್ಥ್ಯವು ತನ್ನ ಲ್ಲಿದ್ದುದರಿಂದ ಸೊಟ್ಟ ವೆಂಗಿ ಪ್ರಾಂತದ ಸಲುವಾಗಿ ತನ್ನ ತಮ್ಮನೊಡನೆ ಬಡಿದಾಡಲಿಕ್ಕೆ ಅವನ ಮನಸ್ಸು ಒಡಂಬಡಲಿಲ್ಲ. ಆದ್ದರಿಂದ ಅವನು ವೆಂಗಿ ರಾಜ್ಯಕ್ಕೆ ತನ್ನ ತಮ್ಮನು ಸ್ವತಂತ್ರನಾದ ಅರಸನೆಂದು ಸಂತೋಷ ದಿಂದ ಒಡಂಬಟ್ಟು ಭ್ರಾತೃವಾತ್ಸಲ್ಯವನ್ನೂ ಸೌಹಾರ್ದ್ಯವನ್ನೂ ಅನ್ಯೋ ನ್ಯಾನುಕೂಲತೆಯನ್ನೂ ಕೆಲವುಟ್ಟಿಗಾದರೂ ಉಳಿಸಿಕೊಂಡನು (೬೩೭). ಶೌರ್ಯೌದಾರ್ಯವುಳ್ಳವರಿಗೆ ಸ್ವಾರ್ಥತ್ಯಾಗವೇ ಭೂಷಣ ವಾಗಿರುತ್ತದೆ. ಹೇಡಿಗಳಾದ ಜನರು ಮಾತ್ರ ಸ್ವಾರ್ಥತ್ಯಾಗಕ್ಕೆ ಹಿಂಜರಿಯುತ್ತಾರೆ.

ಮುಂದೆ ೬೩೫ ರಿಂದ ನಮ್ಮ ವೀರಶಿಖಾಮಣಿಯು ಸಾಯುವ ವರೆಗೆ ಅಂದರೆ ೬೪೦ ರ ವರೆಗೆ ಏನು ಮಾಡಿದನೆಂಬುದಾಗಲಿ ಹೇಗೆ ಕಾಲಕಳೆದನೆಂಬುದಾಗಲಿ ತಿಳಿಯುವುದಿಲ್ಲ. ನಮ್ಮ ವೀರ ಪುಲಿಕೇಸಿಯು ಹರ್ಷವರ್ಧನನ್ನು ಹಿಮ್ಮೆಟ್ಟಿಸಿದ ಸಂಗತಿಯು ಅಯ್ಹೊಳೆಯ ಶಾಸನದಲ್ಲಿ ಇಲ್ಲದಿರುವುದರಿಂದ ಅದು ೬೩೭–೩೮ ರಲ್ಲಿ ನಡೆದಿರಬಹುದೆಂಬ ಪಂಡಿತ ಡುಬ್ರೈಲರ ಅಭಿಪ್ರಾಯವನ್ನು ಹಿಂದೆ ಬರೆದಿರುತ್ತೇವಷ್ಟೇ*. ಕನೋಜದ ಸಾರ್ವಭೌಮನನ್ನು ಸೋಲಿಸಿದ ಸುದ್ದಿಯು ಅಯ್ಹೊಳೆಯ ಶಾಸನದಲ್ಲಿ ಸ್ಪಷ್ಟವಾಗಿ ಬರೆದಿಲ್ಲೆಂಬುದೇನೋ ನಿಜವಾದ ಮಾತೇ ಸರಿ. ಆದರೆ ಈ ಸಂಗತಿಯು ೬೩೭–೩೮ ರಲ್ಲಿ ನಡೆಯಿತೆಂದು ಒಪ್ಪಿಕೊಳ್ಳಲಿಕ್ಕೆ ನನ್ನ ಮನಸ್ಸು ಒಡಂಬಡುವುದಿಲ್ಲ. ಕೆಳಗೆ ಕೊಟ್ಟ ಕಾರಣಗಳು ಈ ನನ್ನ ವಿರುದ್ಧಾಭಿಪ್ರಾಯವನ್ನು ಸಮರ್ಥಿಸುವುವೆಂದು ನನ್ನ ಅಲ್ಪ ಮತಿಗೆ ತೋರುತ್ತದೆ:—

೧. ಐಹೊಳೆಯ ಶಾಸನದ ಮುಖ್ಯವಾದ ಉದ್ದೇಶವು ನಮ್ಮ ವೀರಶಿರೋಮಣಿಯು ದಿಗ್ವಿಜಯದಿಂದ ಗೆದ್ದ ನಾಡುಗಳನ್ನು ಮಾತ್ರ ಹೇಳುವುದಿದ್ದುದರಿಂದ ಅವನು ತನ್ನ ರಾಜ್ಯದ ಸಂರಕ್ಷಣಾರ್ಥವಾಗಿ ಹರ್ಷವರ್ಧನನ ದಾಳಿಯನ್ನು ತಡೆದು ಅವನ ದಂಡನ್ನು ಹಿಂದಕ್ಕಟ್ಟಿ ದ್ದನ್ನು ಆ ಶಾಸನವು ಸ್ಪಷ್ಟವಾಗಿ ಹೇಳದೆ ಬಿಟ್ಟಿರಬಹುದು.

* ಹಿಂದೆ ಪುಟ ೨೩೧ ನ್ನು ನೋಡಿರಿ.

೨. ಹರ್ಷವರ್ಧನನು ಏನು ಕಾರಣದಿಂದ ನರ್ಮದಾ ನದಿಯನ್ನು ದಾಟಲಿಕ್ಕೆ ಯತ್ನಿಸಿದನೆಂಬುದನ್ನು ಯಾವ ಶಾಸನದಲ್ಲಿಯೂ ಸ್ಪಷ್ಟವಾಗಿ ಬರೆದಿಲ್ಲ. ಹರ್ಷವರ್ಧನನ ಉದ್ದೇಶವು ಕೋಶಲದ ಮೇಲೆ ದಂಡೆತ್ತಿಹೋಗುವ ಪುಲಿಕೇಸಿಯನ್ನು ಅಡ್ಡಗಟ್ಟುವುದೇ ಆಗಿದ್ದರೆ, ಹರ್ಷವರ್ಧನನ ಸೋಲು ಕೋಶಲದ ಗೆಲವಿನಲ್ಲಿ ಸಮಾವೇಶವಾಗುವುದಿಲ್ಲವೆ?

೩. ೭ ನೆಯ ಶತಮಾನದ ಆರಂಭದಲ್ಲಿ ಭರತಖಂಡದ ಹೊರಗಿನ ದೇಶಗಳಿಗೂ ಉತ್ತರಾಪಥಕ್ಕೂ ಇದ್ದಷ್ಟು ನಿಕಟಸಂಬಂಧವು ದಕ್ಷಿಣಾಪಥಕ್ಕೂ ಆ ದೇಶಗಳಿಗೂ ಇದ್ದಿಲ್ಲೆಂದು ನಿಶ್ಚಯವಾಗಿ ಹೇಳಬಹುದು. ನಮ್ಮ ಕನ್ನಡಗಲಿಯು ಕನೋಜದ ಸಾರ್ವಭೌಮನನ್ನು ಸೋಲಿಸಿ ಓಡಿಸಿದ ಬಳಿಕ ಅವನ ಶೌರ್ಯದ ಕೀರ್ತಿಯು ಉತ್ತರಾಪಥವನ್ನು ತುಂಬಿ ಇರಾಣಕ್ಕೆ ಹೋಗಬೇಕಾದರೆ ಸ್ವಾಭಾವಿಕವಾಗಿ ೩-೪ ವರ್ಷಗಳು ಬೇಕಾಗಲಿಕ್ಕಿಲ್ಲವೇ? ಇರಾಣದ ರಾಯಭಾರಿಯು ೬೨೫-೨೬ ರಲ್ಲಿ ನಮ್ಮ ವೀರಶಿಖಾಮಣಿಯನ್ನು ಕಂಡುದರಿಂದ ನರ್ಮದಾ ನದಿಯ ಕಾಳಗವು ಸುಮಾರು ೬೨೨ ರಲ್ಲಿ ಆಗಿರಬಹುದೆಂದು ನನ್ನ ಊಹೆಯು.

೬೩೫ ರಿಂದ ೬೫೦ ರ ವರೆಗೆ ಸುಮಾರು ೧೫ ವರ್ಷಗಳನ್ನು ನಮ್ಮ ವೀರ ಪುಲಿಕೇಸಿಯು ಹೇಗೆ ಕಳೆದನೆಂಬುದೊಂದು ಅತಿಗೂಢವಾದ ಪ್ರಶ್ನವಾಗಿರುತ್ತದೆ. ಹೊಸ ಶಾಬ್ದ ಪ್ರಮಾಣಗಳು ದೊರೆಯುವ ವರೆಗೆ ಈ ಪ್ರಶ್ನವನ್ನು ಸರ್ವಸಮರ್ಪಕವಾಗಿ ಬಿಡಿಸುವುದು ಕಷ್ಟಸಾಧ್ಯವಾದ ಕೆಲಸವೆಂದು ತೋರುತ್ತದೆ. ಶಾಬ್ದ ಪ್ರಮಾಣವು ಸಿಕ್ಕದಾಗ ಅನುಮಾನದ ಹೊರತು ಬೇರೆ ಗತಿಯಿಲ್ಲವಲ್ಲವೇ? ಈ ಕಾಲಾವಧಿಯಲ್ಲಿ ನಮ್ಮ ಕನ್ನಡ ಹೆಬ್ಬುಲಿಯು ಯಾವದಾದರೊಂದು ವಿಜಯ ದಂಡಯಾತ್ರೆಯಲ್ಲಿ ತೊಡಗಿದ್ದನೆಂದು ಹೇಳಲಿಕ್ಕೆ ನಮಗೆ ಎಳ್ಳಿನಷ್ಟಾದರೂ ಆಧಾರವಿಲ್ಲ. ಸುಮ್ಮನೆ ರಾಜಧಾನಿಯಲ್ಲಿ ಕೂಡ್ರುವುದಾಗಲಿ ಆಟ ನೋಟ ಹಾಡು ಕುಣಿತ ಹರಟೆಗಳಲ್ಲಿ ಕಾಲಕಳೆಯುವುದಾಗಲಿ ವಿಷಯಾ

ಸಕ್ತನಾಗಿ ದುಂದುಗಾರಿಕೆಯಲ್ಲಿ ಮುಳುಗಿ ತೇಲುವುದಾಗಲಿ ತನ್ನ ವಿಸ್ತಾರವಾದ ರಾಜ್ಯದ ಅಂಗೋಪಾಂಗಗಳ ಕಟ್ಟುಪಾಡುಗಳನ್ನು ಸೂಕ್ಷ್ಮರೀತಿಯಿಂದ ಪರೀಕ್ಷಿಸಿ ಅವುಗಳನ್ನು ಬಿಗಿಮಾಡುವ ಕ್ರಮು ವನ್ನು ವಿಚಾರಿಸುವುದಾಗಲಿ ಅವನ ಸ್ವಭಾವಕ್ಕೆ ಸೇರುತ್ತಿದ್ದಿಲ್ಲೆಂದು ಈ ಮೊದಲೇ ಬರೆದಿರುತ್ತೇವೆ. ಆದ್ದರಿಂದ ನಮ್ಮ ವೀರ ಶಿರೋಮಣಿಯು ಬಂಧುಬಳಗದವರ ಒಳಸಂಚಿನಿಂದ ಒಗ್ಗಿ, ಮುಪ್ಪಿನಿಂದ ಬೊಗ್ಗಿ, ಬೇನೆ ಯಿಂದ ಹಣ್ಣಾಗಿ ಮೂಲೆಗುಂಪಾಗಿ ರಾಜಧಾನಿಯಲ್ಲಿಯೇ ಈ ಹದಿನೈದು ವರುಷಗಳ ಕಾಲವನ್ನು ಕಳೆದನೆಂದು ಅನುಮಾನ ಮಾಡ ಬಹುದು. ಇವನು ಸುಮಾರು ೫೮೨ ರಲ್ಲಿ ಹುಟ್ಟಿರಬಹುದು; ತಂದೆ ಸತ್ತಾಗ ೧೫-೧೬ ವರುಷಗಳ ಚಿಕ್ಕ ಬಾಲಕನಾಗಿರಬಹುದು. ಮಂಗ ಳೇಶನು ಸತ್ತಾಗ ೧೭ ವರ್ಷ ಪ್ರಾಯದವನಾಗಿರಬಹುದು. ಆದ್ದರಿಂದ ೬೩೬ ರಲ್ಲಿ ಇವನು ೫೫ ವರ್ಷಗಳ ಮುದುಕನಾಗಿರಬಹುದು. ೫೫ ನೆಯ ವರ್ಷವು ನಮ್ಮನ್ನು ಕ್ಷೀಣಬಲರಾಗಿ ಮಾಡದಿದ್ದರೂ ಬೇನೆಯೂ ಚಿಂತೆಯೂ ಅದಕ್ಕೆ ನೆರವಾದರೆ ನಾವು ಅಶಕ್ತರೂ ನಿರುತ್ಸಾಹಿಗಳೂ ಆಗಬಹುದು.

ನಮ್ಮ ವೀರ ಪುಲಿಕೇಶಿಯ ಆಳಿಕೆಯ ಕೊನೆಯ ಭಾಗದಲ್ಲಿ ಒಬ್ಬ ಪ್ರಸಿದ್ಧನಾದ ಬೌದ್ಧ ಮತದ ಯಾತ್ರಿಕನು ಗೌತಮ ಬುದ್ಧನ ಜನ್ಮಸಂಚಾರ ಮರಣದಿಂದ ಪುನೀತವಾದ ನಮ್ಮ ಭರತ ಭೂಮಿಯನ್ನು ನೋಡಲಿಕ್ಕೆ ಬಂದು (೬೨೯), ೧೬ ವರುಷ ಈ ನಮ್ಮ ಭರತಖಂಡದಲ್ಲಿ ಸಂಚಾರಮಾಡಿದನಷ್ಟೇ. ಇವನ ಹೆಸರು **ಹುವೆನತ್ಸಾಂಗನು.**

ಇವನು ಹರ್ಷವರ್ಧನ ಶಿಲಾದಿತ್ಯನ ರಾಜಧಾನಿಯಾದ ಕನೋಜ ವನ್ನು ನೋಡಿದನೆಂಬುದಕ್ಕೆ ಸಂಶಯವಿಲ್ಲ. ಆದರೆ ಇವನು ನಮ್ಮ ವೀರ ಪುಲಿಕೇಶಿಯ ರಾಜಧಾನಿಯಾದ ಬಾದಾಮಿಯನ್ನು ನೋಡಿದನೋ ಇಲ್ಲೋ ಎಂಬ ಬಗ್ಗೆ ಸಂಶಯಬರುತ್ತದೆ. ಅವನು ಪುಲಿಕೇಶಿಯ ದೊಡ್ಡ ರಾಜ್ಯ (ಮಹಾರಾಷ್ಟ್ರ ಅಥವಾ ಕರ್ನಾಟಕ)ವನ್ನೂ ಅವನ



ಚೀನದೇಶದ ಬೌದ್ಧ ಪ್ರಯಾಣಿಕನಾದ ಹುವೆನತ್ಸ್ಯಾಂಗನು.

ರಾಜಧಾನಿಯನ್ನೂ ಅಲ್ಲಿಯ ಜನರನ್ನೂ ಕೆಳಗೆ ಬರೆದಂತೆ ವರ್ಣಿಸಿರುತ್ತಾನೆ.

ಪುಲಿಕೇಸಿಯ ರಾಜ್ಯದ ಸುತ್ತಳತೆಯು ೫೦೦೦ **ಲೀ** ಅಂದರೆ ೮೩೩ ಮೈಲು ಇರುತ್ತದೆ. ಅದರ ರಾಜಧಾನಿಯು ಪಡುವಲಲ್ಲಿ, ಒಂದು ದೊಡ್ಡ ನದಿಯ ದಂಡೆಯ ಮೇಲಿರುತ್ತದೆ. ಅದರ ಸುತ್ತಳತೆಯು ೩೦ **ಲೀ.** ಭೂಮಿಯು ಬೆಳೆಯುಳ್ಳದೂ ಫಲವತ್ತಾದುದೂ ಇರುತ್ತದೆ. ಪ್ರತಿ ವರ್ಷ ಜನರು ಭೂಮಿಯನ್ನು ಬಿತ್ತಿ ಬೆಳೆಯನ್ನು ತೆಗೆದುಕೊಳ್ಳುತ್ತಾರೆ. ಹವೆಯು ಕಾವಿನದು. ಜನರು ಸಾದಾ ಸ್ವಭಾವದವರೂ ಪ್ರಮಾಣಿಕರೂ ಆಗಿರುತ್ತಾರೆ. ಅವರು ನಿಲುವಿಕೆಯಲ್ಲಿ ಉದ್ದವಾಗಿಯೂ ಮುಯ್ಯಿ ತೀರಿಸುವುದರಲ್ಲಿ ನಿಷ್ಠುರರಾಗಿಯೂ ಉಪಕಾರಮಾಡಿದವರಿಗೆ ಕೃತಜ್ಞರಾಗಿಯೂ ಹಗೆಗಳಿಗೆ ಕ್ರೂರರಾಗಿಯೂ ಇರುತ್ತಾರೆ. ತಮಗೆ

ಅಪಮಾನವನ್ನು ಮಾಡಿದವರನ್ನು ದಂಡಿಸುವುದಕ್ಕೋಸ್ಕರ ಅವರು ತಮ್ಮ ಜೀವಕ್ಕಾದರೂ ಎರವಾಗುವರು. ಅವರು ದಯಾಪರರಾದ್ದರಿಂದ ದುಃಖಿತರಿಗೆ ನೆರವಾಗಲಿಕ್ಕೆ ಹಿಂದೆ ಮುಂದೆ ನೋಡುವುದಿಲ್ಲ. ತಮ್ಮ ಹಗೆಯ ಮೇಲೆ ಸೇಡುತೀರಿಸಿಕೊಳ್ಳುವಾಗ ಅವರು ಮೊದಲು ಅವನಿಗೆ ತಮ್ಮ ಉದ್ದೇಶವನ್ನು ತಿಳಿಸಿ, ಗೊತ್ತುಮಾಡಿದ ಸ್ಥಳದಲ್ಲಿ ಅವನೊಡನೆ ಜಗಳಾಡಿಯೇ ಕಾದುತ್ತಾರೆ. ಹಗೆಯು ಓಡತೊಡಗಿದರೆ ಅವನನ್ನು ಬೆನ್ನಟ್ಟುತ್ತಾರೆ ಹೊರತು ಕೊಲ್ಲುವುದಿಲ್ಲ. ದಳವಾಯಿಯು ಸೋತು ಬಂದರೆ ಸೀರೆಯುಡಿಸಿ ಅವನನ್ನು ಮೆರಯಿಸುತ್ತಾರೆ ಹೊರತು ಶಿಕ್ಷಿಸುವುದಿಲ್ಲ. ಈ ನಾಡಿನಲ್ಲಿ ಕಾದಲಿಕ್ಕೆ ಸಿದ್ಧರಾದ ದಂಡಾಳುಗಳು ಬೇಕಾದಷ್ಟು ದೊರೆಯುತ್ತಾರೆ. ಕಾಳೆಗಕ್ಕೆ ಹೊರಡುವುದಕ್ಕಿಂತ ಮೊದಲು ಅವರು ಸರಾಯಿ ಕುಡಿದು ಮತ್ತರಾಗುತ್ತಾರೆ. ಸೆರೆ ಕುಡಿದ ದಂಡಾಳು ಯಾರನ್ನಾದರು ನಿಷ್ಕಾರಣವಾಗಿ ಕೊಂದರೆ ಅವನಿಗೆ ಅದಕ್ಕೋಸ್ಕರ ಶಿಕ್ಷೆಯಿಲ್ಲ. ಅವರು ತಮ್ಮ ಆನೆಗಳಿಗೂ ಸೆರೆ ಕುಡಿಸುತ್ತಾರೆ. ಇಂತಹ ಶೂರರಾದ ದಂಡಾಳುಗಳೂ ಮತ್ತರಾದ ಆನೆಗಳೂ ತನ್ನ ಸೇನೆಯಲ್ಲಿರುವುದರಿಂದ ಈ ಅರಸನು ನೆರೆಯ ಅರಸನನ್ನು ಲೆಕ್ಕಿಸುವುದಿಲ್ಲ. ಈ ಅರಸನು ಕ್ಷತ್ರಿಯ ಕುಲದವನು. ಇವನ ಹೆಸರು ಪುಲಿಕೇಶಿ. ಇವನು ಮಹತ್ವಾಕಾಂಕ್ಷಿಯೂ ಲೋಕೋಪಕಾರಿಯೂ ಆಗಿರುತ್ತಾನೆ. ಇವನ ಪ್ರಜೆಗಳು ಇವನಿಗೆ ಸಂತೋಷದಿಂದ ವಿಧೇಯರಾಗಿರುತ್ತಾರೆ. ಪೂರ್ವದಿಂದ ಪಶ್ಚಿಮದ ವರೆಗೆ ಎಲ್ಲ ಪ್ರದೇಶವು ಶಿಲಾದಿತ್ಯ (ಹರ್ಷವರ್ಧನ) ಮಹಾರಾಜನ ಸಾಮ್ರಾಜ್ಯಕ್ಕೆ ಸೇರಿದ್ದರೂ ಈ ಪ್ರದೇಶವು ಅವನ ಒಡೆತನಕ್ಕೆ ಒಳಗಾಗಿಲ್ಲ. ಅದನ್ನು ಗೆಲ್ಲಬೇಕೆಂಬ ಬಯಕೆಯಿಂದ ಶಿಲಾದಿತ್ಯನು ತನ್ನ ಸಾಮ್ರಾಜ್ಯದ ಎಲ್ಲ ಭಾಗಗಳ ದಂಡುಗಳನ್ನು ಒಟ್ಟುಗೂಡಿಸಿಕೊಂಡು ಆ ರಾಜ್ಯದ ಮೇಲೆ ದಂಡೆತ್ತಿ ಹೋದನು. ಆದರೆ ಅದನ್ನು ಗೆಲ್ಲುವುದು ಅವನಿಂದಾಗಲಿಲ್ಲ. ಇಲ್ಲಿಯ ಜನರಿಗೆ ವಿದ್ಯೆಯಲ್ಲಿ ಅಭಿರುಚಿಯುಂಟು. ಅವರಲ್ಲಿ ಕೆಲವರು ಬೌದ್ಧ ಗ್ರಂಥಗಳನ್ನೂ ಕೆಲವರು ಜೈನ ಬ್ರಾಹ್ಮಣ ಗ್ರಂಥಗಳನ್ನೂ ಓದುತ್ತಾರೆ. ಇಲ್ಲಿ ೧೦೦ ಸಂಗ್ರಹಾರಾಮಗಳೂ ೫೦೦೦ ಮಂದಿ ಉಪದೇಶಕರೂ

೧೦೦ ಗುಡಿಗಳೂ ಹಲವು ಮತದ ಜನರೂ ಇರುತ್ತಾರೆ. ಈ ರಾಜಧಾನಿಯ ಒಳಗೂ ಹೊರಗೂ ಕೂಡಿ ಅಶೋಕ ಮಹಾರಾಜನು ಕಟ್ಟಿಸಿದ ೫ ಸ್ತೂಪಗಳಿರುತ್ತವೆ. ಈ ನಾಡಿನ ಮೂಡಣ ಮೇರೆಯಲ್ಲಿ ಒಂದು ದೊಡ್ಡ ಪರ್ವತವಿದ್ದು ಅಲ್ಲಲ್ಲಿ ಎತ್ತರವಾದ ಶಿಖರಗಳಿರುತ್ತವೆ. ಈ ಪರ್ವತದ ಒಂದು ಕಣಿವೆಯಲ್ಲಿ ಒಂದು ಭವ್ಯವಾದ ಕೊರೆದ ಚೈತ್ಯಾಲಯವುಂಟು. ಈ ಚೈತ್ಯಾಲಯದ ಪಡುವಲಿಗೆ ಸುಮಾರು ೧೦೦೦ ಲೀ (೧೬೭ ಮೈಲು)ಗಳ ಮೇಲೆ ನರ್ಮದಾ ನದಿಯನ್ನು ದಾಟಿದ ಬಳಿಕ ಬಡೋಚ (ಪೊಲುಕೀಚೆಪೊ) ಪಟ್ಟಣವು ಸಿಕ್ಕುತ್ತದೆ*.

ಮೇಲೆ ಕೊಟ್ಟ ಹುವೆನತ್ಸಾಂಗನ ವರ್ಣನೆಯಲ್ಲಿ ಪುಲಿಕೇಶಿಯ ರಾಜಧಾನಿಯ ವಿಷಯವಾಗಿ ೩ ಮಾತುಗಳು ಮಾತ್ರ ಇರುತ್ತವೆ. ಅವಾವವೆಂದರೆ:—

೧. ಪಶ್ಚಿಮದಲ್ಲಿ ದೊಡ್ಡ ಹೊಳೆಯ ದಂಡೆಯಮೇಲೆ ಪುಲಕೇಶಿಯ ರಾಜಧಾನಿಯು ಇರುತ್ತದೆ.

೨. ಈ ರಾಜಧಾನಿಯ ಸುತ್ತಳತೆಯು ೩೦ ಲೀ ಅಂದರೆ ಸುಮಾರು ೫ ಮೈಲು.

೩. ಈ ರಾಜಧಾನಿಯ ಒಳಗೂ ಹೊರಗೂ ಕೂಡಿ ಅಶೋಕ ಮಹಾರಾಜನು ಕಟ್ಟಿಸಿದ ೫ ಸ್ತೂಪಗಳಿರುತ್ತವೆ.

ಇನ್ನು ಈಗ ವಿಜಾಪುರ ಜಿಲ್ಲೆಯಲ್ಲಿ ತಾಲೂಕಿನ ಸ್ಥಳವಾದ ಬಾದಾಮಿಯೇ ನಮ್ಮ ವೀರ ಪುಲಿಕೇಶಿಯ ರಾಜಧಾನಿಯಾಗಿತ್ತೆಂಬುದಕ್ಕೆ ಎಳ್ಳಷ್ಟಾದರೂ ಸಂಶಯವಿಲ್ಲ. ಹುವೆನತ್ಸಾಂಗನು ಪುಲಕೇಶಿಯ ರಾಜಧಾನಿಯನ್ನು ಪ್ರತ್ಯಕ್ಷವಾಗಿ ನೋಡಿ ಬರೆವನೋ ಅಥವಾ ಬರಡ ನೆಯವರಿಂದ ಕೇಳಿ ಅದನ್ನು ವರ್ಣಿಸಿದನೋ ಎಂಬ ಸಂಶಯವು ಬರುತ್ತದೆ. ಈ ವಿಷಯವನ್ನು ಕುರಿತು ಬರೆದ ಬಹುಶಃ ಎಲ್ಲ ಶೋಧಕರು, ಅವರು ಪಾಶ್ಚಿಮಾತ್ಯರೇ ಆಗಲಿ ಪೌರ್ವಾತ್ಯರೇ ಆಗಲಿ, ಹುವೆನತ್ಸಾಂಗನು ಬಾದಾಮಿಯನ್ನು ವರ್ಣಿಸದೆ ನಮ್ಮ ವೀರಪುಲಿಕೇಶಿಯು

* ಮುಂಬಯಿ ಇಲಾಖೆಯ ಗ್ಯಾಜಟಿಯರ ಸಂ. ೧, ಭಾ. ೨, ಪು. ೩೫೩–೫೪.

ಪಾಳೆಯವನ್ನು ಹಾಕಿಕೊಂಡಿದ್ದ ಬೇರೊಂದು ಊರನ್ನು ವರ್ಣಿಸಿರುತ್ತಾನೆಂದು ಅಭಿಪ್ರಾಯಪಡುತ್ತಾರೆ. ಈ ಬೇರೂರಿನ ಸಂಬಂಧದಿಂದಾದರೂ ಅವರಲ್ಲಿ ಐಕ್ಯಮತ್ಯವಿಲ್ಲ. . ಚೀನದ ಪ್ರವಾಸಿಯು ದೇವಗಿರಿ ಅಥವಾ ದೌಲತಾಬಾದನ್ನು ವರ್ಣಿಸಿರುತ್ತಾನೆಂದು ಎಮ್. ವ್ಹಿ. ಡಿ. ಸೆಂಟ ಮಾರ್ಟನ್ನರೂ ಕಲ್ಯಾಣವನ್ನು ವರ್ಣಿಸಿರುತ್ತಾನೆಂದು ಜನರಲ್ ಕನಿಂಗ್ಹ್ಯಾಮರೂ ಜೋಕ, ಫಲ್ಥಾಂಬಾ ಅಥವಾ ಪೈಠಣವನ್ನು ವರ್ಣಿಸಿರುತ್ತಾನೆಂದು ಫರ್ಗುಸನ್ನರೂ ನಾಸಿಕವನ್ನು ವರ್ಣಿಸಿರುತ್ತಾನೆಂದು ಡಾ॥ ಫ್ಲೀಟರೂ ಬರೆಯುತ್ತಾರೆ.

ಇಷ್ಟು ಮಂದಿ ದೊಡ್ಡದೊಡ್ಡ ಶೋಧಕರಿಗೆ ಬಗೆಹರಿಯದ ಈ ಪ್ರಶ್ನವನ್ನು ಸಮರ್ಪಕವಾಗಿ ಬಿಡಿಸುವುದು ನನ್ನ ಯೋಗ್ಯತೆಗೆ ಮಿಕ್ಕಿದ ಕೆಲಸವೆಂದು ನಾನು ನಿರಭಿಮಾನದಿಂದ ಒಪ್ಪಿಕೊಳ್ಳುತ್ತೇನೆ. ಆದರೆ ಹುವೆನತ್ಸ್ಯಾಂಗನು ವರ್ಣಿಸಿದ ನಮ್ಮ ವೀರ ಪುಲಕೇಸಿಯ ರಾಜಧಾನಿಯು ಬಾದಾಮಿಯೇ ಆಗಿತ್ತೆಂದು ನನ್ನ ಮನೋದೇವತೆಯು ಒತ್ತಿ ಹೇಳುತ್ತಿರುವುದರಿಂದ ಈ ಊಹೆಗೆ ಅನುಕೂಲವಾದ ಕಾರಣಗಳನ್ನು ಕೆಳಗೆ ಕೊಡುತ್ತೇನೆ:—

೧. ಹುವೆನತ್ಸ್ಯಾಂಗನು ಬೌದ್ಧ ಮತದಲ್ಲಿ ಪೂರ್ಣ ಶ್ರದ್ಧೆಯುಳ್ಳವನೂ ಗೌತಮ ಬುದ್ಧನ ಪರಮಭಕ್ತನೂ ಆದ್ದರಿಂದ ಉತ್ತರಾಪಥದಲ್ಲಿಯೂ ಮಧ್ಯದೇಶದ ಉತ್ತರ ಭಾಗದಲ್ಲಿಯೂ ಸಂಚರಿಸಿದನೇ ಹೊರತು, ಕರ್ನಾಟಕದಲ್ಲಿ ಸಂಚರಿಸಲಿಲ್ಲ.

೨. ಅವನು ಕನೋಜದಲ್ಲಿದ್ದಾಗ ಹರ್ಷವರ್ಧನನು ಪುಲಕೇಸಿಯ ಮೇಲೆ ದಂಡೆತ್ತಿ ಹೋದುದನ್ನೂ ವೀರ ಪುಲಕೇಸಿಯು ಅವನನ್ನು ಸೋಲಿಸಿ ಹಿಂದಕ್ಕೆ ಅಟ್ಟಿದುದನ್ನೂ ಕೇಳಿ ಅವನ ರಾಜ್ಯದ ವಿಷಯವಾಗಿ ವಿಚಾರಿಸಿರಬಹುದು.

೩. ಕರ್ನಾಟಕದಲ್ಲಿ ಬೌದ್ಧ ಮತದ ಪ್ರಸಾರವು ಹೆಚ್ಚಾಗಿ ಆಗದ್ದರಿಂದಲೂ ಇಲ್ಲಿ ಜೈನರೇ ಹೆಚ್ಚಾಗಿ ಪ್ರಬಲರಾಗಿದ್ದುದರಿಂದಲೂ ಹುವೆನತ್ಸ್ಯಾಂಗನು ಕರ್ನಾಟಕಕ್ಕೆ ಬರಲಿಲ್ಲೆಂದು ತೋರುತ್ತದೆ.

೪. ಮೇಲೆ ಕೊಟ್ಟ ಕಾರಣಗಳ ಮೂಲಕವಾಗಿ ಹುವೆನತ್ಸಾಂಗನು ಪುಲಿಕೇಸಿಯ ರಾಜ್ಯವನ್ನಾಗಲಿ ಅವನ ರಾಜಧಾನಿಯನ್ನಾಗಲಿ ಪ್ರತ್ಯಕ್ಷವಾಗಿ ನೋಡದೆ ಕೇಳಿಕೆಯಿಂದ ಮಾತ್ರ ವರ್ಣಿಸಿರುತ್ತಾನೆಂದು ತೋರುತ್ತದೆ.

೫. ಹುವೆನತ್ಸಾಂಗನಂತಹ ಶೋಧಕನೂ ಪಂಡಿತನೂ ಸತ್ಯವಂತನೂ ಪುಲಿಕೇಸಿಯ ನಿಜವಾದ ರಾಜಧಾನಿಯಾದ ಬಾದಾವಿಯನ್ನು ಬಿಟ್ಟು, ಜೇರೂರನ್ನು ತಪ್ಪಾಗಿ ಅವನ ರಾಜಧಾನಿಯೆಂದೆಣಿಸಿ ಅದನ್ನು ಎಂದೂ ವರ್ಣಿಸಲಾರನು. ಆದ್ದರಿಂದ ಅವನು ಬಾದಾವಿಯನ್ನೇ ಕೇಳಿದಂತೆ ವರ್ಣಿಸಿರಲಿಕ್ಕೆ ಬೇಕು.

೬. ಅವನು ಅಸಾಮ, ಉತ್ಕಲ, ಬಿಹಾರ ಪ್ರಾಂತಗಳಲ್ಲಿದ್ದಾಗ ಈ ವರ್ಣನೆಯನ್ನು ಬರೆದಿದ್ದರೆ ಬಾದಾವಿಯು ಪಶ್ಚಿಮದಲ್ಲಿರುತ್ತದೆಂಬ ಮಾತು ನಿಜವಾಗಿರುತ್ತದೆ.

೭. ಆ ಕಾಲಕ್ಕೆ ಬಾದಾವಿಯು ೩೦ ಲೀ (೫ ಮೈಲು) ಸುತ್ತಳತೆಯುಳ್ಳ ರಾಜಧಾನಿಯು ಆಗಿತ್ತೆಂಬ ಬಗ್ಗೆ ಸಂಶಯವಿಲ್ಲ.

೮. ಈಗಿನ ಬಾದಾವಿಯಿಂದ ೪–೫ ಮೈಲುಗಳ ಮೇಲೆ ಮಲಪ್ರಭಾನದಿಯು ಇರುವುದರಿಂದ ಆ ಕಾಲದ ರಾಜಧಾನಿಯು ಈ ದೊಡ್ಡ ಹೊಳೆಯ ಮೇಲೆ ಇತ್ತೆಂಬ ಅವನ ವರ್ಣನೆಯು ದಿಟವಾದುದೇ ಸರಿ.

೯. ರಾಜಧಾನಿಯ ಒಳಗೂ ಹೊರಗೂ ಕೂಡಿ ೫ ಸ್ತೂಪಗಳಿರುತ್ತವೆಂದು ಅವನು ಬರೆಯುತ್ತಾನಷ್ಟೇ. ಅಜಂತೆ ನಾಸಿಕಗಳು ನಮ್ಮ ಪುಲಿಕೇಸಿಯ ರಾಜ್ಯಕ್ಕೆ ಸೇರಿರುವುದರಿಂದ ಅಲ್ಲಿ ಸ್ತೂಪಗಳು ಇದ್ದಿರಬಹುದು. ಬಾದಾವಿಯಲ್ಲಿಯಾಗಲಿ ಅದರ ನೆರೆಯಲ್ಲಿಯಾಗಲಿ ಸ್ತೂಪಗಳಿದ್ದಂತೆ ತೋರುವುದಿಲ್ಲ. ಮಂಗಳೇಶನ ಗೆಲ್ಗಂಬವನ್ನು ಸ್ತೂಪವೆಂದು ತಪ್ಪಾಗಿ ಎಣಿಸಿ ಹುವೆನತ್ಸಾಂಗನಿಗೆ ಬಾದಾವಿಯಲ್ಲಿ ಒಂದು ಸ್ತೂಪವಿರುತ್ತದೆಂದು ಜನರು ಹೇಳಿದ್ದರೂ ಹೇಳಿರಬಹುದು.

೧೦. ಅವನು ವರ್ಣಿಸಿದ ಗುಡ್ಡದ ಸಾಲೂ ಚೈತ್ಯಾಲಯವೂ ಅಜಂತೆಯದವೇ ಆಗಿರಬಹುದು.

೧೧. ಹುವೆನತ್ಸ್ಯಾಂಗನು ಅಜಂತೆಯ ಚೈತ್ಯಾಲಯಕ್ಕೂ ಬಡೋಚಕ್ಕೂ ೧೦೦೦ ಲೀ (೧೬೭ ಮೈಲು) ಅಂತರವಿರುತ್ತದೆಂದು ಬರೆದಿದ್ದು, ಬಾದಾಮಿಯು ಬಡೋಚದಿಂದ ೪೩೫ ಮೈಲು ದೂರವಿರುವುದರಿಂದ ಹುವೆನತ್ಸ್ಯಾಂಗನು ವರ್ಣಿಸಿದ ಪುಲಿಕೇಸಿಯ ರಾಜಧಾನಿಯು ಬಾದಾಮಿಯಾಗಿರದೆ ಅವನು ಪಾಳೆಯ ಹಾಕಿಕೊಂಡಿದ್ದ ನಾಸಿಕವಾಗಿರಬೇಕೆಂದು ಡಾ॥ ಫ್ಲೀಟರು ಏನು ಕಾರಣವಾಗಿ ಅನುಮಾನಮಾಡುತ್ತಾರೆಂಬುದು ತಿಳಿಯುವುದಿಲ್ಲ*.

೧೨. ಹುವೆನತ್ಸ್ಯಾಂಗನು ೬೪೧ ರಲ್ಲಿ ಪುಲಿಕೇಸಿಯ ರಾಜ್ಯವನ್ನೂ ರಾಜಧಾನಿಯನ್ನೂ ಬಣ್ಣಿಸಿದನೆಂದು ಡಾ॥ ಫ್ಲೀಟರು ಬರೆಯುತ್ತಾರಷ್ಟೇ. ೬೩೫ ರಿಂದ ಸಾಯುವವರೆಗೆ ನಮ್ಮ ವೀರ ಪುಲಿಕೇಸಿಯು ಮುಪ್ಪುಜಪ್ಪುಗಳ ಮೂಲಕವಾಗಿ ಬಾದಾಮಿಯಿಂದ ಕದಲಲಿಲ್ಲೆಂಬ ನನ್ನ ಅನುಮಾನವು ನಿಜವಾಗಿದ್ದರೆ, ಅವನು ನಾಸಿಕಕ್ಕಾಗಲಿ ಬೇರೆ ಯಾವ ಊರಿಗಾಗಲಿ ಹೋಗಿದ್ದಿಲ್ಲೆಂಬುದು ಸ್ಪಷ್ಟವಾಗಿ ತೋರುತ್ತದೆ.

ಸಾರಾಂಶವೇನೆಂದರೆ ಹುವೆನತ್ಸ್ಯಾಂಗನು ಕರ್ನಾಟಕದಲ್ಲಿ ಸಂಚರಿಸಲಿಲ್ಲ; ಮತ್ತು ಪುಲಿಕೇಸಿಯ ರಾಜಧಾನಿಯಾದ ಬಾದಾಮಿಯನ್ನು ಪ್ರತ್ಯಕ್ಷವಾಗಿ ನೋಡಲಿಲ್ಲ. ಅವನು ಬೇರೆ ಯಾವುದೋ ಒಂದು ಪಟ್ಟಣವನ್ನು ಪುಲಿಕೇಸಿಯ ರಾಜಧಾನಿಯೆಂದೆಣಿಸಿ ಅದನ್ನು ವರ್ಣಿಸುವಷ್ಟು ಹೆಡ್ಡನಾಗಿದ್ದಿಲ್ಲ; ಅವನು ಕೇಳಿಕೆಯಿಂದ ಬಾದಾಮಿಯನ್ನು ವರ್ಣಿಸಿರುವುದರಿಂದ ಆ ವರ್ಣನೆಯಲ್ಲಿ ಅಲ್ಪಸ್ವಲ್ಪ ತಪ್ಪು ಆಗಿರಬಹುದೆಂದು ತೋರುತ್ತದೆ. ಅವನು ಪುಲಿಕೇಸಿಯ ರಾಜಧಾನಿಯಾದ ಬಾದಾಮಿಯನ್ನೂ ಕನ್ನಡಿಗರ ಶೌರ್ಯೌದಾರ್ಯವನ್ನೂ ಚಾಳುಕ್ಯ ಸಾಮ್ರಾಜ್ಯದ ವಿಸ್ತಾರವನ್ನೂ ತನಗೆ ತಿಳಿದ ಮಟ್ಟಿಗೆ ನಿಷ್ಪಕ್ಷಪಾತ ಬುದ್ಧಿಯಿಂದ ಬಣ್ಣಿಸಿರುತ್ತಾನೆಂಬುದಕ್ಕೆ ಸಂದೇಹವಿಲ್ಲ.

ಇಲ್ಲಿಗೆ ಚಾಳುಕ್ಯ ಮನೆತನದ ಏರಿಕೆಯೂ ಚಾಳುಕ್ಯ ಸಾಮ್ರಾಜ್ಯದ ಬೆಳವಣಿಗೆಯೂ ಚಾಳುಕ್ಯ ವೈಭವದ ಹೆಚ್ಚಳವೂ ಮುಗಿದಂತಾ

* ಮುಂಬಯಿ ಇಲಾಖೆಯ ಗ್ಯಾಜಿಟಿಯರ ಸಂ. ೧, ಭಾ. ೨, ಪು. ೩೫೪.

ದವು. ಆದಕಾರಣ ನಮ್ಮ ವೀರ ಪುಲಿಕೇಸಿಯು ಕಾಲದ ಶಾಸನಗಳ ಪಟ್ಟಿಯನ್ನು ಕೊಟ್ಟು ಈ ಅಧ್ಯಾಯವನ್ನು ಮುಗಿಸುವೆವು.

೧. ಗೋವೆಯ ತಾಮ್ರಶಾಸನವು. ಮಾಘ ಶು॥ ೧೫ ಶಕೆ ೫೩೨ (೧೫-೧-೬೧೦ ಅಥವಾ ೫-೧-೬೧೧). ೫೩೦ ರಿಂದ ೨೦ ವರ್ಷ ರೇವತಿ ದ್ವೀಪದ ಅಧಿಪತಿಯಾದ ಸತ್ಯಾಶ್ರಯ ಧ್ರುವರಾಜ ಇಂದ್ರವರ್ಮನು (೨ ನೆಯ ಪುಲಿಕೇಸಿ) ಮಹಾರಾಜನ ಅಪ್ಪಣೆಯಿಂದ ಒಬ್ಬ ಬ್ರಾಹ್ಮಣನಿಗೆ ಖೇಟಾಹಾರ (ಖೇಡ ತಾಲೂಕಿನ) ದೇಶದ ಕಾರೆಲ್ಲಿಕಾ (ಕರೇಳ) ಎಂಬ ಹಳ್ಳಿಯನ್ನು ದಾನಕೊಟ್ಟನೆಂದು ಇದರಲ್ಲಿ ಬರೆದಿರುತ್ತದೆ.

೨. ನಿಜಾಮ ಹೈದರಾಬಾದಿನ ತಾಮ್ರಶಾಸನವು. ಭಾದ್ರಪದ ವದ್ಯ ೩೦ ಶಕೆ ೫೩೪ (೨ ಆಗಸ್ಟ ೬೧೨). ರಾಜ್ಯಾಭಿಷೇಕದ ೩ ನೆಯ ವರ್ಷದಲ್ಲಿ ೨ ನೆಯ ಪುಲಿಕೇಸಿಯು ಬಾದಾಮಿಯಲ್ಲಿರುವಾಗ ಮಾಕರಬ್ಬೆ ಎಂಬ ಹಳ್ಳಿಯನ್ನು ಒಬ್ಬ ಬ್ರಾಹ್ಮಣನಿಗೆ ದಾನ ಕೊಟ್ಟನೆಂದು ಇದರಲ್ಲಿ ಬರೆದಿದೆ.

೩. ರತ್ನಾಗಿರಿ ಜಿಲ್ಲಾ ಚಿಪಳೂಣದ ತಾಮ್ರಶಾಸನವು. ಪುಲಿಕೇಸಿಯ ಸೋದರಮಾವನೂ ಸೇಂದ್ರಕ ಮನೆತನದವನೂ ಆದ ರಾಜಾ ಶ್ರೀವಲ್ಲಭಸೇನಾನಂದನು ಅಮರೆಟಿಕಾ ವಿಷಯದಲ್ಲಿದ್ದ ಒಂದು ಹಳ್ಳಿಯನ್ನು ಒಬ್ಬ ಬ್ರಾಹ್ಮಣನಿಗೆ ದಾನಕೊಟ್ಟನೆಂದು ಇದರಲ್ಲಿ ಬರೆದಿದೆ. ಈ ಶಾಸನದಲ್ಲಿ ಕಾಲ ನಿರ್ದೇಶವಿಲ್ಲ.

೪. ಸಾತಾರೆಯ ತಾಮ್ರಶಾಸನವು. ೨ ನೆಯ ಪುಲಿಕೇಸಿಯ ಆಳಿಕೆಯ ೮ ನೆಯ ವರ್ಷ ಅಂದರೆ ೩೧ ಆಕ್ಟೋಬರ ೬೧೭. ಪುಲಿಕೇಸಿಯ ತಮ್ಮನಾದ ಯುವರಾಜ ವಿಷ್ಣುವರ್ಧನನು ಕೆಲಬ್ರಾಹ್ಮಣರಿಗೆ ಆಳಂದ ತೀರ್ಥವನ್ನು ದಾನ ಕೊಟ್ಟನು.

೫. ಅಯ್ಹೊಳೆಯೊಳಗೆ ಮೇಗುಟಿ ಎಂಬ ಜಿನೇಂದ್ರನ ಗುಡಿಯಲ್ಲಿ ರವಿಕೀರ್ತಿಯೆಂಬ ಪ್ರಸಿದ್ಧ ಕವಿಯು ಕೊರೆಯಿಸಿಟ್ಟ ಶಿಲಾಲೇಖವು ಕಲಿಯುಗ ಸಂವತ್ ೩೭೩೫ ಶಕೆ ೫೫೬ ಇಸ್ವಿ ೬೩೪-೩೫ ರದು.

ಇದರಲ್ಲಿದ್ದ ಎಲ್ಲ ಐತಿಹಾಸಿಕ ಅಂಶಗಳನ್ನು ಮೇಲೆ ಸಂಗ್ರಹಿಸಿ ಬರೆದಿರುತ್ತೇವೆ.

೬. ನಾಸಿಕ ಜಿಲ್ಲೆಯೊಳಗಿನ ನಿರ್ಪಣ ಎಂಬ ಊರಿನ ತಾಮ್ರಶಾಸನ. ಇದರಲ್ಲಿ ಕಾಲನಿರ್ದೇಶವಿಲ್ಲ. ತ್ರಿಭುವನಾಶ್ರಯ ನಾಗವರ್ಧನನೆಂಬವನು ಗೋಪರಾಷ್ಟ್ರ ವಿಷಯದಲ್ಲಿದ್ದ ಬಾಲೆಗ್ರಾಮ (ಬೆಳಗಾವ ತರಾಹ್ಲಾ) ಎಂಬ ಗ್ರಾಮವನ್ನು ಕಪಿಲೇಶ್ವರನಿಗೆ ಉಂಬಳಿ ಹಾಕಿಕೊಟ್ಟನೆಂದು ಇದರಲ್ಲಿ ಬರೆದಿದೆ. ಈ ನಾಗವರ್ಧನನು ೨ ನೆಯ ಪುಲಿಕೇಸಿಯ ೩ ನೆಯ ಮಗನಾದ ಜಯಸಿಂಹವರ್ಮನ ಮಗನಾಗಿದ್ದನಂತೆ.

೭. ಮೈಸೂರು ಸಂಸ್ಥಾನ ಕೋಲಾರ ಜಿಲ್ಲೆ ಗೋರಿಬಿದನೂರು ತಾಲೂಕು ಹೊಸೂರಿನಲ್ಲಿದ್ದ ತಾಮ್ರಶಾಸನವು. ಇದರಲ್ಲಿ ಕಾಲನಿರ್ದೇಶವಿಲ್ಲ. ಹರ್ಷವರ್ಧನನನ್ನು ಗೆದ್ದ ಪುಲಿಕೇಸಿಯು ತನ್ನ **ಅಂಬೆರೆ** ಎಂಬ ಮಗಳ ಇಚ್ಛೆಯಂತೆ ಪೆರೆಯಾಳೆಂಬ ಗ್ರಾಮವನ್ನು ಬ್ರಾಹ್ಮಣರಿಗೆ ದಾನ ಕೊಟ್ಟನು.

---

೩ ನೆಯ ಅಧ್ಯಾಯ

ಪಶ್ಚಿಮ ಅಥವಾ ಬಾದಾಮಿ ಚಾಳುಕ್ಯರ ಇಳಿಗಾಲವು

(ಅ) ಒಳಜಗಳವೂ ಅರಾಜಕತೆಯೂ

ಹಿಂದಿನ ಅಧ್ಯಾಯದಲ್ಲಿ ನಮ್ಮ ವೀರ ಪುಲಿಕೇಸಿಯು ತನ್ನ ರಾಜ್ಯಲೋಭಿಯಾದ ಕಕ್ಕನಿಂದ ತನ್ನ ಪಿತ್ರಾರ್ಜಿತ ರಾಜ್ಯವನ್ನು ಕಿತ್ತಿಕೊಂಡು, ಎಡೆಬಿಡದೆ ಹಲವು ವಿಜಯ ದಂಡಯಾತ್ರೆಗಳನ್ನು ಕೈಕೊಂಡು, ಉತ್ತರಕ್ಕೆ ನರ್ಮದಾ ನದಿಯ ವರೆಗೂ ದಕ್ಷಿಣಕ್ಕೆ ಕಂಚಿಯ ವರೆಗೂ ಪೂರ್ವ ಪಶ್ಚಿಮ ದಿಕ್ಕುಗಳಲ್ಲಿ ಸಮುದ್ರಗಳ ವರೆಗೂ ತನ್ನ ಸಾಮ್ರಾಜ್ಯವನ್ನು ಬೆಳಿಸಿ, ತನ್ನ ಶೌರ್ಯ ಧೈರ್ಯ ಸಾಹಸ ಜನರಂಜನ ಬುದ್ಧಿಸಾಮರ್ಥ್ಯಗಳ ಕೀರ್ತಿಯನ್ನು ಭರತಖಂಡದಲ್ಲಿಷ್ಟೇ ಅಲ್ಲ, ಅದರ ನೆರೆಹೊರೆಯ ದೇಶಗಳಲ್ಲಿ ಕೂಡ ಹರವಿ, ಅತಿವೈಭವದಿಂದ ೩೦ ಅಥವಾ

೩೨ ವರ್ಷ (೬೧೦–೬೪೦ ಅಥವಾ ೬೪೨) ರಾಜ್ಯವಾಳಿದನೆಂದು ಬರೆದಿರು ತ್ತೇವಷ್ಟೇ. ವಾಯುವ್ಯದಲ್ಲಿ ಕೋಶಲದ ಅರಸನೂ ದಕ್ಷಿಣದಲ್ಲಿ ಚೇರ ಚೋಳ ಪಾಂಡ್ಯ ಗಂಗರಸರೂ ಅವನ ಒಡೆತನಕ್ಕೆ ಒಳಗಾಗಿ ಅವನ ಸ್ನೇಹಿತರಾಗಿ ಆಳುತ್ತಿದ್ದರು. ಕಂಚಿಯ ಪಲ್ಲವರು ಮಾತ್ರ ಹೆಡೆತುಳಿದ ಹಾವಿನಂತೆ ಬುಸಗುಟ್ಟುತ್ತಿದ್ದರು. ವೆಂಗಿನಾಡಿನ ಕುಬ್ಜ ವಿಷ್ಣುವರ್ಧನನು ಸ್ವತಂತ್ರನಾದರೂ ಅವನಿಗೆ ಅನುಕೂಲನಾಗಿದ್ದನು. ಮಧ್ಯಪ್ರಾಂತ, ಗುಜರಾಥ, ಮಾಳವ, ಲಾಟ, ವರ್‍ಹಾಡ, ಖಾನದೇಶ, ನಾಸಿಕ, ಹೈದ ರಾಬಾದ, ಕುಂತಳ, ಸಾವಂತವಾಡಿ, ಕೊಂಕಣ, ಬನವಾಸಿ ಮುಂತಾದ ಪ್ರಾಂತಗಳ ಮಂಡಲೇಶ್ವರರು ಕಯ್ಕಟ್ಟಿಕೊಂಡು ಅವನ ಆಜ್ಞೆಯನ್ನು ಮಹಾಪ್ರಸಾದವೆಂದು ಪಾಲಿಸುತ್ತಿದ್ದರು. ನೂರಾರು ಕಾಳೆಗಗಳಲ್ಲಿ ತಿಂದ ಕಡತಗಳಿಂದ ಮೆರೆಯುವ ನುರಿತ ಸಾವಿರಾರು ದಂಡಾಳುಗಳೂ ದೇವೇಂದ್ರನ ಐರಾವತವನ್ನು ಹೋಲುವ ನೂರಾರು ಸೊಕ್ಕಿದ ಆನೆ ಗಳೂ ವಾಯುವೇಗದಿಂದ ಹೋಗುವ ಸಾವಿರಾರು ಕುದುರೆಗಳೂ ತಪ್ಪದೆ ಗುರಿಹೊಡೆಯುವ ಸಹಸ್ರಾವಧಿ ಬಿಲ್ಲುಗಾರರೂ ಸೇನಾರಚನೆ ಯಲ್ಲಿಯೂ ದಂಡಿನವರನ್ನು ಹುರಿದುಂಬಿಸುವುದರಲ್ಲಿಯೂ ಸಾಹಸ ಕಾರ್ಯಗಳಲ್ಲಿಯೂ ಎದೆಗಾರಿಕೆಯಲ್ಲಿಯೂ ಹಗೆಗಳು ಹೊಯ್ದಾಡುವ ಸಂದಿಯನ್ನು ಕಂಡುಹಿಡಿದು ಬಲು ಹುರುಪಿನಿಂದ ನುಗ್ಗಿ ಶತ್ರುಗಳನ್ನು ಕಂಗೆಡಿಸುವುದರಲ್ಲಿಯೂ ಚತುರರಾದ ಹತ್ತಿಪ್ಪತ್ತು ಮಂದಿ ಮಹಾರಥಿಕ ರಾದ ದಳವಾಯಿಗಳೂ ಅವನ ದಂಡಿನಲ್ಲಿ ಬೇಸಿಗೆಕಾಲದ ಅಮಾವಾಸ್ಯೆಯ ರಾತ್ರಿಯಲ್ಲಿ ಬೆಳಗುವ ಚಿಕ್ಕಿಗಳಂತೆ ಹೊಳೆಯುತ್ತಿದ್ದರು. ರಾಜ್ಯನೀತಿ ವಿಶಾರದರೂ ಧರ್ಮಶಾಸ್ತ್ರಜ್ಞರೂ ವ್ಯವಹಾರಜ್ಞರೂ ಪಾಪಭೀರುಗಳೂ ಕಾರ್ಯದಕ್ಷರೂ ಆದ ಸಾವಿರಾರು ಮಂದಿ ರಾಜಾಧಿಕಾರಿಗಳು ಇಡಿ ರಾಜ್ಯಕ್ಕೆ ಸೇರಿದ ಎಲ್ಲ ಪ್ರಜೆಗಳ ಯೋಗಕ್ಷೇಮವನ್ನು ನೋಡಿ ಅವ ರನ್ನು ಸುಖದಿಂದ ಪಾಲಿಸುತ್ತಿದ್ದರು. ಸಾರಾಂಶವೇನೆಂದರೆ, ಹುವೆ ನತ್ಸ್ಯಾಂಗನು ನಮ್ಮ ವೀರಶಿರೋಮಣಿಯ ರಾಜ್ಯವಿಸ್ತಾರವನ್ನೂ ರಾಜ್ಯಭಾರವನ್ನೂ ರಾಜಧಾನಿಯನ್ನೂ ವರ್ಣಿಸಿದ ವರುಷ ಅಂದರೆ ೬೪೧ ರಲ್ಲಿ ಡಾ॥ ಫ್ಲೀಟರು ಬರೆಯುವಂತೆ, ನಮ್ಮ ವೀರ ಪುಲಿಕೇಸಿಯ

ರಾಜ್ಯವೈಭವವು ಉನ್ನತಶಿಖರಕ್ಕೆ ಮುಟ್ಟಿತ್ತೆಂದರೆ ಅತಿಶಯೋಕ್ತಿಯಾಗಲಾರದು.

ಇಂತಹ ಅತಿವಿಸ್ತಾರವಾದ ಸಾಮ್ರಾಜ್ಯವೂ ಇಂತಹ ಕೊಬ್ಬಿದ ದಂಡೂ ಇಂತಹ ನೀತಿ ವ್ಯವಹಾರಜ್ಞರು ಕಯ್ಕೊಂಡ ರಾಜ್ಯಭಾರವೂ ಇಂತಹ ಅಷ್ಟೈಶ್ವರ್ಯದಿಂದ ಮೆರೆಯುವ ರಾಜಧಾನಿಯೂ ಇಂತಹ ಸೋಲರಿಯದ ನಮ್ಮ ವೀರ ಪುಲಿಕೇಸಿಯ ಪರಾಕ್ರಮವೂ ಒಮ್ಮೆಲೆ ಮುಂದೆ ೨-೩ ವರ್ಷಗಳಲ್ಲಿ ಇಲ್ಲದಂತಾದುದು ಬಲು ಸೋಜಿಗವಲ್ಲವೇ? ಇಂತಹ ಅತ್ಯಾಶ್ಚರ್ಯಕರವಾದ ಸಂಗತಿಯು ಹಿಂದೆ ಎಂದಾದರೂ ಆಯಿತೇ? ಮುಂದೆ ಆಗುವ ಸಂಭವವುಂಟೇ? ಪ್ರಬಲರಾದ ಪರಚಕ್ರಗಳು ದುರ್ಬಲರಾದ ಅರಸರನ್ನು ಸೋಲಿಸಿ ಅವರ ರಾಜ್ಯದ ಭಾಗಗಳನ್ನು ಕಿತ್ತಿಕೊಂಡ ಉದಾಹರಣೆಗಳು ಹೇರಳವಾಗಿ ದೊರೆಯುತ್ತವೆ. ಕ್ಷುಬ್ಧರಾದ ಪ್ರಜೆಗಳು ದುಷ್ಟರಾದ ತಮ್ಮ ಅರಸರನ್ನು ಪಟ್ಟದಿಂದ ತಳ್ಳಿ ಬೇರೆಯವರನ್ನು ತಮ್ಮ ಅರಸರಾಗಿ ಮಾಡಿಕೊಂಡ ಉದಾಹರಣೆಗಳಾದರೂ ಕೆಲವುಂಟು. ನಮ್ಮ ಭರತಖಂಡದ ಇತಿಹಾಸದೊಳಗೆ ಎರಡನೆಯ ತಲೆಯಲ್ಲಿ ರಾಜ್ಯವನ್ನು ಕಳೆಕೊಂಡ ಉದಾಹರಣೆಗಳು ಎರಡುಂಟು. ಬಾಬರನು ಸ್ಥಾಪಿಸಿದ ಮೊಗಲರ ಸಾಮ್ರಾಜ್ಯವನ್ನು ಅವನ ಮಗನಾದ ಹುಮಾಯುನನು ಕಳೆಕೊಂಡು ಇರಾಣಕ್ಕೆ ಓಡಿಹೋದುದೂ (೧೫೪೦), ಛತ್ರಪತಿ ಸಿವಾಜಿ ಮಹಾರಾಜನು ಅತ್ಯಂತವಾಗಿ ಶ್ರಮಪಟ್ಟು ಸ್ಥಾಪಿಸಿದ ಮರಾಟಿ ರಾಜ್ಯವನ್ನು ಅವನ ಮಗನಾದ ಸಂಬಾಜಿಯು ಕಳೆಕೊಂಡು ಅವರಂಗಜೇಬ ಬಾದಷಹನಿಂದ ಕೊಲ್ಲಿಸಲ್ಪಟ್ಟುದೂ (೧೬೮೯) ವಾಚಕರ ನೆನಪಿನಲ್ಲಿರಬಹುದು. ಆದರೆ ಮಹಾಬಲಿಷ್ಟನೂ ಪ್ರಸಿದ್ಧ ಜಯಶಾಲಿಯೂ ಆದ ನಮ್ಮ ವೀರ ಪುಲಿಕೇಸಿಯು ಜೀವಂತನಿರುವಾಗಲೇ ತನ್ನ ರಾಜ್ಯವನ್ನೂ ರಾಜಧಾನಿಯನ್ನೂ ಕಳೆಕೊಂಡನೆಂಬ ಮಾತು ಅಕ್ಕಜವನ್ನು ಮಿಕ್ಕ ಸಂಗತಿಯಲ್ಲವೇ?

ಕಾಲಮಹಿಮೆಯು ಅತಿವಿಚಿತ್ರವಾದುದು. ಕಾಲಮಹಾತ್ಮೆಯಿಂದ ತಿಪ್ಪೆ ಹೋಗಿ ಉಪ್ಪರಿಗೆಯಾಗಬಹುದು, ಉಪ್ಪರಿಗೆ ಹೋಗಿ ತಿಪ್ಪೆಯಾಗಬಹುದು ಎಂಬ ಗಾದೆಯು ಸುಳ್ಳಲ್ಲ. ೩೦ ವರುಷ ದಿಗ್ವಿ

ಜಯದಿಂದ ಮೆರೆದ ವೀರ ಪುಲಿಕೇಸಿಯ ಆಳಿಕೆಯ ಕೊನೆಗಾಲವು ಅನರ್ಥಕರವಾಯಿತೆಂತಲೂ ಪಲ್ಲವ ಅರಸನಾದ ೧ ನೆಯ ನರಸಿಂಹವರ್ಮನು **ಪರಿಯಾಳ, ಮಣಿಮಂಗಳ, ಸುರಮಾರ** ಮುಂತಾದ ಸ್ಥಳಗಳಲ್ಲಿ ಪುಲಿಕೇಸಿಯನ್ನು ಸೋಲಿಸಿದೆನೆಂದು ಹೇಳಿಕೊಳ್ಳುತ್ತಾನೆಂತಲೂ ಅವನು ಬಾದಾಮಿಯನ್ನು ಹಿಡಿದುಕೊಂಡು ಸುಲಿದನೆಂತಲೂ, ವಿಷ್ಣು ದೇವಾಲಯಗಳಿಗೆ ಚಾಳುಕ್ಯರು ಕೊಟ್ಟ ಉಂಬಳಿಗಳನ್ನು ಶಿವಾಲಯಗಳಿಗೆ ಕೊಟ್ಟನೆಂತಲೂ ಇವೆಲ್ಲ ಸಂಗತಿಗಳು ೬೪೨ ರಲ್ಲಿ ಒದಗಿದವೆಂತಲೂ ಡಾ॥ ಫ್ಲೀಟರು ಬರೆಯುತ್ತಾರೆ*. ಆದರೆ ರಣಮಹಾಧುರೀಣನಾದ ನಮ್ಮ ವೀರ ಪುಲಿಕೇಸಿಯನ್ನು ಪಲ್ಲವ ೧ ನೆಯ ನರಸಿಂಹವರ್ಮನು ೩-೪ ಕಾಳೆಗಗಳಲ್ಲಿ ಸೋಲಿಸಿದನೆಂಬುದು ನಿಜವೇ? ಸುಮಾರು ೧೦೦ ವರ್ಷಗಳ ವರೆಗೆ ಚಾಳುಕ್ಯ ಚಕ್ರವರ್ತಿಗಳ ರಾಜಧಾನಿಯಾಗಿ ಮೆರೆಯುತ್ತಿದ್ದ ವಾತಾಪಿ ನಗರವು ಇಷ್ಟು ಸುಲಭವಾಗಿ ಪಲ್ಲವರ ಕಯ್ಸೇರಲಿಕ್ಕೆ ಕಾರಣವು ಏನಾಗಿರಬಹುದು? ಈ ಎರಡು ಮಹತ್ವದ ಪ್ರಶ್ನೆಗಳನ್ನು ಡಾ॥ ಭಾಂಡಾರಕರರಾಗಲಿ, ಡಾ॥ ಫ್ಲೀಟರಾಗಲಿ ಬಿಡಿಸಲಿಕ್ಕೆ ಯತ್ನಿಸಿಲ್ಲ, ಇಷ್ಟೇ ಅಲ್ಲ; ಅವುಗಳನ್ನು ಎತ್ತುವ ಗೊಡವೆಗಾದರೂ ಅವರು ಹೋಗಲಿಲ್ಲೆಂದು ಬರೆಯಲಿಕ್ಕೆ ಅತ್ಯಂತವಾಗಿ ವಿಷಾದಿಸುತ್ತೇನೆ. ಈ ಉಭಯ ಡಾಕ್ಟರರ ಪ್ರಾಕ್ತನ ವಿಮರ್ಶ ವಿಚಕ್ಷಣತೆಯೂ ಇವರ ಅನುಭವವೂ ಇವರ ಜ್ಞಾನಭಾಂಡಾರವೂ ಮೇಲಿನ ಎರಡು ಪ್ರಶ್ನೆಗಳನ್ನು ಸರ್ವಸಮರ್ಪಕವಾಗಿ ಬಿಡಿಸಬಹುದಾಗಿತ್ತು, ಎಂದು ಬರೆಯಲಿಕ್ಕೆ ಏನೂ ಅಡ್ಡಿಯಿಲ್ಲ. ಆದರೆ ಮಿಂಚಿಹೋದ ಮಾತಿಗೆ ಚಿಂತಿಸಿ ಫಲವೇನು? ಅವರು ಬಿಟ್ಟುದನ್ನು ನಾವು ಯಥಾಮತಿಯಾಗಿ ನಿಷ್ಕರ್ಷಿಸಿ ಪೂರೈಸಬೇಕಲ್ಲವೇ? ಶ್ರೀರಾಮನ ಸೇತುಬಂಧಕಾಲದಲ್ಲಿ ಮಾರುತಿಯು ದೊಡ್ಡ ದೊಡ್ಡ ಗುಡ್ಡಗಳನ್ನು ಕಿತ್ತಿ ತಂದು ಹಾಕುವಾಗ ತಾನು ತರುವ ಮಣ್ಣಿನ ಕಣದಿಂದ ಪ್ರಯೋಜನವಾಗಲಿಕ್ಕಿಲ್ಲೆಂದೆಣಿಸಿ ಅಣಿಚಿಯು ಸುಮ್ಮನೇ ಕುಳಿತಿತೇ?

---

* ಮುಂಬಯಿ ಇಲಾಖೆಯ ಗ್ಯಾಜಟಿಯರ ಸಂ. ೧, ಭಾ. ೨, ಪು. ೩೫೮–೫೯.

ನಮ್ಮ ವೀರ ಪುಲಿಕೇಸಿಯು ಪಲ್ಲವರನ್ನು ಸೋಲಿಸಿ ಕಂಚಿಪುರವನ್ನು ಮುತ್ತಿದಂದಿನಿಂದ ಯುವರಾಜನಾದ ನರಸಿಂಹವರ್ಮನ ಸಿಟ್ಟು ಸಣ್ಣಾಗಿ ಹೊತ್ತುತ್ತಿತ್ತು. ವಾತಾಪಿಯನ್ನು ಹಿಡಿದುಕೊಂಡು ಮುಯ್ಯತೀರಿಸಿಕೊಳ್ಳಬೇಕೆಂಬ ಹವಣಿಕೆಯು ಅವನ ಎದೆಯನ್ನು ಎಡೆಬಿಡದೆ ಕೊರೆಯುತ್ತಿತ್ತು. ಅವನು ಅದೇ ಉದ್ದೇಶದಿಂದ ತನ್ನ ದಂಡನ್ನು ಬೆಳೆಸಿರಬಹುದು; ಯುದ್ಧದ ಜೋಡಣೆಯನ್ನು ಮಾಡಿರಬಹುದು. ಆದರೆ ಕಸ್ಪುಯು ಎಷ್ಟು ಸೊಕ್ಕಿದರೂ ಎತ್ತಿಗೆ ಸರಿಯಾಗಬಹುದೇ? ತುಸು ವರ್ಷಗಳ ಹಿಂದೆ ಸೋತು ನಮ್ಮ ವೀರ ಪುಲಿಕೇಸಿಗೆ ಶರಣು ಬಂದ ಮತ್ತು ಮುಂದೆ ಕೆಲವರ್ಷಗಳ ತರುವಾಯ ನಮ್ಮ ವೀರಶಿರೋಮಣಿಯ ಮಗನಾದ ವಿಕ್ರಮಾದಿತ್ಯನಿಂದ ಸೋತು ಕಂಚಿ ರಾಜಧಾನಿಯನ್ನು ಕಳೆದುಕೊಂಡ ಪಲ್ಲವರು ಮಹಾಪರಾಕ್ರಮಶಾಲಿಯೆಂದು ಪ್ರಸಿದ್ಧಿಯನ್ನು ಹೊಂದಿದ ನಮ್ಮ ವೀರ ಪುಲಿಕೇಸಿಯನ್ನು ಒಂದರ ಹಿಂದೊಂದು ಕಾಳೆಗದಲ್ಲಿ ಸೋಲಿಸಲಿಕ್ಕೆ ಸಮರ್ಥರಾಗಬಹುದೇ? ನನಗಂತೂ ಇದು ಸಂಭವವೆಂದು ತೋರುವುದಿಲ್ಲ. ನಮ್ಮ ವೀರ ಪುಲಿಕೇಸಿಯು ರಣಧುರೀಣನು, ಅವನ ದಳವಾಯಿಗಳು ಯುದ್ಧಕುಶಲರು, ಅವನ ದಂಡಾಳುಗಳು ಕಾಳೆಗದಲ್ಲಿ ನುರಿತವರು. ಇಂತಹ ದಂಡಾಳುಗಳನ್ನೂ ಇಂತಹ ದಳವಾಯಿಗಳನ್ನೂ ಇಂತಹ ರಣಪರಾಕ್ರಮಶಾಲಿಯನ್ನೂ ತಿರುತಿರುಗಿ ಸೋಲಿಸುವಷ್ಟು ಶೌರ್ಯವು ಇಷ್ಟು ತುಸು ಕಾಲದಲ್ಲಿ ಪಲ್ಲವರಿಗೆ ಎಲ್ಲಿಂದ ಬರಬೇಕು?

ಪಲ್ಲವರು ನಮ್ಮ ವೀರ ಪುಲಿಕೇಸಿಯನ್ನು ಸೋಲಿಸಿದರೆಂಬ ಮಾತು ಸುಳ್ಳಾದರೆ ನರಸಿಂಹವರ್ಮನು ಪರಿಯಾಳ, ಮಣಿಮಂಗಳ ಸುರಮಾರ ಕಾಳೆಗಗಳಲ್ಲಿ ಪುಲಿಕೇಸಿಯನ್ನು ಸೋಲಿಸಿ ಅವನ ಬೆನ್ನು ಮೇಲೆ ಸೋಲು ಎಂಬ ಮುದ್ರೆಯನ್ನು ಒತ್ತಿದನೆಂಬ ಪಲ್ಲವ ಶಾಸನಗಳ ಬರಹವು ಸಟೆಯಾಗಿತ್ತೇನು? ಎಂಬ ಪ್ರಶ್ನವು ಸ್ವಾಭಾವಿಕವಾಗಿ ಹುಟ್ಟುತ್ತದೆ. ಪಲ್ಲವರ ಶಾಸನಗಳು ಹುಸಿಯಾಗಿದ್ದವೆಂದು ನಾವು ಹೇಳಲಾರೆವು. ಆದರೆ ಅವುಗಳಲ್ಲಿ ಸತ್ಯಾಂಶಕ್ಕಿಂತಲೂ ಬಡಾಯಿಯು ಹೆಚ್ಚಾಗಿರಬಹುದೆಂದು ನಮಗೆ ಸಂಶಯವು ಬರುತ್ತದೆ. ಅವರು ನಮ್ಮ

ವೀರಶಿಖಾಮಣಿಯನ್ನು ಸೋಲಿಸದೆ, ಚಾಳುಕ್ಯ ದಂಡಿನ ಭಾಗವನ್ನು ಸೋಲಿಸಿ, ತಾವು ಪುಲಿಕೇಶಿಯನ್ನೇ ಸೋಲಿಸಿದೆವೆಂದು ತಮ್ಮ ಶಾಸನಗಳಲ್ಲಿ ಬಡಾಯಿಕೊಚ್ಚಿರುತ್ತಾರೆಂದು ನನ್ನ ಮನೋದೇವತೆಯು ಹೇಳುತ್ತಾಳೆ. ಹಿಂದಿನ ಅರಸರ ಶಾಸನಗಳಾಗಲಿ ಈಗಿನ ಸಾರ್ವಭೌಮರ ಜಾಹಿರಾತುಗಳಾಗಲಿ ಅತ್ಯಲ್ಪ ಸತ್ಯಾಂಶವನ್ನೊಳಗೊಂಡ ಬಡಾಯಿ ವಿಚಾರಗಳಾಗಿರುತ್ತವೆಂಬುದು ವಾಚಕರ ಅನುಭವವನ್ನು ಮಿಕ್ಕಿದ ಮಾತಲ್ಲ. ೧೯೧೪ ರಿಂದ ೧೯೧೮ ರ ವರೆಗೆ ಆದ ಯುರೋಪದ ಮಹಾಯುದ್ಧದಲ್ಲಿ ಜರ್ಮನರಿಂದ ಸೋತು ಹಿಂಜರಿದ ಇಂಗ್ಲಿಷ ಫ್ರೆಂಚರು ತಾವು ಜಯಶಾಲಿಯಾಗಿ ಹಿಂದಿರುಗಿದೆವೆಂದು ಹೇಳಿಕೊಳ್ಳುತ್ತಿದ್ದಿಲ್ಲವೇ? ಈಗ ನಮ್ಮ ವೀರ ಪುಲಿಕೇಶಿಯನ್ನು ಬಾರಿಬಾರಿಗೆ ಸೋಲಿಸಿದೆನೆಂದು ಹೇಳಿಕೊಳ್ಳುವ ನರಸಿಂಹವರ್ಮನ ತಂದೆಯಾದ ಮಹೇಂದ್ರವರ್ಮನು ತಾನು ಪುಳ್ಳಲೂರಿನಲ್ಲಿ ೨ ನೆಯ ಪುಲಿಕೇಶಿಯನ್ನು ಸೋಲಿಸಿದೆನೆಂದು ಶಾಸನದಲ್ಲಿ ಹೇಳಿಕೊಂಡುದು ಒಣ ಬಡಾಯಿಯ ಮಾತಾಗಿರುತ್ತದೆಂದು ಹಿಂದೆ ಬರೆದಿರುತ್ತೇವಷ್ಟೇ*. ಆದ್ದರಿಂದ ನರಸಿಂಹವರ್ಮನು ಪರಿಯಾಳ ಮುಂತಾದ ಸ್ಥಳಗಳಲ್ಲಿ ನಮ್ಮ ವೀರ ಪುಲಿಕೇಶಿಯನ್ನು ಸೋಲಿಸದೆ ಚಾಳುಕ್ಯ ದಂಡಿನ ಭಾಗವನ್ನು ಸೋಲಿಸಿರಬಹುದೆಂದು ನನ್ನ ಅಲ್ಪಮತಿಗೆ ತೋರುತ್ತದೆ.

ಪರಿಯಾಳ ಮುಂತಾದ ಕಾಳಗಗಳು ಆದವೆಂತಲೂ ಅವುಗಳಲ್ಲಿ ಪಲ್ಲವರು ಚಾಳುಕ್ಯರನ್ನು ಸೋಲಿಸಿ ಓಡಿಸಿ ಅವರನ್ನು ಬೆನ್ನಟ್ಟಿದರೆಂತಲೂ ನಾವು ಮೇಲೆ ಒಡಂಬಟ್ಟಿರುತ್ತೇವಷ್ಟೇ. ಒಂದರಹಿಂದೊಂದು ಕಾಳಗದಲ್ಲಿ ಚಾಳುಕ್ಯರು ಸೋಲುವಾಗ ವೀರ ಪುಲಿಕೇಶಿಯು ಮಲಗಿಕೊಂಡಿದ್ದನೇನು? ಜಯಶಾಲಿಯಾದ ನರಸಿಂಹವರ್ಮನು ಚಾಳುಕ್ಯರ ಪ್ರಖ್ಯಾತ ರಾಜಧಾನಿಯಾದ ವಾತಾಪಿಯನ್ನು ಹಿಡಿದುಕೊಂಡು ಸುಲಿಯುವಾಗ ವೀರ ಪುಲಿಕೇಶಿಯು ಉದ್ದು ಹುರಿಯುತ್ತಿದ್ದನೇನು? ಎಂದು ವಾಚಕರು ಸ್ವಾಭಾವಿಕವಾಗಿ ಆಕ್ಷೇಪಿಸಬಹುದು. ಈ

* ಹಿಂದೆ ಪುಟ ೨೪೫–೨೪೬.

ಆಕ್ಷೇಪಗಳಿಗೆ ಸರಿಯಾದ ಉತ್ತರವನ್ನು ಕೊಡಲಿಕ್ಕೆ ಅವಶ್ಯವಾದ ಶಾಬ್ದಪ್ರಮಾಣಗಳು ನಮಗೆ ಇನ್ನೂ ದೊರೆತಿಲ್ಲ. ಆದ್ದರಿಂದ ಈ ಪ್ರಶ್ನೆಗಳ ಉತ್ತರಗಳನ್ನು ನಾವು ಅನುಮಾನ ಪ್ರಮಾಣಗಳಿಂದಲೇ ಕೊಡಬೇಕಾಗಿರುತ್ತದೆ. ಈ ಸಂಬಂಧದಿಂದ ನನಗೆ ಹೊಳೆಯುವ ೩ ಅನುಮಾನಗಳನ್ನು ಕೆಳಗೆ ಕೊಡುತ್ತೇನೆ.

೧. ವೀರ ಪುಲಿಕೇಸಿಯು ಈ ಸಮಯದಲ್ಲಿ ರಾಜಯಕ್ಷ್ಮ (ಕ್ಷಯ ರೋಗ) ದಿಂದಾಗಲಿ, ಅರ್ಧಾಂಗವಾಯುವಿನಿಂದಾಗಲಿ, ಸಂಧಿವಾತ ದಿಂದಾಗಲಿ ನರಳುತ್ತ ಹಾಸಿಗೆ ಹಿಡಿದು ಬಹುಕಾಲ ಮಲಗಿರಬಹುದು.

೨. ವೀರ ಪುಲಿಕೇಸಿಯು ಬೇನೆಯಿಂದ ಮಲಗುವಂಥಾದ ಕಾರಣ ಅವನ ಮಕ್ಕಳೊಳಗೆ ಪಟ್ಟದ ವಿಷಯವಾಗಿ ಜಗಳಗಳು ನಡೆದಿರ ಬಹುದು.

೩. ವೀರ ಪುಲಿಕೇಸಿಯು ಬೇನಶ್ಯನಾದ್ದರಿಂದಲೂ ಅವನ ಮಕ್ಕಳು ತಂತಮ್ಮೊಳಗೆ ಪಟ್ಟದ ಸಲುವಾಗಿ ಬಡಿದಾಡತೊಡಗಿದ್ದ ರಿಂದಲೂ ಪಲ್ಲವ ನರಸಿಂಹವರ್ಮನಿಗೆ ಚಾಳುಕ್ಯರನ್ನು ಮುರಿಬಡಿದು ಅವರ ರಾಜಧಾನಿಯನ್ನು ಕೂಡ ಕಿತ್ತುಕೊಳ್ಳಲಿಕ್ಕೆ ಸುಸಂಧಿಯು ದೊರೆದಿರಬಹುದು.

ನಮ್ಮ ವೀರ ಪುಲಿಕೇಸಿಯು ಬಹುದಿವಸ ಕ್ಷಯರೋಗದಿಂದಾಗಲಿ ಸಂಧಿವಾತದಿಂದಾಗಲಿ ಅರ್ಧಾಂಗವಾಯುವಿನಿಂದಾಗಲಿ ದಣಿಯುತ್ತಿದ್ದ ನೆಂದು ೧ ನೆಯ ಅನುಮಾನದಲ್ಲಿ ಬರೆದಿರುತ್ತೇನಷ್ಟೇ. ಆದರೆ ಕ್ಷಯ ರೋಗವು ನಮಾರು ತಿಂಗಳಲ್ಲೇ ರೋಗಿಯನ್ನು ಸಾವಿಗೆ ಈಡು ಮಾಡುತ್ತದೆ ಮತ್ತು ಸಂಧಿವಾತವು ಆಗಿಂದಾಗ ಹೆಚ್ಚುಕಡಿಮೆ ಆಗು ತ್ತಿರುತ್ತದೆ. ಆದರೆ ಆ ಕಾಲದ ಪರಿಸ್ಥಿತಿಯನ್ನು ವಿಚಾರಿಸಲು ಪುಲಿ ಕೇಸಿಯು ಬಹುಕಾಲ ಬೇನೆಯಿಂದ ಬಳಲುತ್ತಿದ್ದನೆಂತಲೂ ಅವನು ನಡುನಡುವೆ ಕೆಲಕಾಲವಾದರೂ ಯಾವ ದೊಡ್ಡ ರಾಜ್ಯಕಾರ್ಯವನ್ನಾ ದರೂ ಕಯ್ಕೊಳ್ಳಲಿಕ್ಕೆ ಅಸಮರ್ಥನಾಗಿದ್ದನೆಂತಲೂ ಕಂಡುಬರುವುದ ರಿಂದ ನಮ್ಮ ವೀರಶಿಖಾಮಣಿಯು ಅರ್ಧಾಂಗವಾಯುವಿನಿಂದಲೇ ಬಹು ಕಾಲ ನರಳುತ್ತಿದ್ದನೆಂದು ನಿಶ್ಚಯಿಸಬಹುದು. ಈ ಅರ್ಧಾಂಗ

ರೋಗಿಗಳು ೧೫-೨೦ ವರ್ಷ ಬಾಳಬಹುದಾದರೂ ಅವರ ಅಂಗೋಪಾಂಗಗಳು ಅವರ ಸ್ವಾಧೀನದಲ್ಲಿ ಇಲ್ಲದಿರುವುದರಿಂದ ಅವರು ಯಾವ ಕೆಲಸವನ್ನಾದರೂ ಮಾಡಲಾರರು. ಇಂತಹ ದುಸ್ಥಿತಿಯಲ್ಲಿ ನಮ್ಮ ವೀರಶಿರೋಮಣಿಯು ತನ್ನ ಆಯುಷ್ಯದ ಕೊನೆಗಾಲವನ್ನು ಕಳೆದಿರಬಹುದೆಂದು ನನ್ನ ಕಲ್ಪನೆಯು ಹರಿಯುತ್ತದೆ.

ನಮ್ಮ ವೀರ ಪುಲಿಕೇಸಿಯು ಅರ್ಧಾಂಗವಾಯುವಿನಿಂದ ನರಳುತ್ತ ಮಲಗಿದ್ದರೆ, ಚಾಳುಕ್ಯ ಸಾಮ್ರಾಜ್ಯದ ಭಾರವನ್ನು ವಹಿಸಲಿಕ್ಕೆ ಅವನ ಮಕ್ಕಳಾಗಲಿ ಮಂತ್ರಿಗಳಾಗಲಿ ಯಾರೂ ಇದ್ದಿಲ್ಲವೇನು? ಪಲ್ಲವರು ದ್ರೋಹಬಗೆಯುತ್ತಾರೆಂಬ ಸುದ್ದಿಯು ಬೇಹಿನವರಿಂದ ತಿಳಿದ ಕೂಡಲೆ ಅವನ ಮಗನಾಗಲಿ ಮಂತ್ರಿಯಾಗಲಿ ದಂಡೆತ್ತಿಹೋಗಿ ಅವರ ಬಂಡನ್ನು ತಗ್ಗಿಸಲಿಲ್ಲವೇಕೆ? ನರಸಿಂಹವರ್ಮನನ್ನು ತಮ್ಮ ರಾಜಧಾನಿಯಾದ ಬಾದಾಮಿಯ ವರೆಗೆ ಬರಗೊಟ್ಟರೇಕೆ? ಅವನು ರಾಜಧಾನಿಯನ್ನು ಮುತ್ತಿದಾಗಾದರೂ ತಮ್ಮ ಎಲ್ಲ ದಂಡನ್ನು ಒಟ್ಟುಗೂಡಿಸಿ ಪಲ್ಲವರನ್ನು ಹೊಡೆದೋಡಿಸಲಿಲ್ಲವೇಕೆ? ಎಂಬ ಪ್ರಶ್ನಗಳು ಸ್ವಾಭಾವಿಕವಾಗಿ ಇಲ್ಲಿ ತಲೆದೋರುತ್ತವೆ.

೨ನೆಯ ಪುಲಿಕೇಸಿಗೆ ೪ ಮಂದಿ ಗಂಡುಮಕ್ಕಳಿದ್ದರೆಂದು ಡಾ। ಫ್ಲೀಟರು ಕೊಟ್ಟ ಬಾದಾಮಿ ಚಾಳುಕ್ಯರ ವಂಶವೃಕ್ಷದಿಂದ ಕಂಡುಬರುತ್ತದೆ. ಮೊದಲನೆಯವನು **ಆದಿತ್ಯವರ್ಮನು,** ಎರಡನೆಯವನು **ಚಂದ್ರಾದಿತ್ಯನು,** ಮೂರನೆಯವನು ಸತ್ಯಾಶ್ರಯ ರಣರಸಿಕ **೧ನೆಯ ವಿಕ್ರಮಾದಿತ್ಯನು,** ೪ನೆಯವನು ಧಾರಾಶ್ರಯ **ಜಯಸಿಂಹವರ್ಮನು.** ೨ನೆಯ ಪುಲಿಕೇಸಿಯು ಜೀವಿಸಿದ್ದಾಗ ವಿಕ್ರಮಾದಿತ್ಯನ ಹೊರತು ಉಳಿದ ಮೂವ್ವರು ಬೇರೆ ಬೇರೆ ಪ್ರಾಂತಗಳಲ್ಲಿ ಮಂಡಲೇಶ್ವರರಾಗಿದ್ದರೆಂದು ತೋರುತ್ತದೆ. ಹಿರಿಯವನಾದ ಆದಿತ್ಯವರ್ಮನು ಚಿತ್ರದುರ್ಗ, ಬಳ್ಳಾರಿ, ಕರ್ನೂಲು ನಾಡುಗಳನ್ನೊಳಗೊಂಡ ನೊಳಂಬವಾಡಿ ಪ್ರಾಂತವನ್ನು ಆಳುತ್ತಿದ್ದನು. ೨ನೆಯವನಾದ ಚಂದ್ರಾದಿತ್ಯನು ರೇವತಿದ್ವೀಪ (ಸಾವಂತವಾಡಿ) ದಲ್ಲಿದ್ದು ಉತ್ತರ ಕೊಂಕಣ ಪ್ರಾಂತವನ್ನು ಆಳುತ್ತಿದ್ದನು. ೪ನೆಯವನಾದ ಜಯಸಿಂಹವರ್ಮನು ಗುಜ

ರಾತ ಪ್ರಾಂತವನ್ನು ಆಳುತ್ತಿದ್ದನು. ಮೂರನೆಯ ಮಗನಾದ ವಿಕ್ರಮಾದಿತ್ಯನು ೨ ನೆಯ ಪುಲಕೇಶಿಯ ಪ್ರೀತಿಯ ಮಗನಾದ್ದರಿಂದಲೋ ಅವನು ಸಾಮ್ರಾಜ್ಯದ ಭಾರವನ್ನು ಹೊರಲಿಕ್ಕೆ ತಕ್ಕವನೆಂದು ಪುಲ



ಕಂಚಿಯ ಪಲ್ಲವ ಅರಸನಾದ ವಾತಾಪಿಕೊಂಡ ನರಸಿಂಹವರ್ಮ (ಸಿಂಹವಿಷ್ಣು) ನೂ ಅವನ ಇಬ್ಬರು ರಾಣಿಯರೂ.

ಕೇಶಿಯು ಬಗೆದದ್ದರಿಂದಲೋ ತಂದೆಯ ಬಳಿಯಲ್ಲೇ ನಿಂತು ರಾಜ್ಯ ಕಾರ್ಯವನ್ನು ಜರಗಿಸತೊಡಗಿದ್ದನು.

ಅಸೂಯೆ ಅಥವಾ ಹೊಟ್ಟೆಕಿಚ್ಚು ಬಲುಕೆಟ್ಟ ದುರ್ಗುಣವಾಗಿರುತ್ತದೆಂಬುದನ್ನು ಎಲ್ಲ ವಾಚಕರು ಬಲ್ಲರು. ಇದರಿಂದ ಮನುಷ್ಯ

ವರ್ಗಕ್ಕೆ ಆದಷ್ಟು ಹಾನಿಯು ಬೇರೆ ಯಾವ ದುರ್ಗುಣದಿಂದಲೂ ಆಗಲಿಕ್ಕಿಲ್ಲೆಂದು ಹೇಳಬಹುದು. ಅಹಂಕಾರವೇ ಇದರ ತಂದೆ, ಲೋಭವೇ ಇದರ ತಾಯಿ. ಈ ದುರ್ಗುಣವಿಶಿಷ್ಟರಾದವರ ಬುದ್ಧಿಯು ಭ್ರಾಂತಿಸುತ್ತದೆ, ವಿಚಾರವು ಕುಗ್ಗುತ್ತದೆ, ದೃಷ್ಟಿಯು ಆಕುಂಚಿತವಾಗುತ್ತದೆ. ಯಾವನಾದರೊಬ್ಬನು ತನ್ನ ಸತ್ವಗುಣದಿಂದಾಗಲಿ, ಬುದ್ಧಿಸಾಮರ್ಥ್ಯದಿಂದಾಗಲಿ, ಅನುಕೂಲವಾದ ಪರಿಸ್ಥಿತಿಯಿಂದಾಗಲಿ, ಸಂಪತ್ತನ್ನಾಗಲಿ, ಕೀರ್ತಿಯನ್ನಾಗಲಿ, ಅಧಿಕಾರವನ್ನಾಗಲಿ ಸಂಪಾದಿಸಿದರೆ ಅವರ ಹೊಟ್ಟೆಯಲ್ಲಿ ಕಿಚ್ಚು ಏಳುತ್ತದೆ. ಅವರ ಗುಣಗ್ರಹಣವನ್ನು ಮಾಡಿ ಅವರನ್ನು ಅನುಕರಿಸುವುದರ ಬದಲು ಅವರನ್ನು ಕೆಡಿಸಲಿಕ್ಕೆ ಈ ಮತ್ಸರಿಗಳು ಮುಂದರಿಯುತ್ತಾರೆ. ಈ ಕೆಡುಕತನದಿಂದ ದೇವತಾಕಾರ್ಯಕ್ಕೆ ಎಷ್ಟು ವಿಘ್ನ ಬರುತ್ತದೆಂಬುದನ್ನೂ ಜನರಿಗೆ ಎಷ್ಟು ಕೇಡಾಗುತ್ತದೆಂಬುದನ್ನೂ ಕಾಲಾನುಸಾರವಾಗಿ ತಮ್ಮ ಅಹಿತವೇ ಆಗುತ್ತದೆಂಬುದನ್ನೂ ಇವರು ಮರೆತು ಬಿಡುತ್ತಾರೆ. ಕೋಪದ ಭರದಲ್ಲಿ ಅವರ ಕಣ್ಣುಗಳೇ ಕುರುಡಾಗುತ್ತವೆಂದರೆ ಅತಿಶಯೋಕ್ತಿಯಾಗಲಾರದು.

೨ನೆಯ ಪುಲಕೇಶಿಯು ಬೇನೆಬಿದ್ದಾಗ ಅವನ ೩ನೆಯ ಮಗನಾದ ವಿಕ್ರಮಾದಿತ್ಯನು ತಂದೆಯ ಹತ್ತಿರದಲ್ಲಿದ್ದು ಅವನ ಶುಶ್ರೂಷೆಯನ್ನು ಮಾಡುತ್ತಿದ್ದನಷ್ಟೇ. ಪುಲಿಕೇಶಿಯ ಅಸ್ವಸ್ಥತೆಯ ಕಾಲದಲ್ಲಿ ಎಲ್ಲಾ ರಾಜ್ಯಕಾರ್ಯವು ವಿಕ್ರಮಾದಿತ್ಯನ ಮುಖಾಂತರವೇ ಸಾಗತೊಡಗಿತು. ಮಂತ್ರಿಗಳೂ ದಂಡನಾಯಕರೂ ಉಳಿದ ಅಧಿಕಾರಿಗಳೂ ಅವನ ಗೆಳೆಯರೂ ಸಂಜಗಸ್ಥರೂ ಆದರು. ಅವನ ಅಣ್ಣಂದಿರಾದ ಆದಿತ್ಯವರ್ಮ ಚಂದ್ರಾದಿತ್ಯರು ತಮ್ಮ ತಂದೆಗೆ ಗುಣವಾಗಬಹುದೆಂದು ಹಾದಿ ನೋಡಿ ನೋಡಿ ಬೇಸತ್ತರು. ಅವರೀರ್ವರ ನಡುವೆ ಪತ್ರವ್ಯವಹಾರವು ನಡೆಯಿತು. ಇಬ್ಬರೂ ಸಿರಹಟ್ಟಿಯ ಸೆರೆಯಲ್ಲಿ ಒಟ್ಟುಗೂಡಿ ರಾಜಧಾನಿಯ ಮೇಲೆ ದಂಡೆತ್ತಿ ಹೋಗಿ ಅದನ್ನು ಹಿಡಿದುಕೊಂಡು ವಿಕ್ರಮಾದಿತ್ಯನನ್ನು ಸೆರೆಯಲ್ಲಿಟ್ಟು ಸಾಮ್ರಾಜ್ಯವನ್ನು ಇಬ್ಭಾಗಿಸಿ ತಾವಿಬ್ಬರೂ ಆಳಬೇಕೆಂದು ಒಡಂಬಡಿಕೆಯನ್ನು ಮಾಡಿಕೊಂಡಿರಬಹುದು. ಆದಿತ್ಯವರ್ಮ ಚಂದ್ರಾದಿತ್ಯರ ಕೆಲವು ಪತ್ರಗಳು ವಿಕ್ರಮಾದಿತ್ಯನ ಕಯ್ಗ

ಜಯಿಸಿರಬಹುದು. ತನ್ನಿಬ್ಬರು ಅಣ್ಣಂದಿರು ಮಾಡುತ್ತಿದ್ದ ಯುದ್ಧದ ಸಿದ್ಧತೆಯನ್ನೂ ಅವರ ದಂಡಿನ ಸುಳಿದಾಟವನ್ನೂ ಚಾರರು ಆಗಿಂದಾಗ ಬಂದು ವಿಕ್ರಮಾದಿತ್ಯನಿಗೆ ತಿಳಿಸುತ್ತಿದ್ದರು. ಆದರೆ ಧೂರ್ತನಾದ ನರಸಿಂಹವರ್ಮನು ಚಾಳುಕ್ಯರ ಬೇಹುಕಾರರೊಳಗೆ ಕೆಲವರನ್ನು ಒಡೆಕೊಂಡು ಉಳಿದವರನ್ನು ಹಿಡಿದುಹಾಕಿದ್ದರಿಂದ ಪಲ್ಲವರ ದಂಡಿನ ಸುಳಿದಾಟವು ವಿಕ್ರಮಾದಿತ್ಯನಿಗೆ ಗೊತ್ತಾಗಿರಲಿಕ್ಕಿಲ್ಲ. ಆದ್ದರಿಂದ ಅವನು ಆದಿತ್ಯವರ್ಮ ಚಂದ್ರಾದಿತ್ಯರ ದಂಡುಗಳು ಒಟ್ಟುಗೂಡುವುದಕ್ಕಿಂತ ಮೊದಲೇ ಅವುಗಳನ್ನು ಹಣಿದೋಡಿಸಬೇಕೆಂದು ನಿಶ್ಚಯಿಸಿ, ತಾನು ಆದಿತ್ಯವರ್ಮನ ದಂಡನ್ನು ಎದುರಿಸಲಿಕ್ಕೆ ಹೊರಟು ಬಳ್ಳಾರಿಯ ದಾರಿಯನ್ನು ಹಿಡಿದು, ತನ್ನೊಬ್ಬ ಶೂರ ದಳವಾಯಿಯನ್ನು ಚಂದ್ರಾದಿತ್ಯನನ್ನು ಹುರಿಬಡಿಯಲಿಕ್ಕೆ ಕಳುಹಿಸಿರಬಹುದು. ಈ ಕಾರಣದಿಂದ ಯುವರಾಜನಾದ ವಿಕ್ರಮಾದಿತ್ಯನೂ ಚಾಳುಕ್ಯರ ಶೂರ ಸೇನೆಯೂ ರಾಜಧಾನಿಯಿಂದ ದೂರವಾಗಿದ್ದ ಸುಸಂಧಿಯನ್ನು ಸಾಧಿಸಿ, ಕತ್ರ್ಯತ್ವಿಯಾದ ಪಲ್ಲವ ನರಸಿಂಹವರ್ಮನು ಉತ್ತರದಿಂದ ದಂಡೆತ್ತಿ ಬಂದು, ಸಣ್ಣ ಪುಟ್ಟ ೨-೩ ಕಾಳಗಗಳಲ್ಲಿ ಚಾಳುಕ್ಯರ ದಂಡನ್ನು ಸೋಲಿಸಿ, ಅವರ ಕೆಲವು ಅಧಿಕಾರಗಳನ್ನು ತನ್ನ ಕಡೆಗೆ ಒಡೆಕೊಂಡು ಬಾದಾಮಿಯನ್ನು ಹಿಡಿದುಕೊಂಡಿರಬಹುದೆಂದು ನನ್ನ ಅನುಮಾನವು. ಈ ಅತಿಭಯಂಕರವಾದ ಸುದ್ದಿಯನ್ನು ಕೇಳಿದ ಕೂಡಲೆ ಜೀವಶ್ರವನಾದ ನಮ್ಮ ವೀರ ಪುಲಿಕೇಸಿಯು ಎದೆ ಒಡೆಕೊಂಡು ಸತ್ತಿರಬಹುದೆಂದು ತೋರುತ್ತದೆ. ಅಂತಹ ಮಹಾವೀರನಿಗೆ ಇಂತಹ ಸಾವು ಸಲ್ಲುವುದೇ? ಅಥವಾ ಜನ್ಮಾಂತರದ ಕರ್ಮಫಲವನ್ನು ಪ್ರತಿಯೊಬ್ಬನು ಅನುಭೋಗಿಸಿ ತೀರಬೇಕಲ್ಲವೇ?

ಇನ್ನು ನರಸಿಂಹವರ್ಮನು ಬಾದಾಮಿಯನ್ನು ಎಂದು ಹೊಕ್ಕನು? ಮತ್ತು ನಮ್ಮ ವೀರ ಪುಲಿಕೇಸಿಯು ಎಂದು ಸತ್ತನು? ಎಂಬೆರಡು ಪ್ರಶ್ನೆಗಳು ಇಲ್ಲಿ ತಲೆದೋರುತ್ತವೆ. ಈ ಪ್ರಶ್ನೆಗಳಿಗೆ ಡಾ|| ಫ್ಲೀಟರು ಒಂದು ಉತ್ತರವನ್ನು ಕಲ್ಪಿಸಿದ್ದಾರೆ. ೬೪೨ರಲ್ಲಿ ಪಲ್ಲವ ನರಸಿಂಹವರ್ಮನು ಚಾಳುಕ್ಯರ ವಂಶಪರಂಪರ ರಾಜಧಾನಿಯಾದ ವಾತಾಪಿ

ಪುನ್ನು ಹಿಡಿದುಕೊಂಡು ಅದನ್ನು ಸುಲಿದನೆಂತಲೂ ಅದೇ ಸುಮಾರಿಗೆ ಅಥವಾ ಕುಸು ದಿವಸ ಮೊದಲೇ ನಮ್ಮ ವೀರ ಪುಲಿಕೇಸಿಯು ಸತ್ತ ನೆಂತಲೂ ಮುಂದೆ ೧೨ ವರ್ಷಗಳ ಮೇಲೆ ಅಂದರೆ ೬೫೫ರಲ್ಲಿ ಪುಲಿ ಕೇಸಿಯ ೩ ನೆಯ ಮಗನಾದ ವಿಕ್ರಮಾದಿತ್ಯನು ಚಾಳುಕ್ಯ ಸಿಂಹಾಸನ ವನ್ನೇರಿದನೆಂತಲೂ ಡಾ॥ ಫ್ಲೀಟರು ಅನುಮಾನಮಾಡುತ್ತಾರೆ*. ಈ ಅನುಮಾನಕ್ಕೆ ಶಾಬ್ದಪ್ರಮಾಣವು ಒಂದಾದರೂ ಇಲ್ಲೆಂಬುದನ್ನು ಮರೆಯಕೂಡದು.

ಈ ಅನುಮಾನವನ್ನು ಡಾ॥ ಫ್ಲೀಟರು ಬಹು ಪರಿಶ್ರಮದಿಂದಲೂ ಬಹಳ ವಿಚಾರದಿಂದಲೂ ಮಾಡಿರುತ್ತಾರೆಂಬ ಬಗ್ಗೆ ಸಂಶಯವಿಲ್ಲ. ಆದರೂ ಇದರಲ್ಲಿ ಒಂದು ದೊಡ್ಡ ದೋಷವು ಕಂಡುಬರುತ್ತದೆ. ೬೪೨ ರಿಂದ ೬೫೫ರ ವರೆಗೆ ಸುಮಾರು ೧೨ ವರ್ಷ ಚಾಳುಕ್ಯ ಸಾಮ್ರಾಜ್ಯಕ್ಕೆ ಯಾರು ಒಡೆಯರಾಗಿದ್ದರು? ನಮ್ಮ ವೀರ ಪುಲಿಕೇಸಿಯ ಮಕ್ಕಳೋ? ಪಲ್ಲವರೋ? ಪುಲಿಕೇಸಿಯು ಹೇಗೆ ಸತ್ತನು? ಮುಂದೆ ೬೫೫ರಲ್ಲಿ ಅವನ ೩ ನೆಯ ಮಗನಾದ ವಿಕ್ರಮಾದಿತ್ಯನು ನಮ್ಮ ವೀರ ಪುಲಿಕೇಸಿಯ ಸಾಮ್ರಾಜ್ಯವನ್ನು ಅನಾಯಾಸವಾಗಿ ಹೇಗೆ ದೊರಕಿಸಿದನು? ಡಾ॥ ಫ್ಲೀಟರ ಅನುಮಾನವು ಸರಿಯಾದ್ದೆಂದು ಎಣಿಸಿದರೆ ಈ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರವನ್ನು ಕೊಡಲಿಕ್ಕಾಗುವದಿಲ್ಲ. ಆದ್ದರಿಂದ ಈ ಅನುಮಾನವನ್ನು ಬಿಟ್ಟು ಮತ್ತೊಂದು ಹೆಚ್ಚು ಸಯುಕ್ತಿಕ ವಾದ ಅನುಮಾನವನ್ನು ಮಾಡುವದು ಅತ್ಯವಶ್ಯಕವಾಗಿರುತ್ತದೆಂದು ಕಂಡುಬರುತ್ತದೆ. ಈ ಹೊಸ ಅನುಮಾನವು ಕೆಳಗೆ ಬರೆದಂತೆ ಇರುತ್ತದೆ:—

೧. ೬೪೧ರಲ್ಲಿ ಹುವೆನತ್ಸ್ಯಾಂಗನು ನಮ್ಮ ವೀರ ಪುಲಿಕೇಸಿಯ ರಾಜ್ಯವಿಸ್ತಾರವನ್ನೂ ರಾಜಧಾನಿಯನ್ನೂ ದಂಡಿನ ಶೌರ್ಯವನ್ನೂ ರಾಜವೈಭವವನ್ನೂ ವರ್ಣಿಸಿದನೆಂತಲೂ ಆ ಕಾಲಕ್ಕೆ ಅವನ ಸಾಮ್ರಾಜ್ಯ ವೈಭವವು ಶಿಖರಕ್ಕೆ ಮುಟ್ಟಿತೆಂತಲೂ ಡಾ॥ ಫ್ಲೀಟರು ಸೂಚಿಸಿರುತ್ತಾ

* ಮುಂಬಯಿ ಇಲಾಖೆಯ ಗ್ಯಾಜಿಟಿಯರ ಸಂ. ೧, ಭಾ. ೨. ಪುಟ ೩೫೮–೫೯.

ರಷ್ಟೆ. ಈ ಊಹೆಯು ವಸ್ತುಸ್ಥಿತಿಗೆ ಸರಿಯಾಗಿದ್ದರೂ ಇರಬಹುದು. ಆದರೆ ಮುಂದೆ ೨-೩ ವರ್ಷಗಳಲ್ಲಿ ಪುಲಿಕೇಸಿಯು ಇರುವಾಗಲೇ ಪಲ್ಲವರು ಬಾದಾಮಿಯನ್ನು ಹಿಡಿದುಕೊಂಡರೆಂಬ ಅವರ ಊಹೆಯು ನಂಬಿಗೆಗೆ ಅರ್ಹವಾದದ್ದಲ್ಲೆಂದು ನನ್ನ ಖಂಡಿತವಾದ ಅಭಿಪ್ರಾಯವು.

೨. ನಮ್ಮ ವೀರ ಪುಲಿಕೇಸಿಯು ಸುಮಾರು ೬೪೧ ರಿಂದ ೬೫೨ರ ವರೆಗೆ ಪಾರ್ಶ್ವವಾಯುವಿನಿಂದ ಹಾಸಿಗೆ ಹಿಡಿದು ಮಲಗಿದ್ದನೆಂತಲೂ ೬೫೦ ರ ಸುಮಾರಕ್ಕೆ ಅವನ ಮಕ್ಕಳೊಳಗೆ ಪಟ್ಟದ ಸಲುವಾಗಿ ಒಳಜಗಳವು ಹುಟ್ಟಿತೆಂತಲೂ ನಾನು ಅನುಮಾನ ಮಾಡುತ್ತೇನೆ.

೩. ಈ ಒಳಜಗಳದ ಮೂಲಕ ಚಾಳುಕ್ಯರ ದಂಡು ರಾಜಧಾನಿಯನ್ನು ಬಿಟ್ಟು ದೂರಿನ ಸ್ಥಳಕ್ಕೆ ಹೋದಾಗ ಹೊಂಚುಹಾಕಿಕೊಂಡಿದ್ದ ಪಲ್ಲವ ನರಸಿಂಹವರ್ಮನು ಒತ್ತರದಿಂದ ಬಾದಾಮಿಯ ಮೇಲೆ ದಂಡೆತ್ತಿ ಹೋಗಿ ಅದನ್ನು ಹಿಡಿಕೊಂಡಿರಬಹುದೆಂತಲೂ ಆ ಅತಿಭಯಂಕರವಾದ ಸುದ್ದಿಯನ್ನು ಕೇಳಿ ಜೀವಶ್ರವನಾದ ನಮ್ಮ ಪುಲಿಕೇಸಿಯು ಎದೆಯೊಡಕೊಂಡು ತಕ್ಷಣವೇ ಪ್ರಾಣ ಬಿಟ್ಟಿರಬೇಕೆಂತಲೂ ನನ್ನ ಊಹೆಯು.

೪. ಸರ್ವಾನರ್ಥಕಾರಕವಾದ ಸುದ್ದಿಯನ್ನು ಕೇಳಿದ ಕೂಡಲೆ ಆದಿತ್ಯವರ್ಮ ವಿಕ್ರಮಾದಿತ್ಯರು ತಿರುಗಿ ಬಂದು ಪಲ್ಲವರನ್ನು ಬಾದಾಮಿ ಬಿಂದೋಡಿಸಿ ೬೫೩ ಅಥವಾ ೬೫೪ರಲ್ಲಿ ತಮ್ಮ ತಂದೆಯ ಸಾಮ್ರಾಜ್ಯಕ್ಕೆ ಒಡೆಯರಾದರು.

ಡಾ। ಫ್ಲೀಟರ ಅನುಮಾನಕ್ಕೂ ನಾನು ಮಾಡಿದ ಅನುಮಾನಕ್ಕೂ ಇರುವ ಹೆಚ್ಚು ಕಡಮೆಗಳು ಕೆಳಗೆ ಬರೆದಂತೆ ಇರುತ್ತವೆ:—

(ಅ) ೬೪೧, ೬೪೨ರಲ್ಲಿ ನಮ್ಮ ವೀರ ಪುಲಿಕೇಸಿಯು ದೃಢಕಾಯನಾಗಿದ್ದನೆಂತಲೂ ಪಲ್ಲವ ನರಸಿಂಹವರ್ಮನಿಂದ ಅವನು ಸೋತು ಸತ್ತನೆಂತಲೂ ಡಾ॥ ಫ್ಲೀಟರ ಅನುಮಾನದಿಂದ ಕಂಡುಬರುತ್ತದೆ. ತನ್ನ ಕಕ್ಕನಾದ ಮಂಗಳೇಶನಿಂದ ರಾಜ್ಯಭಾರವನ್ನು ಕಿತ್ತುಕೊಂಡಂದಿನಿಂದ ೬೪೦ರ ವರೆಗೆ ಸರ್ವತ್ರವಿಜಯಿಯಾದ ಪುಲಿಕೇಸಿಯನ್ನು ಸೋಲಿ

ಸುಮಷ್ಟು ಧೈರ್ಯ ಶಕ್ತಿಗಳು ಪಲ್ಲವರಲ್ಲಿ ಇದ್ದಿಲ್ಲೆಂತಲೂ ೬೪೨ರ ಸುಮಾರಕ್ಕೆ ವೀರ ಪುಲಿಕೇಸಿಯು ವ್ಯಾಧಿಗ್ರಸ್ಥನಾಗಿ ನರಳತೊಡಗಿದನೆಂತಲೂ ನನ್ನ ಅನುಮಾನವು.

(ಆ) ೬೪೨ರಿಂದ ೬೫೪ರ ವರೆಗೆ ಚಾಳುಕ್ಯ ಸಾಮ್ರಾಜ್ಯದ ಒಡೆಯರು ಯಾರಾಗಿದ್ದರೆಂಬುದಾಗಲಿ, ೬೫೪ ಅಥವಾ ೬೫೫ರಲ್ಲಿ ವಿಕ್ರಮಾದಿತ್ಯನು ಅನಾಯಾಸವಾಗಿ ತನ್ನ ತಂದೆಯ ವಿಸ್ತಾರವಾದ ರಾಜ್ಯಕ್ಕೆ ಹೇಗೆ ಒಡೆಯನಾದನೆಂಬುದಾಗಲಿ ಡಾ॥ ಫ್ಲೀಟರ ಅನುಮಾನದಿಂದ ಗೊತ್ತಾಗುವುದಿಲ್ಲ. ೬೪೧ರಿಂದ ೬೫೨ರ ವರೆಗೆ ಸಮ್ರಾಟ ವೀರ ಪುಲಿಕೇಸಿಯು ಬೇನೆಯಿಂದ ಮೂಲೆಗುಂಪಾಗಿದ್ದನೆಂತಲೂ ಸುಮಾರು ೧೦ ವರುಷ ಅವನ ದೇಹವು ನವೆದ ಬಳಿಕ ಅವನ ಅತಿಶೌರ್ಯದ ಅಂಜಿಕೆಯು ಕಡಮೆಯಾದ್ದರಿಂದ ನರಸಿಂಹವರ್ಮನು ಚಾಳುಕ್ಯ ರಾಜ್ಯವನ್ನು ಒಳಸುಗ್ಗಲಿಕ್ಕೆ ಎದೆಗೊಂಡನೆಂತಲೂ ನನ್ನ ಅನುಮಾನವು.

(ಇ) ಚಾಳುಕ್ಯರ ಹೆಸರುವಾಸಿಯಾದ ಪುರಾತನ ರಾಜಧಾನಿಯು ಅನಾಯಾಸವಾಗಿ ಪಲ್ಲವರ ಕಯ್ಸೇರಿದ ಕಾರಣವು ಡಾ॥ ಫ್ಲೀಟರ ಅನುಮಾನದಿಂದ ಕಿಂಚಿತ್ತಾದರೂ ತಿಳಿದುಬರುವುದಿಲ್ಲ. ಆದ್ದರಿಂದ ಸುಮಾರು ೬೫೦ರಲ್ಲಿ ಪುಲಿಕೇಸಿಯ ಮಕ್ಕಳೊಳಗೆ ಒಳಜಗಳವು ಹುಟ್ಟಿದ್ದರಿಂದ ರಾಜಧಾನಿಯನ್ನು ಸಂರಕ್ಷಿಸುವಷ್ಟು ದಂಡಿಲ್ಲದ ಸುಸಂಧಿಯನ್ನು ಸಾಧಿಸಿ ನರಸಿಂಹವರ್ಮನು ಬಾದಾವಿಯನ್ನು ಹಿಡಿದುಕೊಂಡನೆಂದು ನಾನು ಊಹಿಸುತ್ತೇನೆ.

(ಈ) ೬೪೨ರಲ್ಲೇ ಪಲ್ಲವರು ಬಾದಾವಿಯನ್ನು ಹಿಡಿದುಕೊಂಡರೆಂತಲೂ ಪುಲಿಕೇಸಿಯು ಸತ್ತನೆಂತಲೂ ಡಾ॥ ಫ್ಲೀಟರು ಮಾಡಿದ ಅನುಮಾನವನ್ನು ಸ್ವೀಕರಿಸಿದರೆ, ಮುಂದಿನ ೧೦–೧೨ ವರ್ಷಗಳ ಚಾಳುಕ್ಯ ಸಾಮ್ರಾಜ್ಯದ ಇತಿಹಾಸವೇ ಇಲ್ಲದಂತಾಗುತ್ತದೆ. ಏಕೆಂದರೆ ಈ ಅವಧಿಯಲ್ಲಿ ಪಲ್ಲವರು ಚಾಳುಕ್ಯರ ರಾಜ್ಯದ ಬೇರೆ ಬೇರೆ ಭಾಗಗಳನ್ನು ಗೆದ್ದರೆಂದು ಬರೆಯಲಿಕ್ಕೆ ನಮಗೆ ಆಧಾರವೇನೂ ಸಿಕ್ಕುವುದಿಲ್ಲ.

ಇದಲ್ಲದೆ ಹೀಗೆ ಅವರು ಗೆದ್ದಿದ್ದರೆ ೬೫೪ ರಲ್ಲಿ ವಿಕ್ರಮಾದಿತ್ಯನು ಅನಾಯಾಸವಾಗಿ ತನ್ನ ತಂದೆಯ ಎಲ್ಲ ರಾಜ್ಯಕ್ಕೆ ಒಡೆಯನಾಗುವ ಸಂಭವವಿಲ್ಲ. ಆದ್ದರಿಂದ ೬೫೨ರ ವರೆಗೆ ಪುಲಿಕೇಸಿಯ ಹೆಸರಿನಿಂದಲೇ ವಿಕ್ರಮಾದಿತ್ಯನು ರಾಜ್ಯವಾಳಿದನೆಂತಲೂ ಅದೇ ವರುಷ ನರಸಿಂಹವರ್ಮನು ವಾತಾಪಿಯನ್ನು ಹಿಡಿದುಕೊಂಡು **ವಾತಾಪಿಕೊಂಡ** ಎಂಬ ಹೆಸರುದನ್ನು ಧರಿಸಿದನೆಂತಲೂ ಆ ಅಸಹ್ಯವಾದ ಒಸುಗೆಯನ್ನು ಕೇಳಿ ಜೀವಚ್ಛವನಾದ ಪುಲಿಕೇಸಿಯು ಪ್ರಾಣಬಿಟ್ಟನೆಂತಲೂ ನಾನು ಊಹಿಸಿರುತ್ತೇನೆ.

(ಉ) ಪಲ್ಲವರು ಬಾದಾಮಿಯನ್ನು ಸೇರಿ ಸೂರೆಗೊಂಡ ಸುದ್ದಿಯನ್ನು ಕೇಳಿ ಪುಲಿಕೇಸಿಯ ಮಕ್ಕಳು ಅದನ್ನು ತಿರುಗಿ ತೆಗೆದುಕೊಳ್ಳಲಿಕ್ಕೆ ಏನೂ ಪ್ರಯತ್ನಮಾಡದೆ ಸುಮ್ಮನೆ ಕುಳಿತುಕೊಂಡರೆಂದು ಡಾ॥ ಫ್ಲೀಟರ ಅನುಮಾನದಿಂದ ಕಂಡುಬರುತ್ತದೆ. ಆದಕಾರಣ ವಿಕ್ರಮಾದಿತ್ಯನು ತನ್ನ ಅಣ್ಣಂದಿರನ್ನು ಸೋಲಿಸಿಯಾಗಲಿ ಅವರ ನೆರವನ್ನು ಪಡೆದಾಗಲಿ ಕೂಡಲೆ ದಂಡೆತ್ತಿ ಬಂದು, ಪಲ್ಲವರನ್ನು ಬಾದಾಮಿಯಿಂದ ಓಡಿಸಿದನೆಂದು ನಾನು ಅನುಮಾನಮಾಡಿರುತ್ತೇನೆ. ಅವನು ಮಾಡಿದ ಉಳಿದ ರಾಜ್ಯಕಾರ್ಯಗಳು ಮುಂದೆ ಬರೆಯುವ ಅವನ ಆಳಿಕೆಯ ವರ್ಣನೆಯಿಂದ ಗೊತ್ತಾಗುವವು.

ಡಾ॥ ಫ್ಲೀಟರು ಹೆಸರುವಾಸಿಯಾದ ಪ್ರಾಕ್ತನ ವಿಮರ್ಶವಿಚಕ್ಷಣರು. ನಾನು ಅವರ ಅನುಯಾಯಿಯೇ ಹೊರತು ಅವರ ಸಮಾನಸ್ಕಂಧನಲ್ಲ. ಆದರೆ ಸತ್ಯವು ಯಾವ ತರದ ದಾಕ್ಷಿಣ್ಯಕ್ಕೆ ಒಳಗಾಗುವುದಿಲ್ಲವಷ್ಟೇ. ನನಗೆ ಸರಿಯೆಂದು ತೋರಿದ್ದನ್ನು ನಾನು ನಿರ್ದಾಕ್ಷಿಣ್ಯದಿಂದ ಬರೆದಿರುತ್ತೇನೆ. ಈ ವಿಷಯವನ್ನು ಕೂಲಂಕಷವಾಗಿ ವಿಚಾರಿಸಲಿಕ್ಕೆ ಡಾ॥ ಫ್ಲೀಟರಿಗೆ ಸಾಕಷ್ಟು ಅವಕಾಶವು ದೊರೆದಿದ್ದರೆ ತುಸು ಹೆಚ್ಚುಕಡಮೆಯಾಗಿ ಅವರು ನನ್ನಂತೆ ಅನುಮಾನ ಮಾಡಬಹುದಾಗಿತ್ತೆಂದು ನಾನು ದೃಢವಾಗಿ ನಂಬುತ್ತೇನೆ. ಈ ನನ್ನ ಅನುಮಾನವು ಎಷ್ಟುಮಟ್ಟಿಗೆ ವಸ್ತುಸ್ಥಿತಿಗೆ ಸರಿಯಾದ್ದೆಂಬುದನ್ನು ವಾಚಕ ಮಹಾಶಯರೇ ವಿಚಾರಮಾಡಬಹುದು. ಹೊಸ ಶೋಧಗಳು

ಹೊರಬೀಳುವ ವರೆಗೆ ನನ್ನ ಅನುಮಾನದಲ್ಲಿ ಕಂಡ ಸಂಗತಿಗಳೇ ಆ ಕಾಲದಲ್ಲಿ ನಿಜವಾಗಿ ಸಂಭವಿಸಿದ ಐತಿಹಾಸಿಕ ಸಂಗತಿಗಳೆಂದು ನಾನಂತೂ ನಿಶ್ಚಲಮನಸ್ಸಿನಿಂದ ನಂಬುತ್ತೇನೆ.

೬೪೨ ರಲ್ಲಿ ಪಲ್ಲವರು ಬಾದಾಮಿಯನ್ನು ಸೂರೆಗೊಂಡರೆಂಬುದಕ್ಕೂ ೨ ನೆಯ ಪುಲಿಕೇಸಿಯು ಅದೇ ವರ್ಷ ಸತ್ತನೆಂಬುದಕ್ಕೂ ಡಾ॥ ಫ್ಲೀಟರು ೨ ಶಾಸನಗಳನ್ನು ಆಧಾರವಾಗಿಟ್ಟುಕೊಂಡಿರುತ್ತಾರೆ. ೧. ಲಾಟ ಪ್ರಾಂತದಲ್ಲಿದ್ದ **ಕೈರೆ**ಯ ಶಾಸನವು. ೨. ಬಡೋದೆ ಸಂಸ್ಥಾನದಲ್ಲಿ ಸಿಕ್ಕ **ಬಗುಮ್ರೆ**ಯ ಶಾಸನವು. ಈ ೨ ನೆಯ ಶಾಸನದಲ್ಲಿ ಕಾಲನಿರ್ದೇಶವೇ ಇಲ್ಲುದರಿಂದ ಇದು ಸಮರ್ಪಕವಾದ ಪ್ರಮಾಣವೆಂದು ಯಾರೂ ಎಣಿಸಲಾರರು. ಆದ್ದರಿಂದ ಅದನ್ನು ಬದಿಗಿಟ್ಟು ಕೈರೆಯ ಶಾಸನದ ತಾತ್ಪರ್ಯವನ್ನು ಕೆಳಗೆ ಕೊಡುವೆವು:—

"ಲಾಟ ಪ್ರಾಂತದ ಅರಸನಾದ ಜಯಸಿಂಹರಾಜನ ಮಗನು ಬುದ್ಧವರ್ಮನಾಗಿದ್ದನು. ಅವನ ಮಗನಾದ ವಿಜಯವರ್ಮನು ವಿಜಯಪುರವೆಂಬಲ್ಲಿ ಪಾಳೆಯಹಾಕಿಕೊಂಡಿದ್ದಾಗ ವೈಶಾಖ ಶುದ್ಧ ೧೫ ಕಳಚುರಿ ಅಥವಾ ಛೇದಿ ಶಕ ೩೯೪ ರಲ್ಲಿ ಅಂದರೆ ೯ ಎಪ್ರಿಲ ೬೪೩ ರಲ್ಲಿ ಸುರತ ಜಿಲ್ಲೆಯಲ್ಲಿದ್ದ ಪರಿಯಾ ಎಂಬ ಗ್ರಾಮವನ್ನು ಭಡೋಚ ಜಿಲ್ಲೆಯಲ್ಲಿದ್ದ ಜಂಬುಸಾರವೆಂಬ ಪಟ್ಟಣದ ಉಪಾಧ್ಯಾಯರಿಗೂ ವಿದ್ಯಾರ್ಥಿಗಳಿಗೂ ದಾನವಾಗಿ ಕೊಟ್ಟನು."

ಈ ಶಾಸನದಲ್ಲಿ ತಮ್ಮ ಮೂಲ ಮನೆತನದವರಾದ ಬಾದಾಮಿ ಚಾಳುಕ್ಯರ ಸಂಬಂಧವನ್ನು ತೋರಿಸದಿದ್ದುದರಿಂದಲೂ ಚಾಳುಕ್ಯ ಚಕ್ರವರ್ತಿಯಾದ ೨ ನೆಯ ಪುಲಿಕೇಸಿಯ ಹೆಸರನ್ನು ಹೇಳದ್ದರಿಂದಲೂ ಈ ಶಾಸನಕ್ಕಿಂತ ಮೊದಲು ಅಂದರೆ ೬೪೨ ರಲ್ಲಿ ವೀರ ಪುಲಿಕೇಸಿಯು ಪಲ್ಲವರಿಂದ ಸೋತು ಸತ್ತಿರಬೇಕೆಂದು ಡಾ॥ ಫ್ಲೀಟರು ಊಹಿಸುತ್ತಾರೆ. ಈ ಊಹೆಯು ಸಬಲಾಧಾರವುಳ್ಳದ್ದೆಂದು ನಾನು ಎಣಿಸಲಾರೆನು. ೨ ನೆಯ ಪುಲಿಕೇಸಿಯು ಆಗ ಸತ್ತುದೆ ನಿಜವಾಗಿದ್ದರೆ ಅಷ್ಟು ಬೇಗನೆ ಅವನ ಸಾವಿನ ಸುದ್ದಿಯು ವಿಜಯಪುರಕ್ಕೆ ಹೋಗಿ ಮುಟ್ಟಿತೋ

ಇಲ್ಲೋ ಎಂಬ ಸಂಶಯವು ಬರುತ್ತದೆ. ಇದಲ್ಲದೆ ಜಯಸಿಂಹರಾಜನು ಮಂಗಳೇಶನ ಮಗನು ಅಥವಾ ಅವನ ಸಂಬಂಧಿಕನಾಗಿದ್ದರೆ ದ್ವೇಷ ಮೂಲಕವಾಗಿ ಪುಲಿಕೇಸಿಯ ಹೆಸರನ್ನು ಬಿಡುವುದು ಸ್ವಾಭಾವಿಕ ವಾಗಿದೆ. ೩ ನೆಯ ಕಾರಣವೇನೆಂದರೆ, ವಿಜಯವರ್ಮನು ಸ್ವತಂತ್ರ ನಾಗಲೆಳಸಿ ಸಾರ್ವಭೌಮನ ಹೆಸರನ್ನು ಬಿಟ್ಟಿರಬಹುದು. ಹೀಗೆ ಹೆಬ್ಬ ಯಕೆಯಿಂದ ಆಳುವ ಚಕ್ರವರ್ತಿಯ ಹೆಸರನ್ನು ಬಿಟ್ಟುಕೊಟ್ಟ ಶಾಸನ ಗಳು ಎಷ್ಟೋ ದೊರೆಯುತ್ತವೆ. ಡಾ॥ ಫ್ಲೀಟರ ಈ ಅನುಮಾನವು ಎಷ್ಟು ಮಟ್ಟಿಗೆ ಸರಿಯಾದ್ದೆಂಬುದನ್ನು ವಾಚಕರೇ ವಿಚಾರಮಾಡ ಬಹುದು.

(೩) ೫–೬. ಆದಿತ್ಯವರ್ಮ, ಮೊದಲನೆಯ ವಿಕ್ರಮಾದಿತ್ಯರು

(೬೫೪–೬೮೦)

ತನ್ನ ಮಕ್ಕಳು ತಂತಮ್ಮೊಳಗೆ ಪಟ್ಟದ ಸಲುವಾಗಿ ಕಡಿದಾಡು ತ್ತಿರುವಾಗ, ಪಲ್ಲವರು ತನ್ನ ರಾಜಧಾನಿಯನ್ನು ಸೂರೆಗೊಂಡ ಸುದ್ದಿ ಯನ್ನು ಕೇಳಿ ೨ ನೆಯ ಪುಲಿಕೇಸಿಯು ಎದೆಯೊಡಕೊಂಡು ಪ್ರಾಣ ಬಿಟ್ಟನೆಂದು ಹಿಂದೆ ಬರೆದಿರುತ್ತೇವಷ್ಟೇ. ಈ ಸರ್ವಾನರ್ಥಕರವಾದ ಸುದ್ದಿಯು ಬಳ್ಳಾರಿ ಕರ್ನೂಲ ಪ್ರಾಂತದಲ್ಲಿ ಬಡಿದಾಡುತ್ತಿದ್ದ ಆದಿತ್ಯ ವರ್ಮ ವಿಕ್ರಮಾದಿತ್ಯರ ಕಿವಿಗಳ ಮೇಲೆ ಕಠೋರವಾಗಿ ಅಪ್ಪಳಿಸಿತು. ಅದನ್ನು ಕೇಳಿ ಇಬ್ಬರೂ ಹವ್ಹಾರಿ ಕುಳಿತರು. ತಾವು ಏನುಮಾಡಿದ್ದ ರಿಂದ ಎಂತಹ ಭಯಂಕರವಾದ ಕೇಡು ಒದಗಿತೆಂಬುದನ್ನು ಮನಮುಟ್ಟಿ ಆಲೋಚಿಸ ತೊಡಗಿದರು. ತಮ್ಮಿಬ್ಬರ ನ್ಯಾಯದಿಂದ ಮೂರನೆಯವ ರಾದ ಪಲ್ಲವರಿಗೆ ಲಾಭವಾದಿಕೊಟ್ಟೆವೆಂದು ಮನಃಪೂರ್ವಕವಾಗಿ ಹಳಹಳಿಸಿದರು. ತಮ್ಮ ಸ್ವಾರ್ಥಪರವಾದ ಹಗೆತನದಿಂದ ಮನೆತನಕ್ಕೇ ದೊಡ್ಡ ಹಾನಿ ತಟ್ಟಿತೆಂದು ಮರಮರುಗಿದರು. ಚಾಳುಕ್ಯ ಮನೆತನದ ಅಭಿಮಾನವು ಇಬ್ಬರಲ್ಲಿಯೂ ಉಕ್ಕೇರಿತು. ಪಶ್ಚಾತ್ತಾಪದಿಂದ ಅವರ ಮನಸ್ಸು ಶುದ್ಧವಾದ್ದರಿಂದ ಸ್ವಾರ್ಥ ಪಿಶಾಚಿಗೆ ಅವರ ಅಂತಃಕರಣದಲ್ಲಿ ಇಂಬುದೊರೆಯದಂತಾಯಿತು. ಲೋಭಸ್ವಾರ್ಥಗಳು ಮನಸ್ಸಿನಿಂದ

ಹೊರಹೊರಟ ಬಳಿಕ ಒಟ್ಟುಗೂಡಲಿಕ್ಕೆ ತೊಡರೆಲ್ಲಿ? ಪಲ್ಲವರು ರಾಜಧಾನಿಯಲ್ಲಿರುವಾಗ ತಾವಿಬ್ಬರು ಪಟ್ಟದ ಸಲುವಾಗಿ ಕಡಿದಾಡುವುದು ತೀರ ನಗೆಗೇಡೆಂದು ಆದಿತ್ಯವರ್ಮನು ತನ್ನ ತಮ್ಮನಿಗೆ ಹೇಳಿಕಳುಹಿಸಿದನು. ಪಟ್ಟವು ತನಗೆ ಬೇಕಾಗಿಲ್ಲೆಂತಲೂ ಪಲ್ಲವರ ಮೇಲೆ ದಂಡೆತ್ತಿ ಹೋಗಲಿಕ್ಕೆ ತಾನು ಒಂಟಿಗಾಲಿನ ಮೇಲೆ ಸಿದ್ಧನಾಗಿರುತ್ತೇನೆಂತಲೂ ವಿಕ್ರಮಾದಿತ್ಯನು ತನ್ನ ಅಣ್ಣನಿಗೆ ಶುದ್ಧಾಂತಃಕರಣದಿಂದ ಸೂಚಿಸಿದನು. ಇಬ್ಬರು ಅಣ್ಣತಮ್ಮಂದಿರು ಒಬ್ಬರನ್ನೊಬ್ಬರು ಅಪ್ಪಿಕೊಂಡು ಹಿಂದಿನ ದಡ್ಡತನಕ್ಕೋಸ್ಕರ ಕಣ್ಣೀರು ಸುರಿಸಿದರು. ಅಷ್ಟರೊಳಗೆ ಚಂದ್ರಾದಿತ್ಯನ ಮೇಲೆ ದಂಡೆತ್ತಿ ಹೋದ ದಳವಾಯಿಯು ಅವನೊಡನೆ ಒಡಂಬಡಿಕೆಯನ್ನು ಮಾಡಿಕೊಂಡನೆಂಬ ಸಂತೋಷದ ಸುದ್ದಿಯು ಬಂತು. ಅವನಿಗೆ ಬಾದಾಮಿಯ ಮೇಲೆ ಸಾಗಿ ಬರಲಿಕ್ಕೆ ಹೇಳಿಕಳುಹಿ, ಇಬ್ಬರು ಅಣ್ಣತಮ್ಮಂದಿರು ತಂತಮ್ಮ ದಂಡುಗಳೊಡನೆ ಬಾದಾಮಿಯ ದಾರಿಯನ್ನು ಹಿಡಿದರು. ಅವರು ಒತ್ತರದಿಂದ ಅಲ್ಲಿಗೆ ಹೋಗುವಷ್ಟರಲ್ಲಿ ಅವರ ದಳವಾಯಿಯ ದಂಡು ರಾಜಧಾನಿಯನ್ನು ಸಮೀಪಿಸಿತ್ತು.

ಈ ಮೇರೆಗೆ ಎರಡು ದೊಡ್ಡ ಚಾಳುಕ್ಯ ದಂಡುಗಳು ಬಾದಾಮಿಯ ಮೇಲೆ ಸಾಗಿಬರುತ್ತವೆಂಬ ಸುದ್ದಿಯನ್ನು ಕೇಳಿ, ಕಂಚಿಯ ನರಸಿಂಹವರ್ಮನು ಗಾಬರಿಯಾದನು. ಮುಂದೆ ಏನು ಮಾಡಬೇಕೆಂದು ಅವನು ಮನಸ್ಸಿನೊಳಗೆ ತಳಮಳಿಸಲಾರಂಭಿಸಿದನು. ಎರಡೂ ದಂಡುಗಳ ನಡುವೆ ಸಿಕ್ಕಿ ತಾನು ನುಗ್ಗಾಗುವೆನೆಂಬ ಹೆದರಿಕೆಯು ಅವನಲ್ಲಿ ಹುಟ್ಟಿತು. ಬಾದಾಮಿಯಲ್ಲಿ ನಿಲ್ಲುವುದು ಸುರಕ್ಷಿತವಾಗಿ ಕಂಡುಬಾರದ್ದರಿಂದ ಅವನು ತನ್ನ ಕಯ್ಗೆ ಸಿಕ್ಕಷ್ಟು ಚಾಳುಕ್ಯರ ಸಂಪತ್ತನ್ನು ದೋಚಿಕೊಂಡು ಯಾರಿಗೂ ಹೇಳದೆ ಕೇಳದೆ ಕಾಲಿಗೆ ಬುದ್ಧಿಹೇಳಿದನು.

ಪಲ್ಲವರನ್ನು ಹಿಡಿದು ಕಡಿದು ಕತ್ತರಿಸಬೇಕೆಂದು ಸಿಟ್ಟಿನಿಂದ ಹೊರಟ ಆದಿತ್ಯವರ್ಮ ವಿಕ್ರಮಾದಿತ್ಯರು ಬಾದಾಮಿಗೆ ಬಂದು ನೋಡುತ್ತಾರೆ, ಅಲ್ಲಿ ಪಲ್ಲವರ ಒಂದು ಪಿಳ್ಳೆಯಾದರೂ ಇದ್ದಿಲ್ಲ. ಹಾಳಾದ ತಮ್ಮ ತಂದೆಯ ರಾಜಧಾನಿಯನ್ನು ನೋಡಿ ಬಹಳವಾಗಿ ಹಳಹಳಿಸಿದರು.

ಶೌರ್ಯಸಾಗರನಾದ ತಮ್ಮ ತಂದೆಯು ಪ್ರಾಣಬಿಟ್ಟ ಸ್ಥಳವನ್ನು ನೋಡಿ ಪರಿಪರಿಯಿಂದ ಪ್ರಲಾಪಿಸಿದರು. ಅವನ ಅಂತ್ಯಕಾಲದಲ್ಲಿ ತಾವು ಅವನ ಬಳಿಯಲ್ಲಿರಲಿಲ್ಲೆಂದು ಅತಿಶಯವಾಗಿ ದುಃಖಿಸಿದರು. ಕಣ್ಣೀರು ಸುರಿಸುತ್ತ ಅವನ ಉತ್ತರಕಾರ್ಯವನ್ನು ಯಥಾವಿಧಿಯಾಗಿ ಮಾಡಿಸಿದರು. ಪಲ್ಲವರ ಹೆದರಿಕೆಯಿಂದ ಅಲ್ಲಲ್ಲಿ ಅಡಗಿಕೊಂಡಿದ್ದ ತಮ್ಮ ಬಂಧು ಬಳಗದವರನ್ನು ಹುಡುಕಿಸಿ ತರಿಸಿಕೊಂಡರು. ಕೆಡವಿದ ಕಟ್ಟಡಗಳ ದುರಸ್ತಿಯನ್ನು ಮಾಡಿಸಲಿಕ್ಕೆ ತಕ್ಕ ಅಧಿಕಾರಿಗಳನ್ನು ನಿಯಮಿಸಿದರು. ಈ ಗೊಂದಲದಲ್ಲೇ ಐದಾರು ತಿಂಗಳುಗಳು ಕಳೆದುಹೋಗಿರಬಹುದು.

ಹೊಟ್ಟೆಯುರಿದ ಆದಿತ್ಯವರ್ಮ ವಿಕ್ರಮಾದಿತ್ಯರ ಪಲ್ಲವರ ಮೇಲಿನ ಸಿಟ್ಟು ಕಾಲಕ್ರಮಣದಿಂದ ಕಡಮೆಯಾಗಲಿಲ್ಲ. ದಿನಾಲು ಅವರ ಕಣ್ಣಿಗೆ ಬೀಳುತ್ತಿದ್ದ ಪಲ್ಲವರ ಹಾವಳಿಯ ಕುರುಹುಗಳು ಅವರ ಸಿಟ್ಟನ್ನು ದಿನ ದಿನಕ್ಕೆ ಹೆಚ್ಚಿಸಿದವು. ಆದ್ದರಿಂದ ಅವರು ತಮ್ಮ ದಂಡನ್ನು ಹೆಚ್ಚಿಸಿ ಯುದ್ಧದ ಸನ್ನಾಹವನ್ನು ಮಾಡಿಕೊಂಡು ತಮ್ಮ ರಾಜ್ಯದಲ್ಲಿ ಹಾವಳಿ ಹಾಕುತ್ತಿದ್ದ ಪಲ್ಲವರ ಮೇಲೆ ದಂಡೆತ್ತಿ ಹೊರಟರು. ವಿಕ್ರಮಾದಿತ್ಯನ ಮಗನಾದ **ವಿನಯಾದಿತ್ಯನು** ತನ್ನ ತಂದೆಯ ಸಂಗಡ ಯುದ್ಧಕ್ಕೆ ಹೊರಟನು. ಅವನ ಮಗನಾದ **ವಿಜಯಾದಿತ್ಯನು** ರಾಜಧಾನಿಯ ಸಂರಕ್ಷಣಾರ್ಥವಾಗಿ ಬಾದಾಮಿಯಲ್ಲೇ ಉಳಿದನು (೬೫೪?). ದಾರಿಯಲ್ಲಿ ಕೆಟ್ಟ ಜ್ವರ ಹುಟ್ಟಿದ್ದರಿಂದ ಆದಿತ್ಯವರ್ಮನು ಅಕಸ್ಮಾತ್ತಾಗಿ ಸತ್ತನು.

ಮುಂದೆ ಸುಮಾರು ೧೬ ವರ್ಷ ವಿಕ್ರಮಾದಿತ್ಯನು ಹಗೆಗಳೊಡನೆ ವಿಶೇಷವಾಗಿ ಪಲ್ಲವರೊಡನೆ ಯುದ್ಧ ಮಾಡಿದನೆಂದು ಶಾಸನಗಳಿಂದ ಕಂಡುಬರುತ್ತದೆ. ಈ ಸುಮಾರಿನಲ್ಲಿ **ವಾತಾಪಿಕೊಂಡ ನರಸಿಂಹವರ್ಮನು** ತೀರಿಕೊಂಡುದರಿಂದ ಅವನ ಮಗನಾದ **೨ ನೆಯ ಮಹೇಂದ್ರವರ್ಮನು** ಚಾಳುಕ್ಯ ದಂಡಿನ ಹೊಡೆತಕ್ಕೆ ಈಡಾದನು. ಇವನಾದರೂ ಬಹುಕಾಲ ಬಾಳಲಿಲ್ಲ. ರಣರಸಿಕನಾದ ವಿಕ್ರಮಾದಿತ್ಯನು ಇವನ ವಶದಲ್ಲಿದ್ದ ಊರುಗಳನ್ನು ಹಿಡಿದುಕೊಂಡು ಇವನನ್ನು

ಹಿಂದಕ್ಕಟ್ಟುತ್ತ ಪಲ್ಲವರ ರಾಜಧಾನಿಯಾದ ಕಂಚಿಯ ಹತ್ತಿರ ಹೋದನು. ಆ ಸಮಯದಲ್ಲಿ ಮಹೇಂದ್ರವರ್ಮನು ಸತ್ತುದರಿಂದ ಅವನ ಸ್ಥಾನಾಪನ್ನನಾದ **೧ ನೆಯ ಪರಮೇಶ್ವರವರ್ಮ** (ಈಶ್ವರ ಪೋಟರಾಜ) ನು ವಿಕ್ರಮಾದಿತ್ಯನನ್ನು ಎದುರಿಸಿದನು. **ಪೆರುವಳ ನಲ್ಲೂರ** ಎಂಬಲ್ಲಿ ಆದ ಒಂದು ಕಾಳೆಗದಲ್ಲಿ ತಾನು ವಿಕ್ರಮಾದಿತ್ಯನನ್ನು ಸೋಲಿಸಿದೆನೆಂತಲೂ ಅವನು ಹರಕುಬಟ್ಟೆಯನ್ನು ಹೊತ್ತುಕೊಂಡು ರಣಾಂಗಣದಿಂದ ಓಡಿಹೋದನೆಂತಲೂ ಚಾಳುಕ್ಯರ ರಾಜಧಾನಿಯಾದ ಬಾದಾವಿಯು ತನ್ನ ಕಯ್ವಶವಾಯಿತೆಂತಲೂ ಇವನು ತನ್ನದೊಂದು ಶಾಸನದಲ್ಲಿ ಹೊಗಳಿಕೊಳ್ಳುತ್ತಾನೆ. ೧ ನೆಯ ಮಹೇಂದ್ರವರ್ಮನು ಪುಳ್ಳಲೂರೆಂಬಲ್ಲಿ ೨ ನೆಯ ಪುಲಿಕೇಸಿಯನ್ನು ಸೋಲಿಸಿ ಅವನ ಬೆನ್ನಿನ ಮೇಲೆ ಸೋಲೆಂಬ ಮುದ್ರೆಯನ್ನು ಹೊಡೆದೆನೆಂದು ಕೊಚ್ಚಿದ ಬಡಾಯಿಯು ನಂಬಿಗೆಗೆ ಅರ್ಹವಲ್ಲೆಂದು ಹಿಂದೆ ಬರೆದಿರುತ್ತೇವಷ್ಟೇ. ಅದರಂತೆಯೇ ಪಲ್ಲವರು ಬಣಜಂಬಡವರಾದ್ದರಿಂದ, ಈ ಪರಮೇಶ್ವರವರ್ಮನ ಈ ಅತಿಶಯೋಕ್ತಿಯುಳ್ಳ ಆತ್ಮಶ್ಲಾಘನವು ವಿಶ್ವಾಸಕ್ಕೆ ಎಷ್ಟು ಮಾತ್ರವೂ ಪಾತ್ರವಾಗಿರುವುದಿಲ್ಲೆಂದು ಸಾರಿ ಹೇಳುತ್ತೇವೆ.

ನಿಜಾಮು ಹೈದ್ರಾಬಾದದ ಚಾಳುಕ್ಯರ ಒಂದು ಶಾಸನದಲ್ಲಿ ವಿಕ್ರಮಾದಿತ್ಯನು ಪಲ್ಲವ ನರಸಿಂಹವರ್ಮನ ಕೀರ್ತಿಯನ್ನು ತಿಕ್ಕಿ ಅಳಿಸಿದನೆಂತಲೂ ೨ ನೆಯ ಮಹೇಂದ್ರವರ್ಮನ ಶಕ್ತಿಯನ್ನು ಕುಗ್ಗಿಸಿದನೆಂತಲೂ ೧ ನೆಯ ಪರಮೇಶ್ವರವರ್ಮನನ್ನು ಸೋಲಿಸಿ ಅವನ ರಾಜಧಾನಿಯಾದ ಕಂಚಿ ಪಟ್ಟಣವನ್ನು ಹಿಡಿದುಕೊಂಡನೆಂತಲೂ ಬರೆದಿರುತ್ತದೆ. ಇದರಲ್ಲಿ ತುಸು ಅತಿಶಯೋಕ್ತಿಯು ಇದ್ದರೂ ಇರಬಹುದು. ಕಂಚಿಯು ವಿಕ್ರಮಾದಿತ್ಯನ ಕಯ್ಸೇರದಿದ್ದರೂ ಪರಮೇಶ್ವರವರ್ಮನು ಶರಣುಬಂದು ಒಪ್ಪಂದವನ್ನು ಮಾಡಿಕೊಂಡಿರಬಹುದು (೬೬೭ ?). ಪಲ್ಲವರನ್ನು ಹಣಿದ ಬಳಿಕ ವಿಕ್ರಮಾದಿತ್ಯನು ಪಾಂಡ್ಯ ಚೋಳ ಕೇರಳ ಕಳಭ್ರ ನಾಡುಗಳ ಒಡೆಯರನ್ನು ತನ್ನ ಅಂಕಿತರನ್ನಾಗಿ ಮಾಡಿಕೊಂಡನೆಂದು ಶಾಸನಗಳಲ್ಲಿ ಬರೆದಿದೆ.

ತೆಂಕಣ ಅರಸರನ್ನು ವಿಶೇಷವಾಗಿ ತನ್ನ ಮನೆತನದ ಹುಟ್ಟು ಹಗೆಗಳಾದ ಪಲ್ಲವರನ್ನು ಮುರಿಬಡಿದ ಬಳಿಕ ವಿಕ್ರಮಾದಿತ್ಯನು ತನ್ನ ತಂದೆ ಗಳಿಸಿದ ಉಳಿದ ರಾಜ್ಯದಲ್ಲಿ ಮಲೆತು ನಿಂತ ಮಂಡಲೇಶ್ವರರನ್ನು ದಂಡಿಸಲಿಕ್ಕೆ ಹೊರಟನು (೬೭೦?). ಅವನು ಮೊದಲು ತನ್ನ ಹಿರಿಯಣ್ಣನು ತನ್ನ ತಂದೆಯ ಕಾಲದಲ್ಲಿ ಆಳುತ್ತಿದ್ದ ನಲವಡಿ ಪ್ರಾಂತಕ್ಕೆ ಹೋಗಿ, ಅಲ್ಲಿಯ ಪಾಳೆಯಗಾರರು ಕಂಚಿಯ ಪಲ್ಲವರ ಕಲಿಕೆಯಿಂದ ಕೊಬ್ಬೇರಿ ನಡಿಸಿದ ಪುಂಡಾಟಿಗೆಯನ್ನು ಬೇರುಸಹಿತವಾಗಿ ಕಿತ್ತುಹಾಕಿ, ಯೋಗ್ಯರಾದ ಅಧಿಕಾರಿಗಳನ್ನು ನಿಯಮಿಸಿ, ಆ ಪ್ರಾಂತದ ಆಡಳಿತವನ್ನು ಸರಿಪಡಿಸಿ, ತನ್ನ ಆಪ್ತರಾದ ವೆಂಗಿಯ ಚಾಳುಕ್ಯರನ್ನು ಕಂಡು ಅವರೊಡನೆ ಸ್ನೇಹ ಬೆಳಿಸಿ ಅವರನ್ನು ಬೀಳ್ಕೊಂಡು, ವಾಯುವ್ಯಕ್ಕೆ ತಿರುಗಿ ತನ್ನ ಕಿರಿಯಣ್ಣನು ಮಂಡಲೇಶ್ವರನಾಗಿದ್ದ ಸಾವಂತವಾಡಿಗೆ ಹೋದನು. ಅಲ್ಲಿ ಕೆಲದಿನ ವಿಶ್ರಮಿಸಿಕೊಂಡು, ಗುಜರಾಥದಲ್ಲಿ ಚಾಳುಕ್ಯ ಮಂಡಲೇಶ್ವರನಾದ ಸತ್ಯಾಶ್ರಯ ಶಿಲಾದಿತ್ಯನು ಸ್ವತಂತ್ರನಾಗಲಿಕ್ಕೆ ಹೆಣಗುತ್ತಾನೆಂಬ ಸುದ್ದಿಯನ್ನು ಕೇಳಿ ಗುಜರಾಥಕ್ಕೆ ಹೋದನು. ಶಿಲಾದಿತ್ಯನು ಹೆದರಿ ಶರಣುಬಂದು ಕಪ್ಪುಗಾಣಿಕೆಯನ್ನೊಪ್ಪಿಸಿ ತಾನು ವಿಕ್ರಮಾದಿತ್ಯನ ಅಂಕಿತನೆಂದು ಒಪ್ಪಿಕೊಂಡುದರಿಂದ, ವಿಕ್ರಮಾದಿತ್ಯನು ಸಂತುಷ್ಟನಾಗಿ ಅವನಿಗೆ ಅಭಯವನ್ನು ಕೊಟ್ಟು, ತನ್ನ ರಾಜಧಾನಿಗೆ ತಿರುಗಿ ಬಂದನು (೬೭೮?). ಮುಂದೆ ಒಂದು ವರ್ಷ ಅವನು ಸುಖದಿಂದ ರಾಜ್ಯವಾಳಿ ಸತ್ತನು (೬೮೦).

೧ ನೆಯ ವಿಕ್ರಮಾದಿತ್ಯನಿಗೆ **ಪ್ರಿಯತನಯ, ಸತ್ಯಾಶ್ರಯ, ರಣರಸಿಕ, ಶ್ರೀ ಪೃಥ್ವೀವಲ್ಲಭ, ಮಹಾರಾಜಾಧಿರಾಜ, ಭಟ್ಟಾರಕ, ಪರಮೇಶ್ವರ** ಎಂಬ ಬಿರುದುಗಳಿದ್ದವು. ಇವನ ಪ್ರೀತಿಯ ಕುದುರೆಯ ಹೆಸರು **ಚಿತ್ರಕಂಠ.** ಈ ಪ್ರೀತಿಯ ಕುದುರೆಯನ್ನೇರಿ ತನ್ನ ಕತ್ತಿಯ ತುದಿಯಿಂದ ಕಂಟಕರಾದ ೩ ಮಂದಿ ಅರಸರನ್ನು ತಿವಿದು ತನ್ನ ತಂದೆಯ ವಿಸ್ತಾರವಾದ ರಾಜ್ಯಕ್ಕೆ ಒಡೆಯನಾದನೆಂದು ಶಾಸನಗಳು ಹೇಳುತ್ತವೆ. ೧ ನೆಯ ನರಸಿಂಹವರ್ಮ, ೨ ನೆಯ ಮಹೇಂದ್ರವರ್ಮ, ೧ ನೆಯ

ಪರಮೇಶ್ವರವರ್ಮ (ಈಶ್ವರ ಪೋತರಾಜ) ಈ ಮೂವ್ವರು ಕಂಚಿಯ ಪಲ್ಲವ ಅರಸರೇ ಈ ಕಂಟಕ ರಾಜರಾಗಿದ್ದರು.

ಇವನ ಕಾಲದ ಶಾಸನಗಳ ತಾತ್ಪರ್ಯವನ್ನು ಕೊಟ್ಟು ಇವನ ಆಳಿಕೆಯ ವರ್ಣನೆಯನ್ನು ಮುಗಿಸುತ್ತೇವೆ :—

೧. ಮದ್ರಾಸ ಇಲಾಖೆ ಕರ್ನೂಲ ಜಿಲ್ಲೆಯ ೧ ನೆಯ ತಾಮ್ರಶಾಸನ. ವಿಕ್ರಮಾದಿತ್ಯನು ತನ್ನ ಆಳಿಕೆಯ ೩ ನೆಯ ವರ್ಷ ಸಂಗಮ ಮಹಾಯಾತ್ರೆಯ ಉತ್ಸವ ನಡೆದಾಗ ಬಳ್ಳಾರಿ ಜಿಲ್ಲೆಯಲ್ಲಿದ್ದ ರತ್ನಾಗಿರಿಯೆಂಬ ಊರಿನ ಕೆಲವು ಹೊಲಗಳನ್ನು ಬ್ರಾಹ್ಮಣರಿಗೆ ದಾನ ಕೊಟ್ಟನು. (ಪರಿಶಿಷ್ಟ ಅ ನೋಡಿರಿ.)

೨. ಕರ್ನೂಲ ಜಿಲ್ಲೆಯ ೨ ನೆಯ ತಾಮ್ರಶಾಸನ. ವಿಕ್ರಮಾದಿತ್ಯನು ತನ್ನ ಆಳಿಕೆಯ ೧೦ ನೆಯ ವರ್ಷ ಆಷಾಢ ಶು॥ ೧೫ ದಿವಸ ಸೇಂದ್ರಕ ಮನೆತನದ ರಾಜಾ ದೇವಶಕ್ತಿಯ ಹೇಳಿಕೆಯಂತೆ ನಿಜಾಮ ರಾಜ್ಯದಲ್ಲಿದ್ದ ರಟ್ಟಗಿರಿಯೆಂಬ ಊರಿನ ಕೆಲಹೊಲಗಳನ್ನು ಬ್ರಾಹ್ಮಣರಿಗೆ ದಾನ ಕೊಟ್ಟನು.

೩. ಬಡೋದೆ ಸಂಸ್ಥಾನದ ನವಸರಿಯ ತಾಮ್ರಶಾಸನ. ಇದರಲ್ಲಿ ೨ ನೆಯ ಪುಲಿಕೇಶಿಯ ತರುವಾಯ ೧ ನೆಯ ವಿಕ್ರಮಾದಿತ್ಯನ ಹೆಸರು ಇರುತ್ತದೆ. ಅವನು ಪಲ್ಲವರ ಶಕ್ತಿಯನ್ನು ಕುಗ್ಗಬಡಿದನೆಂತಲೂ ತನ್ನ ತಮ್ಮನಾದ ಧಾರಾಶ್ರಯ ಜಯಸಿಂಹವರ್ಮನ * ಸಂಪತ್ತನ್ನು ಬೆಳಿಸಿದನೆಂತಲೂ ಬರೆದಿರುತ್ತದೆ. ಈ ಜಯಸಿಂಹವರ್ಮನ ಯುವರಾಜನಾದ ಸತ್ಯಾಶ್ರಯ ಶಿಲಾದಿತ್ಯನು ನವಸಾರಿಕಾ (ನವಸರಿ) ಎಂಬಲ್ಲಿ ಪಾಳೆಯಹಾಕಿಕೊಂಡಿದ್ದಾಗ ಆಸತ್ತಿಗ್ರಾಮ (ಅಷ್ಟಗಾವ) ಎಂಬ ಹಳ್ಳಿಯನ್ನು ಮಾಘ ಶುದ್ಧ ೧೩ ಕಳಚುರಿ ಶಕ ೪೨೧ (೩೦ ಜನವರಿ ೬೭೧) ರಲ್ಲಿ ಬ್ರಾಹ್ಮಣರಿಗೆ ದಾನಕೊಟ್ಟನು.

---

* ಈ ಜಯಸಿಂಹವರ್ಮನು ೨ ನೆಯ ಪುಲಿಕೇಶಿಯ ಆಳಿಕೆಯಲ್ಲಿ ಗುಜರಾಥದ ಮಂಡಲೇಶ್ವರನಾಗಿದ್ದನೆಂದು ತೋರುತ್ತದೆ.

೪. ನಿಜಾಮ ಹೈದ್ರಾಬಾದದ ತಾಮ್ರಶಾಸನ. ಇದರಲ್ಲಿ ಕಾಲ ನಿರ್ದೇಶವಿಲ್ಲ. ಈ ಶಾಸನದಲ್ಲಿ ಕಣ್ಣವಿಷಯದಲ್ಲಿದ್ದ ಚಿಂತಕುಂಠವೆಂಬ ಊರನ್ನು ೧ನೆಯ ವಿಕ್ರಮಾದಿತ್ಯನು ಬ್ರಾಹ್ಮಣರಿಗೆ ದಾನಕೊಟ್ಟ ನೆಂದು ಬರೆದಿರುತ್ತದೆ.

೫. ಸಾವಂತವಾಡಿ ಸಂಸ್ಥಾನ ನೆರೂರಿನ ತಾಮ್ರಶಾಸನ. ಇದರಲ್ಲಿ ಕಾಲನಿರ್ದೇಶವಿಲ್ಲ. ಈ ಶಾಸನದಲ್ಲಿ ಕೀರ್ತಿವರ್ಮ, ೨ನೆಯ ಪುಲಿಕೇಸಿ, ವಿಕ್ರಮಾದಿತ್ಯರ ತರುವಾಯ ವಿಕ್ರಮಾದಿತ್ಯನ ಅಣ್ಣನಾದ ಪೃಥ್ವೀವಲ್ಲಭ ಮಹಾರಾಜ ಚಂದ್ರಾದಿತ್ಯನ ಹೆಸರು ಇರುತ್ತದೆ. ಈ ಚಂದ್ರಾದಿತ್ಯನ ರಾಣಿಯಾದ ವಿಜಯ ಭಟ್ಟಾರಕೆಯು ಆಳಿಕೆಯ (?) ೫ನೆಯ ವರ್ಷ ದಲ್ಲಿ ತರಕಾಗಾಹಾರ ಎಂಬ ಗ್ರಾಮವನ್ನು ಬ್ರಾಹ್ಮಣರಿಗೆ ದಾನ ಕೊಟ್ಟಳು. ಇದರಲ್ಲಿ ಬರೆದ ಆಳಿಕೆಯ ೫ನೆಯ ವರ್ಷವು ಯಾರ ಆಳಿಕೆಯದೆಂಬುದು ತಿಳಿಯುವುದಿಲ್ಲ. ೨೩ ಸಪ್ಟಂಬರ ೬೭೮ ಈ ದಾನದ ಕಾಲವಾಗಿರಬಹುದು.

೬. ರತ್ನಾಗಿರಿ ಜಿಲ್ಲೆ ಕೋಚರೆಮ್ಮದ ತಾಮ್ರಶಾಸನ. ಇದರ ಲ್ಲಿಯೂ ಕಾಲನಿರ್ದೇಶವಿಲ್ಲ. ಮಹಾರಾಜಾಧಿರಾಜ ಚಂದ್ರಾದಿತ್ಯನ ರಾಣಿಯಾದ ವಿಜಯ ಮಹಾದೇವಿಯು ಕೊಚ್ಚುರಕವೆಂಬ ಹಳ್ಳಿಯ (ಕೋಚರೆಮ್ಮ) ಕೆಲಹೊಲಗಳನ್ನು ಬ್ರಾಹ್ಮಣರಿಗೆ ದಾನಕೊಟ್ಟಳು.

೭. ಕರ್ನೂಲ ಜಿಲ್ಲೆಯ ತಾಮ್ರಶಾಸನ. ದುರ್ದೈವದ ಮೂಲಕ ವಾಗಿ ಇದರಲ್ಲಿಯೂ ಕಾಲನಿರ್ದೇಶವಿಲ್ಲ. ೨ನೆಯ ಪುಲಿಕೇಸಿಯ ಪ್ರಿಯತನಯ, ಪೃಥ್ವೀವಲ್ಲಭ, ಮಹಾರಾಜಾಧಿರಾಜ ಎಂಬ ಬಿರುದು ಗಳನ್ನು ಧರಿಸಿದ **ಆದಿತ್ಯವರ್ಮ**ನು ಮುಂಡಕಲು, ಪರಗಿರೆ ಎಂಬ ಗ್ರಾಮಗಳ ಉತ್ಪನ್ನದ ಕೆಲಭಾಗವನ್ನು ಕಾರ್ತೀಕ ಶುದ್ಧ ೧೫ ದಿವಸ ಬ್ರಾಹ್ಮಣರಿಗೆ ದಾನಕೊಟ್ಟನೆಂದು ಬರೆದಿರುತ್ತದೆ.

೧೦೦೪ ನೆಯ ಇಸ್ವಿಯ ಕೌಠೆಮ್ಮದ ಶಾಸನದಲ್ಲಿ ೨ ನೆಯ ಪುಲಿ ಕೇಸಿಯ ತರುವಾಯ ಅವನ ಮಗನಾದ **ನೇಡಮರಿ**ಯೂ ಅವನ ತರು ವಾಯ ಅವನ ಮಗನಾದ ಆದಿತ್ಯವರ್ಮನೂ ಅವನ ತರುವಾಯ ಅವನ

ಮಗನಾದ ವಿಕ್ರಮಾದಿತ್ಯನೂ ಚಾಳುಕ್ಯ ರಾಜ್ಯಭಾರವನ್ನು ಮಾಡಿದ ರೆಂದು ಬರೆದಿದೆ. ಆದರೆ ಈ ವಂಶಾವಳಿಯು ದಂತಕಥೆಯ ಮೂಲಕ ಹುಟ್ಟಿದ ಶುದ್ಧ ತಪ್ಪೆಂದು ಡಾ॥ ಫ್ಲೀಟರು ಪ್ರತಿಪಾದಿಸುತ್ತಾರೆ. ಆದಿತ್ಯ ವರ್ಮನು ವಿಕ್ರಮಾದಿತ್ಯನ ಅಣ್ಣನಾದ್ದರಿಂದ ಅವನನ್ನು ವಿಕ್ರಮಾದಿತ್ಯನ ತಂದೆಯೆಂದು ಭಾವಿಸಿರಬಹುದೆಂತಲೂ ೨ ನೆಯ ಪುಲಿಕೇಸಿಯ ಮಗಳಾದ ಅಂಬೇರೆ ಎಂಬವಳ ಹೆಸರಿನ ತಪ್ಪು ತಿಳಿವಳಿಕೆಯಿಂದ ನೇಡ ಮರಿ ಎಂಬ ಮಗನ ಭಾವನೆಯು ಹುಟ್ಟಿರಬಹುದೆಂತಲೂ ಡಾ॥ ಫ್ಲೀಟರ ಅಭಿಪ್ರಾಯವು. ಇದು ಎಷ್ಟುಮಟ್ಟಿಗೆ ಸಮರ್ಪಕವಾದ್ದೆಂಬು ದನ್ನು ವಾಚಕರೇ ವಿಚಾರಿಸಬಹುದು *:—ಬೆಂಗಳೂರು ನೆರೆಯಲ್ಲಿದ್ದ ಹೊಸೂರಿನ ತಾಮ್ರಶಾಸನದಲ್ಲಿ ೨ ನೆಯ ಪುಲಿಕೇಸಿಗೆ ಅಂಬೇರೆ ಎಂಬ ಮಗಳಿದ್ದಳೆಂದು ಬರೆದಿದೆ.

ಈ ನೇಡಮರಿಯು ಯಾರು? ಎಂದು ಆಳಿದನು ಎಂಬ ಬಗ್ಗೆ ನಮಗೆ ಬೇರೆ ಯಾವ ಆಧಾರಗಳೂ ಇಲ್ಲುದರಿಂದ ನಾವು ಅವನ ವಿಷಯವಾಗಿ ಏನೂ ಬರೆಯಲಾರೆವು. ೨ನೆಯ (ಸತ್ಯಾಶ್ರಯ) ಪುಲಿಕೇಸಿಯ ತರುವಾಯ ಎರಡನೆಯ ಸತ್ಯವ್ರತಿಯೂ ಅವನ ತರುವಾಯ ಆದಿತ್ಯ ವರ್ಮನೂ ಅವನ ತರುವಾಯ ವಿಕ್ರಮಾದಿತ್ಯನೂ ಚಾಳುಕ್ಯ ಪಟ್ಟ ವನ್ನೇರಿದರೆಂದು ಕವಿರನ್ನನು ಬರೆಯುತ್ತಾನೆ†. ಆದಕಾರಣ ವಿಕ್ರ ಮಾದಿತ್ಯನಿಗಿಂತ ಮೊದಲು ಆದಿತ್ಯವರ್ಮನು ಚಾಳುಕ್ಯ ಸಾರ್ವಭೌಮ ನಾಗಿದ್ದನೆಂದು ಧಾರಾಳವಾಗಿ ಹೇಳಬಹುದು. ಇವನು ಚಾಳುಕ್ಯ ಪಟ್ಟವೇರಲಿಲ್ಲೆಂದು ಬರೆಯಲಿಕ್ಕೆ ಡಾ॥ ಫ್ಲೀಟರಿಗೆ ಕೂಡ ಧೈರ್ಯ ಸಾಲದು. ಮೇಲೆ ಕೊಟ್ಟ ೭ ನೆಯ ಶಾಸನದ ಮಜಕೂರನ್ನು ಬರೆದು ಅವರು ಸಂಶಯದಲ್ಲಿ ತೊಳಲಾಡ ತೊಡಗಿದ್ದಾರೆ. ಈ ವಿಷಯವನ್ನು

---

* ಮುಂಬಯಿ ಇಲಾಖೆಯ ಗ್ಯಾಜಿಟಿಯರ ಸಂ. ೧, ಭಾಗ ೨. ಪುಟ ೩೬೧, ಟಿಪ್ಪಣಿ ೨.

† ಹಿಂದೆ ಭಾಗ ೨, ಅ. ೧, ಪು. ೧೮೭.

ಕುರಿತು ಅವರು ಬರೆಯುವುದೇನಂದರೆ:—ರಾಜಧಾನಿಯು ಪಲ್ಲವರ ವಶವಾದ ಬಳಿಕ ಆದಿತ್ಯವರ್ಮನು ಈ ದಾನವನ್ನು ಕೊಟ್ಟನೆಂದು ಈ ಶಾಸನದ ವರ್ಣನೆಯಿಂದ ಸ್ಪಷ್ಟವಾಗಿ ಕಂಡುಬರುತ್ತದೆ. ಇವನು ಪುಲಕೇಶಿಯ ಹಿರಿಯ ಮಗನಾಗಿರಲಿಕ್ಕೆ ಬೇಕೆಂಬುದಕ್ಕೆ ಅಡ್ಡಿಯಿಲ್ಲ. ವಿಕ್ರಮಾದಿತ್ಯನಿಗಿಂತ ಮೊದಲೇ ಪಲ್ಲವರನ್ನು ಚಾಳುಕ್ಯ ರಾಜ್ಯದಿಂದ ಓಡಿಸಲಿಕ್ಕೆ ಪ್ರಯತ್ನಮಾಡಿ ಇವನು ನಿಷ್ಫಲನಾಗಿರಬಹುದು; ಅಥವಾ ವಿಕ್ರಮಾದಿತ್ಯನು ಪಲ್ಲವರನ್ನು ಓಡಿಸಿದ ಬಳಿಕ ಅವನೊಡನೆ ಪಟ್ಟದ ಸಲುವಾಗಿ ಕಾದಾಡಿರಬಹುದು. ಮೊದಲನೆಯ ಊಹೆಗಿಂತ ೨ನೆಯ ಊಹೆ ಹೆಚ್ಚು ಸಬಲವಾದ್ದೆಂದು ತೋರುತ್ತದೆ. ಏಕೆಂದರೆ ಬಾದಾಮಿ ಚಾಳುಕ್ಯ ಮನೆತನದ ಮುಂದಿನ ಶಾಸನಗಳಲ್ಲಿ ಇವನ ಹೆಸರನ್ನು ಬಿಟ್ಟಿರುವುದಕ್ಕೆ ಈ ವಿರೋಧವೇ ಕಾರಣವಾಗಿರಬಹುದು.‡

ಆದಿತ್ಯವರ್ಮನು ಕೆಲದಿನ ಚಾಳುಕ್ಯ ಸಾರ್ವಭೌಮನಾಗಿದ್ದನೆಂಬುದರಲ್ಲಿ ಸಂಶಯವಿಲ್ಲ. ವಿಕ್ರಮಾದಿತ್ಯನು ಪಲ್ಲವರನ್ನು ಬಾದಾಮಿಯಿಂದ ಓಡಿಸಿದ ಬಳಿಕ ಡಾ॥ ಫ್ಲೀಟರ ಅಭಿಪ್ರಾಯದಂತೆ ಒಳಜಗಳವು ಆರಂಭವಾಗಿದ್ದರೆ, ಪಲ್ಲವರನ್ನು ಚಾಳುಕ್ಯ ರಾಜ್ಯದಿಂದ ಹೊರಗೆಡವುದು ದುಸ್ಸಾಧ್ಯವಾಗುತ್ತಿತ್ತು. ಆದ್ದರಿಂದ ಒಳಜಗಳದ ಮೂಲಕವಾಗಿಯೇ ಪಲ್ಲವ ನರಸಿಂಹವರ್ಮನು ಬಾದಾಮಿಯನ್ನು ಹಿಡಿದುಕೊಂಡನೆಂತಲೂ ಈ ಸುದ್ದಿಯನ್ನು ಕೇಳಿ ಆದಿತ್ಯವರ್ಮ ವಿಕ್ರಮಾದಿತ್ಯರು ಮನಃಪೂರ್ವಕವಾಗಿ ಪಶ್ಚಾತ್ತಾಪಪಟ್ಟು ಒಟ್ಟುಗೂಡಿ, ಪಲ್ಲವರನ್ನು ಹೊರಗೆ ಹಾಕಿದರೆಂತಲೂ ಆ ಪ್ರಯತ್ನವು ನಡೆದಾಗಲೇ ಆದಿತ್ಯವರ್ಮನು ಅಕಸ್ಮಾತ್ತಾಗಿ ಸತ್ತನೆಂತಲೂ ಅವನು ತುಸು ದಿವಸ ಮಾತ್ರ ಸಾರ್ವಭೌಮನೆನಿಸಿಕೊಂಡುದರಿಂದ ಚಾಳುಕ್ಯ ಮನೆತನದ ಮುಂದಿನ ಶಾಸನಗಳಲ್ಲಿ ಅವನ ಹೆಸರನ್ನು ಬಿಟ್ಟಿರಬಹುದೆಂತಲೂ ನಾನು ಮಾಡಿದ ಅನುಮಾನವು ಓದುವವರಿಗೆ ಹೆಚ್ಚು ಗ್ರಾಹ್ಯವಾಗುವುದೆಂದು ನಂಬಿದ್ದೇನೆ.

---

‡ ಮು. ಇ. ಗ್ಯಾಜಿಟಿಯರ ಸಂ. ೧, ಭಾಗ ೨, ಪುಟ ೩೬೭.

೭. ವಿನಯಾದಿತ್ಯ

(೬೮೦-೬೯೬)

೧ ನೆಯ ವಿಕ್ರಮಾದಿತ್ಯನ ತರುವಾಯ ಅವನ ಪ್ರಿಯತನಯನಾದ ವಿನಯಾದಿತ್ಯನು ಸುಸೂತ್ರವಾಗಿ ಬಾದಾಮಿಯ ಚಾಳುಕ್ಯ ಪಟ್ಟವನ್ನೇರಿದನು. ಇವನ ಪಟ್ಟಾಭಿಷೇಕದ ದಿವಸವು ನಿಶ್ಚಯವಾಗಿ ಗೊತ್ತಾಗುವುದಿಲ್ಲ. ಆದರೂ ಈ ಪಟ್ಟಾಭಿಷೇಕವು ಶಕೆ ೬೦೨ ರಲ್ಲಿ ಆಷಾಢ ಶುದ್ಧ ೨ ಯಿಂದ ಕಾರ್ತೀಕ ಶುದ್ಧ ೧೫ ಯ ಒಳಗೇ ಆಗಿರಬಹುದೆಂದು ಡಾ|| ಫ್ಲೀಟರು ಅನುಮಾನ ಮಾಡುತ್ತಾರೆ.

ವಿನಯಾದಿತ್ಯನು ಸಾರ್ವಭೌಮನಾದ ಬಳಿಕ ಉತ್ತರಾಪಥದ ಮೇಲೆ ಒಂದು ದಂಡಯಾತ್ರೆಯನ್ನು ಮಾಡಿದನೆಂದು ಕಂಡುಬರುತ್ತದೆ. ಇವನು ಯುವರಾಜನಾಗಿದ್ದಾಗ ಚೋಳ, ಪಾಂಡ್ಯ, ಕೇರಳ, ಪಲ್ಲವ, ಹಯ್ಹಯ (ಕಳಚುರಿ), ವಿಳ ಮಾಳವರನ್ನು ಅಂಕಿತರಾಗಿ ಮಾಡಲಿಕ್ಕೆ ತನ್ನ ತಂದೆಗೆ ನೆರವಾದನೆಂದು ಬರೆದಿರುತ್ತೇವಷ್ಟೆ. ಇವನು ಚಕ್ರವರ್ತಿಯಾದ ಬಳಿಕ ಈ ಎಲ್ಲಾ ನಾಡಿನವರಿಂದ ಒತ್ತಾಯಮಾಡಿ ಕಪ್ಪಗಾಣಿಕೆಯನ್ನು ತೆಗೆದುಕೊಂಡನೆಂದು ತೋರುತ್ತದೆ. ಇವನು ಕವೇ(ಮೇ)ರ, ಪಾರಸೀಕ, ಸಿಂಹಳರನ್ನು ತನ್ನ ಸ್ವಾಮಿತ್ವಕ್ಕೆ ಒಡಂಬಡಿಸಿ ಅವರಿಂದ ಕಪ್ಪವನ್ನು ಎತ್ತಿದನೆಂತಲೂ ಉತ್ತರಾಪಥದ ಒಬ್ಬ ಸಾರ್ವಭೌಮನನ್ನು ಸೋಲಿಸಿ, ಅವನಿಂದ **ಪಾಲಿಧ್ವಜ** ಮುಂತಾದ ರಾಜಚಿಹ್ನಗಳನ್ನು ಸೆಳೆದುಕೊಂಡನೆಂತಲೂ ಇವನ ಹಿಂದೆ ಆಳಿದ ಚಕ್ರವರ್ತಿಗಳ ಶಾಸನಗಳು ಹೇಳುತ್ತವೆ. ಇದು ಎಷ್ಟುಮಟ್ಟಿಗೆ ನಿಜವಾದ ಸಂಗತಿ ಎಂಬುದನ್ನು ಹೇಳಲಾರೆವು. ವಿಳರು, ಕವೇ(ಮೇ)ರರು ಯಾರೆಂಬುದು ಗೊತ್ತಾಗುವುದಿಲ್ಲ. ಯಾವ ಉತ್ತರಾಪಥದ ಸಾರ್ವಭೌಮನನ್ನು ಇವನು ಸೋಲಿಸಿದನೆಂಬುದು ತಿಳಿಯುವುದಿಲ್ಲ. ಪಶ್ಚಿಮ ಚಾಳುಕ್ಯರು **ವಜ್ರಟ**ನೆಂಬ ಒಬ್ಬ ದೊಡ್ಡ ಅರಸನನ್ನು ಸೋಲಿಸಿದರೆಂದು ರಾಷ್ಟ್ರಕೂಟರ ಸಾಮಾನಗಡದ ಶಾಸನದಲ್ಲಿ ಬರೆದಿದೆ. ವಿನಯಾದಿತ್ಯನು ಸೋಲಿಸಿದ ಉತ್ತರಾಪಥದ ಚಕ್ರವರ್ತಿಯು ಈ ವಜ್ರಟನೇ ಆಗಿರಬಹುದೆಂದು ಡಾ|| ಫ್ಲೀಟರು ಊಹಿಸು

ತ್ತಾರೆ. ೬೮೭ ರಿಂದ ೬೯೪ ರ ವರೆಗೆ ವಿನಯಾದಿತ್ಯನು ತನ್ನ ಸಾಮ್ರಾಜ್ಯದಲ್ಲಿ ಸಂಚಾರ ಮಾಡಿದನೆಂದು ಶಾಸನಗಳಿಂದ ತಿಳಿದುಬರುತ್ತದೆ.

ವಿನಯಾದಿತ್ಯನಿಗೆ **ಸತ್ಯಾಶ್ರಯ, ರಾಜಾಶ್ರಯ, ಶ್ರೀ ಪೃಥ್ವೀವಲ್ಲಭ, ಮಹಾರಾಜಾಧಿರಾಜ, ಪರಮೇಶ್ವರ, ಭಟ್ಟಾರಕ** (**ಭಟಾರ**) ಎಂಬ ಸಾಮಾನ್ಯ ಬಿರುದುಗಳಲ್ಲದೆ **ಯುದ್ಧಮಲ್ಲ**ನೆಂಬ ವಿಶಿಷ್ಟವಾದ ಬಿರುದು ಇತ್ತೆಂದು ಕೌಠೆಮ್ಮದ ಶಾಸನದಿಂದ ಕಂಡುಬರುತ್ತದೆ. ಈ ಬಿರುದಿಗೆ ಆ ಕಾಲದ ಬೇರೆ ಲೇಖಗಳ ಆಧಾರವಿಲ್ಲೆಂದು ಡಾ|| ಫ್ಲೀಟರು ಬರೆಯುತ್ತಾರೆ. ಕವಿರನ್ನನು ತನ್ನ ಗದಾಯುದ್ಧದಲ್ಲಿ ಇವನಿಗೆ **ದುರ್ಧರಮಲ್ಲ**ನೆಂದು ಕರೆದಿರುತ್ತಾನೆ. ಇವನು ಯುದ್ಧಕಲೆಯಲ್ಲಿ ನಿಪುಣನಾದ್ದರಿಂದ ಈ ಹೊಸ ಬಿರುದು ಬಂದಿರಬಹುದು.

ಇವನ ಕಾಲದ ಶಾಸನಗಳು ಕೆಳಗೆ ಬರೆದಂತೆ ಇರುತ್ತವೆ:—

೧. ಲಕ್ಷ್ಮೇಶ್ವರದ ಶಾಸನ. ವಿನಯಾದಿತ್ಯನ ಜಯಶೀಲವಾದ ಪಾಳೆಯವು ರಕ್ತಪುರ (ಲಕ್ಷ್ಮೇಶ್ವರ) ದಲ್ಲಿದ್ದಾಗ ಅವನು ಶಕೆ ೬೦೮ ಮಾಘ ಶುದ್ಧ ೧೫ ದಿವಸ ಮೂಲಸಂಘ ದೇವಗಣದ ಬಜ್ಜಜೈನ ಆಚಾರ್ಯನಿಗೆ ವರ್ಷಾಶನವನ್ನು ಹಾಕಿ ಕೊಟ್ಟನು (೩ ಫೆಬ್ರುವರಿ ೬೮೭).

೨. ಕರ್ನೂಲ ಜಿಲ್ಲೆ ತೊಗರ್ಚೇಡಿನ ತಾಮ್ರಶಾಸನ. ವಿನಯಾದಿತ್ಯನ ಜಯಶೀಲವಾದ ಪಾಳೆಯವು ಪಂಪಾತೀರ್ಥ(ಹಂಪಿ)ದಲ್ಲಿದ್ದಾಗ ಅವನು ಶಕೆ ೬೧೧ ಕಾರ್ತೀಕ ಶುದ್ಧ ೧೫ (೩ ನವಂಬರ ೬೮೯) ದಿವಸ ತೊಗಚ್ಚೇಡು ಮುಂತಾದ ನಾಲ್ಕು ಹಳ್ಳಿಗಳ ಉತ್ಪನ್ನದ ಭಾಗವನ್ನು ಬ್ರಾಹ್ಮಣರಿಗೆ ವರ್ಷಾಶನವಾಗಿ ಹಾಕಿಕೊಟ್ಟನು.

೩. ಕರ್ನೂಲ ಜಿಲ್ಲೆಯ ತಾಮ್ರಶಾಸನ. ವಿನಯಾದಿತ್ಯನ ಜಯಶೀಲವಾದ ಪಾಳೆಯವು ಎಳಂಪುಂಡಲೆ ಎಂಬ ಊರಲ್ಲಿದ್ದಾಗ, ಅವನು ಯುವರಾಜನಾದ ವಿಜಯಾದಿತ್ಯನ ಹೇಳಿಕೆಯಂತೆ ಶಕೆ ೬೧೩ ಮಾಘ ಶುದ್ಧ ೧೫ (೧ ಜನವರಿ ೬೯೨) ದಿವಸ ಕೃಷ್ಣಾನದಿಯ ದಂಡೆಯಲ್ಲಿದ್ದ ಕೆಲಹೊಲಗಳನ್ನು ಬ್ರಾಹ್ಮಣರಿಗೆ ದಾನಕೊಟ್ಟನು.

೪. ಮೈಸೂರ ಸಂಸ್ಥಾನ ಬಳಗಾವೆಯ ಶಿಲಾಲೇಖ. ಈ ಶಾಸನದಲ್ಲಿ ಕಾಲನಿರ್ದೇಶವಿಲ್ಲ. ಈ ಕಲ್ಲಿನ ಮೇಲೆ ಆನೆಯ ಚಿತ್ರವಿರುತ್ತದೆ. ಇದು ಅಲ್ಲಿ ಮಂಡಲೇಶ್ವರರಾಗಿದ್ದ ಸೇಂದ್ರಕ ಮನೆತನದ ರಾಜಚಿಹ್ನವಾಗಿರಬಹುದು. ಸೇಂದ್ರಕ ಮಹಾರಾಜ ಪೋಗಿಲ್ಲಿಯು ನಾಯು(ಗ?)ರಖಂಡ ಜೆಡುಗೂರುಗಳನ್ನು ಆಳುತ್ತಿರುವಾಗ ಅವನೊಬ್ಬ ಅಧಿಕಾರಿಯು ಕೆಲ ತೆರಿಗೆ–ಸುಂಕಗಳನ್ನು ಒಂದು ವರ್ಷ ಮಾಫು ಮಾಡಿದನು.

೫. ಮೈಸೂರ ಸಂಸ್ಥಾನ ಸೊರಬದ ತಾಮ್ರಶಾಸನ. ವಿನಯಾದಿತ್ಯನ ಜಯಶೀಲವಾದ ಪಾಳೆಯವು ಚಿತ್ರಸೇಡು ಎಂಬ ಗ್ರಾಮದಲ್ಲಿದ್ದಾಗ ಆಳುಪ ಮನೆತನದ ಮಹಾರಾಜ ಚಿತ್ರವಾಹನನ ಹೇಳಿಕೆಯಂತೆ ಶಕೆ ೬೧೪ ಶನಿವಾರದ ದಿವಸ (೨೨ ಜೂನ ೬೯೨) ಅವನು ಬನವಾಸಿಯ ಈಶಾನ್ಯಕ್ಕಿದ್ದ ಸಾಲೀವೊಗೆ ಎಂಬ ಗ್ರಾಮವನ್ನು ಬ್ರಾಹ್ಮಣರಿಗೆ ದಾನಕೊಟ್ಟನು.

೬. ಸುರತದ ತಾಮ್ರಶಾಸನ. ಕಲಚುರಿ ಶಕೆ ೪೪೩ ಶ್ರಾವಣ ಶುದ್ಧ ೧೩ (೩ ಅಗಸ್ಟ ೬೯೨) ದಿವಸ ವಿನಯಾದಿತ್ಯನ ಚಿಗಪ್ಪನ ಮಗನಾದ ಯುವರಾಜ ಸತ್ಯಾಶ್ರಯ ಶಿಲಾದಿತ್ಯನು ಸುರತದ ನೆರೆಯ ಹಳ್ಳಿಯಾದ ಓಸುಂಭಲೆ (ಉಂಭೇರ)ಯ ಒಂದು ಹೊಲವನ್ನು ಒಬ್ಬ ಬ್ರಾಹ್ಮಣನಿಗೆ ದಾನಕೊಟ್ಟನು.

೭. ಮೈಸೂರ ಸಂಸ್ಥಾನ ಹರಿಹರದ ತಾಮ್ರಶಾಸನ. ಹರಿಹರದ ನೆರೆಯಲ್ಲಿದ್ದ ಕರಂಜಪತ್ರವೆಂಬ ಹಳ್ಳಿಯಲ್ಲಿದ್ದಾಗ ವಿನಯಾದಿತ್ಯನು ಒಬ್ಬ ಆಳುಪ ಅರಸನ ಹೇಳಿಕೆಯಂತೆ ವನವಾಸಿ ಮಂಡಲದ ಕಿರುಕಾಗಾಮಾಸಿ ಎಂಬ ಹಳ್ಳಿಯನ್ನು ಒಬ್ಬ ಬ್ರಾಹ್ಮಣನಿಗೆ ಉಂಬಳಿ ಹಾಕಿಕೊಟ್ಟನು.

೮. ವಿಜಯಾದಿತ್ಯ


(೬೯೬–೭೩೩)

ವಿನಯಾದಿತ್ಯನ ತರುವಾಯ ಅವನ ಮಗನಾದ **ವಿಜಯಾದಿತ್ಯನು** ಬಾದಾಮಿಯ ಚಾಳುಕ್ಯ ಪಟ್ಟವನ್ನೇರಿದನು. ಇವನ ಪಟ್ಟಾಭಿಷೇಕವು

ಎಂದಾಯಿತೆಂಬುದು ನಿಶ್ಚಯವಾಗಿ ತಿಳಿಯುವುದಿಲ್ಲ. ಇವನ ಅಜ್ಜ ನಾದ ವಿಕ್ರಮಾದಿತ್ಯನು ತೆಂಕಣ ಅರಸರ ಮೇಲೆ ದಂಡೆತ್ತಿ ಹೋದಾಗ ಇವನು ರಾಜಧಾನಿಯಲ್ಲಿದ್ದು ರಾಜ್ಯಪರಿಪಾಲನೆಯನ್ನು ಮಾಡಿದ ನೆಂತಲೂ ಇವನ ತಂದೆಯು ಮಾಡಿದ ಬಡಗಣ ದಂಡಯಾತ್ರೆಯಲ್ಲಿ ಇವನು ಅವನಿಗೆ ನೆರವಾದನೆಂತಲೂ ಮೇಲೆ ಬರೆದಿರುತ್ತೇವಷ್ಟೇ. ಇವನು ತನ್ನ ತಂದೆ ಇರುವಾಗಾಗಲಿ ಅವನು ಸತ್ತ ಬಳಿಕಾಗಲಿ ಉತ್ತರಾ ಪಥದ ಮೇಲೆ ದಂಡೆತ್ತಿ ಹೋಗಿ ಅಲ್ಲಿಯ ಒಬ್ಬ ದೊಡ್ಡ ಅರಸನನ್ನು ಸೋಲಿಸಿ ಅವನಿಂದ **ಪಾಲಿಧ್ವಜವನ್ನೂ ಢಕ್ಕಾ** ಎಂಬ ನಗಾರಿಯನ್ನೂ **ಗಂಗಾಯಮುನಾನದಿಗಳ ಚಿಹ್ನಗಳನ್ನೂ** ದೊರಕಿಸಿದನು. ಈ ಚಿಹ್ನ ಗಳೆಂದರೆ ಏನೆಂಬುದು ಚೆನ್ನಾಗಿ ಗೊತ್ತಾಗುವುದಿಲ್ಲ. ಆ ನದಿಗಳ ಪ್ರತಿಮೆಗಳೇ ಈ ಚಿಹ್ನಗಳಾಗಿದ್ದರೂ ಆಗಿರಬಹುದು. ಇವನು ೭೦೦ ರಿಂದ ೭೦೬ ರ ವರೆಗೆ ಕೊಂಕಣ ಮಹಾಸಪ್ತಮದಲ್ಲಿ ಅಂದರೆ ರತ್ನಾಗಿರಿ ಜಿಲ್ಲೆ ಸಾವಂತವಾಡಿ ಸಂಸ್ಥಾನಗಳನ್ನೊಳಗೊಂಡ ಇರಿಡಿಗೆ ವಿಷಯ ದಲ್ಲಿ ಸುಖಪ್ರವಾಸಮಾಡಿದನೆಂದು ಶಾಸನಗಳಿಂದ ಕಂಡುಬರುತ್ತದೆ.

ವಿಜಯಾದಿತ್ಯನು ದೊಡ್ಡ ಎದೆಗಾರನೂ ಅತಿಸಾಹಸಿಯೂ ಆಗಿ ದ್ದನು. ಒಮ್ಮೆ ಅವನು ಸೋಲಿಸಿದ ಶತ್ರುಗಳು ತಿರುಗಿ ಹೋಗುತ್ತಿರು ವಾಗ ಸ್ವಲ್ಪಮಂದಿ ರಾಹುತರೊಡನೆ ಅವರನ್ನು ಬೆನ್ನಟ್ಟಿದನು. ತನ್ನ ದಂಡು ಬಿಟ್ಟು ದೂರವಾಗಿ, ಬಂದುದನ್ನು ನೋಡಿ, ಹಗೆಗಳು ತಿರುಗಿ ನಿಂತು, ಅವನ ಸ್ವಾರರನ್ನು ಕಡಿದುಹಾಕಿ, ಅವನನ್ನು ಸೆರೆಹಿಡಿದರು. ಇಂತಹ ದುರ್ಧರವಾದ ವಿಪತ್ತಿನಲ್ಲಿ ಕೂಡ ಅವನು ಎದೆಗುಂದಲಿಲ್ಲ. ಮುಂದೆ ತುಸು ದಿವಸದಲ್ಲೇ ಅವನು ಯುಕ್ತಿಯಿಂದ ಕಾವಲುಗಾರ ರನ್ನು ವಂಚಿಸಿ ತಪ್ಪಿಸಿಕೊಂಡು, ಸುಖರೂಪವಾಗಿ ತನ್ನ ಪಾಳೆಯಕ್ಕೆ ಬಂದು ಮುಟ್ಟಿದನು. ಈ ಸಂಗತಿಯನ್ನು ಡಾಕ್ಟರ ಭಾಂಡಾರಕರ ಫ್ಲೀಟರಿಬ್ಬರು ಬರೆದಿದ್ದರೂ ಅವರೊಳಗೆ ಒಬ್ಬರಾದರೂ ಅದಕ್ಕಿದ್ದ ಆಧಾರವನ್ನು ಹೇಳಿಲ್ಲ. ಆದ್ದರಿಂದ ಅವನು ಎಂದು ಎಲ್ಲಿ ಯಾರ ಸೆರೆ ಯಾಳಾಗಿದ್ದನೆಂಬುದು ಗೊತ್ತಾಗುವುದಿಲ್ಲ.

ವಿಜಯಾದಿತ್ಯನಿಗೆ ದೇವರಲ್ಲಿ ಭಕ್ತಿವಿಶ್ವಾಸವೂ ಕಟ್ಟಡಗಳನ್ನು ಕಟ್ಟಿಸುವುದರಲ್ಲಿ ಹೆಚ್ಚು ಪ್ರೀತಿಯೂ ಇತ್ತೆಂದು ತೋರುತ್ತದೆ. ಇವನು ವಾತಾಪಿಯಲ್ಲಿ ಬ್ರಹ್ಮ ವಿಷ್ಣು ಮಹೇಶ್ವರರ ತ್ರಿಮೂರ್ತಿಗಳನ್ನು ಪ್ರತಿಷ್ಠಾಪಿಸಿದ್ದಲ್ಲದೆ, ಪಟ್ಟದ ಕಲ್ಲಿನಲ್ಲಿ **ವಿಜಯೇಶ್ವರನ** ಒಂದು ಭವ್ಯವಾದ ದೊಡ್ಡ ದೇವಾಲಯವನ್ನು ಕಟ್ಟಿಸಿದನು. ಈ ಗುಡಿಗೆ ಈಗ ಸಂಗಮೇಶ್ವರನ ಗುಡಿಯೆಂದು ಕರೆಯುತ್ತಾರೆ.



ಪಟ್ಟದಕಲ್ಲಿನ ವಿಜಯೇಶ್ವರ (ಸಂಗಮೇಶ್ವರ)ನ ಗುಡಿಯು ನೈರುತ್ಯದ ನೋಟ.

ಇವಲ್ಲದೆ ಇವನ ಆಳಿಕೆಯಲ್ಲಿ ಇವನ ತಂಗಿಯಾದ **ಕುಂಕುಮ ಮಹಾದೇವಿ** ಎಂಬವಳು **ಆನೆಸಜ್ಜೆಯ** ಬಸದಿ ಎಂಬ ಒಂದು ಜೈನ ಗುಡಿಯನ್ನು ಲಕ್ಷ್ಮೇಶ್ವರದಲ್ಲಿ ಕಟ್ಟಿಸಿದಳೆಂದು ಗುಡಿಗೇರಿಯ ಶಾಸನ ದಿಂದ ತಿಳಿದುಬರುತ್ತದೆ. ದೊಡ್ಡ ಜೈನ ಪಂಡಿತನೆಂದು ಹೆಸರುಪಡೆದ **ಪೂಜ್ಯಪಾದನ** ಒಬ್ಬ ಶಿಷ್ಯನಿಗೆ ವಿಜಯಾದಿತ್ಯನು ಪುಲಿಕರ (ಲಕ್ಷ್ಮೇಶ್ವರ)ದ ಹತ್ತಿರಿದ್ದ ಕರ್ದಮ ಎಂಬ ಹಳ್ಳಿಯನ್ನು ಉಂಬಳಿ

ಯಾಗಿ ಕೊಟ್ಟುದಲ್ಲದೆ, ವಾತಾಪಿಯ ಬ್ರಹ್ಮ ವಿಷ್ಣು ಮಹೇಶ್ವರರಿಗೂ ಪಟ್ಟದ ಕಲ್ಲಿನ ವಿಜಯೇಶ್ವರ ಲೋಕಪಾಲೇಶ್ವರರಿಗೂ ಕೆಲ ಗ್ರಾಮ ಗಳನ್ನು ಇನಾಮು ಹಾಕಿಕೊಟ್ಟನು.

ವಿಜಯಾದಿತ್ಯನಿಗೆ ವಿಶಿಷ್ಟವಾದ ಯಾವ ಬಿರುದೂ ಇದ್ದಿದ್ದಿಲ್ಲ. ಅವನಿಗೆ ಸತ್ಯಾಶ್ರಯ, ಸಮಸ್ತ ಭುವನಾಶ್ರಯ, ಶ್ರೀ ಪೃಥ್ವೀವಲ್ಲಭ, ಮಹಾರಾಜಾಧಿರಾಜ ಪರಮೇಶ್ವರ, ಭಟ್ಟಾರಕ ಅಥವಾ ಭಟಾರ, ಪರಮ ಭಟ್ಟಾರಕ ಎಂಬ ಸಾಮಾನ್ಯ ಬಿರುದುಗಳೇ ಇದ್ದವು. ಇವನು ೬೯೨ ರಲ್ಲಿ ಯುವರಾಜನಾದನು. **ವೀಣಾಪೋಟಿ** ಎಂಬವಳೊಬ್ಬಳು ಇವನ ಉಪಪತ್ನಿಯಾಗಿದ್ದಳು.

ಇವನ ಕಾಲದ ಶಾಸನಗಳನ್ನು ಸಂಕ್ಷಿಪ್ತವಾಗಿ ಕೆಳಗೆ ಕೊಡು ವೆವು:—

೧. ಬಾದಾಮಿಯ ಶಿಲಾಲೇಖ. ಶಕೆ ೬೨೧ ಜ್ಯೇಷ್ಠ ಶುದ್ಧ ೧೫ (೨೦ ಮೇ ೬೯೯) ದಿವಸ ಬ್ರಹ್ಮ ವಿಷ್ಣು ಮಹೇಶ್ವರರ ಮೂರ್ತಿಗಳು ವಿಜಯರಾಜಧಾನಿಯಾದ ಬಾದಾಮಿಯಲ್ಲಿ ಪ್ರತಿಷ್ಠಿಸಲ್ಪಟ್ಟವು. ಈ ಶಾಸನವು ಅರ್ಧ ಸಂಸ್ಕೃತ, ಅರ್ಧ ಕನ್ನಡ ಇರುತ್ತದೆ.

೨. ಸಾವಂತವಾಡಿ ಸಂಸ್ಥಾನ ನೆರೂರಿನ ತಾಮ್ರಶಾಸನ. ಶಕೆ ೬೨೨, ಆಷಾಢ ಶುದ್ಧ ೧೫ (೬ ಜನವರಿ ೭೦೦) ದಿವಸ ವಿಜಯಾದಿತ್ಯನ ಜಯಶೀಲವಾದ ಪಾಳೆಯವು ರಾಸೆನ ನಗರ (ಅಹಮ್ಮದನಗರ ಜಿಲ್ಲೆ ಕರ್ಜತ ತಾಲೂಕ ರಾಶಿನ ಎಂಬ ಊರು)ದಲ್ಲಿದ್ದಾಗ ಒಬ್ಬ ನಂದೆ ಶೇಮನೆಂಬ ಗೃಹಸ್ಥನ ಹೇಳಿಕೆಯಂತೆ, ಅವನು ಇರಿಡಿಗೆ ವಿಷಯ (ರತ್ನಾಗಿರಿ ಜಿಲ್ಲೆ ಸಾವಂತವಾಡಿ ಸಂಸ್ಥಾನ ಇವೆರಡು ಕೂಡಿದ ಪ್ರಾಂತ) ದಲ್ಲಿದ್ದ ನೆರೂರೆಂಬ ಗ್ರಾಮವನ್ನು ಒಬ್ಬ ಬ್ರಾಹ್ಮಣನಿಗೆ ದಾನ ಕೊಟ್ಟನು.

೩. ನೆರೂರಿನ ಮತ್ತೊಂದು ತಾಮ್ರಶಾಸನ. ಶಕೆ ೬೨೭ರಲ್ಲಿ ಅಂದರೆ ಇಸ್ವಿ ೭೦೫ ಜೂನದಿಂದ ೭೦೬ ಮಾರ್ಚದೊಳಗೆ, ವಿಜಯಾ ದಿತ್ಯನು ಉಪೇಂದ್ರನೆಂಬವನ ಹೇಳಿಕೆಯಂತೆ ಕೊಂಕಣ ಮಹಾ

ಸಪ್ತಮುದ್ರೊಳಗಿನ ಇರಿಡಿಗೆ ವಿಷಯದಲ್ಲಿದ್ದ ಪಿಕುಳಂಬ ಎಂಬ ಗ್ರಾಮವನ್ನು ಬ್ರಾಹ್ಮಣರಿಗೆ ದಾನಕೊಟ್ಟನು.

೪. ಐಹೊಳೆಯ ಶಿಲಾಲೇಖ. ಶಕೆ ೬೩೧ ಆಶ್ವೀಜ ಶುದ್ಧ ೫ (೨೩ ಸಪ್ಟಂಬರ ೭೦೮) ದಿವಸ ವಿಜಯಾದಿತ್ಯನು ಐಹೊಳೆಯಲ್ಲಿ ಕೆಲವು ದಾನಗಳನ್ನು ಮಾಡಿದನು.

೫. ಮಹಾಕೂಟದ ಶಿಲಾಲೇಖ. ವಿಜಯಾದಿತ್ಯನ ಪ್ರೀತಿ ಪಾತ್ರಳಾದ ವೀಣಾಪೋಟಿ ಎಂಬವಳೊಬ್ಬಳು ಮಹಾಕೂಟೇಶ್ವರನಿಗೆ ಕೆಲವು ದಾನಗಳನ್ನು ಕೊಟ್ಟಳು.

೬. ಪಟ್ಟದ ಕಲ್ಲಿನ ಶಿಲಾಲೇಖ. ವಿಜಯಾದಿತ್ಯನೂ ಅವನ ಮಗನಾದ ೨ ನೆಯ ವಿಕ್ರಮಾದಿತ್ಯನೂ ಪಟ್ಟದ ಕಲ್ಲಿನ ಲೋಕಪಾಲೇಶ್ವರನಿಗೆ ಕೆಲವು ದಾನಗಳನ್ನು ಕೊಟ್ಟರು.

೭. ಲಕ್ಷ್ಮೇಶ್ವರದ ಶಿಲಾಲೇಖ. ಶಕೆ ೬೪೫ ಭಾದ್ರಪದ ಶುದ್ಧ ೧೫ (೨೦ ಅಗಸ್ಟ ೭೨೩) ದಿವಸ ವಿಜಯಾದಿತ್ಯನ ಜಯಶೀಲವಾದ ಪಾಳೆಯವು ರಕ್ತಪುರ (ಪುಲಿಗೆರೆ, ಲಕ್ಷ್ಮೇಶ್ವರ)ದಲ್ಲಿರುವಾಗ, ಅವನು ಜಿನಭಟ್ಟಾರಕ ದೇವರ ಅರ್ಚಕನಾದ ಜಯದೇವ ಪಂಡಿತನಿಗೆ ಸಂಬೊಳಲವೆಂಬ ಹಳ್ಳಿಯನ್ನು ದಾನಕೊಟ್ಟನು.

೮. ಲಕ್ಷ್ಮೇಶ್ವರದ ೨ ನೆಯ ಶಿಲಾಲೇಖ. ಚಾಳುಕ್ಯ ಚಕ್ರವರ್ತಿಯ ಜಯಶೀಲವಾದ ಪಾಳೆಯವು ರಕ್ತಪುರದಲ್ಲಿದ್ದಾಗ ವಿಜಯಾದಿತ್ಯನು ಶಕೆ ೬೫೧ ಫಾಲ್ಗುಣ ಶುದ್ಧ ೧೫ (೭ ಫೆಬ್ರುವರಿ ೭೩೦) ದಿವಸ ನಿರವದ್ಯ ಉದಯದೇವ ಪಂಡಿತನೆಂಬ ಜೈನನಿಗೆ ಕರ್ದಮ ಎಂಬ ಹಳ್ಳಿಯನ್ನು ದಾನಕೊಟ್ಟನು.

೯. ನೆರೂರಿನ ಮತ್ತೊಂದು ತಾಮ್ರಶಾಸನ. ಇದರಲ್ಲಿ ಕಾಲ ನಿರ್ದೇಶವಿಲ್ಲ. ವಿಜಯಾದಿತ್ಯನ ಮಗನಾದ ೨ ನೆಯ ವಿಕ್ರಮಾದಿತ್ಯನು ಮಳವೂರೆಂಬ ಗ್ರಾಮವನ್ನು ಒಬ್ಬ ಬ್ರಾಹ್ಮಣನಿಗೆ ದಾನಕೊಟ್ಟನು.

೧೦. ಲಕ್ಷ್ಮೇಶ್ವರದ ೩ ನೆಯ ಶಿಲಾಲೇಖ. ಇದರಲ್ಲಿ ವಿಜಯಾದಿತ್ಯನ ಹೆಸರು ಇಲ್ಲದಿದ್ದರೂ ೨ ನೆಯ ವಿಕ್ರಮಾದಿತ್ಯನನ್ನು ಯುವ

ರಾಜನೆಂದು ಕರೆದುದರಿಂದ ಇದು ವಿಜಯಾದಿತ್ಯನ ಕಾಲದ್ದೇ ಇರಲಿಕ್ಕೆ ಬೇಕು.

೧೧. ಗುಜರಾಥದಲ್ಲಿದ್ದ ಬಲ್ಸಾರದ ತಾಮ್ರಶಾಸನ. ಇದು ವಿಜಯಾದಿತ್ಯನ ಚಿಗಪ್ಪನಾದ ಧರಾಶ್ರಯ ಜಯಸಿಂಹವರ್ಮನ ೨ನೆಯ ಮಗನಾದ ರಾಜಾ ಮಂಗಳರಸನು ಮಂಗಳಪುರಿಯಲ್ಲಿ ಕೊಟ್ಟ ಶಾಸನವು. ಇದರಲ್ಲಿ ಕಲಚುರಿ ಅಥವಾ ಚೇದಿ ಶಕವಿರದೆ ಶಾಲಿವಾಹನ ಶಕದ ೬೫೩(೭೩೧-೩೨) ನೆಯ ವರ್ಷವನ್ನು ಕಾಣಿಸಿದ್ದರಿಂದ ಮಂಗಳ ಪುರಿಯು ಲಾಟ ಪ್ರಾಂತದಲ್ಲಿರದೆ ನಾಸಿಕ ಖಾನದೇಶ ಪ್ರಾಂತಗಳಲ್ಲಿ ಇದ್ದಿರಬಹುದೆಂದು ತೋರುತ್ತದೆ.

೯. ೨ ನೆಯ ವಿಕ್ರಮಾದಿತ್ಯ

(೭೩೪-೭೪೬)

ವಿಜಯಾದಿತ್ಯನ ತರುವಾಯ ಅವನ ಪ್ರಿಯತನಯನಾದ ವಿಕ್ರಮಾದಿತ್ಯನು ೨ ನೆಯ ವಿಕ್ರಮಾದಿತ್ಯನೆಂಬ ಹೆಸರಿನಿಂದ ಚಾಳುಕ್ಯ ಚಕ್ರವರ್ತಿಯಾದನು. ಕವಿ ರನ್ನನು ಇವನನ್ನು **ಕೊಂಕಣಿ ವಿಕ್ರಮಾದಿತ್ಯ**ನೆಂದು ಕರೆದಿರುತ್ತಾನೆ*. ಈ ಹೆಸರಿನಿಂದ ಇವನ ತಾಯಿಯು ಕೊಂಕಣದವಳಾಗಿದ್ದಳೆಂದು ಊಹಿಸಬಹುದು. ಆದರೆ ಇವಳ ಹೆಸರಾಗಲಿ ಮನೆತನವಾಗಲಿ ನಾಡಾಗಲಿ ಇನ್ನೂ ಗೊತ್ತಾಗಿಲ್ಲ. ವಿಜಯಾದಿತ್ಯನು ೭೦೦ ರಿಂದ ೭೦೬ ರ ವರೆಗೆ ಕೊಂಕಣದಲ್ಲಿ ಸುಖಪ್ರವಾಸ ಮಾಡಿದನೆಂದು ಮೇಲೆ ಬರೆದಿರುತ್ತೇವಷ್ಟೆ. ಆ ಕಾಲಕ್ಕೆ ಅವನು ಕೊಂಕಣದಲ್ಲಿದ್ದ ಒಬ್ಬ ಮಾಂಡಲಿಕನ ಮಗಳನ್ನು ಮದುವೆ ಮಾಡಿಕೊಂಡಿರಬಹುದು. ಆಕೆಯಿಂದ ಹುಟ್ಟಿದವನಾದ್ದರಿಂದ ಇವನಿಗೆ ಕೊಂಕಣಿ ವಿಕ್ರಮಾದಿತ್ಯನೆಂದು ಜನರು ಕರೆಯುತ್ತಿದ್ದರೆಂದು ತೋರುತ್ತದೆ.

ಕಾಲಚಕ್ರವು ಒಂದೇ ಸಮನೆ ತಿರುಗುತ್ತಿರುತ್ತದಷ್ಟೇ. ಅದರೊಡನೆ ದೇಶಸ್ಥಿತಿಯೂ ಜನರ ವಿಚಾರಗಳೂ ಬದಲಾವಣೆಯನ್ನು ಹೊಂದುತ್ತಿರುತ್ತವೆಂಬುದು ವಾಚಕರು ಬಲ್ಲ ವಿಷಯವೇ ಸರಿ. ಆದ

* ಹಿಂದೆ ಭಾ. ೨, ಅ. ೧, ಪುಟ ೧೮೭.

ಕಾರಣ ಪ್ರತಿಯೊಬ್ಬ ಮನುಷ್ಯನ ಸ್ವಭಾವವು ಅವನ ಪರಿಸ್ಥಿತಿಗೆ ಅನುರೂಪವಾಗಿರುತ್ತದೆಂಬ ಗಾದೆಯು ಪಾಶ್ಚಿಮಾತ್ಯರೊಳಗೆ ರೂಢಿಯಲ್ಲಿ ಬಂದಿದೆ. ವಿಕ್ರಮಾದಿತ್ಯನ ಕಾಲದಲ್ಲಿ ಹಗೆಗಳು ಹೆಚ್ಚಿದರು. ಆದ್ದರಿಂದ ಅವನ ಸಾಮ್ರಾಜ್ಯದಲ್ಲಿ ಶಾಂತತೆಯು ಇಲ್ಲದಂತಾಯಿತು. ಚಾಳುಕ್ಯ ಮನೆತನದ ಹುಟ್ಟ ಹಗೆಗಳಾದ ಪಲ್ಲವರಲ್ಲಿ ಬಳಜಗಳವು ಹುಟ್ಟಿತು. ಆದ್ದರಿಂದ ರಾಜಧಾನಿಯೊಳಗಿದ್ದು ಸುಖೋಪಭೋಗದಲ್ಲಿ ಕಾಲ ಕಳೆಯುಲಿಕ್ಕೆ ಹೆಬ್ಬಯಕೆಯುಳ್ಳ ವಿಕ್ರಮಾದಿತ್ಯನಿಗೆ ಅವಕಾಶವು ದೊರೆಯಲಿಲ್ಲ. ಅವನು ಹೆಸರುವಾಸಿಯಾದ ಕರ್ನಾಟಕ ಸೇನೆಯನ್ನು ಸಜ್ಜುಮಾಡಿಕೊಂಡು ಪಲ್ಲವರ ಮೇಲೆ ದಂಡೆತ್ತಿ ಹೋದನು. ಅವನು ತುಂಡಾಕಪ್ರಾಂತವನ್ನೊಳನುಗ್ಗಿ ತನ್ನನ್ನು ಎದುರಿಸಿದ ಪಲ್ಲವ ಅರಸನಾದ **ನಂದಿಪೋಟವರ್ಮ**ನನ್ನು ಎಡೆಬಿಡದೆ ಸೋಲಿಸಿ, ಅವನ ವಾದ್ಯಗಳಾದ **ಕಟುಮುಖ**ವನ್ನೂ **ಸಮುದ್ರಘೋಷ**ವನ್ನೂ ಅವನ ನಿಶಾನೆಯಾದ **ಖಟ್ವಾಂಗಧ್ವಜ**ವನ್ನೂ ಕಿತ್ತಿಕೊಂಡುದಲ್ಲದೆ, ಎಷ್ಟೋ ಆನೆಗಳನ್ನೂ ಹರಳುಕಲ್ಲುಗಳನ್ನೂ ಹಿಡಿದುಕೊಂಡನು. ಇಷ್ಟರಿಂದಲೆ ವಿಕ್ರಮಾದಿತ್ಯನ ಮನಸ್ಸು ತಣಿಯಲಿಲ್ಲ. ತನ್ನ ಮನೆತನದ ಜನ್ಮಶತ್ರುಗಳಾದ ಪಲ್ಲವರ ರಾಜ್ಯವನ್ನು ಪೂರಾ ನಾಶಮಾಡಬೇಕೆಂಬ ಬಯಕೆಯು ಅವನಲ್ಲಿ ಮೊಳೆಯಿತು. ಆದಕಾರಣ ಅವನು ತನಗೆ ಎದುರಾದವರನ್ನು ಮುರಿಬಡಿಯುತ್ತ ಕಂಚಿಯ ವರೆಗೆ ಹೋಗಿ ಆ ಹೆಸರುವಾಸಿಯಾದ ಪಲ್ಲವರ ರಾಜಧಾನಿಯನ್ನು ಕಯ್ವಶ ಮಾಡಿಕೊಂಡನು.

ಚಾಳುಕ್ಯರ ವಂಶಪರಂಪರ ರಾಜಧಾನಿಯಾದ ವಾತಾಪಿಯು ಅಕಸ್ಮಾತ್ತಾಗಿ ಪಲ್ಲವರ ಕಯ್ವಶವಾದುದು ಅತಿ ಸೋಜಿಗವಾದ ಸಂಗತಿಯಾಗಿತ್ತೆಂದು ಹಿಂದೆ ಬರೆದಿರುತ್ತೇವಷ್ಟೇ. ಈಗ ಪಲ್ಲವರ ಪ್ರಸಿದ್ಧ ರಾಜಧಾನಿಯಾದ ಕಂಚಿಯು ಸುಲಭವಾಗಿ ವಿಕ್ರಮಾದಿತ್ಯನ ಕಯ್ಸೇರಿದುದು ಅಷ್ಟೇ ಆಶ್ಚರ್ಯಕರವಾದ ಸಂಗತಿಯೆಂದು ಹೇಳಬಹುದು. ವೀರಾಗ್ರೇಸರನಾದ ೨ ನೆಯ ಪುಲಿಕೇಸಿಯು ಹಿಡಿದುಕೊಳ್ಳಲಿಕ್ಕೆ ಸಾಧ್ಯವಾಗದ ಕಾಂಚೀಪುರವು ಸಾಮಾನ್ಯ ಶೂರನಾದ ೨ ನೆಯ ವಿಕ್ರಮಾದಿತ್ಯನ ಕಯ್ಸೇರಿದುದು ಅತ್ಯದ್ಭುತವಾದ ಸಂಗತಿಯಲ್ಲವೇ ? ಇದರ ಕಾರಣ

ಗಳನ್ನು ಶ್ರೀಯುತ ಕೆ. ವಿ. ಸುಬ್ರಹ್ಮಣ್ಯಯ್ಯರ್, ಬಿ.ಎ., ಯವರು ಕೆಳಗೆ ಬರೆದಂತೆ ವಿವರಿಸಿದ್ದಾರೆ:—

"ಚಾಳುಕ್ಯ ಸಾಮ್ರಾಜ್ಯವು ಅರಜೀವಿಯಾಗಿದ್ದರೂ ೨ ನೆಯ ವಿಕ್ರಮಾದಿತ್ಯನು ಇಷ್ಟು ಸುಲಭವಾಗಿ ಕಾಂಚಿಪುರವನ್ನು ಹಿಡಿದುಕೊಂಡ ಕಾರಣವೇನು? **ನಂದಿವರ್ಮಪಲ್ಲವ ಮಲ್ಲ**ನು ಪಲ್ಲವ ದಳವಾಯಿಗಳ ಸಹಾಯದಿಂದ ಪಲ್ಲವ ಅರಸನಾದ ೨ ನೆಯ ಪರಮೇಶ್ವರವರ್ಮನನ್ನು ಪಟ್ಟದಿಂದ ತಳ್ಳಿ, ತಾನೇ ಪಲ್ಲವ ರಾಜ್ಯಕ್ಕೆ ಒಡೆಯನಾಗಿ ಪದಚ್ಯುತನಾದ ಅರಸನೊಡನೆ ಎಡೆಬಿಡದೆ ಕಾದಿ ಹಣ್ಣಾಗಿದ್ದನು. ಅವನಿಗೆ ಜನಸಾಹಾಯವೂ ಧನಸಾಹಾಯವೂ ಸಾಕಷ್ಟು ಇದ್ದಿಲ್ಲ. ಅವನಿಗೆ ಚಾಳುಕ್ಯರನ್ನು ತಡೆಯುವಷ್ಟು ಸಾಮರ್ಥ್ಯವಿಲ್ಲದಾಗ ವಿಕ್ರಮಾದಿತ್ಯನು ಅವನ ರಾಜಧಾನಿಯನ್ನು ಹಿಡಿದುಕೊಂಡನು*.

ಈ ಪಲ್ಲವರ ಒಳಜಗಳವು ಸುಮಾರು ೨೫ ವರ್ಷಗಳ ವರೆಗೆ ನಡೆದಿತ್ತೆಂದು ಹೇಳಬಹುದು. ಏಕೆಂದರೆ ಈ ನಂದಿವರ್ಮನು ೭೧೫ ರಿಂದ ೭೬೫ ರ ವರೆಗೆ ೫೦ ವರುಷ ಆಳಿದನೆಂದು ಡಾ॥ ಫ್ಲೀಟರು ಊಹಿಸುತ್ತಾರೆ. ಆದಕಾರಣ ಈ ಕಾಂಚೀಪುರವನ್ನು ೨ ನೆಯ ವಿಕ್ರಮಾದಿತ್ಯನು ಸುಮಾರು ೭೪೦ ರಲ್ಲಿ ಹಿಡಿದುಕೊಂಡನೆಂತಲೂ ಮುಂದೆ ಸ್ವಲ್ಪ ಕಾಲದಲ್ಲೇ ನಂದಿವರ್ಮನು ಅದನ್ನು ಚಾಳುಕ್ಯರಿಂದ ತಿರುಗಿ ತೆಗೆದುಕೊಂಡನೆಂತಲೂ ಅನುಮಾನ ಮಾಡಬಹುದು. ಈ ವಾತಾಪಿ ಕಂಚಿ ರಾಜಧಾನಿಗಳು ಹಗೆಗಳ ಕಯ್ಸೇರಲಿಕ್ಕೆ ಒಳಜಗಳವೇ ಮುಖ್ಯ ಕಾರಣವಾಗಿತ್ತೆಂಬುದನ್ನು ವಾಚಕರು ಮರೆಯಕೂಡದು.

೨ ನೆಯ ವಿಕ್ರಮಾದಿತ್ಯನ ಆಳಿಕೆಯಲ್ಲಿ ಮತ್ತೊಂದು ಮಹತ್ವದ ಸಂಗತಿಯು ಸಂಭವಿಸಿತು. ೮ ನೆಯ ಶತಮಾನದಲ್ಲಿ **ಮುಹಮ್ಮದ ಪೈಗಂಬರ**ನ ಹೊಸ ಮತವು ಏಸಿಯಾಖಂಡದ ಪಶ್ಚಿಮ ಭಾಗದಲ್ಲಿ ಹಬ್ಬಿ ನೆಲೆಗೊಂಡು, ಜನರನ್ನು ಒಟ್ಟುಗೂಡಿಸಿದ್ದರಿಂದ ಮುಸಲ್ಮಾನರು ಸಮಗ್ರ ಭರತಖಂಡದ ಮೇಲೆ ದಂಡೆತ್ತಿ ಬರಲಾರಂಭಿಸಿದರು. ಸುಮಾರು

---

* ಪ್ರಾಚೀನ ದಕ್ಷಿಣಾಪಥದ ಐತಿಹಾಸಿಕ ಟಿಪ್ಪಣಿಗಳು, ಪು. ೪೩-೪೭.

೭೩೭ ರಲ್ಲಿ ತೇಜಕ (ಅರಬ)ರು ದಂಡೆತ್ತಿ ಬಂದು ಸೈಂಧವ (ಸಿಂಧ), ಕಚ್ಚೆಲ್ಲ (ಕಚ್ಛ), ಸೌರಾಷ್ಟ್ರ (ಪಲ್ಲಫ), ಚಾವೋಟಕ (ಚಾವಡಾ), ಮೌರ್ಯ, ಗುರ್ಜರ ಅರಸರನ್ನು ಸೋಲಿಸಿ, ದಕ್ಷಿಣಾಪಥದ ಅರಸರನ್ನು ಗೆಲ್ಲುವುದಕ್ಕೋಸ್ಕರ ನವಸಾರಿಕಾ (ಲಾಟ) ಪ್ರಾಂತವನ್ನೊಳಸುಗ್ಗಿದರು. ಆಗ ಲಾಟಪ್ರಾಂತದ ಚಾಳುಕ್ಯ ಮಂಡಲೇಶ್ವರನಾದ ಅವನಿಜನಾಶ್ರಯ ಪುಲಿಕೇಸಿಯು ಕಲಿತನದಿಂದ ಅವರ ಮೇಲೆ ಬಿದ್ದು ಅವರನ್ನು ಮುರಿ ಬಡಿದು ಹಿಂದಕ್ಕಟ್ಟಿ, ಗುಜರಾಥವನ್ನು ತನ್ನ ನಾಡಿಗೆ ಸೇರಿಸಿ ಕೊಂಡನು.

೨ ನೆಯ ವಿಕ್ರಮಾದಿತ್ಯನು ಪಲ್ಲವರ ರಾಜಧಾನಿಯಾದ ಕಂಚಿಯನ್ನು ಹಿಡಿದುಕೊಂಡನೆಂದು ಮೇಲೆ ಬರೆದಿರುತ್ತೇವಷ್ಟೆ. ಉಳಿದ ಜಯಶಾಲಿಗಳಂತೆ ಅವನು ಆ ಪಟ್ಟಣವನ್ನು ಹಾಳುಗೆಡವದೆಯೂ ಜನರನ್ನು ಸುಲಿಯದೆಯೂ ಅಲ್ಲಿಯ **ರಾಜಸಿಂಹೇಶ್ವರ** ಮುಂತಾದ ಪ್ರಸಿದ್ಧ ದೇವಾಲಯಗಳಿಗೆ ಚಿನ್ನ ಮುತ್ತು ಹರಳು ಕಲ್ಲುಗಳ ಒಡವೆಗಳನ್ನೂ ಭೂದಾನವನ್ನೂ ಕೊಟ್ಟನೆಂದು ಶಾಸನಗಳಿಂದ ಕಂಡು ಬರುತ್ತದೆ. ಪಲ್ಲವರನ್ನು ನಿರ್ಮೂಲಮಾಡಬೇಕೆಂಬ ಸಿಟ್ಟಿನಿಂದ ದಂಡೆತ್ತಿ ಬಂದ ಅರಸನಲ್ಲಿ ಇಷ್ಟು ಉದಾರಬುದ್ಧಿಯು ಹುಟ್ಟಬೇಕಾದರೆ ವಿಶೇಷವಾದ ಕಾರಣವೇನಾದರೂ ಇರಬೇಕಲ್ಲವೇ? ಶ್ರೀಮಚ್ಛಂಕರಾಚಾರ್ಯರ ಅದ್ವೈತ ಮತವನ್ನು ಇವನೂ ಇವನ ತಂದೆಯೂ ಸ್ವೀಕರಿಸಿ ಈ ಕಾಲಕ್ಕೆ ಶಿವೋಪಾಸಕರಾಗಿರಬಹುದು. ಅಥವಾ ರಾಜಕೀಯ ಪರಿಸ್ಥಿತಿಯೇ ಈ ಸೌಜನ್ಯವನ್ನು ಅವನಲ್ಲಿ ಹುಟ್ಟಿಸಿರಬಹುದು. ನಂದಿವರ್ಮನ ವಿರೋಧಿಗಳು ಈ ಶರ್ತಿನ ಮೇಲೆ ಅವನನ್ನು ಪಟ್ಟಣದೊಳಗೆ ಬರಗೊಟ್ಟಿದ್ದರೂ ಬರಗೊಟ್ಟಿರಬಹುದು. ಅಥವಾ ಈ ಮೂರೂ ಕಾರಣಗಳು ಒಟ್ಟುಗೂಡಿರಬಹುದು.

ಕಾಂಚೀಪುರವು ಚಾಳುಕ್ಯರ ವಶದಲ್ಲಿ ಬಹುಕಾಲ ಇರಲಿಲ್ಲೆಂದು ಕಂಡುಬರುತ್ತದೆ. ಏಕೆಂದರೆ ವಿಕ್ರಮಾದಿತ್ಯನ ಆಳಿಕೆಯಲ್ಲೇ ಯುವರಾಜನಾದ ಕೀರ್ತಿವರ್ಮನು ಆ ರಾಜಧಾನಿಯ ಮೇಲೆ ದಂಡೆತ್ತಿಹೋಗಿ

ಅದನ್ನು ಮತ್ತೆ ಹಿಡಿದುಕೊಂಡನೆಂದು ರಾಜಸಿಂಹೇಶ್ವರ ದೇವಾಲಯ ದಲ್ಲಿದ್ದ ಒಂದು ಶಿಲಾಲೇಖದಿಂದ ತಿಳಿದುಬರುತ್ತದೆ.

೨ ನೆಯ ವಿಕ್ರಮಾದಿತ್ಯನಿಗೆ ವಿಶಿಷ್ಟವಾದ ಯಾವ ಬಿರುದೂ ಇದ್ದಿದ್ದಿಲ್ಲ. ಸತ್ಯಾಶ್ರಯ, ಶ್ರೀ ಪೃಥ್ವೀವಲ್ಲಭ, ಮಹಾರಾಜಾಧಿರಾಜ, ಪರಮೇಶ್ವರ, ಭಟ್ಟಾರಕ ಅಥವಾ ಭಟಾರ ಎಂಬ ತನ್ನ ಮನೆತನದ ಸಾಮಾನ್ಯ ಬಿರುದುಗಳನ್ನೇ ಅವನು ಧರಿಸಿದ್ದನು. ಅವನಿಗೆ ಇಬ್ಬರು ಹೆಂಡಂದಿರು. ಹಯ್ಹಯ ಅಥವಾ ಕಲಚುರಿ ಮನೆತನದ **ಲೋಕಮಹಾದೇವಿಯು** ಅವನ ಪಟ್ಟದರಾಣಿಯಾಗಿದ್ದಳು. ಈಕೆಗೆ ಗಂಡು ಮಕ್ಕಳಾಗಲಿಲ್ಲ. ಈಕೆಯ ಮಲತಂಗಿಯಾದ **ತ್ರೈಲೋಕ್ಯ ಮಹಾದೇವಿ** ಎಂಬವಳು ಅವನ ಚಿಕ್ಕ ರಾಣಿಯಾಗಿದ್ದಳು. ಈಕೆಯಿಂದ ಹುಟ್ಟಿದ



ಪಟ್ಟದ ಕಲ್ಲಿನ ಲೋಕೇಶ್ವರ (ವಿರೂಪಾಕ್ಷ)ನ ಗುಡಿಯ ಬಡಗಣ ನೋಟ.

ಕೀರ್ತಿವರ್ಮನೆಂಬವನೇ ಕೊನೆಯ ಚಾಳುಕ್ಯ ಚಕ್ರವರ್ತಿಯಾದನು. ಇವರಿಬ್ಬರು ಈಶ್ವರನಲ್ಲಿ ಭಕ್ತಿ ವಿಶ್ವಾಸವುಳ್ಳವರಾದ್ದರಿಂದ ಎರಡು

ದೊಡ್ಡ ಶಿವಾಲಯಗಳನ್ನು ಪಟ್ಟದಕಲ್ಲಿನಲ್ಲಿ ಕಟ್ಟಿಸಿದರು. ತ್ರೈಲೋಕ್ಯ ಮಹಾದೇವಿಯ **ತ್ರೈಲೋಕ್ಯೇಶ್ವರ** ದೇವಸ್ಥಾನವು ಅವಳ ಮಗನ ಸಾಮ್ರಾಜ್ಯದಂತೆ ಮಣ್ಣುಪಾಲಾಗಿದ್ದರೂ ಲೋಕಮಹಾದೇವಿಯು ಕಟ್ಟಿಸಿದ **ಲೋಕೇಶ್ವರ** ದೇವಾಲಯವು ಪಟ್ಟದ ಕಲ್ಲಿನಲ್ಲಿ ಇನ್ನೂ ಸ್ಥಿರವಾಗಿ ನಿಂತಿದೆ. ಈ ಗುಡಿಗೆ ಈಗ ವಿರೂಪಾಕ್ಷನ ಗುಡಿ ಎಂದು ಹೆಸರು ಬಿದ್ದಿದೆ.

೨ನೆಯ ವಿಕ್ರಮಾದಿತ್ಯನ ಕಾಲದ ಶಾಸನಗಳನ್ನು ಕೆಳಗೆ ಕೊಡುತ್ತೇವೆ:—

೧. ಲಕ್ಷ್ಮೇಶ್ವರದ ಶಿಲಾಲೇಖ. ಚಾಳುಕ್ಯ ಚಕ್ರವರ್ತಿಯ ಜಯಶೀಲವಾದ ಪಾಳೆಯವು ರಕ್ತಪುರದಲ್ಲಿದ್ದಾಗ ೨ನೆಯ ವಿಕ್ರಮಾದಿತ್ಯನು ಜಿನೇಂದ್ರನ ಪೂಜಾರ್ಥವಾಗಿ ಕೆಲ ಭೂಮಿಯನ್ನು ದಾನ ಕೊಟ್ಟನು. ಶಕೆ ೬೫೬ ಮಾಘ ಶುದ್ಧ ೧೫ (೧೪ ಜನವರಿ ೭೩೫).

೨. ಐಹೊಳೆಯ ಶಾಸನ. ಇದರಲ್ಲಿ ಕಾಲ ನಿರ್ದೇಶವಿಲ್ಲ. ಇದು ಒಬ್ಬ ಗೃಹಸ್ಥನ ದಾನದ ಲೇಖವು.

೩. ಕಾಂಚೀಪುರದಲ್ಲಿದ್ದ ರಾಜಸಿಂಹೇಶ್ವರ ಗುಡಿಯ ಶಾಸನ. ಇದು ಬಹಳವಾಗಿ ಸವೆದಿದೆ. ಇದರಲ್ಲಿ ಕಾಲನಿರ್ದೇಶವಿಲ್ಲ. ಆದರೂ ೨ನೆಯ ವಿಕ್ರಮಾದಿತ್ಯನ ಹೆಸರೂ ಅವನ ಬಿರುದುಗಳೂ ಸ್ಪಷ್ಟವಾಗಿ ಕಾಣಿಸುತ್ತಿರುವುದರಿಂದ ಅವನು ಕಂಚಿ ರಾಜಧಾನಿಯನ್ನು ಕಯ್ವಶ ಮಾಡಿಕೊಂಡಿದ್ದನೆಂಬುದಕ್ಕೆ ಸಂದೇಹವಿಲ್ಲ.

೪. ಪಟ್ಟದಕಲ್ಲಿನ ಲೋಕೇಶ್ವರ(ವಿರೂಪಾಕ್ಷ)ನ ಗುಡಿಯ ಎರಡು ಶಾಸನಗಳು. ಇವುಗಳಲ್ಲಿ ಕಾಲ ನಿರ್ದೇಶವಿಲ್ಲ. **ಗುಂಡ**ನೆಂಬ ಒಬ್ಬ ಅತಿಕುಶಲನಾದ ಶಿಲ್ಪಿಯು ಈ ಗುಡಿಯನ್ನು ಮನೋಹರವಾಗಿ ಕಟ್ಟಿದ್ದರಿಂದ ೨ನೆಯ ವಿಕ್ರಮಾದಿತ್ಯನು **ಮೂವನೆ ಪೆರ್ಜೆರೆಪು ಪಟ್ಟ, ತ್ರಿಭುವನಾಚಾರ್ಯ** ಎಂಬಿರಡು ಬಿರುದುಗಳನ್ನು ಅವನಿಗೆ ಕೊಟ್ಟನೆಂದು ಈ ಶಾಸನಗಳಲ್ಲಿ ಬರೆದಿದೆ. ಈ ಗುಂಡನಿಗೆ ಅನಿವಾರಿತಾಚಾರ್ಯ (ಸರಿಕರಿಲ್ಲದ ಶಿಲ್ಪಿ)ನೆಂದು ಜನರು ಕರೆಯುತ್ತಿದ್ದರು. ಗುಂಡನ

ಮೊದಲನೆಯ ಬಿರುದಾದ ಮೂಮೆ ಪೆರ್ಜರೆಪು. ಪಟ್ಟದ ಅರ್ಥವು ಚೆನ್ನಾಗಿ ತಿಳಿಯುವುದಿಲ್ಲ. ಮೂಮೆ = ೩ ಸಾರಿ, ಪೆರ್ಜರೆಪು=ಅತಿ ತಿರಸ್ಕಾರ, ಪಟ್ಟ = ಸ್ಥಳ, ಅಧಿಕಾರಚಿಹ್ನ, ರುಮಾಲಿಕ್ಕೆ ಕಟ್ಟುವ ಜರದ ಪಟ್ಟಿ. ಉಳಿದ ಶಿಲ್ಪಿಗರನ್ನು ೩ ಸಾರಿ ತಿರಸ್ಕರಿಸಲಿಕ್ಕೆ ಅಧಿಕಾರ ಸೂಚಕವಾದ ಜರದ ಪಟ್ಟಿಯನ್ನು ಧರಿಸುವವ, ಎಲ್ಲರಿಗಿಂತ ಮೇಲಾದ ಶಿಲ್ಪಿ ಎಂದು ಅರ್ಥಮಾಡಿದರೆ ಸರಿಯಾದೀತೇನು ?

೫. ಅದೇ ಗುಡಿಯ ಮತ್ತೆರಡು ಶಿಲಾಲೇಖಗಳು. ಇವುಗಳಲ್ಲಿ ಯಾವದೂ ಕಾಲನಿರ್ದೇಶವಿಲ್ಲ. ಒಂದರಲ್ಲಿ ವಿಜಯಾದಿತ್ಯ ಚಕ್ರವರ್ತಿಯು ಗಾಯಕರೊಡನೆ ಮಾಡಿದ ಕರಾರುಗಳಿಗೆ ತನ್ನ ಪಟ್ಟದ ರಾಣಿಯಾದ ಲೋಕಮಹಾದೇವಿಯು ಒಪ್ಪಿಗೆಯನ್ನು ಕೊಟ್ಟಿರುತ್ತಾಳೆಂದು ಬರೆದಿದೆ. ಮತ್ತೊಂದರಲ್ಲಿ ನರೆಂಗಲ್ಲು (ಧಾರವಾಡ ಜಿಲ್ಲಾ ರೋಣ ತಾಲೂಕ ನರೇಗಲ್ಲು) ಮುಂತಾದ ೫೦ ಹಳ್ಳಿಗಳನ್ನು ಉಂಬಳಿಯಾಗಿ ಕೊಟ್ಟಿರುತ್ತದೆಂದು ಉಲ್ಲೇಖವಿದೆ.

೬. ಬಡೋದೆ ಸಂಸ್ಥಾನದ ನವಸರಿಯ ತಾಮ್ರಶಾಸನ. ಕಲಚುರಿ ಶಕ ೪೯೦ ಕಾರ್ತೀಕ ಶುದ್ಧ ೧೫ (೨೨ ಅಕ್ಟೋಬರ ೭೩೯) ದಿವಸ ಧರಾಶ್ರಯ ಜಯಸಿಂಹವರ್ಮನ ಮಗನಾದ ಅವನಿಜಾಶ್ರಯ ರಾಜಾ ಪುಲಿಕೇಶಿಯು ಸುರತದ ನೆರೆಯಲ್ಲಿದ್ದ ಪದ್ರಕವೆಂಬ ಗ್ರಾಮವನ್ನು ಒಬ್ಬ ಬ್ರಾಹ್ಮಣನಿಗೆ ದಾನಕೊಟ್ಟನು.

೧೦. ಎರಡನೆಯ ಕೀರ್ತಿವರ್ಮ

(೭೪೭-೭೫೭)

೨ ನೆಯ ವಿಕ್ರಮಾದಿತ್ಯನ ತರುವಾಯ ಅವನ ಪ್ರಿಯ ತನಯನಾದ ಕೀರ್ತಿವರ್ಮನು ೨ ನೆಯ ಕೀರ್ತಿವರ್ಮನೆಂಬ ಹೆಸರಿನಿಂದ ಚಾಳುಕ್ಯ ಗದ್ದಿಗೆಯನ್ನೇರಿದನು. ಇವನು ಬಾದಾಮಿ ಚಾಳುಕ್ಯ ಮನೆತನದ ಕಡೆಯ ಅರಸನಾದ್ದರಿಂದ ಇವನ ಶಾಸನಗಳು ಹೆಚ್ಚಾಗಿ ದೊರೆಯುವದಿಲ್ಲ. ಇವನು ಚಿಕ್ಕಂದಿನಲ್ಲೇ ಶಸ್ತ್ರಾಸ್ತ್ರ ವಿದ್ಯೆಯಲ್ಲಿ ನಿಪುಣತೆಯನ್ನು ತೋರಿಸಿದ್ದರಿಂದ ಇವನ ತಂದೆಯು ಇವನಿಗೆ ಯುವರಾಜ

ಪಟ್ಟಕಟ್ಟಿ ಪಲ್ಲವರ ಮೇಲೆ ದಂಡನೊಡನೆ ಕಳಿಸಿದನೆಂತಲೂ ಇವನು ಪಲ್ಲವ ಅರಸನನ್ನು ಎಡೆಬಿಡದೆ ಸೋಲಿಸಿ ಅವನನ್ನು ಕಂಚಿಯ ಕೋಟೆಯೊಳಗೆ ಹೊಗಿಸಿ, ಯುದ್ಧದಲ್ಲಿ ತನಗೆ ಸಿಕ್ಕ ಆನೆಗಳನ್ನೂ ಚಿನ್ನ ಹರಳುಕಲ್ಲುಗಳನ್ನೂ ತಂದೆಗೆ ಒಪ್ಪಿಸಿ ಅವನನ್ನು ಸಂತೋಷಗೊಳಿಸಿದನೆಂತಲೂ ಮೈಸೂರ ಸಂಸ್ಥಾನ ವಕ್ಕಲೇರಿ ಶಾಸನದಲ್ಲಿ ಬರೆದಿದೆ. ಇವನು ತನ್ನ ಮನೆತನದ ಸಾಮಾನ್ಯ ಬಿರುದುಗಳಾದ ಸತ್ಯಾಶ್ರಯ, ಶ್ರೀಪೃಥ್ವೀವಲ್ಲಭ, ಮಹಾರಾಜಾಧಿರಾಜ, ಪರಮೇಶ್ವರ, ಭಟ್ಟಾರಕ ಇವುಗಳ ಹೊರತು **ನೃಪಸಿಂಹ**ನೆಂಬೊಂದು ಹೊಸ ಬಿರುದನ್ನು ಧರಿಸಿದ್ದನು. ಧಾರವಾಡ ಜಿಲ್ಲಾ ಆಡೂರಿನ ಶಾಸನದಲ್ಲಿ ರಾಜಾಧಿರಾಜ ಕೀರ್ತಿವರ್ಮ ಅರಸೆಂದು ಕರೆದಿರುತ್ತಾರೆ. ಇವನು ತನ್ನ ತಂದೆಯ ಕಾಲದಲ್ಲಿ ಪಲ್ಲವರೊಡನೆ ಮಾಡಿದ ಯುದ್ಧದ ಹೊರತು ಉಳಿದ ಯಾವ ಯುದ್ಧದಲ್ಲಿಯೂ ಗೆದ್ದಂತೆ ಕಂಡುಬರುವುದಿಲ್ಲ. ಆದ್ದರಿಂದ ತಾನು ಯುದ್ಧಕಲೆಯಲ್ಲಿ ಅತಿನಿಷ್ಣಾತನೆಂಬ ಒಣಹೆಮ್ಮೆಯಿಂದ ಮಾತ್ರ ಇವನು ನೃಪಸಿಂಹನೆಂಬ ಹೊಸ ಬಿರುದನ್ನು ಧರಿಸಿರಬಹುದೆಂದು ತೋರುತ್ತದೆ.

೨ ನೆಯ ಕೀರ್ತಿವರ್ಮನು ಬಾದಾಮಿ ಚಾಳುಕ್ಯ ಮನೆತನದ ಕಡೆಯ ಚಕ್ರವರ್ತಿಯೆಂದು ಮೇಲೆ ಬರೆದಿರುತ್ತೇವಷ್ಟೆ. ಇವನು ಮಹಾಪರಾಕ್ರಮಶಾಲಿಯೂ ಅತಿಚತುರನೂ ಆಗದಿದ್ದರೂ ತೀರ ಹೇಡಿಯೂ ಬಲುದಡ್ಡನೂ ಆಗಿದ್ದಿಲ್ಲೆಂದು ಧಾರಾಳವಾಗಿ ಹೇಳಬಹುದು. ಹಾಗಾದರೆ ಇವನು ತನ್ನ ಪಿತ್ರಾರ್ಜಿತ ಸಾಮ್ರಾಜ್ಯವನ್ನು ಏಕೆ, ಹೇಗೆ ಕಳೆಕೊಂಡನೆಂಬುದೊಂದು ದೊಡ್ಡ ಪ್ರಶ್ನವು ಇಲ್ಲಿ ತಲೆದೋರುತ್ತದೆ. ಇವನ ಕಾಲದ ೩ ಶಾಸನಗಳು ಮಾತ್ರ ದೊರೆತಿರುತ್ತವೆ. ಅವುಗಳ ತಾತ್ಪರ್ಯವನ್ನು ಕೆಳಗೆ ಕೊಡುತ್ತೇವೆ :—

೧. ಧಾರವಾಡ ಜಿಲ್ಲೆ ಆಡೂರು ಗ್ರಾಮದ ಶಿಲಾಲೇಖ. ಇದರಲ್ಲಿ ಕಾಲವನ್ನು ಕಾಣಿಸಿಲ್ಲ. ೨ ನೆಯ ಕೀರ್ತಿವರ್ಮನು ಜಿನೇಂದ್ರನ ಗುಡಿಗೆ ಭೂಮಿಯನ್ನು ದಾನಕೊಟ್ಟನೆಂದು ಬರೆದಿದೆ. ಈ ಶಾಸನದಲ್ಲಿ ರಾಜಾಧಿರಾಜ ಕೀರ್ತಿವರ್ಮ ಅರಸೆಂದು ಇವನನ್ನು ಕರೆದಿರುತ್ತಾರೆ.

೨. ಪಟ್ಟದ ಕಲ್ಲಿನ ಕಲ್ಗಂಬ. ಈ ಕಂಬವನ್ನು ಒಬ್ಬ ಉತ್ತರಾಪಥದ ಬ್ರಾಹ್ಮಣನು ವಿಜಯೇಶ್ವರ ಲೋಕೇಶ್ವರ ತ್ರೈಲೋಕ್ಯೇಶ್ವರ ಗುಡಿಗಳ ನಡುವೆ ನಿಲ್ಲಿಸಿದ್ದಾನೆ. ಈ ಬ್ರಾಹ್ಮಣನು ಶ್ರಾವಣ ಬಹುಳ ಅಮಾವಾಸ್ಯೆ (೨೫ ಜೂನ ೭೫೪) ದಿವಸ ಸೂರ್ಯ ಗ್ರಹಣದ ನಿಮಿತ್ತವಾಗಿ ಕೆಲ ದಾನಗಳನ್ನು ಕೊಟ್ಟನೆಂದು ಈ ಲೇಖದಲ್ಲಿ ಬರೆದಿದೆ. ಈ ಶಾಸನವು ಕನ್ನಡ ಲಿಪಿಯಲ್ಲಿಯೂ ನಾಗರೀ ಲಿಪಿಯಲ್ಲಿಯೂ ಬರೆಯಲ್ಪಟ್ಟುದರಿಂದ ಈ ಕಾಲಕ್ಕೆ ನಾಗರೀ ಲಿಪಿಯು ಕರ್ನಾಟಕವನ್ನು ಪ್ರವೇಶಿಸಿತೆಂದು ಹೇಳಬಹುದು.

೩. ಮೈಸೂರ ಸಂಸ್ಥಾನ ವಕ್ಕಲೇರಿಯ ತಾಮ್ರಶಾಸನ. ೨ನೆಯ ಕೀರ್ತಿವರ್ಮನ ಜಯಶೀಲವಾದ ದಂಡು ಸೊಲ್ಲಾಪುರ ಜಿಲ್ಲೆಯಲ್ಲಿ ಭೀಮರಥಿಯ ಬಡಗಣ ದಂಡೆಯ ಮೇಲಿದ್ದ ಭಂಡಾರಗಟ್ಟಿಗೆ (ಭಂಡಾರ ಕೋಟಿ)ಯಲ್ಲಿ ಪಾಳೆಯವನ್ನು ಹಾಕಿಕೊಂಡಿದ್ದಾಗ ಅವನು ಶಕೆ ೬೭೯ ಭಾದ್ರಪದ ಶುದ್ಧ ೧೫ (೨ ಸಪ್ಟಂಬರ ೭೫೭) ದಿವಸ ಒಬ್ಬ ಬ್ರಾಹ್ಮಣನಿಗೆ ಪಾನುಂಗಲ (ಹಾನಗಲ್ಲು) ವಿಷಯದಲ್ಲಿದ್ದ ಸುಳ್ಳಿಯೂರ ಎಂಬ ಗ್ರಾಮವನ್ನು ದಾನಕೊಟ್ಟನು. ಶಾಸನಗಳು ಹೇಗೆ ದೂರವಾಗಿ ಪ್ರಯಾಣ ಮಾಡುತ್ತವೆಂಬುದಕ್ಕೆ ಇದೊಂದು ಉದಾಹರಣೆಯಾಗಿರುತ್ತದೆ. ೨ನೆಯ ಕೀರ್ತಿವರ್ಮನು ಭೀಮಾನದಿಯ ದಂಡೆಯ ಮೇಲಿದ್ದಾಗ ಹಾನಗಲ್ಲಿನ ಹತ್ತಿರಿದ್ದ ಒಂದು ಹಳ್ಳಿಯನ್ನು ದಾನ ಕೊಟ್ಟನು. ಆ ಶಾಸನವು ಭಂಡಾರ ಕೋಟೆಯಿಂದ ಹಾನಗಲ್ಲಿಗೆ ಹೋಗಿ ಅಲ್ಲಿಂದ ಹೊರಟು ವಕ್ಕಲೇರಿಯಲ್ಲಿ ನಿಂತಿತು.

ಮೇಲೆಕೊಟ್ಟ ೩ ಶಾಸನಗಳೊಳಗೆ ವಕ್ಕಲೇರಿಯ ತಾಮ್ರಶಾಸನವೊಂದು ಮಾತ್ರ ಕೆಲ ರಾಜಕೀಯ ಸಂಗತಿಗಳನ್ನು ತಿಳಿಸುತ್ತದೆ. ೭೫೭ ರಲ್ಲಿ ಕೀರ್ತಿವರ್ಮನು ಭೀಮಾತೀರದಲ್ಲಿದ್ದನೆಂತಲೂ ಅವನ ದಂಡು ಜಯಶೀಲವಾಗಿತ್ತೆಂತಲೂ ಈ ಶಾಸನದಿಂದ ಕಂಡುಬರುತ್ತದೆ. ಆದರೆ ಅವನು ಎಂದು ಏನು ಕಾರಣ ಅಲ್ಲಿಗೆ ದಂಡೆತ್ತಿ ಬಂದನೆಂಬುದಾಗಲಿ ಯಾರೊಡನೆ ಕಾದುತ್ತಿದ್ದನೆಂಬುದಾಗಲಿ ಗೆಲವು ಅಥವಾ

ಸೋಲಿನ ಪರಿಣಾಮವೇನಾಯಿತೆಂಬುದಾಗಲಿ ಈ ಶಾಸನದಿಂದ ತಿಳಿಯುವುದಿಲ್ಲ. ಈ ಸಂಗತಿಗಳನ್ನು ಅನುಮಾನದಿಂದಲೇ ಕಂಡುಹಿಡಿಯಬೇಕಾಗಿದೆ.

೮ ನೆಯ ಶತಮಾನದ ಕಡೆಯ ಅರ್ಧದಲ್ಲಿ ಬಾದಾಮಿ ಚಾಳುಕ್ಯರ ಸಾಮ್ರಾಜ್ಯವು ಅಳಿದುಹೋಯಿತೆಂದು ನಿಸ್ಸಂದೇಹವಾಗಿ ಹೇಳಬಹುದು. ಈ ಮಾತಿನ ಪ್ರತ್ಯಯವು ೨ ನೆಯ ಕೀರ್ತಿವರ್ಮನ ಶಾಸನಗಳಲ್ಲಿ ದೊರೆಯದಿದ್ದರೂ ಬಾದಾಮಿ ಚಾಳುಕ್ಯರ ವಂಶಜರಾದ ಕಲ್ಯಾಣದ ಚಾಳುಕ್ಯರ ಒಂದು ಶಾಸನದಲ್ಲಿ ದೊರೆಯುತ್ತದೆ. ಕಲ್ಯಾಣದ ಚಾಳುಕ್ಯ ಮನೆತನದ ಚಕ್ರವರ್ತಿಯಾದ ೫ ನೆಯ **ವಿಕ್ರಮಾದಿತ್ಯ**ನು ೧೦೦೯ ರಲ್ಲಿ ಕೊಟ್ಟ ಕೌಠೆಮ್ಮ (ಮಿರಜಿ ಸಂಸ್ಥಾನ)ದ ತಾಮ್ರಶಾಸನದಲ್ಲಿ ೨ ನೆಯ ಕೀರ್ತಿವರ್ಮನು ಚಾಳುಕ್ಯ ಸಾಮ್ರಾಜ್ಯವನ್ನು ಕಳೆದುಕೊಂಡನೆಂದು ಸ್ಪಷ್ಟವಾಗಿ ಬರೆದಿದೆ. ಇದಲ್ಲದೆ ೭೫೭ ರ ಮುಂದೆ ಕೀರ್ತಿವರ್ಮನದಾಗಲಿ ಅವನ ವಂಶಜರದಾಗಲಿ ಒಂದು ಶಾಸನವಾದರೂ ಇನ್ನೂ ದೊರೆತಿಲ್ಲ. ಆದ್ದರಿಂದ ೭೫೭ ರಲ್ಲಿ ಬಾದಾಮಿ ಚಾಳುಕ್ಯರ ಸಾಮ್ರಾಜ್ಯವು ೨ ನೆಯ ಕೀರ್ತಿವರ್ಮನ ಕಯ್ಬಿಟ್ಟಿತೆಂಬ ಬಗ್ಗೆ ಸಂದೇಹವಿಲ್ಲ.

ಯಾವನಾದರೊಬ್ಬ ಗೃಹಸ್ಥನು ತನ್ನ ಪಿತ್ರಾರ್ಜಿತ ಆಸ್ತಿಯನ್ನಾಗಲಿ ಮನೆತನದ ರಾಜ್ಯವನ್ನಾಗಲಿ ಸಾಮ್ರಾಜ್ಯವನ್ನಾಗಲಿ ಕಳೆದುಕೊಂಡನೆಂದು ಕೇಳಿದ ಕೂಡಲೆ ಅವನು ಹೇಡಿಯೂ, ಅವಿವೇಕಿಯೂ ಆಗಿರಲಿಕ್ಕೆ ಬೇಕೆಂದು ನಾವು ಕೂಡಲೆ ಅನುಮಾನ ಮಾಡುತ್ತೇವಷ್ಟೇ? ಆದರೆ ಈ ಅನುಮಾನವು ತ್ರಿಕಾಲದಲ್ಲಿಯೂ ಅಬಾಧಿತವಾದ ನೇಮವಲ್ಲ. ಏಕೆಂದರೆ ಈ ನೇಮಕ್ಕೆ ಎಷ್ಟೋ ಅಪವಾದಗಳು ಇದ್ದಂತೆ ಕಂಡುಬರುತ್ತದೆ. ೨ ನೆಯ ಕೀರ್ತಿವರ್ಮನು ಹೇಡಿಯು ಆಗಿದ್ದಿಲ್ಲ; ಅವನು ಅವಿವೇಕನಾಗಿದ್ದನೆಂದು ಅವನ ಶತ್ರುಗಳು ಕೂಡ ತಮ್ಮ ಲೇಖಗಳಲ್ಲಿ ಎಲ್ಲಿಯೂ ಬರೆದಿಲ್ಲ. ಹೀಗಿದ್ದು ಅವನು ತನ್ನ ಸಾಮ್ರಾಜ್ಯಕ್ಕೆ ಎರವಾಗಲಿಕ್ಕೆ ಕಾರಣವೇನಿರಬೇಕು? ಎಂಬ ಪ್ರಶ್ನವು ಇಲ್ಲಿ ತಲೆದೋರುತ್ತದೆ. ವ್ಯಕ್ತಿಯ ಮತ್ತು ಮನೆತನದ ಪುಣ್ಯವು ತೀರಿದ ಕೂಡಲೆ ಉತ್ತಮವಾದ ಅವಸ್ಥೆಯೂ ಪಿತ್ರಾರ್ಜಿತ ಆಸ್ತಿಯೂ ವಂಶಪರಂಪರಾಗತ ರಾಜ್ಯವೈಭವ

ಸಂಪತ್ತುಗಳೂ ಮಟಾಮಾಯವಾಗುತ್ತವೆಂಬ* ಭಗವದ್ವಾಕ್ಯವು ತ್ರಿಕಾಲದಲ್ಲಿಯೂ ಅಬಾಧಿತವಾದ ಸಾರ್ವತ್ರಿಕ ನೇಮವನ್ನು ಹೇಳುತ್ತದೆಂದು ಬರೆಯಲಿಕ್ಕೆ ಅಡ್ಡಿಯಿಲ್ಲ. ಈ ಭಗವದ್ವಾಕ್ಯವು ಸ್ವರ್ಗಪ್ರಾಪ್ತಿಗೆ ಸಂಬಂಧಿಸಿದ್ದರೂ ಇಹಲೋಕದ ಉತ್ತಮವಾದಷ್ಟು ಸಂಪತ್ತು ಅಧಿಕಾರ ಇವುಗಳಿಗೆ ಅನ್ವಯಿಸುತ್ತದೆಂದು ಎಣಿಸಿದರೆ ೨ ನೆಯ ಕೀರ್ತಿವರ್ಮನು ಅಪೇಕಿಯೂ ಹೇಡಿಯೂ ಆಗದಿದ್ದರೂ ಬಾದಾಮಿ ಚಾಳುಕ್ಯ ಮನೆತನದ ಪುಣ್ಯವು ತೀರಿದ್ದರಿಂದ ಅವನು ರಾಜ್ಯಭ್ರಷ್ಟನಾದನೆಂದು ಧಾರಾಳವಾಗಿ ಹೇಳಬಹುದು.

ಬಾದಾಮಿ ಚಾಳುಕ್ಯರ ಸಾಮ್ರಾಜ್ಯವು ಎಂದು ಏನು ಕಾರಣ ನಷ್ಟವಾಯಿತೆಂಬುದನ್ನು ಕುರಿತು ನಮಗೆ ತಿಳಿದಮಟ್ಟಿಗೆ ಮೇಲೆ ವಿವೇಚನವನ್ನು ಮಾಡಿರುತ್ತೇವಷ್ಟೇ. ಅದು ಹೇಗೆ ಹೋಯಿತು? ಅದನ್ನು ಯಾರು ಕಿತ್ತುಕೊಂಡರು ಎಂಬುದನ್ನು ಈಗ ವಿಚಾರಿಸುವಾ. ಈ ವಿಷಯಕವಾದ ಚಾಳುಕ್ಯ ಮನೆತನದ ಲೇಖಗಳಾವವು ಇನ್ನೂ ದೊರೆತಿಲ್ಲ. ಆದಕಾರಣ ನಮಗೆ ದೊರೆತ ಆ ಮನೆತನದ ವಿರೋಧಿಗಳ ಶಾಸನಗಳಿಂದ ಅನುಮಾನ ಮಾಡಬೇಕಾಗಿದೆ. ಮೊಟ್ಟಮೊದಲು ೨ ನೆಯ ಕೀರ್ತಿವರ್ಮನ ವಿರುದ್ಧವಾಗಿ ಎದ್ದು ನಿಂತು ಅವನ ರಾಜ್ಯದ ದೊಡ್ಡ ಭಾಗವನ್ನು ಕಿತ್ತುಕೊಂಡವನು **ದಂತಿದುರ್ಗ**ನೆಂಬವನಾಗಿದ್ದನು. ಡಾ|| ಫ್ಲೀಟರ ಅಭಿಪ್ರಾಯದಂತೆ ಇವನ ವಂಶಾವಳಿಯು ಕೆಳಗೆ ಕೊಟ್ಟಂತೆ ಇರುತ್ತದೆ:—

೧ ನೆಯ ದಂತಿವರ್ಮ

|

೧ ನೆಯ ಇಂದ್ರ

|

* ತೇ ತಂ ಭುಕ್ತ್ವಾ ಸ್ವರ್ಗಲೋಕಂ ವಿಶಾಲಮ್ | ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ||ಏವಂ ತ್ರಯೀ ಧರ್ಮಮನುಪ್ರಪನ್ನಾ | ಗತಾಗತಂ ಕಾಮಕಾಮಾ ಲಭಂತೇ||

—ಭಗವದ್ಗೀತಾ ಅಧ್ಯಾಯ ೯, ಶ್ಲೋ. ೨೧.

೧ ನೆಯ ಗೋವಿಂದ

|

೧ ನೆಯ ಕರ್ಕ ಅಥವಾ ಕಕ್ಕ

|

೨ ನೆಯ ಇಂದ್ರ (ಚಾಳುಕ್ಯ ಅರಸುಮಗಳು) — ಅಕಾಲವರ್ಷಶುಭತುಂಗ ೧ ನೆಯ ಕೃಷ್ಣ

|

ಖಡ್ಗಾವಲೋಕದಂತಿದುರ್ಗ
ಅಥವಾ
೨ ನೆಯ ದಂತಿವರ್ಮ

ನಿಜಾಮನ ರಾಜ್ಯದೊಳಗೆ ಹೆಸರುವಾಸಿಯಾದ ಏಳೂರು ಅಥವಾ ಎಲ್ಲೂರಿನ ದಶಾವತಾರ ಗುಡಿಯಲ್ಲಿದ್ದ ಶಿಲಾಲೇಖದಲ್ಲಿ ಈ ವಂಶಾವಳಿಯನ್ನು ಕೊಟ್ಟಿದ್ದಾರೆ. ಇದರಿಂದ ದಂತಿದುರ್ಗನು ೨ ನೆಯ ಇಂದ್ರನ ಮತ್ತು ಒಬ್ಬ ಚಾಳುಕ್ಯ ಮನೆತನದ ಅರಸುಕುವರಿಯ ಮಗನಾಗಿದ್ದನೆಂದು ಸ್ಪಷ್ಟವಾಗಿ ಕಂಡುಬರುತ್ತದೆ. ಆದರೆ ಈ ಚಾಳುಕ್ಯ ಅರಸುಕುವರಿಯು ಯಾರಾಗಿದ್ದಳೆಂಬುದು ಗೊತ್ತಾಗುವದಿಲ್ಲ. ಇವಳು ೨ ನೆಯ ಕೀರ್ತಿವರ್ಮನ ತಂಗಿಯಾಗಿದ್ದರೆ ದಂತಿದುರ್ಗನು ೨ ನೆಯ ಕೀರ್ತಿವರ್ಮನ ಸೋದರಳಿಯನಾಗುವನು. ಇವನಿಗೆ **ಖಡ್ಗಾವಲೋಕ** (ಕತ್ತಿಯಂತೆ ತೀಕ್ಷ್ಣವಾದ ದೃಷ್ಟಿಯುಳ್ಳವ) ಎಂಬ ಹೆಸರುದಿತ್ತು. ಇವನು ಶೂರನೂ ಎದೆಗಾರನೂ ರಾಜತಂತ್ರವಿಶಾರದನೂ ಆದ್ದರಿಂದ ೨ ನೆಯ ಕೀರ್ತಿವರ್ಮನ ಸಾಮ್ರಾಜ್ಯದ ಉತ್ತರ ಭಾಗವನ್ನೆಲ್ಲ ಹಿಡಿದುಕೊಂಡು ರಾಷ್ಟ್ರಕೂಟ ಮನೆತನದ ೧ ನೆಯ ಚಕ್ರವರ್ತಿ ಎಂದು ಹೊಗಳಿಸಿಕೊಂಡನು (೭೫೩). ಕೊಲ್ಹಾಪುರದ ಸಂಸ್ಥಾನದಲ್ಲಿದ್ದ ಸಾಮಾನಗಡವೆಂಬಲ್ಲಿ ಇವನದೊಂದು ತಾಮ್ರಶಾಸನವು ದೊರೆಯುತ್ತದೆ. ಅದರ ಸಾರಾಂಶವು ಕೆಳಗೆ ಬರೆದಂತೆ :—

(ಕಂಚಿಯ) ಪಲ್ಲವ, ಕೇರಳ, ಚೋಳ, ಪಾಂಡ್ಯ, ಹರ್ಷ, ವಜ್ರಟರನ್ನು ಮುರಿಬಡಿಯುವದರಲ್ಲಿ ನಿಪುಣವಾದ ಕರ್ನಾಟಕ ದಂಡನ್ನು

ಸೋಲಿಸಿ ವಲ್ಲಭ (೨ ನೆಯ ಕೀರ್ತಿವರ್ಮ) ನನ್ನು ಗೆದ್ದು ಸಾಮ್ರಾಜ್ಯವನ್ನು ದೊರಕಿಸಿದ ಖಡ್ಗಾವಲೋಕ ದಂತಿದುರ್ಗನು ಕರಹಾಟಕ (ಕರಹಾಡ) ದ ಒಬ್ಬ ಬ್ರಾಹ್ಮಣನಿಗೆ ಶಕೆ ೬೭೫ ಮಾಘ ಶುದ್ಧ ೭ (ರಥಸಪ್ತಮಿ) ದಿವಸ (೫ ಜನವರಿ ೭೫೪) ಸಾತಾರೆ ಜಿಲ್ಲಾ ವಾಳವೆ ತಾಲೂಕಿನಲ್ಲಿದ್ದ ಕರಂಜವಾಡೆ ದೇವರಡೆ ಎಂಬ ೨ ಗ್ರಾಮಗಳನ್ನು ದಾನಕೊಟ್ಟನು.

ಈ ಶಾಸನದಿಂದ ೭೫೪ ರಲ್ಲಿ ಬಾದಾಮಿ ಚಾಳುಕ್ಯ ಸಾಮ್ರಾಜ್ಯದ ಒಡಗಣ ಭಾಗವು ದಂತಿದುರ್ಗನ ಕಯ್ಸೇರಿತ್ತೆಂದು ನಿಸ್ಸಂದೇಹವಾಗಿ ಹೇಳಬಹುದು. ಉಳಿದ ರಾಜ್ಯದಲ್ಲಿ ದಂತಿದುರ್ಗನು ಯಾವಾಗ ಎಷ್ಟು ಭಾಗವನ್ನು ಹಿಡಿದುಕೊಂಡನೆಂಬುದನ್ನೂ ೧ ನೆಯ ಕೃಷ್ಣನು ಎಂದು ಯಾವ ನಾಡನ್ನು ತೆಗೆದುಕೊಂಡನೆಂಬುದನ್ನೂ ತಿಳಿಸುವ ಶಾಸನಗಳು ನಮಗೆ ಇನ್ನೂ ದೊರೆತಿಲ್ಲ. ೨ ನೆಯ ಕೀರ್ತಿವರ್ಮನು ೧ ನೆಯ ಕೃಷ್ಣನನ್ನು ಭೀಮಾನದಿಯ ದಂಡೆಯ ಮೇಲೆ ಸೋಲಿಸಿದನೆಂತಲೂ ೧ ನೆಯ ಕೃಷ್ಣನೇ **ರಾಹಪ್ಪ** ಅಥವಾ **ರಾಹಪ್ಪಯ್ಯ** ಎಂಬವನನ್ನು ಸೋಲಿಸಿ ಎಲ್ಲ ಚಾಳುಕ್ಯ ಸಾಮ್ರಾಜ್ಯಕ್ಕೆ ಒಡೆಯನಾದನೆಂತಲೂ ಡಾ॥ ಫ್ಲೀಟರು ಊಹಿಸುತ್ತಾರೆ.

ಈ ಮೇರೆಗೆ ಚಾಳುಕ್ಯ ಸಾಮ್ರಾಜ್ಯವು ಅಳಿದರೂ ಚಾಳುಕ್ಯ ವಂಶವು ಅಳಿಯಲಿಲ್ಲ. ಆ ವಂಶಜರು ಮುಂದೆ ಮತ್ತೆ ಪ್ರಬಲರಾಗಿ ತಮ್ಮ ಪೂರ್ವಜರಿಂದ ಕಿತ್ತಿಕೊಂಡ ಸಾಮ್ರಾಜ್ಯವನ್ನು ರಾಷ್ಟ್ರಕೂಟರಿಂದ ತಿರುಗಿ ತೆಗೆದುಕೊಂಡು ಅದನ್ನು ಬೆಳಿಸಿ ಹೆಚ್ಚು ಘನತೆಯಿಂದ ಆಳಿದರು (೯೭೩–೧೧೮೩). ಆದ್ದರಿಂದ ರಾಷ್ಟ್ರಕೂಟರ ಆಳಿಕೆಯ ಕಾಲದಲ್ಲಿ ಬಾದಾಮಿ ಚಾಳುಕ್ಯರ ವಂಶಜರು ಯಾರು ಯಾರು ಎಲ್ಲೆಲ್ಲಿ ಇದ್ದರೆಂಬುದನ್ನು ತಿಳಿದ ಮಟ್ಟಿಗೆ ಬರೆದು ಈ ಅಧ್ಯಾಯವನ್ನು ಮುಗಿಸುವೆವು.

೨ ನೆಯ ಕೀರ್ತಿವರ್ಮನಿಗೆ ಮಕ್ಕಳಿದ್ದರೋ ಇಲ್ಲೋ ಎಂಬುದನ್ನು ತಿಳಿದುಕೊಳ್ಳಲಿಕ್ಕೆ ನಮಗೆ ಸಾಧನಗಳಾವವೂ ಇನ್ನೂ ದೊರೆ

ತಿಲ್ಲ. ಕೌಠೆಮ್ಮದ ಶಾಸನವೂ ಕವಿ ರನ್ನನ ಗದಾಯುದ್ಧವೂ ಕೊಡುವ ೭ ಮಂದಿ ಬಾದಾಮಿ ಚಾಳುಕ್ಯ ವಂಶದ ಅರಸರ ವಿಷಯವಾಗಿ ನಮಗೆ ಹೆಚ್ಚಿನದೇನೂ ಗೊತ್ತಾಗುವುದಿಲ್ಲ. ೧ ನೆಯ **ಅಯ್ಯಣ್ಣನು** ಅಥವಾ ಅಯ್ಯಪ್ಪದೇವನು ರಾಷ್ಟ್ರಕೂಟ ಮನೆತನದ ೨ ನೆಯ ಕೃಷ್ಣನ ಮಗಳನ್ನು ಮದುವೆಯಾದನೆಂತಲೂ **೪ ನೆಯ ವಿಕ್ರಮಾದಿತ್ಯನು** ಕಳಚುರಿ ಅರಸು ಮಗಳಾದ **ಬೊಂಥಾದೇವಿಯ** ಗಂಡನಾಗಿದ್ದನೆಂತಲೂ ಮಾತ್ರ ತಿಳಿದುಬರುತ್ತದೆ. ಬಾದಾಮಿ ಚಾಳುಕ್ಯ ಮನೆತನದ **ಪರಹಿತರಾಜ**ನೆಂಬವನು ರಾಷ್ಟ್ರಕೂಟರ ಕಯ್ಕೆಳಗಿನ ಅಧಿಕಾರಿಯಾಗಿದ್ದನೆಂದು ಬೆಳಗಾವಿ ಜಿಲ್ಲೆ ಕೋಟೂರಿನ ಶಿಲಾಲೇಖದಿಂದ ಕಂಡುಬರುತ್ತದೆ. ಮೈಸೂರು ಸಂಸ್ಥಾನ ಕಡಬದ ಶಾಸನದಿಂದ ಬಲವರ್ಮನ ಮೊಮ್ಮಗನೂ ಯಶೋವರ್ಮನ ಮಗನೂ ಆದ **ವಿಮಲಾದಿತ್ಯ**ನೆಂಬ ಚಾಳುಕ್ಯನು ಕುಣಿಗಲ ದೇಶದ ಅಧಿಪತಿಯಾಗಿದ್ದನೆಂದು ತೋರುತ್ತದೆ (೮೧೩). ಅದೇ ಸಂಸ್ಥಾನದ ವರುಣ ಎಂಬೂರಿನ ಶಾಸನದಲ್ಲಿ **ಗಾವಿಲಬ್ಬರಸಿ** ಎಂಬವಳ ಗಂಡನಾದ ನರಸಿಂಹನೆಂಬೊಬ್ಬ ಚಾಳುಕ್ಯನು ರಾಷ್ಟ್ರಕೂಟರ ಮಹಾಸಾಮಂತನಾಗಿದ್ದನೆಂದು ಬರೆದಿದೆ. ಇದಲ್ಲದೆ ಕನ್ನಡದಲ್ಲಿ ಪ್ರಸಿದ್ಧ ಬರಹಗಾರನಾದ **ಆದಿಪಂಪ**ನೆಂಬ ಜೈನ ಕವಿಯು ತಾನು ೯೪೧ ರಲ್ಲಿ ಬರೆದ **ಪಂಪ ಭಾರತ** ಅಥವಾ **ವಿಕ್ರಮಾರ್ಜುನ ವಿಜಯ** ಎಂಬ ಚಂಪೂ ಗ್ರಂಥದಲ್ಲಿ ತನ್ನ ಆಶ್ರಯದಾತನಾದ ೨ ನೆಯ ಅರಿಕೇಸರಿಯ ವಂಶಾವಳಿಯನ್ನು ಕೆಳಗೆ ಬರೆದಂತೆ ಕೊಡುತ್ತಾನೆ:—

ಚಾಳುಕ್ಯ ವಂಶದಲ್ಲಿ ಪ್ರಸಿದ್ಧನಾದ ದೊರೆ **ಯುದ್ಧಮಲ್ಲ.** ಇವನು ಸಪಾದಲಕ್ಷಕ್ಷಿತೀಶ. ಇವನ ಮಗ **ಅರಿಕೇಸರಿ.** ಈತನ ಮಕ್ಕಳು **ನರಸಿಂಹ, ಭದ್ರದೇವ.** ನರಸಿಂಹನ ಮಗ **ದುಗ್ಧಮಲ್ಲ.** ಅವನ ಮಗ **ಬದ್ದೆಗ.** ಈತನ ಮಗ **ದುಗ್ಧಮಲ್ಲ.** ಇವನ ಮಗ **ನರಸಿಂಹ.** ಈತನು ಘೂರ್ಜರ ರಾಜನನ್ನು ಜಯಿಸಿ "ಗಂಗಾ ವಾರ್ಧಿಯೊಳಾತ್ಮ ತುರಂಗಮುಮಂ ಮಿಸಿಸಿದಂ". ಈತನ ಹೆಂಡತಿ ಜಾಕವ್ವೆ. ಇವನ ಮಗನೇ ಕವಿಯ ಪೋಷಕನಾದ **ಅರಿಕೇಸರಿ.** ಈ ರಾಜನು ಸಮಧಿಗತ ಪಂಚ ಮಹಾಶಬ್ದ ಎಂಬ ಪ್ರಶಸ್ತಿಯುಳ್ಳ ಸಾಮಂತ ಶ್ರೇಷ್ಠನು.

ಕವಿ, ಈ ದೊರೆಗೆ ಅರಿಗ, ಹರಿಗ, ಗುಣಾರ್ಣವ—ಇವೇ ಮೊದಲಾದ ಹಲವು ಹೆಸರುಗಳನ್ನು ಕೊಟ್ಟಿದ್ದಾನೆ. ಭಾರತದಲ್ಲಿ ಅರಿಕೇಸರಿಯನ್ನು ಅರ್ಜುನನಿಗೆ ಹೋಲಿಸಿ, ಅವನ ಪರಾಕ್ರಮಾದಿಗಳನ್ನು ಹೊಗಳಿದ್ದಾನೆ. ಈ ಕಾವ್ಯವನ್ನು ಕೇಳಿ ಸಂತೋಷಿಸಿ ಅರಿಕೇಸರಿ ಕವಿಗೆ ಬಚ್ಚೆಸಾಸಿರದಲ್ಲಿರುವ **ಧರ್ಮಪುರ**ವೆಂಬ ಶಾಸನದಗ್ರಹಾರವನ್ನು ಕೊಟ್ಟನು*.

ಪಂಪ ಭಾರತದಲ್ಲಿ ಇನ್ನೂ ಕೆಲವು ಐತಿಹಾಸಿಕ ಸಂಗತಿಗಳು ಸಿಕ್ಕುತ್ತವೆ. ೧ ನೆಯ ಅರಿಕೇಸರಿಯು ಬಂಗೆರಿಷಯ(ವೆಂಗಿವಿಷಯ)ದ ಮಂತ್ರಿಗಳೊಡನೆ ಒಬ್ಬ ನಿರುಪಮದೇವನ ನಾಡನ್ನೊಳನುಗ್ಗಿದನೆಂತಲೂ, ಬದ್ದಿಗನಿಗೆ **ಸೋಲದಗಂಡ**ನೆಂಬ ಬಿರುದಿತ್ತೆಂತಲೂ, ಅವನ ಮಗನಾದ ನರಸಿಂಹನು **ಎರಪ**ನೆಂಬವನಿಗೆ ಒಂದು ಪ್ರಾಂತವನ್ನು ಉಂಬಳಿಯಾಗಿಕೊಟ್ಟು ಏಳು ಮಾಲಲ(?)ರನ್ನು ಪಾದಾಕ್ರಾಂತವಾಗಿ ಮಾಡಿ, ಗುರ್ಜರ ರಾಜನನ್ನು ಗೆದ್ದು, ಮಹಿಪಾಲನನ್ನು ಸೋಲಿಸಿದನೆಂತಲೂ, ಚಂದ್ರಾನನೆ ಎಂಬವಳು ಇವನ ಹೆಂಡತಿಯಾಗಿದ್ದಳೆಂತಲೂ ೨ ನೆಯ ಅರಿಕೇಸರಿಯು ಜೋಳದ ನಾಡಿನ ಸಾಮಂತನಾಗಿದ್ದನೆಂತಲೂ **ಗೊಜ್ಜಿಗ** ಅಥವಾ **ಗುಜ್ಜಿಗ**ನೆಂಬ ಅರಸಿನ ವಿರೋಧಿಯಾದ **ವಿಜಯಾದಿತ್ಯ**ನೆಂಬವನಿಗೆ ಆಶ್ರಯಕೊಟ್ಟಿದ್ದನೆಂತಲೂ ಈ ಗ್ರಂಥದಲ್ಲಿ ಬರೆದಿದೆ.

ಪಂಪ ಭಾರತದಲ್ಲಿ ಹೇಳಿದ ಐತಿಹಾಸಿಕ ಹೆಸರುಗಳ ವಿಷಯವಾಗಿ ಡಾ॥ ಫ್ಲೀಟರು ಗೊತ್ತುಮಾಡಿದ ಅಂಶವು ಅತ್ಯುಪಯುಕ್ತವಾಗಿರುತ್ತದೆ. ೨ ನೆಯ ಅರಿಕೇಸರಿಯು ತನ್ನ ಆಶ್ರಯದಲ್ಲಿಟ್ಟುಕೊಂಡ ವಿಜಯಾದಿತ್ಯನು ಪೂರ್ವ ಚಾಳುಕ್ಯ ಮನೆತನದ **ಕೊಲ್ಲಬಿಗಂಡ** ಎಂಬ ಬಿರುದುಳ್ಳ ೪ ನೆಯ ವಿಜಯಾದಿತ್ಯನಾಗಿರಬಹುದು. ಅವನ ವಿರೋಧಿಯಾದ ಗೊಜ್ಜಿಗನು ರಾಷ್ಟ್ರಕೂಟ ಚಕ್ರವರ್ತಿಯಾದ (೯೧೮–೯೩೩) ಸುವರ್ಣವರ್ಷನೆಂಬ ಬಿರುದಾಂಕಿತನಾದ ೪ ನೆಯ ಗೋವಿಂದನೇ ಆಗಿರ

* ಕರ್ಣಾಟಕ ಕವಿಚರಿತೆ ಸಂಪುಟ ೧, ಪುಟ ೩೧.

ಲಿಕ್ಕೆಬೇಕು. ಏಕೆಂದರೆ ಕೆಲ ಶಾಸನಗಳಲ್ಲಿ ಅವನನ್ನು ಗೊಜ್ಜಿಗ ದೇವನೆಂದು ಕರೆದಿರುತ್ತಾರೆ. ಎರಪನೆಂಬವನು ಪಶ್ಚಿಮ ಗಂಗರಸನಾದ ಎರೆಯಪ್ಪನಾಗಿರಬಹುದು. ಭೀಮನೆಂಬವನು ; ಪೂರ್ವ ಚಾಳುಕ್ಯ ಮನೆತನದ ೧ ನೆಯ ಭೀಮನು (೮೮೮–೯೧೮) ನಿರುಪಮದೇವನೆಂಬವನು ೮ ನೆಯ ಶತಮಾನದ ಕೊನೆಯಲ್ಲಿ ಆಳಿದ ರಾಷ್ಟ್ರಕೂಟ ಚಕ್ರವರ್ತಿಯಾದ ಧ್ರುವನೇ ಆಗಿರಬಹುದು. ಇವನಿಗೆ ನಿರುಪಮ, ಕಲಿವಲ್ಲಭ, ಧಾರಾವರ್ಷ ಎಂಬ ಬಿರುದುಗಳಿದ್ದುವು. ಧರ್ಮ ಊರೆಂಬುದು ಧಾರವಾಡ ಜಿಲ್ಲಾ ಗದಗ ತಾಲೂಕಿನಲ್ಲಿದ್ದ ಡಂಬಳವಾಗಿರಬಹುದು. ಏಕೆಂದರೆ ಇದಕ್ಕೆ ಶಾಸನಗಳಲ್ಲಿ ಧರ್ಮಪುರ ಧರ್ಮಪೊಳಲೆಂಬ ಹೆಸರುಗಳಿರುತ್ತವೆ. ಬಚ್ಚೆಸಾಸಿರವು ಯಾವುದೆಂಬ ಬಗ್ಗೆ ಸಂಶಯವಿರುತ್ತದೆ. ಆದರೆ ಆದಿಪಂಪನು ತಾನು ಪುಲಿಗೆರೆಯ ತಿರುಳುಗನ್ನಡಿನಲ್ಲಿ ಬರೆದೆನೆಂದು ಹೇಳಿಕೊಳ್ಳುವುದರಿಂದಲೂ ತನ್ನ ಪೋಷಕನು ಜೋಳದ ನಾಡಿನ ಒಡೆಯನಾಗಿದ್ದನೆಂದು ಬರೆಯುವುದರಿಂದಲೂ ಡಂಬಳವು ಅವನಿಗೆ ಇನಾಮಾಗಿ ದೊರೆದುದರಿಂದಲೂ ೨ ನೆಯ ಅರಿಕೇಸರಿಯು ಲಕ್ಷ್ಮೇಶ್ವರ ಗದಗ ಡಂಬಳ ಮುಂತಾದ ಬೆಳವಲದ ಊರುಗಳನ್ನೊಳಗೊಂಡ ಜೋಳದ ನಾಡಿನ ಮಹಾಸಾಮಂತನಾಗಿದ್ದನೆಂದು ಊಹಿಸಬಹುದು. ಇವೆಲ್ಲ ಹೆಸರುಗಳ ಗೊತ್ತುವಳಿಯು ಸಮಾಧಾನಕರವೆಂದು ಕಂಡು ಬಂದರೂ ಆದಿಪಂಪನು ತನ್ನ ಆಶ್ರಯದಾತನ ವಂಶಾವಳಿಯನ್ನು ಕೊಡುವಾಗ ಆರಂಭದಲ್ಲಿ ಹೇಳಿದ ಸಪಾದಲಕ್ಷ್ಕ್ಷಿತೀಶನಾದ ಯುದ್ಧಮಲ್ಲನು ಯಾರೆಂಬುದು ತಿಳಿಯುವುದಿಲ್ಲ. ೬೮೦ ರಿಂದ ೬೯೬ ರ ವರೆಗೆ ಬಾದಾಮಿ ಸಾಮ್ರಾಜ್ಯದ ಚಕ್ರವರ್ತಿಯಾಗಿದ್ದ ಸತ್ಯಾಶ್ರಯ ವಿನಯಾದಿತ್ಯನು ಬಹಳ ಹಳಬನಾಗುವುದರಿಂದಲೂ ೯೨೫ ರಲ್ಲಿದ್ದ ಪೂರ್ವ ಚಾಳುಕ್ಯ ಮನೆತನದ ೧ ನೆಯ ಯುದ್ಧಮಲ್ಲನು ತೀರ ಈಚಿನವನಾಗಿದ್ದುದರಿಂದಲೂ ಆದಿಪಂಪನ ಯುದ್ಧಮಲ್ಲನು ಯಾರೆಂಬುದನ್ನು ಕಂಡುಹಿಡಿಯಲಿಕ್ಕೆ ಡಾ॥ ಫ್ಲೀಟರು ಎದೆಗೊಳ್ಳುವುದಿಲ್ಲ*. ಆದ್ದರಿಂದ ಆ ಬಿಕ್ಕಟ್ಟಿನ ಪ್ರಶ್ನವನ್ನು ಈಗ ಬದಿಗೊತ್ತಿ ಮುಂದೆ ಕಲ್ಯಾಣದ

---

*ಮುಂಬಯಿ ಇಲಾಖೆಯ ಗ್ಯಾಜಟಿಯರ ಸಂ. ೧, ಭಾಗ ೨, ಪು. ೩೮೦–೮೧.

ಚಾಳುಕ್ಯರ ವಿಷಯವಾಗಿ ಬರೆಯುವಾಗ ಅವನ್ನು ಬಿಡಿಸಲಿಕ್ಕೆ ಶಕ್ಯವಾದ ಮಟ್ಟಿಗೆ ಯತ್ನಿಸುವೆವು.

---

೪ ನೆಯ ಅಧ್ಯಾಯ

ದೇಶಕಾಲ ಸ್ಥಿತಿ

(೭೫೭ ರ ವರೆಗೆ)

ನಮ್ಮ ಸನಾತನ ಧರ್ಮದಲ್ಲಿ ಅಹಿಂಸತತ್ವವು ವೇದಕಾಲದಿಂದ ನೆಲೆಗೊಂಡಿರುತ್ತದಷ್ಟೇ. ಈ ತತ್ವಕ್ಕೆ ಜೈನರೂ ಬೌದ್ಧರೂ ಪ್ರಾಮುಖ್ಯತೆಯನ್ನು ಕೊಟ್ಟು ಅದನ್ನು ಅತಿಭಕ್ತಿವಿಶ್ವಾಸದಿಂದ ಪಾಲಿಸಿದರೆನ್ನಲಿಕ್ಕೆ ಅಡ್ಡಿಯಿಲ್ಲ. ನಮ್ಮ ತಾಯ್ನಾಡಿನಲ್ಲಿ ಬೌದ್ಧರು ನಾಮಶೇಷರಾಗಿದ್ದರೂ ಕ್ರಿಸ್ತ ಶಕದ ಮೊದಲಿನ ಮತ್ತು ಆರಂಭದ ಶತಮಾನಗಳಲ್ಲಿ ಜೈನರು ಅತಿ ಪ್ರಬಲರಾಗಿದ್ದರೆಂಬುದಕ್ಕೆ ಸಂಶಯವಿಲ್ಲ. ಆದ್ದರಿಂದ ಈ ಜೈನರು ಎಡೆಬಿಡದ ಉಪದೇಶದಿಂದಲೂ ಅವರ ನಿತ್ಯಾಚರಣೆಯ ಉದಾಹರಣೆಯಿಂದಲೂ ಅವರಿಗೆ ದೊರೆತ ರಾಜಾಶ್ರಯದ ಪುರವೊತ್ತಿನಿಂದಲೂ ಯಜ್ಞಯಾಗಾದಿಗಳಲ್ಲಿ ನಡೆಯುವ ಪಶುವಧೆಯಲ್ಲಿದ್ದ ಸನಾತನ ಧರ್ಮೀಯರ ವಿಶ್ವಾಸವು ದಿನದಿನಕ್ಕೆ ಕಡಮೆಯಾಗುತ್ತ ನಡೆದಿತ್ತು. ಅಶ್ವಮೇಧ, ಗೋಮೇಧ, ಶ್ರಾದ್ಧದಲ್ಲಿ ಮಾಂಸಭಕ್ಷಣ, ಅಣ್ಣನ ಅಥವಾ ತಮ್ಮನ ವಿಧವೆಯಲ್ಲಿ ಮಕ್ಕಳನ್ನು ಹುಟ್ಟಿಸೋಣ—ಈ ಐದು ಸಾಂಪ್ರದಾಯಗಳು ಕಲಿಯುಗದಲ್ಲಿ ನಿಷಿದ್ಧವಾದವುಗಳೆಂಬ ತಿಳಿವಳಿಕೆಯು ಜನರಲ್ಲಿ ಹಬ್ಬಿತು*. ಅಷ್ಟರೊಳಗೆ ಅಂದರೆ ೮ ನೆಯ ಶತಮಾನದ ಆರಂಭದಲ್ಲಿ ದೇವತಾಂಶಸಂಭೂತರಾದ ಶ್ರೀಮಚ್ಛಂಕರಾಚಾರ್ಯರ ಉದಯವಾದ್ದರಿಂದಲೂ ಆ ಮಹಾತ್ಮರು ಕರ್ಮಮಾರ್ಗಕ್ಕಿಂತ ಭಕ್ತಿಜ್ಞಾನಮಾರ್ಗಗಳು ಹೆಚ್ಚು ಶ್ರೇಯಸ್ಕರ

---

* ಅಶ್ವಾಲಂಭಮ್ ಗವಾಲಂಭಮ್ ಸನ್ಯಾಸಂ ಪಲಪೈತೃಕಂ। ದೇವರಾತ್ಸುತೋತ್ಪತ್ತಿಃ ಕಲೌ ಪಂಚ ವಿವರ್ಜಯೇತ್॥

ವಾದ್ದವೆಂದು ಸಪ್ರಮಾಣವಾಗಿ ಸಿದ್ಧಮಾಡಿ ತೋರಿಸಿ, ಆ ವಿಷಯದ ಮೇಲೆ ಅಮೌಲ್ಯವಾದ ಗ್ರಂಥಗಳನ್ನು ಬರೆದು, ಸನ್ಯಾಸವನ್ನು ಪುನಃ ಸಂಸ್ಥಾಪಿಸಿ ತಾವು ಕಂಡುಹಿಡಿದ ಪಾರಮಾರ್ಥಿಕ ತತ್ವಗಳನ್ನು ಭಾರತೀಯರಿಗೆ ಉಪದೇಶಿಸಲಿಕ್ಕೆ ಹಿಮಾಲಯದಿಂದ ಕನ್ಯಾಕುಮಾರೀ ಭೂಶಿರದ ವರೆಗೆ ಅಷ್ಟಮಠಗಳನ್ನು ಸ್ಥಾಪಿಸಿದ್ದರಿಂದಲೂ ಆ ಕಾಲಕ್ಕೆ ನಷ್ಟಪ್ರಾಯವಾಗಿದ್ದ ಯಜ್ಞಯಾಗಗಳಲ್ಲಿಯ ಜನರ ವಿಶ್ವಾಸವು ೭ ನೆಯ ಮತ್ತು ೮ ನೆಯ ಶತಮಾನಗಳಲ್ಲಿ ತೀರ ಅಳಿದುಹೋಯಿತೆಂದು ಹೇಳಬಹುದು.

೬ ನೆಯ ಶತಮಾನದ ಕಡೆಯ ಅರ್ಧದಲ್ಲಿ ಚಾಳುಕ್ಯ ಸಾಮ್ರಾಜ್ಯ ಸ್ಥಾಪಕನಾದ ೧ ನೆಯ ಪುಲಿಕೇಸಿಯು ಮಾತ್ರ ಅಶ್ವಮೇಧ ಯಜ್ಞವನ್ನು ಜಗವು ಮೆಚ್ಚುವಂತೆ ಅತಿವಿಜೃಂಭಣೆಯಿಂದ ಮಾಡಿದನೆಂದು ಎಲ್ಲ ಶಾಸನಗಳೂ ಗ್ರಂಥಗಳೂ ಹೇಳುತ್ತವೆ. ಇವನು ಅಗ್ನಿಷ್ಟೋಮ, ಅಗ್ನಿಚಯನ, ವಾಜಪೇಯ, ಬಹುಸುವರ್ಣ, ಪೌಂಡರೀಕ ಈ ಯಾಗಗಳನ್ನಾದರೂ ಮಾಡಿದನೆಂದು ಕೆಲಶಾಸನಗಳಲ್ಲಿ ಬರೆದದೆ. ಇವನ ಮಗನಾದ ಕೀರ್ತಿವರ್ಮನು ಬಹುಸುವರ್ಣ ಅಗ್ನಿಷ್ಟೋಮ ಯಜ್ಞಗಳನ್ನು ಮಾಡಿದನೆಂದು ಮಹಾಕೂಟದ ಗೆಲ್ಗಂಬದಲ್ಲಿ ಬರೆದಿದೆ. ಇವೇ ಕಡೆಯ ಯಜ್ಞಗಳಾಗಿದ್ದವೆಂದರೆ ತಪ್ಪಾಗಲಿಕ್ಕಿಲ್ಲ. ಏಕೆಂದರೆ ಮುಂದೆ ೭ ನೆಯ ಮತ್ತು ೮ ನೆಯ ಶತಮಾನಗಳ ನೂರಾರು ಶಾಸನಗಳು ನಮ್ಮ ತಾಯ್ನಾಡಿನಲ್ಲಿ ದೊರೆತಿದ್ದರೂ ಅವುಗಳಲ್ಲಿ ಈ ಯಜ್ಞಯಾಗಗಳ ಹೆಸರು ಇದ್ದಂತೆ ತೋರುವುದಿಲ್ಲ. ೧ ನೆಯ ಕೀರ್ತಿವರ್ಮನ ತರುವಾಯ ೮ ಮಂದಿ ಚಾಳುಕ್ಯ ಸಾರ್ವಭೌಮರು ರಾಜ್ಯವಾಳಿದರು. ಅವರೊಳಗೆ ಒಬ್ಬನಾದರೂ ಒಂದು ಯಜ್ಞವನ್ನು ಮಾಡಿದ ಬರಹವಿಲ್ಲ. ಈ ಚಾಳುಕ್ಯ ಚಕ್ರವರ್ತಿಗಳೊಳಗೆ ೨ ನೆಯ ಪುಲಿಕೇಸಿಯಷ್ಟು ಪರಾಕ್ರಮಶಾಲಿಯೂ ವಿಸ್ತಾರವಾದ ರಾಜ್ಯವುಳ್ಳವನೂ ಐಶ್ವರ್ಯದಿಂದ ಮೆರೆದವನೂ ಅತಿಶಯವಾಗಿ ಕೀರ್ತಿಯನ್ನು ಸಂಪಾದಿಸಿದವನೂ ಮತ್ತೊಬ್ಬನಾವನೂ ಆಗಲಿಲ್ಲ. ಅವನು ಕೂಡ ಅಶ್ವಮೇಧ ಯಜ್ಞವನ್ನು ಕೈಕೊಳ್ಳಲಿಲ್ಲಾದ್ದರಿಂದ ಆ ಕಾಲದಲ್ಲಿ ಯಜ್ಞಯಾಗಾದಿಗಳಲ್ಲಿದ್ದ ಜನರ

ಶ್ರದ್ಧೆಯು ತೀರ ಇಲ್ಲದಂತಾಗಿತ್ತೆಂದು ಧಾರಾಳವಾಗಿ ಹೇಳಬಹುದು. ಯಜ್ಞಯಾಗಾದಿಗಳಲ್ಲಿದ್ದ ಸಂಜಗೆಯು ಕಡಮೆಯಾಗಿದ್ದರೂ ದೇವ ಬ್ರಾಹ್ಮಣ ಶ್ರಮಣರಲ್ಲಿದ್ದ ಜನರ ಭಕ್ತಿವಿಶ್ವಾಸಗಳು ಅಚ್ಚಳಿಯದೆ ಹೆಚ್ಚಾಗಿದ್ದವೆಂದು ಹೇಳಬಹುದು. ಏಕೆಂದರೆ ಈ ಕಾಲದಲ್ಲಿ ೧ ನೆಯ ಪುಲಿಕೇಶಿ ಕೀರ್ತಿವರ್ಮರ ಹೊರತು ಉಳಿದ ಎಲ್ಲ ಚಾಳುಕ್ಯ ಚಕ್ರವರ್ತಿಗಳು ಗ್ರಹಣ ಪಿಡಿದಾಗಾಗಲಿ ಪರ್ವಕಾಲದಲ್ಲಿಯಾಗಲಿ ಬ್ರಾಹ್ಮಣರಿಗೂ ದೇವಸ್ಥಾನಗಳಿಗೂ ಭೂದಾನ ಕೊಟ್ಟರೆಂದು ಎಲ್ಲ ಶಾಸನಗಳು ಸಾರುತ್ತವೆ. ಚಾಳುಕ್ಯರು ವೇದಧರ್ಮಿಗಳಾಗಿದ್ದರೂ ಉಳಿದ ಮತದವರನ್ನು ಹಿಂಸಿಸುತ್ತಿದ್ದಿಲ್ಲ. ಅವರು ಜೈನ ದೇವಾಲಯುಗಳಿಗೂ ಜೈನ ಪಂಡಿತರಿಗೂ ಭೂದಾನ ಗ್ರಾಮ ದಾನಗಳನ್ನು ಕೊಟ್ಟ ಉದಾಹರಣೆಗಳು ಪಲವುಂಟು. ವಿಜಯಾದಿತ್ಯನ ತಂಗಿಯಾದ ಕುಂಕುಮ ಮಹಾದೇವಿಯು ಲಕ್ಷ್ಮೇಶ್ವರದಲ್ಲಿ ಒಂದು ಜೈನ ಬಸದಿಯನ್ನು ಕಟ್ಟಿಸಿಕೊಟ್ಟಳೆಂದು ಹಿಂದೆ ಬರೆದಿರುತ್ತೇವೆ. ಬೇರೆ ದೇವತೆಗಳನ್ನು ಭಕ್ತಿಪೂರ್ವಕವಾಗಿ ಪೂಜಿಸುವವರು ನನ್ನನ್ನೇ ಅವಿಧಿಪೂರ್ವಕವಾಗಿ ಪೂಜಿಸುತ್ತಾರೆಂಬ ಭಗವದ್ವಾಕ್ಯದಲ್ಲಿಯೂ* ಎಲ್ಲ ದೇವರಿಗೆ ಮಾಡಿದ ನಮಸ್ಕಾರಗಳು ಕೇಶವನಿಗೆ ಮಾಡಿದವೇ ಇರುತ್ತವೆಂಬ ಕವಿಯ ಹೇಳಿಕೆಯಲ್ಲಿಯೂ† ಪೂರ್ಣವಾಗಿ ವಿಶ್ವಾಸವಿಟ್ಟು ಚಾಳುಕ್ಯ ಚಕ್ರವರ್ತಿಗಳು ಎಲ್ಲ ಮತದವರನ್ನು ಸಮದೃಷ್ಟಿಯಿಂದ ನೋಡುತಿದ್ದರೆಂದು ಬರೆಯಲಿಕ್ಕೆ ಸಂತೋಷಪಡುತ್ತೇವೆ; ಮತ್ತು ಪಲ್ಲವರಲ್ಲಿ ಮಾತ್ರ ಈ ಸಮದೃಷ್ಟಿಯು ಕುಗ್ಗಿತ್ತೆಂದು ಬರೆಯಲಿಕ್ಕೆ ವಿಷಾದಿಸುತ್ತೇವೆ.

೧ ನೆಯ ಕೀರ್ತಿವರ್ಮನ ಕಾಲದಿಂದ ಸನಾತನ ಧರ್ಮದಲ್ಲಿ ಜನರ ಶ್ರದ್ಧೆಯು ವರ್ಷ ವರ್ಷಕ್ಕೆ ಹೆಚ್ಚೆಚ್ಚು ಬೆಳೆಯತೊಡಗಿತೆಂದು ಬರೆದರೆ ತಪ್ಪಾಗಲಿಕ್ಕಿಲ್ಲೆಂದು ತೋರುತ್ತದೆ. ಏಕೆಂದರೆ, ೫೭೮ ರಿಂದ ೭೫೭ ರ

* ಯೇಽಪ್ಯನ್ಯದೇವತಾಭಕ್ತಾ ಯಜಂತೆ ಶ್ರದ್ಧಯಾನ್ವಿತಾಃ ‖
ತೇಽಪಿ ಮಾಮೇವ ಕೌಂತೇಯ ಯಜಂತ್ಯವಿಧಿಪೂರ್ವಕಂ‖
—ಭಗವದ್ಗೀತಾ ಅ. ೯, ಶ್ಲೋ. ೨೩.

† ಸರ್ವದೇವನಮಸ್ಕಾರಂ ಕೇಶವಂ ಪ್ರತಿಗಚ್ಛತಿ‖ —ಸುಭಾಷಿತ.

ವರೆಗೆ ಆದ ಸಾರ್ವಭೌಮರೂ ಅವರ ರಾಣಿಯರೂ ಆಪ್ತರೂ ಮಂತ್ರಿ ದಂಡನಾಯಕರೂ ಹಣವಂತರೂ ಭಕ್ತಿಯುಳ್ಳ ಬಡವರೂ ಎಷ್ಟೋ ವಿಶಾಲವಾದ ಗುಡಿಗಳನ್ನು ಕಟ್ಟಿಸಿ, ಅವುಗಳಲ್ಲಿ ತಂತಮ್ಮ ಇಷ್ಟ ದೇವತೆಗಳನ್ನು ಪ್ರತಿಷ್ಠಾಪಿಸಿ, ಅವುಗಳ ಉತ್ಸಾಹ ಪೂಜೆಗಳಿಗೋಸ್ಕರ ಭೂಮಿಗಳನ್ನೂ ಗ್ರಾಮಗಳನ್ನೂ ಉಂಬಳಿಯಾಗಿ ಕೊಟ್ಟರು. ೧ ನೆಯ ಕೀರ್ತಿವರ್ಮನ ಆಳಿಕೆಯಲ್ಲಿ ಅವನ ತಮ್ಮನಾದ ಮಂಗಳೇಶನು ಬಾದಾಮಿಯ ಗುಡ್ಡವನ್ನು ಕೊರಿಸಿ ಅದರೊಳಗೆ ವಿಷ್ಣುಮೂರ್ತಿಯನ್ನು ಪ್ರತಿಷ್ಠಾಪಿಸಿದ ಗವಿಯೇ ಕರ್ಣಾಟಕದಲ್ಲಿ ಕೊರೆದ ಮೊದಲನೆಯ ದೇವಾಲಯವು. ಮುಂದೆ ಚಾಳುಕ್ಯ ಚಕ್ರವರ್ತಿಯಾದ ವಿಜಯಾದಿತ್ಯನು (೬೯೬--೭೩೩) ತನ್ನ ರಾಜಧಾನಿಯಾದ ವಾತಾಪಿಯಲ್ಲಿ ಬ್ರಹ್ಮ ವಿಷ್ಣು ಮಹೇಶ್ವರರ ತ್ರಿಮೂರ್ತಿಗಳನ್ನು ಪ್ರತಿಷ್ಠಾಪಿಸಿ, ಪಟ್ಟದಕಲ್ಲಿನಲ್ಲಿ ವಿಜಯೇಶ್ವರನ ಒಂದು ಭವ್ಯವಾದ ಗುಡಿಯನ್ನು ಕಟ್ಟಿಸಿದನು (೬೯೯). ಈ ಗುಡಿಗೆ ಈಗ ಸಂಗಮೇಶ್ವರ ಗುಡಿಯೆಂದು ಹೆಸರು ಬಿದ್ದಿದೆ. ಈ ವಿಜಯಾದಿತ್ಯನ ಮಗನಾದ ೨ ನೆಯ ವಿಕ್ರಮಾದಿತ್ಯನ ಆಳಿಕೆಯಲ್ಲಿ (೭೩೪--೭೪೬) ಅವನಿಬ್ಬರು ರಾಣಿಯರು ಲೋಕೇಶ್ವರ ದೇವಾಲಯ, ತ್ರೈಲೋಕ್ಯೇಶ್ವರ ದೇವಾಲಯ ಎಂಬೆರಡು ಈಶ್ವರ ದೇವಾಲಯಗಳನ್ನು ಕಟ್ಟಿಸಿದರು. ಲೋಕೇಶ್ವರ ದೇವಸ್ಥಾನವನ್ನು ಈಗಲೂ ಪಟ್ಟದಕಲ್ಲಿನಲ್ಲಿ ನೋಡಬಹುದು. ಅದಕ್ಕೆ ಈಗ ವಿರೂಪಾಕ್ಷನ ಗುಡಿಯೆಂದು ಜನರು ಕರೆಯುತ್ತಾರೆ. ಮದ್ರಾಸ ಇಲಾಖೆ ಸೊಂಡೂರು ಸಂಸ್ಥಾನದಲ್ಲಿದ್ದ ಕಾರ್ತಿಕೇಯನ ದೇವಸ್ಥಾನವು ಕದಂಬರ ಕಾಲದ್ದಾಗಲಿ ಚಾಳುಕ್ಯರ ಕಾಲದ್ದಾಗಲಿ ಆಗಿರಬಹುದೆಂದು ತೋರುತ್ತದೆ.

೮ ನೆಯ ಶತಮಾನದ ಆರಂಭದಲ್ಲಿ ೩೦ ಅಥವಾ ೪೦ ವರ್ಷಗಳೊಳಗೇ ಚಾಳುಕ್ಯ ಸಾರ್ವಭೌಮ ಮನೆತನದವರು ಒಂದು ತ್ರಿಮೂರ್ತಿಗಳ ಗುಡಿಯನ್ನೂ ಮೂರು ದೊಡ್ಡ ದೊಡ್ಡ ಶಿವಾಲಯಗಳನ್ನೂ ಕಟ್ಟಿಸಿ ಆ ಗುಡಿಗಳ ಪೂಜೋತ್ಸವಕ್ಕೋಸ್ಕರ ಗ್ರಾಮಗಳನ್ನು ಉಂಬಳಿಯಾಗಿ ಕೊಟ್ಟುದು ಬಲು ಸೋಜಿಗವಾದ ಸಂಗತಿಯಲ್ಲವೇ? ಚಾಳುಕ್ಯರು ವಿಷ್ಣೋಪಾಸಕರು. ವರಾಹವು ಅವರ ಲಾಂಛನವಾಗಿತ್ತು. ಹೀಗಿದ್ದು

ವಿಜಯಾದಿತ್ಯನೂ ಅವನ ಇಬ್ಬರು ಸೊಸೆಯಂದಿರೂ ಒಂದರಹಿಂದೊಂದು ಶಿವಾಲಯವನ್ನು ಕಟ್ಟಿಸಿದ್ದು ಅತ್ಯಾಶ್ಚರ್ಯಕರವಾದ ಮಾತಲ್ಲವೇ? ಇದು ಕಾಕತಾಲೀಯ ನ್ಯಾಯವೆಂದು ಕೆಲಪಂಡಿತರು ಅಭಿಪ್ರಾಯ ಪಡಬಹುದು. ಈ ಅಭಿಪ್ರಾಯಕ್ಕೆ ನನ್ನ ಮನಸ್ಸು ಎಂದೂ ಒಡಂಬಡ ಲಾರದು. ವಿಜಯಾದಿತ್ಯನ ಹಿಂದೆ ೭ ಮಂದಿ ಚಾಳುಕ್ಯ ಚಕ್ರವರ್ತಿಗಳು ಆಗಿಹೋದರು. ಅವರಲ್ಲಿ ಒಬ್ಬನಾದರೂ ಒಂದು ಶಿವಾಲಯವನ್ನು ಕಟ್ಟಿಸಲಿಲ್ಲ. ಮುಂದೆ ೫೦ ವರ್ಷಗಳೊಳಗೇ ಚಾಳುಕ್ಯರು ಈಶ್ವರನ ೩ ಗುಡಿಗಳನ್ನು ಕಟ್ಟಿಸಿದ್ದು ಕಾಕತಾಲೀಯ ನ್ಯಾಯವಾಗಬಹುದೇ? ಎಂದೂ ಆಗಲಾರದು. ಇದಲ್ಲದೆ ೨ ನೆಯ ವಿಕ್ರಮಾದಿತ್ಯನು ಕಾಂಚೀ ಪುರವನ್ನು ಹಿಡಿದುಕೊಂಡಾಗ ಅಲ್ಲಿಯ ರಾಜಸಿಂಹೇಶ್ವರ ಗುಡಿಯನ್ನು ಕೆಡಿಸದೆ ಅದನ್ನು ಸುಲಿಯದೆ ಆ ದೇವರಿಗೆ ಕೆಲವು ಚಿನ್ನ ಮುತ್ತು ಹರಳುಕಲ್ಲುಗಳನ್ನು ಕೊಟ್ಟನೆಂದು ಅಲ್ಲಿಯ ಶಾಸನದಿಂದ ಕಂಡು ಬರುತ್ತದೆ. ಈಶ್ವರ ಭಕ್ತಿಯೇ ಈ ಔದಾರ್ಯದ ಕಾರಣವಾಗಿರಬಹುದು. ಮತ್ತೊಂದು ಸಬಲವಾದ ಕಾರಣವೇನೆಂದರೆ:—ದೇವರಲ್ಲಿದ್ದ ಭಕ್ತಿ ವಿಶ್ವಾಸಗಳು ನಿಷ್ಕಾರಣವಾಗಿ ಎಂದೂ ಬದಲಾಗುವುದಿಲ್ಲ. ಅದೇಕೆ ಮನುಷ್ಯರಲ್ಲಿದ್ದ ಭಕ್ತಿವಿಶ್ವಾಸ ಕೂಡ ಬಲವತ್ತರವಾದ ಕಾರಣವಿಲ್ಲದೆ ಬದಲಾಗುವುದಿಲ್ಲೆಂಬುದು ಅನುಭವಸಿದ್ಧವಾದ ಮಾತಾಗಿರುತ್ತದೆ. ಆದ ಕಾರಣ ವಿಷ್ಣುಭಕ್ತರಾದ ಚಾಳುಕ್ಯರ ಮನೆತನದವನಾದ ವಿಜಯಾದಿತ್ಯ ಚಕ್ರವರ್ತಿಯೂ ಅವನ ಮಗನೂ ಸೊಸೆಯಂದಿರೂ ಶಿವೋಪಾಸಕರಾಗಿ ತ್ರಿಮೂರ್ತಿಗಳ ದೇವಸ್ಥಾನವನ್ನೂ ೩ ಶಿವಾಲಯಗಳನ್ನೂ ಒಮ್ಮೆಲೆ ಕಟ್ಟಿಸಲಿಕ್ಕೆ ಒಂದು ಅತಿಪ್ರಬಲವಾದ ಕಾರಣವು ಇರಬೇಕಲ್ಲವೇ? ಈ ಮಹತ್ವದ ಕಾರಣವು ಯಾವುದು?

ಬೌದ್ಧ ಪಂಡಿತರನ್ನು ವಾದದಲ್ಲಿ ಗೆದ್ದು ಬೌದ್ಧ ಮತವನ್ನು ಪೂರ್ಣ ವಾಗಿ ಖಂಡಿಸಿ, ವೇದ ಧರ್ಮದ ಪುನರುಜ್ಜೀವನವನ್ನು ಮಾಡಿ ಅದ್ವೈತ ಮತವನ್ನು ಸ್ಥಾಪಿಸಿ ಆ ತಮ್ಮ ಅಮೌಲ್ಯವಾದ ಮತವನ್ನು ಉಪದೇಶಿಸ ಲಿಕ್ಕೆ ಸಮಗ್ರ ಭರತಖಂಡದಲ್ಲಿ ೮ ಮಠಗಳನ್ನು ಸ್ಥಾಪಿಸಿ ಜಗದ್ಗುರು ವೆಂಬ ಬಿರುದಿನಿಂದ ಎಲ್ಲ ಭಾರತೀಯರಿಗೆ ಪರಮ ಪೂಜ್ಯರಾದ

ಶ್ರೀಮಚ್ಛಂಕರಾಚಾರ್ಯರ ಕಾಲನಿರ್ಣಯವು ಇನ್ನೂ ನಿಶ್ಚಯವಾಗಿ ಆಗಿಲ್ಲವಷ್ಟೇ. ಈ ದೇವಾಂಶಸಂಭೂತರು ಬೇರೆ ಬೇರೆ ಕಾಲದಲ್ಲಿದ್ದರೆಂದು ಬೇರೆ ಬೇರೆ ಪಂಡಿತರು ಅಭಿಪ್ರಾಯ ಪಟ್ಟಿದ್ದಾರೆ.



ಅದ್ವೈತಮತಸ್ಥಾಪಕರಾದ ಶ್ರೀಮಚ್ಛಂಕರಾಚಾರ್ಯರು.

ಮದ್ರಾಸ ಹೈಕೋರ್ಟಿನ ವಕೀಲರಾಗಿದ್ದ ಕೈಲಾಸವಾಸಿ ನಾರಾಯಣ ಶಾಸ್ತ್ರಿಗಳ ಅಭಿಪ್ರಾಯದಂತೆ ಶ್ರೀಮಚ್ಛಂಕರಾಚಾರ್ಯರು **ಶಿವಗುರು ಆರ್ಯಾಂಬೆ** ಇವರಿಂದ ಕಲಿಯುಗದ ೨೫೯೩ ನೆಯ ವರ್ಷದ ನಂದನನಾಮ ಸಂವತ್ಸರ ವೈಶಾಖ ಶುದ್ಧ ೫ ರವಿವಾರ ಧನು

ರಾಶಿಯು ಪುನರ್ವಸು ನಕ್ಷತ್ರ (ಕ್ರಿಸ್ತ ಮುಂಚೆ ೫೦೯, ಮೇ ಜೂನ) ದಲ್ಲಿ ಹುಟ್ಟಿದರು*. ಶಂಕರಾಚಾರ್ಯರು ೯ ನೆಯ ಶತಮಾನದಲ್ಲಿದ್ದರೆಂದು ಡಾ। ಹಂಟರವರು ಬರೆಯುತ್ತಾರೆ†. ಈ ವಿಷಯವನ್ನು ಕುರಿತು ಡಾ। ಭಾಂಡಾರಕರು ಬರೆಯುವುದೇನೆಂದರೆ—ಸರ್ವಜ್ಞಾತ್ಮರೆಂಬ ಪಂಡಿತರು ಬರೆದ **ಸಂಕ್ಷೇಪ ಶಾರೀರಕ** ಎಂಬ ವೇದಾಂತ ಗ್ರಂಥದಲ್ಲಿ ಕೆಳಗೆ ಕೊಟ್ಟ ಶ್ಲೋಕವು ಕಂಡುಬರುತ್ತದೆ:—

ಶ್ರೀ ದೇವೇಶ್ವರ ಪಾದಪಂಕಜರಜಃ ಸಂಪರ್ಕಪೂತಾಶಯಃ।
ಸರ್ವಜ್ಞಾತ್ಮಗಿರಾಂಕಿತೋ ಮುನಿವರಃ ಸಂಕ್ಷೇಪ ಶಾರೀರಕಮ್ ॥
ಚಕ್ರೇ ಸಜ್ಜನ ಬುದ್ಧಿವರ್ಧನಮಿದಂ ರಾಜನ್ಯವಂಶೇ ನೃಪೇ।
ಶ್ರೀಮತ್ಯಕ್ಷತ ಶಾಸನೇ ಮನುಕುಲಾದಿತ್ಯೇ ಭುವಂ ಶಾಸತಿ ॥

ಈ ಶ್ಲೋಕದಲ್ಲಿ ಹೇಳಿದ ಶ್ರೀ ದೇವೇಶ್ವರರು ಶ್ರೀಮಚ್ಛಂಕರಾಚಾರ್ಯರ ಶಿಷ್ಯರಾದ ಸುರೇಶ್ವರಾಚಾರ್ಯರಾಗಿರಬಹುದೆಂತಲೂ ಮನುಕುಲಾದಿತ್ಯನು ಬಾದಾಮಿ ಚಾಳುಕ್ಯ ಮನೆತನದ ಸಾರ್ವಭೌಮರಾದ ಆದಿತ್ಯವರ್ಮ, ೧ ನೆಯ ವಿಕ್ರಮಾದಿತ್ಯ, ವಿನಯಾದಿತ್ಯ, ವಿಜಯಾದಿತ್ಯ, ೨ ನೆಯ ವಿಕ್ರಮಾದಿತ್ಯ ಈ ಅಯ್ವರೊಳಗೆ ಯಾವನಾದರೊಬ್ಬನು ಆಗಿರಬಹುದೆಂತಲೂ, ಆದಕಾರಣ ಶ್ರೀಮಚ್ಛಂಕರಾಚಾರ್ಯರು ೮ ನೆಯ ಶತಮಾನಕಿಂತ ಹಿಂದಿನ ಕಾಲದವರು ಆಗಿರಬೇಕೆಂತಲೂ ಡಾಕ್ಟರ್ ಭಾಂಡಾರಕರರು ಊಹಿಸುತ್ತಾರೆ‡.

ಕೈಲಾಸವಾಸಿ ನಾರಾಯಣ ಶಾಸ್ತ್ರಿಗಳು ಕೊಟ್ಟ ಕಾಲಕ್ಕೂ ಮೊನ್ನೆಮೊನ್ನೆ ಕೈಲಾಸವಾಸಿಯಾದ ರಾಮಕೃಷ್ಣಗೋಪಾಳ ಭಾಂಡಾರಕರರು ಊಹಿಸಿದ ಕಾಲಕ್ಕೂ ಸುಮಾರು ೧೦೦೦ಕ್ಕಿಂತ ಹೆಚ್ಚು ವರ್ಷಗಳ ಅಂತರವಿರುತ್ತದೆ. ಈ ಕಾಲವನ್ನು ನಿರ್ಣಯಿಸುವುದು ನನ್ನ ಸಧ್ಯದ ಕೆಲಸವಲ್ಲ. ಆದ್ದರಿಂದ ೭ ನೆಯ ಶತಮಾನದ ಅಂತ್ಯ ಭಾಗದಲ್ಲಿ

* ಶಂಕರ ಕಾಲ ಭಾಗ ೧, ಪು. ೩೪.

† ಇಂಡಿಯಾ ರಾಷ್ಟ್ರದ ಇತಿಹಾಸ ಪು. ೧೯೫.

‡ ಮುಂಬಯಿ ಇಲಾಖೆಯ ಗ್ಯಾಜಟಿಯರ ಸಂ. ೧, ಭಾ. ೨, ಪು. ೨೪೨.

ಯಾವನೋ ಒಬ್ಬ ಶ್ರೀಶಂಕರಾಚಾರ್ಯರ ಶಿಷ್ಯನ ಉಪದೇಶದಿಂದ ಚಾಳುಕ್ಯ ವಿನಯಾದಿತ್ಯನಾಗಲಿ (೬೮೦–೬೯೬), ಅವನ ಮಗ ವಿಜಯಾದಿತ್ಯನಾಗಲಿ (೬೯೬–೭೩೩) ಅದ್ವೈತ ಮತವನ್ನು ಸ್ವೀಕರಿಸಿ, ಶೃಂಗೇರಿ ಮಠದ ಶಿಷ್ಯನಾದ್ದರಿಂದ ವಿಜಯಾದಿತ್ಯನು ಬ್ರಹ್ಮ ವಿಷ್ಣು ಮಹೇಶ್ವರರ ಗುಡಿಯನ್ನೂ ವಿಜಯೇಶ್ವರನ ಗುಡಿಯನ್ನೂ ಕಟ್ಟಿಸಿದನೆಂದು ಧಾರಾಳವಾಗಿ ಊಹಿಸಬಹುದು. ಹೊಸ ಶೋಧಗಳಿಂದ ಈ ಊಹೆಯು ಪೂರ್ಣ ಸಿದ್ಧಾಂತವಾಗುವುದೆಂದು ತುಂಬಾ ಸಂಬದ್ದೇಸೆ. ಬಾದಾಮಿ ಚಾಳುಕ್ಯರ ಕಾಲದಲ್ಲಿ ಅದ್ವೈತ ಮತವು ನಮ್ಮ ತಾಯ್ನಾಡಿನಲ್ಲಿ ದಿನ ದಿನಕ್ಕೆ ಹೆಚ್ಚೆಚ್ಚು ಹಬ್ಬತೊಡಗಿದ್ದರಿಂದ ಜೈನ ಮತವು ಕಳೆಗುಂದಲಾರಂಭಿಸಿತೆಂತಲೂ ಯಜ್ಞಯಾಗಾದಿಗಳು ಕಡಮೆಯಾದವೆಂತಲೂ ನಿರಾಕಾರನಾದ ಪರಮೇಶ್ವರನ ಪೂಜೆಯು ವರ್ಷ ವರ್ಷಕ್ಕೆ ಬೆಳೆಯ ತೊಡಗಿತೆಂತಲೂ ಬ್ರಹ್ಮ ವಿಷ್ಣು ಮಹೇಶ್ವರರಲ್ಲಿದ್ದ ಭೇದ ಭಾವವು ಅಳಿಯಲಾರಂಭಿಸಿತೆಂತಲೂ ಹೇಳಲಿಕ್ಕೆ ಅಡ್ಡಿಯಿಲ್ಲ.

ಪ್ರತಿ ವರ್ಷ ಶ್ರಾವಣ ಶುದ್ಧ ೪ (ನಾಗರಚೌತಿ), ಶ್ರಾವಣ ಶುದ್ಧ ೫ (ನಾಗರಪಂಚಮಿ) ದಿವಸಗಳಲ್ಲಿ ನಮ್ಮ ತಾಯ್ನಾಡಿನ ಹೊಲೆಹದಿನೆಂಟು ಜಾತಿಯ ಹೆಂಗಸರು ಎಣ್ಣೆಹೂಸಿ ಎರೆದುಕೊಂಡು ಹೊಸ ದಟ್ಟಿಯನ್ನುಟ್ಟು ವೈತುಂಬ ಒಡವೆಗಳನ್ನಿಟ್ಟುಕೊಂಡು ಅತಿಸಂಭ್ರಮದಿಂದ ಕಲ್ಲಿನಲ್ಲಿ ಕೆತ್ತಿದ ನಾಗರಹಾವನ್ನು ಪೂಜಿಸಿ ಅರಳುತಂಬಿಟ್ಟನ್ನು ನೈವೇದ್ಯ ತೋರಿಸಿ, ಚೌತಿಯ ದಿವಸ ಉಪವಾಸಮಾಡಿ, ಪಂಚಮಿಯ ದಿವಸ ಮಿಷ್ಟಾನ್ನವನ್ನುಂಡು, ಜೋಕಾಲೆಯನ್ನಾಡಿ ಅತ್ಯಾನಂದದಿಂದ ಹಬ್ಬವನ್ನು ಮಾಡುತ್ತಾರಷ್ಟೇ. ಈ ಹಬ್ಬದ ವ್ಯುತ್ಪತ್ತಿಯು ಇನ್ನೂ ಚೆನ್ನಾಗಿ ತಿಳಿದಿಲ್ಲ. ಕ್ರಿಸ್ತ ಶಕದ ಮುಂಚಿನ ಮತ್ತು ಆರಂಭದ ಶತಮಾನಗಳಲ್ಲಿ ನಾಗರಕುಲದ ಅರಸರು ಅತಿಪ್ರಬಲರಾಗಿ ಕಾಶ್ಮೀರದಿಂದ ಮಲೆಯಾಳದವರೆಗೆ ಆಳುತ್ತಿದ್ದರೆಂದು ಶಾಸನಗಳಿಂದ ಕಂಡುಬರುತ್ತದೆ. ಪೂರ್ವಕಾಲದಲ್ಲಿ ನಾಗರು ಕಾಶ್ಮೀರ ಪ್ರಾಂತದಲ್ಲಿ ಪ್ರಬಲರಾಗಿದ್ದರೆಂದು **ರಾಜತರಂಗಿಣಿ** ಎಂಬ ಗ್ರಂಥದಲ್ಲಿ ಬರೆದಿದೆ. ಸಮುದ್ರಗುಪ್ತ–ಸ್ಕಂದಗುಪ್ತರು ನಾಗರನ್ನು ಸೋಲಿಸಿದರೆಂದು ಶಾಸನಗಳಲ್ಲಿ ಲೇಖವಿದೆ. ಇವರ

ಮೂಲಸ್ಥಾನವು ಮೈಸೂರು ಸಂಸ್ಥಾನದಲ್ಲಿದ್ದ ಸೊರಬ ತಾಲೂಕೂ ಅದರ ಸುತ್ತಲಿನ ಕೆಲಪ್ರದೇಶವೂ ಆದ್ದರಿಂದ ಆ ಪ್ರಾಂತಕ್ಕೆ ನಾಗರಖಂಡವೆಂಬ ಹೆಸರು ಬಿದ್ದಿತ್ತು. ನಾಗರು ಪ್ರಬಲರಾಗಿದ್ದಾಗ ಈ ನಾಗರ ಚೌತಿ, ನಾಗರ ಪಂಚಮಿ ಹಬ್ಬಗಳು ರೂಢಿಯಲ್ಲಿ ಬಂದಿರಬಹುದೆಂದು ತೋರುತ್ತದೆ. ಬನವಾಸಿಯ ಸಾತವಾಹನರು ನಾಗರಕುಲಕ್ಕೆ ಸೇರಿದವರಾಗಿದ್ದರೂ ಆಗಿರಬಹುದು. ಬಾದಾಮಿ ಚಾಳುಕ್ಯರ ಕಾಲದಲ್ಲಿ ಇವರು ಸ್ವತಂತ್ರ ಅರಸರಾಗಿರದೆ ಸಾಮಂತರಾಗಿದ್ದರೆಂದು ತೋರುತ್ತದೆ. ಇವರು ಕದಂಬ ಪಲ್ಲವ ಚಾಳುಕ್ಯರೊಡನೆ ಶರೀರಸಂಬಂಧವನ್ನು ಮಾಡಿದ್ದರು. ಬನವಾಸಿಯ ಸೆರೆಯಲ್ಲಿ ಆಳುತ್ತಿದ್ದ ಆಳುಪರು ನಾಗರಕುಲದ ಸಾಮಂತರಾಗಿದ್ದರು. ವಿನಯಾದಿತ್ಯನ ಕಾಲದಲ್ಲಿ ನಾಗರಖಂಡವನ್ನು ಆಳುತ್ತಿದ್ದ ಸೇಂದ್ರಕರು ಭುಜಗೇಂದ್ರಾನ್ವಯದವರಾಗಿದ್ದರು. ಸಿಂದವಾಡಿ (ಚಿತ್ರದುರ್ಗ, ಬಳ್ಳಾರಿ, ಧಾರವಾಡ, ವಿಜಾಪುರ) ದಲ್ಲಿ ಆಳುತ್ತಿದ್ದ ಸಿಂದರು ಫಣಿರಾಜವಂಶದವರಾಗಿದ್ದರು. ಸಾಮಂತರಾಗಿದ್ದ ಸೇನವಾರರು ಫಣಿಧ್ವಜರಾಗಿದ್ದರು. ಸಂತಲಿಗೆ (ತೀರ್ಥಹಳ್ಳಿ) ಸಾವಿರವನ್ನು ಆಳುತ್ತಿದ್ದ ಶಾಂತರ ಮೂಲಪುರುಷನಾದ ಜಿನದತ್ತನು ನಾಗಕನ್ನಿಕೆಯನ್ನು ಮದುವೆ ಮಾಡಿಕೊಂಡನೆಂದು ಶಾಸನದಿಂದ ಕಂಡುಬರುತ್ತದೆ. ನಾಗರ ಮೂಲಸ್ಥಾನವಾದ ನಾಗರಖಂಡಕ್ಕೆ ಮುಂದೆ **ನಾಯರಖಂಡ**ವೆಂದು ಕರೆಯಲಾರಂಭಿಸಿದರು. ಈಗ ಮಲೆಯಾಳದಲ್ಲಿದ್ದ ನಾಯರರು ನಾಗರ ಕುಲದವರೇ ಆಗಿರಬಹುದು.

ಇಷ್ಟು ಆ ಕಾಲದ ನಮ್ಮ ಪೂರ್ವಜರ ಧರ್ಮಸಂಬಂಧದ ವಿಚಾರವಾಯಿತು. ಇನ್ನು ಅವರ ಸಾಮಾಜಿಕ ಸ್ಥಿತಿಯ ಬಗ್ಗೆ ಏನು ಗೊತ್ತಾಗುತ್ತದೆಂಬುದನ್ನು ವಿಚಾರಿಸುವೆವು. ಬಾದಾಮಿ ಚಾಳುಕ್ಯರ ಹಿಂದಿನ ಕಾಲದಲ್ಲಿ ಸ್ತ್ರೀಸ್ವಾತಂತ್ರ್ಯವೂ ಅವಿವಾಹಿತ ಸ್ತ್ರೀಯರ ಸಂಖ್ಯೆಯೂ ಮಿತಿಮೀರಿ ಬೆಳೆದಿದ್ದವೆಂದು ಹಿಂದೆ ೧ ನೆಯ ಭಾಗದ ೫ ನೆಯ ಅಧ್ಯಾಯದಲ್ಲಿ ಬರೆದಿರುತ್ತೇವಷ್ಟೇ. ೬ ನೆಯ ಮತ್ತು ೭ ನೆಯ ಶತಮಾನಗಳಲ್ಲಿ ಜೈನ ಬೌದ್ಧ ಮತಗಳು ಕಳೆಗುಂದಲಾರಂಭಿಸಿದ್ದರಿಂದಲೂ ಸ್ತ್ರೀಸ್ವಾತಂತ್ರ್ಯದ ಕೆಟ್ಟ ಪರಿಣಾಮಗಳು ಜನರ ಅನುಭವಕ್ಕೆ ಬರತೊಡಗಿದ್ದರಿಂದಲೂ ಅದ್ವೈತ

ಮತೋಪದೇಶಕರು ಹುರುಪಿನಿಂದ ಧರ್ಮ ಜಾಗ್ರತೆಯನ್ನುಂಟು ಮಾಡುವುದರಲ್ಲಿ ಆಸಕ್ತರಾಗಿದ್ದುದರಿಂದಲೂ ಈ ಅತಿಸ್ವಾತಂತ್ರ್ಯವೂ ಅವಿವಾಹಿತ ಸ್ಥಿತಿಯೂ ವರ್ಷ ವರ್ಷಕ್ಕೆ ಕಡಮೆಯಾಗತ್ತೊಡಗಿದವೆಂದು ತೋರುತ್ತದೆ. ಏಕೆಂದರೆ ಬಾದಾವಿ ಚಾಳುಕ್ಯರ ಶಾಸನಗಳು ಹೇರಳ ವಾಗಿ ದೊರೆತಿದ್ದರೂ ಈ ವಿಷಯದ ಉಲ್ಲೇಖವೇ ಇಲ್ಲೆಂದು ಹೇಳ ಬಹುದು. ಈ ಶಾಸನಗಳಲ್ಲಿ ೪ ಜನ ಹೆಸರಾದ ಹೆಂಗಸರ ಹೆಸರುಗಳು ಮಾತ್ರ ಬಂದಿರುತ್ತವೆ:—೧. ಕುಂಕುಮಮಹಾದೇವಿ, ೨. ವೀಣಾ ಪೋಟಿ, ೩. ಲೋಕಮಹಾದೇವಿ, ೪. ತ್ರೈಲೋಕ್ಯಮಹಾದೇವಿ. ವಿಜ ಯಾದಿತ್ಯನ ಸಹೋದರಿಯಾದ ಕುಂಕುಮಮಹಾದೇವಿಯು ಲಕ್ಷ್ಮೇಶ್ವ ರದಲ್ಲಿ ಒಂದು ಜೈನ ಬಸದಿಯನ್ನು ಕಟ್ಟಿಸಿದಳು. ಈಕೆ ಮದುವೆಮಾಡಿ ಕೊಂಡಿದ್ದಳೋ ಇಲ್ಲೋ? ಗಂಡನು ಇದ್ದನೋ ಸತ್ತಿದ್ದನೋ? ಈಕೆ ಲಕ್ಷ್ಮೇಶ್ವರದಲ್ಲಿ ಏನು ಕಾರಣ ಇದ್ದಳೋ? ಈಕೆಗೆ ಮಕ್ಕಳಿದ್ದರೋ ಇಲ್ಲೋ? ಈ ಸಂಗತಿಗಳನ್ನು ತಿಳಿದುಕೊಳ್ಳಲಿಕ್ಕೆ ನಮಗೆ ಸಾಧನವೇ ಇಲ್ಲ. ವೀಣಾಪೋಟಿಯು ಹೇಳಿ ಕೇಳಿ ವಿಜಯಾದಿತ್ಯನ ಸೂಳೆಯಾಗಿ ದ್ದಳು. ಆದ್ದರಿಂದ ಆಕೆಯು ಸ್ವತಂತ್ರಳೇ ಸರಿ. ಲೋಕಮಹಾದೇವಿ ತ್ರೈಲೋಕ್ಯಮಹಾದೇವಿಯರು ೨ ನೆಯ ವಿಕ್ರಮಾದಿತ್ಯನ ರಾಣಿಯ ರಾದ್ದರಿಂದ ತಮ್ಮ ಗಂಡನ ಸಮ್ಮತಿಯಿಂದ ಎರಡು ಈಶ್ವರಾಲಯ ಗಳನ್ನು ಕಟ್ಟಿಸಿ ಅವುಗಳಿಗೆ ಉಂಬಳಿಯನ್ನು ಹಾಕಿಕೊಟ್ಟರು. ಪಟ್ಟದ ಕಲ್ಲಿನಲ್ಲಿದ್ದ ಲೋಕೇಶ್ವರನ ಗುಡಿಯ ಒಂದು ಶಾಸನದಲ್ಲಿ ೨ ನೆಯ ವಿಕ್ರಮಾದಿತ್ಯನು ತನ್ನ ಪಟ್ಟದರಾಣಿಯು ಕೊಟ್ಟ ದಾನಕ್ಕೆ ತನ್ನ ಒಪ್ಪಿಗೆಯನ್ನು ಕೊಟ್ಟದ್ದು ಓದುವವರ ನೆನಪಿನಲ್ಲಿರಬಹುದು.

ಬಾದಾವಿ ಚಾಳುಕ್ಯರ ಕಾಲದಲ್ಲಿ ಈಗಿನಷ್ಟು ಮತಗಳೂ ಜಾತಿಗಳೂ ಅವುಗಳ ಒಳಭೇದಗಳೂ ಇದ್ದಿದ್ದಿಲ್ಲ. ವೇದಮತ, ಜೈನಮತ ಗಳೆಂಬ ಎರಡೇ ಮುಖ್ಯ ಮತಗಳಾಗಿದ್ದವು. ವೇದಮತದವರು ಜೈನರಾಗುತ್ತಿದ್ದರು; ಜೈನರು ವೇದಮತವನ್ನು ಅಂಗೀಕರಿಸುತ್ತಿದ್ದರು. ಶ್ರೀಮಚ್ಛಂಕರಾಚಾರ್ಯರೂ ಅವರ ಶಿಷ್ಯರೂ ಎಷ್ಟೋಮಂದಿ ಬೌದ್ಧ ಜೈನರನ್ನು ತಮ್ಮ ಅದ್ವೈತ ಮತಕ್ಕೆ ಎಳೆದುಕೊಂಡರು.

ಆ ಕಾಲಕ್ಕೆ ಮತಭಿನ್ನತೆಯು ಈಗಿನಂತೆ ಶರೀರಸಂಬಂಧಕ್ಕೂ ಊಟದ ಬಳಿಕೆಗೂ ಅಡ್ಡಬರುತ್ತಿದ್ದಿಲ್ಲೆಂದು ತೋರುತ್ತದೆ. ಅದ್ವೈತರು ಜೈನ ಕನ್ಯೆಯರನ್ನೂ ಜೈನರು ಅದ್ವೈತ ಕನ್ಯೆಯರನ್ನೂ ಮದುವೆಮಾಡಿಕೊಳ್ಳಲಿಕ್ಕೆ ಹಿಂಜರೆಯುತ್ತಿದ್ದಿಲ್ಲೆಂದು ಕಂಡುಬರುತ್ತದೆ. ಆ ಕಾಲದಲ್ಲಿ ಜಾತಿಭೇದವಾದರೂ ಹೆಚ್ಚಾಗಿ ಮದುವೆಗೆ ಅಡ್ಡಿಯಾಗುತ್ತಿದ್ದಿಲ್ಲೆಂದು ಹೇಳಬಹುದು. ಏಕೆಂದರೆ ಗಂಗರು ಪಲ್ಲವರು ಕದಂಬರು ಆಳುಪರು ಸಿಂದರು ಚೇದಿಯರು ಸೇಂದ್ರಕರು ಚಾಳುಕ್ಯರು ಬೇರೆ ಬೇರೆ ವಂಶದವರಾದರೂ ಅವರೊಳಗೆ ಶರೀರಸಂಬಂಧವು ಎಡೆಬಿಡದೆ ನಡೆದಿತ್ತೆಂದು ಶಾಸನಗಳಿಂದ ಕಂಡುಬರುತ್ತದೆ. ೬ ನೆಯ, ೭ ನೆಯ ಮತ್ತು ೮ ನೆಯ ಶತಮಾನಗಳಲ್ಲಿ ಮತ ಜಾತಿಗಳ ಭೇದವನ್ನು ಎಣಿಸದೆ ನಮ್ಮ ಪೂರ್ವಜರು ರೋಟಿವ್ಯವಹಾರವನ್ನೂ ಬೇಟಿವ್ಯವಹಾರವನ್ನೂ ಮಾಡುತ್ತಿದ್ದರೆಂದು ಬರೆದರೆ ತಪ್ಪಾಗಲಿಕ್ಕಿಲ್ಲೆಂದು ತೋರುತ್ತದೆ.

೭ ನೆಯ ಶತಮಾನದಲ್ಲಿ ಚೀನದೇಶದಿಂದ ಬಂದು ಈ ನಮ್ಮ ಭರತಭೂಮಿಯಲ್ಲಿ ಸುಮಾರು ೧೭ ವರ್ಷ (೬೨೯–೬೪೫) ಸಂಚಾರ ಮಾಡಿದ ಹುವೆನುತ್ಸ್ಯಾಂಗನೆಂಬ ಬೌದ್ಧ ಸನ್ಯಾಸಿಯು ನಮ್ಮ ತಾಯ್ನಾಡಿನ ಬೇಸಾಯವನ್ನೂ ನಮ್ಮ ಪೂರ್ವಜರ ಸ್ವಭಾವವನ್ನೂ ಅಂದವಾಗಿ ವಿವರಿಸಿರುತ್ತಾನಷ್ಟೇ. ಆ ಕಾಲಕ್ಕೆ ನಮ್ಮ ನಾಡಿನ ಕೃಷಿ ಕರ್ಮವು ಸರಿಯಾಗಿ ನಡೆಯುತ್ತಿತ್ತೆಂತಲೂ ಭೂಮಿಯು ಬೆಳೆಯುಳ್ಳದ್ದಾಗಿತ್ತೆಂತಲೂ ಹುವೆನುತ್ಸ್ಯಾಂಗನು ಬರೆಯುತ್ತಾನೆ. ಒಕ್ಕಲತನದ ತರುವಾಯ ದಂಡಿನಲ್ಲಿ ಸೇರುವುದೇ ನಮ್ಮ ಜನರ ಮುಖ್ಯವಾದ ಉದ್ಯೋಗವಾಗಿತ್ತು. ಈ ದಂಡಾಳುಗಳು ಶೂರರೂ ಸಾವಿಗಂಜದವರೂ ಸ್ವಾಮಿಭಕ್ತರೂ ಸ್ವದೇಶಾಭಿಮಾನಿಗಳೂ ಆಗಿದ್ದರೆಂಬ ವರ್ಣನೆಯನ್ನು ಓದಿ ಯಾವ ಕನ್ನಡಿಗನು ತನ್ನ ಪೂರ್ವಜರ ಬಗ್ಗೆ ಅಭಿಮಾನವನ್ನು ತಾಳಲಿಕ್ಕಿಲ್ಲ? ಆ ಕಾಲದ ನಮ್ಮ ಪೂರ್ವಜರ ಶೌರ್ಯ ಧೈರ್ಯ ಸಾಹಸಾಭಿಮಾನಗಳೆಲ್ಲಿ? ಈ ಕಾಲದ ನಮ್ಮ ಹೇಡಿತನ ಪುಕ್ಕತನ ಹೊಟ್ಟೆಯುರಕತನವೆಲ್ಲಿ? ಆ ಕಾಲದಲ್ಲಿ ಕಾಳೆಗಕ್ಕೆ ಹೋಗುವಾಗ ದಂಡಿನವರು ಸಾರಾಯಿಕುಡಿದು ಮತ್ತರಾಗಿ ಜೀವದ ಹಂಗುತೊರೆದು

ಕಾದಿ ಗೆದ್ದು ಸ್ವಜನೋತ್ಕರ್ಷವನ್ನು ಮಾಡುತ್ತಿದ್ದರೆಂದು ಹುವೆಸುತ್ಸಾಂಗನು ಬರೆಯುತ್ತಾನೆ. ಈ ಕಾಲದಲ್ಲಿ ಇದ್ದ ದುಡ್ಡನ್ನೆಲ್ಲ ಸಾರಾಯಿಯಂಗಡಿಯವರಿಗಾಗಲಿ ಸೂಳೆಯರಿಗಾಗಲಿ ಕೊಟ್ಟು ಹೆಂಡರು ಮಕ್ಕಳನ್ನು ಉಪವಾಸಕೆಡವಿ ಬೀದಿಗಳಲ್ಲಿಯೂ ಕಾಲುವೆಗಳಲ್ಲಿಯೂ ಹೊರಳಾಡುವವರನ್ನು ನೋಡುವ ಯಾವ ಸದ್ಗೃಹಸ್ಥನಿಗೆ ಸಂತಾಪವಾಗಲಿಕ್ಕಿಲ್ಲ? ನಿಷ್ಕಾರಣವಾಗಿ ಸಾರಾಯಿ ಕುಡಿಯುವುದು ಮಹಾ ಪಾತಕವಲ್ಲವೇ ?

೧೩೦೦ ವರ್ಷಗಳ ಹಿಂದಿನ ನಮ್ಮ ಪೂರ್ವಜರು ಪ್ರಾಮಾಣಿಕರೂ ಕೃತಜ್ಞರೂ ಸ್ವಾಭಿಮಾನಿಗಳೂ ದಯಾರ್ದ್ರಹೃದಯರೂ ಕಂಗುಹಿಡಿಯುವವರೂ ಪಾಪಭೀರುಗಳೂ ಸಾದಾಸ್ವಭಾವದವರೂ ಉದಾರರೂ ಸ್ವಾತಂತ್ರ್ಯಪ್ರಿಯರೂ ವಿದ್ಯಾಪಕ್ಷಪಾತಿಗಳೂ ಆಗಿದ್ದರೆಂದು ಹುವೆಸುತ್ಸಾಂಗನು ಬರೆಯುತ್ತಾನೆ. ತಂದ ಸಾಲವನ್ನಾಗಲಿ ಇಟ್ಟ ಗಂಟನ್ನಾಗಲಿ ನುಂಗುವ ವಿಚಾರವು ನಮ್ಮ ಪೂರ್ವಜರ ಕನಸು ಮನಸ್ಸಿನಲ್ಲಿ ಕೂಡ ಬರುತ್ತಿದ್ದಿಲ್ಲ. ತಮಗೆ ಮಾಡಿದ ಒಳಿತನ್ನು ಬದುಕಿರುವ ವರೆಗೆ ಅವರು ಮರೆಯುತ್ತಿದ್ದಿಲ್ಲವಾದ್ದರಿಂದ ಜನರು ಪರರಿಗೆ ಉಪಕಾರಮಾಡಲಿಕ್ಕೆ ಹಾತೊರೆಯುತ್ತಿದ್ದರು. ತಮ್ಮ ಅಥವಾ ತಮ್ಮ ಮನೆತನದ ಮಾನವು ಪ್ರಾಣಕ್ಕಿಂತ ಹೆಚ್ಚಿನದೆಂಬ ತಿಳುವಳಿಕೆಯು ಜನರಲ್ಲಿ ಹಬ್ಬಿದ್ದರಿಂದ ನಿಷ್ಕಾರಣವಾಗಿ ಪರರನ್ನು ದೂಷಿಸುವುದಕ್ಕೆ ಅವರು ಹೆದರುತ್ತಿದ್ದರು. ಬಡಬಗ್ಗರು, ಕುಂಟರು, ಕುರುಡರು, ಮೂಕರು, ಹೆಳವರು, ದಿಕ್ಕಿಲ್ಲದವರು, ಶರಣಾಗತರು ಇವರ ಬಗ್ಗೆ ನಮ್ಮ ಪೂರ್ವಜರು ಪೂರ್ಣವಾಗಿ ಕಕ್ಕುಲತೆಯುಳ್ಳವರಾಗಿದ್ದರು. ಆದರೆ ಅವರು ದುಷ್ಟರಿಗೆ ಎಳ್ಳಷ್ಟಾದರೂ ದಯೆತೋರಿಸುತ್ತಿದ್ದಿಲ್ಲ. ತಮಗೆ ಅನ್ಯಾಯಮಾಡಿದವರಿಗಾಗಲಿ ಅಪಮಾನ-ಮಾಡಿದವರಿಗಾಗಲಿ ಅಪಾಯಮಾಡಿದವರಿಗಾಗಲಿ ಅವರು ಅತಿಕಠೋರ ಹೃದಯರಾಗಿದ್ದರು. ತಮಗೆ ಕಾರಣವಿಲ್ಲದೆ ಕೇಡುಬಗೆದವರನ್ನು ಅವರು ಎಂದೂ ದಂಡಿಸದೆ ಬಿಡುತ್ತಿದ್ದಿಲ್ಲ. ನಮ್ಮ ಪೂರ್ವಜರಲ್ಲಿ ಧರ್ಮಬುದ್ಧಿಯು ಜಾಗ್ರತವಾಗಿದ್ದುದರಿಂದ ಅವರು ಪಾಪ ಕೃತ್ಯಕ್ಕೆ ಬಹಳವಾಗಿ ಹೆದರುತ್ತಿದ್ದರು. ಲೋಭವೇ ಪಾಪದ

ಮೂಲಕಾರಣವೆಂಬುದನ್ನು ಅವರು ಅರಿತವರಾದ್ದರಿಂದ ತಮ್ಮ ಲೋಭಬುದ್ಧಿಯನ್ನು ದಿನಾಲು ಹತ್ತಿಕ್ಕಿ ಸಣ್ಣವಾಡುತ್ತಿದ್ದರು. **ಸಾದಾ ಸಬ್ಸೆ ಜಾದಾ** ಅಂದರೆ ಸಾಧಾರಣವಾದುದೇ ಎಲ್ಲಕ್ಕೂ ಮೇಲಾದುದು ಎಂಬ ಅನುಭವದ ಮಾತಿನಲ್ಲಿ ಅವರಿಗೆ ಪೂರ್ಣ ವಿಶ್ವಾಸವಿದ್ದುದರಿಂದ ಅವರು ತಮ್ಮ ಉಡಿಗೆ-ತೊಡಿಗೆಗಳಲ್ಲಿಯೂ ಊಟಗೀಟಗಳಲ್ಲಿಯೂ ಮನೆಮಾರುಗಳಲ್ಲಿಯೂ ಹೆಚ್ಚಿನ ಆಡಂಬರವನ್ನು ಬಯಸದೆ, ತಮ್ಮ ಜೀವನಕ್ಕೂ ಧನಾರ್ಜನೆಗೂ ಅವಶ್ಯವಿದ್ದಷ್ಟರಿಂದಲೇ ಸಂತುಷ್ಟರಾಗಿರುತ್ತಿದ್ದರು. ಕರ್ನಾಟಕದ ಕವಿಪುಂಗವನಾದ ಲಕ್ಷ್ಮೀಶನು ಧರ್ಮರಾಜನ ರಾಜ್ಯವನ್ನು ವರ್ಣಿಸುವಾಗ ಬರೆಯುವಂತೆ ಆ ಕಾಲದಲ್ಲಿ 'ಕೊಡೆ' ಶಬ್ದವನ್ನು ಛತ್ರವಾಗಿ ಎಂಬರ್ಥದಲ್ಲಿ ಉಪಯೋಗಿಸುತ್ತಿದ್ದರೆ ಹೊರತು ಕೊಡುವುದಿಲ್ಲೆಂಬ ಅರ್ಥದಲ್ಲಿ ಉಪಯೋಗಿಸುತ್ತಿದ್ದಿಲ್ಲೆಂದು ಬರೆದರೆ ಅತಿಶಯೋಕ್ತಿಯಾಗಲಾರದು. ಕೃತಜ್ಞತೆಯು ಹೆಚ್ಚಾಗಿದ್ದಾಗ ಜನರು ಸ್ವಾಭಾವಿಕವಾಗಿ ಹೆಚ್ಚು ಉದಾರರಾಗಿರುತ್ತಾರೆಂಬುದರಲ್ಲಿ ಆಶ್ಚರ್ಯವೇನೂ ಕಂಡುಬರುವುದಿಲ್ಲ. ಸತ್ಪಾತ್ರರಿಗೆ ಕೊಡುವ ಮತ್ತು ಉದರನಿರ್ವಾಹಾರ್ಥವಾಗಿ ವೆಚ್ಚಮಾಡುವ ಹಣವುಮಾತ್ರ ತಮ್ಮದು ಉಳಿದುದೆಲ್ಲ ಯಾರದೊ ಏನೋ ಎಂಬ ಉಪದೇಶವಾಕ್ಯವನ್ನು* ನಮ್ಮ ಪೂರ್ವಜರು ಆಚರಣೆಯಲ್ಲಿ ತಂದಿದ್ದರೆಂದು ಬರೆಯಲಿಕ್ಕೆ ಸಂತೋಷಪಡುತ್ತೇನೆ.

ಸ್ವಾಭಿಮಾನ ಸ್ವಾತಂತ್ರ್ಯಪ್ರೀತಿಗಳು ಮನುಷ್ಯನ ಹುಟ್ಟುಗುಣಗಳಾಗಿರುತ್ತವೆಂಬುದನ್ನು ಎಲ್ಲ ವಾಚಕರು ಬಲ್ಲರು. ದೇವರು ತನ್ನ ಅಂಶವನ್ನೇ ಮನುಷ್ಯನ ಆತ್ಮವಾಗಿ ಮಾಡಿದ್ದರಿಂದ ಸ್ವಾಭಿಮಾನದ ಅತಿರೇಕ ಅಥವಾ ಹೆಚ್ಚಳವಾದ ಸ್ವಾತಂತ್ರ್ಯವು ಪ್ರತಿಯೊಬ್ಬ ಮನುಷ್ಯನ ಜನ್ಮದ ಹಕ್ಕಾಗಿರುತ್ತದೆನ್ನಲಿಕ್ಕೆ ಏನೂ ಅಡ್ಡಿಯಿಲ್ಲ. ಈ ಸ್ವಾತಂತ್ರ್ಯಕ್ಕೆ ದ್ವೈತರು **ದತ್ತಸ್ವಾತಂತ್ರ್ಯ**ವೆನ್ನುತ್ತಾರೆ. ದೇವರ ಹೊರತು ಬೇರೆ ವ್ಯಕ್ತಿಗಾಗಲಿ ಸರಕಾರವೆಂಬ ಮನುಷ್ಯರ ಗುಂಪಿಗಾಗಲಿ ಈ ಸ್ವಾತಂತ್ರ್ಯ

---

* ಯದ್ದದಾಸಿ ವಿಶಿಷ್ಟೇಭ್ಯೋ ಯಚ್ಚಾಶ್ನಾಸಿ ದಿನೇದಿನೇ।
ತತ್ತೇ ವಿತ್ತಮಹಂ ಮನ್ಯೇ ಶೇಷಂ ಕಸ್ಯಾಪಿ ರಕ್ಷಸಿ॥

ವನ್ನು ಕಡಮೆಮಾಡುವುದಕ್ಕೂ ಕಸಿದುಕೊಳ್ಳುವುದಕ್ಕೂ ಅಧಿಕಾರವಿಲ್ಲ. ಎರಡನೆಯವರ ಸ್ವಾತಂತ್ರ್ಯಕ್ಕೆ ಅಡ್ಡಬರದೆ, ತನಗೆ ಬೇಕಾದ ಅಧಿಕಾರವನ್ನು ತನ್ನ ಕಯ್ಯಲ್ಲಿಟ್ಟುಕೊಳ್ಳುವುದೇ ಸುಖವು, ಆ ಅಧಿಕಾರಗಳನ್ನು ಪರರಿಗೆ ಒಪ್ಪಿಸುವುದೇ ದುಃಖವು ಆಗಿರುತ್ತದೆಂದು ಮನುವು ತನ್ನ ಧರ್ಮಶಾಸ್ತ್ರದಲ್ಲಿ ಬರೆದಿರುತ್ತಾನೆ*. ದೇವರು ನಮಗೆ ಕೊಟ್ಟ ಆರೋಗ್ಯವುಳ್ಳ ಪ್ರಕೃತಿಯನ್ನು ಎಚ್ಚರದಿಂದ ಕಾಪಾಡಿಕೊಳ್ಳದೆ ಇಂದ್ರಿಯಪರವಶರಾಗಿ ರೋಗಗಳಿಗೆ ಈಡಾಗುವಂತೆ, ದೇವರು ಕೊಟ್ಟ ನಮ್ಮ ಸ್ವಾತಂತ್ರ್ಯವನ್ನು ಜತನದಿಂದ ಕಾಯ್ದುಕೊಳ್ಳದೆ ಹಣದ ಆಶೆಗಾಗಲಿ ಬೇರೆ ತರದ ಮೋಹಕ್ಕಾಗಲಿ ಒಳಗಾಗಿ ನಮಗಿದ್ದ ಸ್ವಾತಂತ್ರ್ಯವನ್ನು ಕಳೆದುಕೊಂಡು ಗುಲಾಮರಾಗುವುದು ನಮ್ಮ ದುಷ್ಕರ್ಮದ ಫಲವಾಗದೆ ಮತ್ತೇನು? ಆ ಕಾಲದ ನಮ್ಮ ಪೂರ್ವಜರಿಗೆ ಸ್ವಾತಂತ್ರ್ಯವು ಪ್ರಾಣಕ್ಕಿಂತ ಹೆಚ್ಚು ಪ್ರಿಯಕರವಾದ್ದರಿಂದ ಅವರು ಅದನ್ನು ಕಳೆದುಕೊಳ್ಳದೆ ಸುಖಿಯಾಗಿದ್ದರೆಂದು ಬರೆಯಲಿಕ್ಕೆ ಆನಂದವಾಗುತ್ತದೆ. 'ಎಂತಹ ಜನರು ಅಂತಹ ಸರಕಾರ' ಎಂಬ ಪಾಶ್ಚಿಮಾತ್ಯರ ಗಾದೆಯು ಅಕ್ಷರಶಃ ನಿಜವಾಗಿರುತ್ತದೆ.

೨ನೆಯ ಪುಲಿಕೇಸಿಯ ರಾಜ್ಯದಲ್ಲಿ ವೇದಮತ ಬೌದ್ಧಮತ ಜೈನಮತಗಳ ಗ್ರಂಥಗಳನ್ನು ಓದಿದ ಘನವಿದ್ವಾಂಸರು ಎಷ್ಟೋಜನರಿದ್ದರೆಂತಲೂ ಸಾಮಾನ್ಯವಾಗಿ ಎಲ್ಲ ಪ್ರಜೆಗಳು ವಿದ್ಯೆಯಲ್ಲಿ ಅಭಿರುಚಿಯುಳ್ಳವರಾಗಿದ್ದರೆಂತಲೂ ಹುವೆನುತ್ಸಾಂಗನು ಬರೆದಿರುತ್ತಾನಷ್ಟೇ. "ಈ ಜಗತ್ತಿನಲ್ಲಿ ಜ್ಞಾನದಷ್ಟು ಪವಿತ್ರವಾದ ಮತ್ತೊಂದು ವಸ್ತುವಿಲ್ಲ. ಜ್ಞಾನಶೂನ್ಯರೂ ಭಕ್ತಿವಿಶ್ವಾಸವಿಲ್ಲದವರೂ ಸಂಶಯಾತ್ಮರೂ ನಾಶಹೊಂದುತ್ತಾರೆ" ಎಂಬ ಭಗವಂತನ ವಾಕ್ಯಗಳೂ† ಕರ್ಮಭಕ್ತಿ

---

* ಯದ್ಯದತ್ಪರವಶಂ ದುಃಖಮ್ ಯದ್ಯದಾತ್ಮವಶಂ ಸುಖಮ್ ॥

—ಮನುಧರ್ಮಶಾಸ್ತ್ರ.

† ನ ಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ ॥
ಅಜ್ಞಶ್ಚಾಶ್ರದ್ದಧಾನಶ್ಚ ಸಂಕಯಾತ್ಮಾ ವಿನಶ್ಯತಿ ॥

—ಭಗವದ್ಗೀತಾ ಅ. ೪, ಶ್ಲೋ. ೩೮ ಮತ್ತು ೪೦.

ಮಾರ್ಗಗಳಿಗಿಂತ ಜ್ಞಾನಮಾರ್ಗವು ಹೆಚ್ಚು ಶ್ರೇಯಸ್ಕರವಾದ ಮೋಕ್ಷ ಸಾಧನವಾಗಿರುತ್ತದೆಂಬ ಶ್ರೀಮಚ್ಛಂಕರಾಚಾರ್ಯರ ಉಪದೇಶವೂ ಆ ಕಾಲದ ಜನರ ಹೃದಯಪಟಲದಲ್ಲಿ ನಟ್ಟು ಕಿವಿಯಲ್ಲಿ ತುಂಬಿದ್ದವು. ಆದಕಾರಣ ಆ ಕಾಲದ ನಮ್ಮ ಪೂರ್ವಜರು ವಿದ್ಯಾಪಕ್ಷಪಾತಿಗಳಾಗಿದ್ದರೆಂಬುದರಲ್ಲಿ ಸಂದೇಹವಿಲ್ಲ. ಆದರೆ ವಿದ್ಯಾಪ್ರಸಾರಕ್ಕೆ ವಿದ್ಯಾಪೀಠವೊಂದು ಇರಬೇಕಲ್ಲವೇ? ಈ ವಿದ್ಯಾಪೀಠವು ಯಾವುದು, ಎಲ್ಲಿತ್ತು ಎಂಬ ಪ್ರಶ್ನವು ಇಲ್ಲಿ ತಲೆದೋರುತ್ತದೆ.

೬ ನೆಯ, ೭ ನೆಯ ಮತ್ತು ೮ ನೆಯ ಶತಮಾನಗಳಲ್ಲಿ ನಮ್ಮ ತಾಯ್ನಾಡಿನೊಳಗೆ ಎರಡು ವಿದ್ಯಾಪೀಠಗಳಿದ್ದವೆಂದು ಅನುಮಾನಮಾಡಬಹುದು. ಒಂದು ಶ್ರೀಮಚ್ಛಂಕರಾಚಾರ್ಯರ ಮುಖ್ಯ ಮಠವಾದ ಶೃಂಗೇರಿಯದು; ಮತ್ತೊಂದು ಚಾಳುಕ್ಯರ ರಾಜಧಾನಿಯಾದ ಬಾದಾಮಿಯ ನೆರೆಯಲ್ಲಿದ್ದ ಅಯ್ಹೊಳೆಯದು. ಈ ವಿಷಯಕ್ಕೆ ಸಂಬಂಧಿಸಿದ ಅಯ್ಹೊಳೆಯ ೨ ಶಾಸನಗಳನ್ನು ಹಿಂದೆ ಕೊಟ್ಟಿರುತ್ತೇವಷ್ಟೇ*. ಇವುಗಳ ಹೊರತು ಈ ವಿಷಯಕ್ಕೆ ಸಂಬಂಧಿಸಿದ ಬೇರೆ ಯಾವ ಶಾಸನಗಳೂ ನಮಗೆ ಇನ್ನೂ ದೊರೆಯದ್ದರಿಂದ ಈ ವಿದ್ಯಾಪೀಠವನ್ನು ಕುರಿತು ಹೆಚ್ಚಿಗೆ ಬರೆಯಲಿಕ್ಕೆ ನಮಗೆ ಸಾಧನಸಾಮಗ್ರಿಗಳೇ ಇಲ್ಲ. ಆದರೆ ಹುವೆನತ್ಸಾಂಗನು ಕರ್ನಾಟಕ ಸಾಮ್ರಾಜ್ಯವನ್ನು ವರ್ಣಿಸುವಾಗ ೨ ನೆಯ ಪುಲಿಕೇಶಿಯ ಧರ್ಮಕೃತ್ಯಗಳ ಪರಿಣಾಮವು ಬಹಳ ದೂರಿನ ವರೆಗೆ ಹಬ್ಬಿದೆ (His beneficient actions are felt over a great distance) ಎಂದು ಬರೆಯುತ್ತಾನೆ. ಈ ಬರಹದ ಉದ್ದೇಶವು ಏನಿರಬಹುದೆಂಬುದು ಚೆನ್ನಾಗಿ ಗೊತ್ತಾಗುವುದಿಲ್ಲ. ಪುಲಿಕೇಶಿಯು ದೇವರಿಗಾಗಲಿ ಬ್ರಾಹ್ಮಣರಿಗಾಗಲಿ ಭೂಮಿಯನ್ನು ದಾನಕೊಟ್ಟದು ಮಾತ್ರ ಇದ್ದರೆ, ಆ ದಾನದ ಪರಿಣಾಮವು ಬಹಳ ದೂರಿನ ವರೆಗೆ ಹಬ್ಬಲಾರದು; ಆಯಾ ಸ್ಥಳಿಕರಿಗೆ ಮಾತ್ರ ಆ ದಾನದಿಂದ ಪ್ರಯೋಜನವಾಗಬಹುದು. ಆದ್ದರಿಂದ ೨ ನೆಯ ಪುಲಿಕೇಶಿಯು ತನ್ನ ಅಜ್ಜನು ಸ್ಥಾಪಿಸಿದ

---

* ಹಿಂದೆ ಭಾಗ ೨ ಅ. ೨ ಪು. ೨೧೩—೧೪.

ಅಯ್ಯೊವೊಳೆಯ ವಿದ್ಯಾಪೀಠಕ್ಕೆ ಉದಾರಾಶ್ರಯವನ್ನು ಕೊಟ್ಟುದರಿಂದ ಅಲ್ಲಿ ಕಲಿತು ಪಂಡಿತರಾಗಿ ಹೋದ ವಿದ್ವಾಂಸರನ್ನು ದೂರದೂರಿನ ನಾಡುಗಳಲ್ಲಿ ಕಂಡು ಹುವೆಸುತ್ತಾನ್ಸ್ವಾಂಗನು ಈ ಮೇರೆಗೆ ಪುಲಕೇಶಿಯ ಧರ್ಮಕೃತ್ಯಗಳನ್ನು ವರ್ಣಿಸಿರಬಹುದೆಂಬ ಅನುಮಾನವು ನನ್ನ ಮನಸ್ಸಿನಲ್ಲಿ ನಲಿದಾಡುತ್ತದೆ. ಆದರೂ ಈ ಅತ್ಯಲ್ಪ ಪ್ರಮಾಣಗಳಿಂದ ಅನುಮಾನವಾಡುವುದು ಸರಿಯಲ್ಲೆಂದು ಹೇಳಿ, ಆ ನಲಿದಾಟವನ್ನು ನಿಲ್ಲಿಸಿ, ಈ ಅನುಮಾನವನ್ನು ಬಲಪಡಿಸುವ ಬೇರೆ ಪ್ರಮಾಣಗಳು ದೊರೆಯುವ ವರೆಗೆ ಈ ಪ್ರಶ್ನವನ್ನು ಕಾಲಪುರುಷನಿಗೆ ಒಪ್ಪಿಸಿ, ಅವನ ತೀರ್ಪನ್ನು ಎದುರುನೋಡುತ್ತ ಸುಮ್ಮನೆ ಕೂಡುವುದೇ ಸರಿಯಾದ ಕೆಲಸವೆಂದು ನನ್ನ ತಿಳಿವಳಿಕೆಯು ನಿರ್ದಾಕ್ಷಿಣ್ಯವಾಗಿ ನನಗೆ ಅಪ್ಪಣೆಕೊಡುತ್ತದೆ.

ಓದುಳ್ಳರು ತಂತಮ್ಮ ಪಾಂಡಿತ್ಯದಿಂದಲೂ ಒಕ್ಕಲಿಗರು ತಮ್ಮ ಬೇಸಾಯದಿಂದಲೂ ಗಟ್ಟಿಗರು ದಂಡಿನ ಊಳಿಗದಿಂದಲೂ ವೈದಿಕರು ದೇವತಾಸೇವೆಯಿಂದಲೂ ಉದರನಿರ್ವಾಹ ಮಾಡುತ್ತಿದ್ದರೆಂದು ಮೇಲೆ ಬರೆದಿರುತ್ತೇವಷ್ಟೇ. ಇಷ್ಟು ದೊಡ್ಡ ನಾಡಿಗೆ ಇಷ್ಟು ತುಸು ಕಸಬುಗಳು ಸಾಕಾಗಲಾರವು. ಮಂಗಳೇಶನ ದಂಡು ಹಡಗಿನಲ್ಲಿ ಹೋಗಿ ರೇವತೀ ದ್ವೀಪವನ್ನು ಮುತ್ತಿದ್ದರಿಂದಲೂ ೨ ನೆಯ ಪುಲಿಕೇಶಿಯು ಜಲಮಾರ್ಗದಿಂದ ದಂಡೆತ್ತಿ ಹೋಗಿ ಪುರಿಯನ್ನು ಹಿಡಿದುಕೊಂಡಿದ್ದರಿಂದಲೂ ಕೊಂಕಣದ ಜನರು ಹಡಗು ಕಟ್ಟುವುದರಲ್ಲಿಯೂ ಹಡಗು ನಡಿಸುವುದರಲ್ಲಿಯೂ ನಿಪುಣರಾಗಿದ್ದರೆಂದು ತೋರುತ್ತದೆ. ಪಟ್ಟದಕಲ್ಲಿನಲ್ಲಿ ಲೋಕೇಶ್ವರ (ವಿರೂಪಾಕ್ಷ)ನ ಗುಡಿಯನ್ನು ಮನೋಹರವಾಗಿ ಕಟ್ಟಿದ **ಗುಂಡ**ನೆಂಬ ಶಿಲ್ಪಕಲಾಭಿಜ್ಞನ ಜಾಣತನಕ್ಕೆ ಮೆಚ್ಚಿ ೨ ನೆಯ ವಿಕ್ರಮಾದಿತ್ಯ ಮಹಾರಾಜಾಧಿರಾಜನು ಅವನಿಗೆ ಮೂಮೆಪರ್ಜರೆಪುಪಟ್ಟವೆಂಬ ಬಿರುದನ್ನು ಕೊಟ್ಟನೆಂದು ಹಿಂದೆ ೬೧೮ ನೆಯ ಪುಟದಲ್ಲಿ ಬರೆದಿರುತ್ತೇವಷ್ಟೇ. ಈ ಉದಾಹರಣೆಯಿಂದ ೮ ನೆಯ ಶತಮಾನದೊಳಗೆ ನಮ್ಮ ತಾಯ್ನಾಡಿನಲ್ಲಿ ಶಿಲ್ಪ ಕಲೆಯು ಹೆಚ್ಚೆಚ್ಚು ಬೆಳೆಯುತ್ತ ನಡೆದಿತ್ತೆಂದು ಅನುಮಾನಮಾಡಿದರೆ ತಪ್ಪಾಗಲಿಕ್ಕಿಲ್ಲೆಂದು ತೋರುತ್ತದೆ.

ಇದಲ್ಲದೆ ಎಷ್ಟೋಮಂದಿ ಬಡಿಗತನ, ಕಂಬಾರತನ, ಕುಂಬಾರಿಕೆ, ಕಂಚುಗಾರಿಕೆ, ನೆಯ್ಗಾರಿಕೆ, ಸಾವುಕಾರಿಕೆ, ಉಪ್ಪಾರಿಕೆ, ಕಲ್ಲುಕುಟಕತನ, ಜೇಪಾರ ಮುಂತಾದ ಹಲವು ತರದ ಉದ್ಯೋಗಗಳಿಂದ ಹೊಟ್ಟೆ ತುಂಬಿಕೊಳ್ಳುತ್ತಿದ್ದರೆಂದು ಹೇಳಬಹುದು.

ಇನ್ನು ರಾಜ್ಯಭಾರ ಕ್ರಮದ ಬಗ್ಗೆ ವಿಚಾರಮಾಡೋಣ. 'ಎಂತಹ ಪ್ರಜೆಗಳು ಅಂತಹ ಸರಕಾರ' ಎಂಬ ಪಾಶ್ಚಿಮಾತ್ಯರ ಗಾದೆಯು ತ್ರಿಕಾಲದಲ್ಲಿ ಅಬಾಧಿತವಾಗಿರುತ್ತದಷ್ಟೇ. ಪರಮಾತ್ಮ ಸ್ವರೂಪಿಯಾದ ಆತ್ಮವೇ ಮನುಷ್ಯನ ಮುಖ್ಯ ಭಾಗವು. ಅದನ್ನು ಕಾಪಾಡಿಕೊಳ್ಳುವುದಕ್ಕೋಸ್ಕರವೇ ಸ್ವಾಭಿಮಾನ ಸ್ವಾತಂತ್ರ್ಯಪ್ರೀತಿ ಶೌರ್ಯ ಧೈರ್ಯ ಸಾಹಸಾದಿ ಗುಣಗಳನ್ನು ಪರಮೇಶ್ವರನು ನಮಗೆ ದಯಪಾಲಿಸಿರುತ್ತಾನೆ. ಕಠೋಪನಿಷದದಲ್ಲಿ ಶರೀರವನ್ನು ರಥಕ್ಕೂ ಆತ್ಮನನ್ನು ರಥಹೊಡೆಯುವವನಿಗೂ ಹೋಲಿಸಿರುತ್ತಾರೆ*. ಕುಲಕ್ಕೋಸ್ಕರ ಒಬ್ಬ ಗೃಹಸ್ಥನನ್ನೂ ಗ್ರಾಮಕ್ಕೋಸ್ಕರ ಕುಲವನ್ನೂ ಜನಪದಕ್ಕೋಸ್ಕರ ಗ್ರಾಮವನ್ನೂ ಆತ್ಮಕ್ಕೋಸ್ಕರ ಪೃಥ್ವಿಯನ್ನೂ ಬಿಡುವುದು ಮನುಷ್ಯನ ಕರ್ತವ್ಯವಾಗಿರುತ್ತದೆಂದು ಮತ್ತೊಬ್ಬ ಮಹಾತ್ಮನು ಬರೆಯುತ್ತಾನೆ†. ಪೃಥ್ವಿಯನ್ನು ಬಿಡುವುದೆಂದರೆ ಪ್ರಾಣತ್ಯಾಗವಲ್ಲವೇ ? ಆ ಕಾಲದ ನಮ್ಮ ಪೂರ್ವಜರು ಸ್ವಾಭಿಮಾನ ಸ್ವಾತಂತ್ರ್ಯಪ್ರೀತಿ ಸೌಜನ್ಯಾದಿ ಗುಣಗಳ ಅಧಿಷ್ಠಾನವಾದ ಆತ್ಮನನ್ನು ಸಂರಕ್ಷಿಸುವುದಕ್ಕೋಸ್ಕರ ತಮ್ಮ ಪ್ರಾಣಗಳನ್ನಾದರೂ ತೊರೆಯಲಿಕ್ಕೆ ಹಿಂಜರಿಯುತ್ತಿದ್ದಿಲ್ಲ. ಇಂತಹ ಪ್ರಜೆಗಳನ್ನು ಆಳುವ ಅರಸರಿಗೆ ಜನರ ಹೆದರಿಕೆಯು ಇರಬೇಕಲ್ಲವೇ ? ಈ ತರದ ಅಂಜಿಕೆಯು ಆಳುವ ಅರಸರಿಗೂ ಅವರ ಕಯ್ಕೆಳಗಿನ ಅಧಿಕಾರಿಗಳಿಗೂ ಇದ್ದುದರಿಂದ ಅವರೆಲ್ಲರು ಪ್ರಜೆಗಳ ಸುಖದುಃಖಗಳನ್ನು ಸೂಕ್ಷ್ಮವಾಗಿ ವಿಚಾರಿಸುತ್ತಿದ್ದರಲ್ಲದೆ, ನಿಸ್ವಾರ್ಥಿಯಾದ ಪ್ರಮುಖ ಜನರ ಅಭಿಪ್ರಾಯಕ್ಕೆ ತುಂಬಾ ಮಾನಕೊಡುತ್ತಿದ್ದರು ; ತಪೋಸಿಧಿ

---

* ಆತ್ಮಾನಂ ರಥಿನಂ ವಿದ್ಧಿ ಶರೀರಂ ರಥಮೇವತು ॥

† ತ್ಯಜೇದೇಕಂ ಕುಲಸ್ಯಾರ್ಥೇ ಆತ್ಮಾರ್ಥೇ ಪೃಥಿವೀಂ ತ್ಯಜೇತ್ ॥

ಗಳೂ ನಿಸ್ವಾರ್ಥಿಗಳೂ ಆದ ಬ್ರಾಹ್ಮಣರ ವಾಕ್ಯವನ್ನು ವೇದ ವಾಕ್ಯದಂತೆ ಮನ್ನಿಸುತ್ತಿದ್ದರು; ಅವರು ಉಗಳು ಹಾಕಿದ್ದನ್ನು ದಾಟುತ್ತಿದ್ದಿಲ್ಲ. ಸ್ವಾರ್ಥಪರರಾದ ದುಷ್ಟಜನರನ್ನು ಲಂಚದಿಂದ ತಮ್ಮ ಕಡೆಗೆ ಒಡೆಕೊಂಡು ಅಲ್ಲದ ಸಲ್ಲದ ಕಾಯಿದೆಗಳನ್ನು ಮಾಡಿ ಪ್ರಜೆಗಳ ಕಷ್ಟಾರ್ಜಿತ ದ್ರವ್ಯವನ್ನು ಅಪಹರಿಸಲಿಕ್ಕೂ ಬಡಬಗ್ಗರ ಜೀವನವೃತ್ತಿಗಳನ್ನು ಕಸಿದುಕೊಳ್ಳಲಿಕ್ಕೂ ಆ ಕಾಲದ ಸರಕಾರದವರಿಗೆ ಧೈರ್ಯ ಸಾಲುತ್ತಿದ್ದಿಲ್ಲ. ಆ ಕಾಲದ ದಂಡಾಳುಗಳೂ ದಳವಾಯಿಗಳೂ ಸರಕಾರದವರು ತಮಗೆ ಕೊಡುವ ಇನಾಮು-ಸಂಬಳಗಳಿಗೆ ಮೋಹಿಸಿ ನಿರಪರಾಧಿಗಳಾದ ತಮ್ಮ ಜನರನ್ನು ಹಿಂಸಿಸಲಿಕ್ಕೆ ಎಂದೂ ಒಡಂಬಡುತ್ತಿದ್ದಿಲ್ಲ. ಅವರು ಪಾಪಭೀರುಗಳಾದ್ದರಿಂದ ಅವರ ಮನಸ್ಸಾಕ್ಷಿಯು ಯಾವಾಗಲೂ ಜಾಗೃತವಾಗಿತ್ತು. ಮುಖ್ಯವಾಗಿ ಆ ಕಾಲದ ನಮ್ಮ ಪೂರ್ವಜರಲ್ಲಿ ಅಸೂಯಾಹಂಕಾರ-ಸ್ವಾರ್ಥಪರತ್ವವೆಂಬ ದುರ್ಗುಣಗಳು ನೆಲೆಮಾಡಿಕೊಂಡಿದ್ದಿಲ್ಲಾದ್ದರಿಂದ ಆಗಿನ ಸರಕಾರವು ನಿರುಪದ್ರವಿಯಾಗಿಯೂ ಪ್ರಜಾಹಿತೈಕ-ದೃಷ್ಟಿಯುಳ್ಳದ್ದಾಗಿಯೂ ಇತ್ತೆಂದು ಧಾರಾಳವಾಗಿ ಹೇಳಬಹುದು. ದುಷ್ಟನಿಗ್ರಹ ಶಿಷ್ಟಪ್ರತಿಪಾಲನವೇ ಕದಂಬರಸರ ಮುಖ್ಯಧ್ಯೇಯವಾಗಿತ್ತು. ಬಾದಾಮಿ ಚಾಳುಕ್ಯರು ಅವರ ಸ್ಥಾನಾಪನ್ನರಾದ್ದರಿಂದ ಅದೇ ಧ್ಯೇಯವನ್ನು ತಮ್ಮ ಗುರಿಯಾಗಿಟ್ಟುಕೊಂಡರು. ತಂದೆಯು ಮಕ್ಕಳನ್ನು ಪೋಷಿಸುವಂತೆ ಪ್ರಜೆಗಳನ್ನು ಪಾಲಿಸುವುದು ತಮ್ಮ ಪರಮಧರ್ಮವೆಂದು ಅವರು ನೆರೆ ನಂಬಿದ್ದರು.

ಚಾಳುಕ್ಯ ಸಾರ್ವಭೌಮನು ಎಲ್ಲ ರಾಜ್ಯಕ್ಕೆ ಒಡೆಯನಾಗಿದ್ದನು. ಅವನು ಸರ್ವ ಸ್ವತಂತ್ರನಾದರೂ ತಿಪ್ಪಲುಗಾರನಾಗಿದ್ದಿಲ್ಲ. ಪ್ರಜೆಗಳು ತನ್ನ ಮಕ್ಕಳೆಂದೆಣಿಸಿ ಲೋಕಮತವನ್ನೂ ಶಿಷ್ಟರ ಉಪದೇಶವನ್ನೂ ಶಿರಸಾವಹಿಸಿ, ತನ್ನ ಪ್ರಜಾಪಾಲನೆಗೆ ಅವಶ್ಯವಿದ್ದಷ್ಟು ಹಣವನ್ನು ಮಾತ್ರ ತೆರಿಗೆಸುಂಕರೂಪದಿಂದ ತೆಗೆದುಕೊಳ್ಳುತ್ತಿದ್ದನು. ಸಾರ್ವಭೌಮನ ಕಯ್ಕೆಳಗಿನವರಾದ ಸಾಮಂತರೂ ಮಂಡಲೇಶ್ವರರೂ ತಂತಮ್ಮ ವಶದಲ್ಲಿದ್ದ ನಾಡುಗಳ ಒಳಾಡಳತವನ್ನು ಸಾಗಿಸುತ್ತಿದ್ದರು. ಸಾಮಂತರು ವಂಶಪರಂಪರರಾದ ಸರದಾರರಾಗಿದ್ದರು. ಮಂಡ

ಲೇಶ್ವರರು ತಾತ್ಪೂರ್ತಿಕ ಅಥವಾ ಹಂಗಾಮಿ ಅಧಿಪತಿಗಳಾಗಿದ್ದರು. ಸಾಮಂತರು ಗೊತ್ತುಮಾಡಿದ ವಾರ್ಷಿಕ ಪೊಗದಿಯನ್ನು ಕೊಟ್ಟು ಯುದ್ಧಕಾಲದಲ್ಲಿ ದಂಡಿನೊಡನೆ ನೆರವಾಗುತ್ತಿದ್ದರು. ಕಾಲ ಕಾಲಕ್ಕೆ ಸಾರ್ವಭೌಮರು ಕೊಟ್ಟ ಆಜ್ಞೆಯಂತೆ ನಡೆಯುವುದೇ ಮಂಡಲೇಶ್ವರರ ಕರ್ತವ್ಯವಾಗಿತ್ತು. ಈ ಇಬ್ಬರು ಅಧಿಕಾರಿಗಳಿಗೂ ಭೂಮಿಯನ್ನು ದಾನಕೊಡುವ ಅಧಿಕಾರವಿದ್ದಿಲ್ಲ. ಆದಕಾರಣ ಈ ದಾನವನ್ನು ಬಯಸುವವರು ಸಾರ್ವಭೌಮರ ಆಗಮನವನ್ನು ಹಾರೈಸುತ್ತ ಕೂಡ್ರುತ್ತಿದ್ದರು; ಅಥವಾ ಅವರು ಬೇಗನೆ ಬರುವ ಸಂಭವವಿಲ್ಲದಿದ್ದರೆ, ಮುಂಚಿತವಾಗಿಯೇ ಅವರ ಅಪ್ಪಣೆಯನ್ನು ಪಡೆದು ಸ್ಥಾನಿಕ ಪ್ರತಿನಿಧಿಗಳು ಈ ದಾನವನ್ನು ಕೊಡುತ್ತಿದ್ದರು. ಈ ಸಾಮಂತ ಮಂಡಲೇಶ್ವರರು ತಿರುಗಿಬಿದ್ದಾಗ ಚಕ್ರವರ್ತಿಗಳೇ ದಂಡೆತ್ತಿಹೋಗಿ ಅವರನ್ನು ದಂಡಿಸಬೇಕಾಗುತ್ತಿತ್ತು.

ಸಾರ್ವಭೌಮರ ತರುವಾಯ ಯುವರಾಜರೇ ರಾಜ್ಯದ ಮುಖ್ಯಾಧಿಕಾರಿಯಾಗಿದ್ದರು. ಈ ಯುವರಾಜರೂ ಚಕ್ರವರ್ತಿಯ ಚಿಕ್ಕಮಕ್ಕಳೂ ದೊಡ್ಡ ದೊಡ್ಡ ಪ್ರಾಂತಗಳ ಮಂಡಲೇಶ್ವರರಾಗುತ್ತಿದ್ದರು ಅಥವಾ ರಾಜಧಾನಿಯಲ್ಲೇ ನಿಂತು ರಾಜಕಾರ್ಯದಲ್ಲಿಯೂ ದಂಡಯಾತ್ರೆಗಳಲ್ಲಿಯೂ ಸಾರ್ವಭೌಮರಿಗೆ ನೆರವಾಗುತ್ತಿದ್ದರು. ಪ್ರತಿಯೊಬ್ಬ ಯುವರಾಜನೂ ತನ್ನ ತಂದೆಯ ದಿಗ್ವಿಜಯದಲ್ಲಿ ನೆರವಾದನೆಂಬುದು ಹಿಂದೆ ಕೊಟ್ಟ ವರ್ಣನೆಯಿಂದ ಗೊತ್ತಾಗಿರಬಹುದು. ಬಾದಾಮಿ ಚಾಳುಕ್ಯ ಚಕ್ರವರ್ತಿಗಳೊಳಗೆ ಮಂಗಳೇಶ, ೧ ನೆಯ ವಿಕ್ರಮಾದಿತ್ಯ ಇವರಿಬ್ಬರು ಮಾತ್ರ ಅತಿಲೋಭಾವಿಷ್ಟರಾದ ಮಹತ್ವಾಕಾಂಕ್ಷಿಗಳಾದ್ದರಿಂದ ತಮ್ಮ ಹಕ್ಕು ಬಾಧ್ಯತೆಯಿಲ್ಲದೆ ಬಾದಾಮಿ ಪಟ್ಟವನ್ನು ಬಯಸಿ ತಮಗೂ ತಮ್ಮ ಮನೆತನದ ರಾಜ್ಯವೈಭವಕ್ಕೂ ಕೇಡು ತಂದುಕೊಂಡರು. ಇವರ ಸ್ವಾರ್ಥಪರತ್ವವೇ ಬಾದಾಮಿ ಸಾಮ್ರಾಜ್ಯದ ಅಳಿವಿಗೆ ಪರಂಪರೆಯಾದ ಕಾರಣವಾಗಿತ್ತೆಂದು ಬರೆಯಲಿಕ್ಕೆ ಅಡ್ಡಿಯಿಲ್ಲ. ಬಾದಾಮಿ ಚಾಳುಕ್ಯರ ಸಾಮ್ರಾಜ್ಯವು ಬೇರೂರಿದ್ದಿಲ್ಲೆಂದು ಹೇಳಬಹುದು.

ಆ ಕಾಲದಲ್ಲಿ ರಾಜಕಾರ್ಯದ ವಿಭಾಗಗಳು ಈಗಿನಂತೆ ಹೆಚ್ಚಾಗಿ ಬೆಳೆದಿದ್ದಿಲ್ಲ. ಸಾರ್ವಭೌಮರಿಗೆ ಸಹಾಯಮಾಡಲಿಕ್ಕೆ ಅಷ್ಟಪ್ರಧಾನರಿರದೆ ತ್ರಿಪ್ರಧಾನರು ಮಾತ್ರ ಇದ್ದರೆಂದು ತೋರುತ್ತದೆ. ಶಿರಪ್ರಧಾನ ಅಥವಾ ಮುಖ್ಯಪ್ರಧಾನನ ಅವಶ್ಯಕತೆಯು ಆ ಕಾಲದಲ್ಲಿ ಇನ್ನೂ ಕಂಡುಬಂದಿದ್ದಿಲ್ಲ. ದಂಡನಾಯಕರೇ ಪಡೆವಳರೂ ಮುಖ್ಯ ಪ್ರಧಾನರೂ ಆಗಿದ್ದರೆಂದು ತೋರುತ್ತದೆ. ಮೈಸೂರ ಸಂಸ್ಥಾನ ಕೋಲಾರ ತಾಲೂಕು ಒಕ್ಕಲೇರಿ ಎಂಬ ಹಳ್ಳಿಯಲ್ಲಿ ದೊರೆತ ೨ ನೆಯ ಕೀರ್ತಿವರ್ಮನ ಶಾಸನದ ಕೊನೆಯಲ್ಲಿ—

"ಇತಿ ಮಹಾ ಸಾಂಧಿವಿಗ್ರಹಿಕ ಶ್ರೀಮದನಿವಾರಿತ ಧನಂಜಯ ಪುಣ್ಯವಲ್ಲಭಸ್ಯ ಲಿಖಿತಮಿದಂ ಶಾಸನಂ।"

ಎಂದು ಬರೆದುದರಿಂದ ಸಾಂಧಿವಿಗ್ರಹಿಕ (ಯುದ್ಧಮೈತ್ರಿಯ ಕೆಲಸ ಮಾಡುವ) ಮಂತ್ರಿಯೊಬ್ಬನಿದ್ದನೆಂದು ತೋರುತ್ತದೆ. ಪೊಗದಿ ಸುಂಕ ತೆರಿಗೆ ಮುಂತಾದ ಹಣದ ಲೆಕ್ಕಿಗರ ಮೇಲ್ವಿಚಾರಕನೊಬ್ಬನು ಅತ್ಯವಶ್ಯವಾಗಿ ಬೇಕಾಗಿದ್ದುದರಿಂದ ಅವನ ಹೆಸರು ಯಾವ ಶಾಸನದಲ್ಲಿಯೂ ಬಾರದಿದ್ದರೂ ಆ ಕೆಲಸವನ್ನು ಮಾಡುತ್ತಿದ್ದ ಮಂತ್ರಿಯೊಬ್ಬನು ಇದ್ದಿರಬೇಕೆಂದು ಊಹಿಸುತ್ತೇನೆ.

ಇನ್ನು ಬಾದಾಮಿ ಚಾಳುಕ್ಯ ಸಾರ್ವಭೌಮರ ಕಾಲದಲ್ಲಿ ಅಂದರೆ ೬ ನೆಯ, ೭ ನೆಯ ಮತ್ತು ೮ ನೆಯ ಶತಮಾನಗಳಲ್ಲಿ ನಮ್ಮ ತಾಯ್ನುಡಿಯು ಎಷ್ಟುಮಟ್ಟಿಗೆ ತಲೆಯೆತ್ತಿತ್ತೆಂಬುದನ್ನು ಯಥಾಶಕ್ತಿ ವಿವರಿಸಿ, ಈ ಅಧ್ಯಾಯವನ್ನು ಮುಗಿಸುವೆವು.

ನಮ್ಮ ತಾಯ್ನುಡಿಯ ಪ್ರಾಚೀನತೆಯ ಬಗ್ಗೆ ಎಳ್ಳಷ್ಟಾದರೂ ಸಂಶಯವಿಲ್ಲ. ಪ್ರಥಮ ತೀರ್ಥಂಕರನಾದ ಋಷಭದೇವನ ಕುಮಾರಿ **ಬ್ರಾಹ್ಮಿ** ಎಂಬವಳು ಕನ್ನಡವೇ ಮೊದಲಾದ ೧೮ ಲಿಪಿಗಳನ್ನು ನಿರ್ಮಿಸಿದಂತೆ ಜೈನರಲ್ಲಿ ಇತಿಹಾಸವಿದೆ ಎಂದು ಪ್ರಾಕ್ತನ ವಿಮರ್ಶ ವಿಚಕ್ಷಣ ರಾವಬಹದ್ದೂರ ರಾಮಾನುಜಪುರ ನರಸಿಂಹಾಚಾರ್ಯರು ಬರೆಯುತ್ತಾರೆ. ಕ್ರಿಸ್ತ ಶಕದ ೨ ನೆಯ ಶತಮಾನದಲ್ಲಿ ಬರೆದ ಒಂದು

ಗ್ರೀಕ ನಾಟಕವಲ್ಲಿ "ಬೇರೆ ಕೊಂಚ ಮಧುಪಾತ್ರಕ್ಕೆ ಹಾಕಿ; ಪಾನಂ ಬೇರೆತ್ತಿ ಕಟ್ಟಿ ಮಧುವಂ ಬೇರೆತ್ತುವೆನ್" ಎಂಬ ಕನ್ನಡ ವಾಕ್ಯಗಳಿರುತ್ತವೆಂದು ಡಾ॥ ಹುಲ್ಲ ಎಂಬ ಪಂಡಿತರು ಬರೆಯುತ್ತಾರೆ. ನಮಗೆ ಈಗ ದೊರೆತ ಗ್ರಂಥಗಳಲ್ಲಿ ರಾಷ್ಟ್ರಕೂಟ ಸಾರ್ವಭೌಮನಾದ ನೃಪತುಂಗ (೮೧೪–೭೭) ನ **ಕವಿರಾಜಮಾರ್ಗ**ವೆಂಬ ಅಲಂಕಾರ ಗ್ರಂಥವೇ ಮೊದಲನೆಯದಾಗಿರುತ್ತದೆ. ಇದು ೯ ನೆಯ ಶತಮಾನದ ಗ್ರಂಥವಾದರೂ ಇದರಲ್ಲಿ ಅವನು ತನ್ನ ಹಿಂದೆ ಆಗಿಹೋದ ಎಷ್ಟೋ ಕವಿಗಳ ಉದಾಹರಣೆಗಳನ್ನು ಕೊಟ್ಟಿರುತ್ತಾನೆ. ನೃಪತುಂಗನ ಹಿಂದಿನ ಕವಿಗಳಲ್ಲಿ ಬಾದಾಮಿ ಚಾಳುಕ್ಯರ ಕಾಲದಲ್ಲಿದ್ದ ಕನ್ನಡ ಕವಿಗಳ ಹೆಸರುಗಳನ್ನೂ ಅವರವರ ವಿಷಯವಾಗಿ ನಮಗೆ ತಿಳಿದ ಸಂಗತಿಗಳನ್ನೂ ಕೆಳಗೆ ಕೊಡುತ್ತೇವೆ:—

ಕ್ರಿಸ್ತ ಶಕದ ಮುಂಚಿನ ಶತಮಾನಗಳಿಂದ ನಮ್ಮ ತಾಯ್ನುಡಿಯಲ್ಲಿ ಗ್ರಂಥಗಳಾಗಿದ್ದುವೆಂಬುದಕ್ಕೆ ಸಬಲವಾದ ಪ್ರಮಾಣಗಳಿದ್ದರೂ ೯ ನೆಯ ಶತಮಾನದ ವರೆಗಿನ ಕನ್ನಡ ಗ್ರಂಥಗಳು ಇನ್ನೂ ದೊರೆಯದೆ ಇದ್ದುದು ನಮ್ಮ ಉದಾಸೀನತೆಯ ಪರಿಣಾಮವೋ ನಮ್ಮ ದುರ್ದೈವವೋ ಏನೆಂಬುದನ್ನು ವಾಚಕಮಹಾಶಯರೇ ವಿಚಾರಮಾಡಬಹುದು. ಕರ್ನಾಟಕ ಕವಿಚರಿತೆಯ ಪ್ರಥಮ ಸಂಪುಟದ ಆರಂಭದಲ್ಲಿ ಹೇಳಿದ **ಸಮಂತಭದ್ರ, ಕವಿಪರಮೇಷ್ಠಿ, ಪೂಜ್ಯಪಾದ**ರೆಂಬ ಜೈನ ಘನವಿದ್ವಾಂಸರು ಕನ್ನಡದಲ್ಲಿ ಗ್ರಂಥಗಳನ್ನು ಬರೆದರೋ ಇಲ್ಲೋ ಎಂಬ ಸಂಶಯವು ನಮ್ಮ ಮನಸ್ಸನ್ನು ತಲ್ಲಣಿಸುತ್ತದೆ. ಆದ್ದರಿಂದ ೭ ನೆಯ ಶತಮಾನದ ಮಧ್ಯಭಾಗದಲ್ಲಿದ್ದ ಶ್ರೀವರ್ಧದೇವನೇ ನಮಗೆ ನಿಶ್ಚಯವಾಗಿ ಗೊತ್ತಾದ ಮೊದಲನೆಯ ಕನ್ನಡ ಕವಿಯಾಗಿದ್ದನೆಂದು ಧಾರಾಳವಾಗಿ ಹೇಳಬಹುದು. ಇವನಿಗೆ **ತುಂಬಲೂರಾಚಾರ್ಯ**ನೆಂಬ ಮತ್ತೊಂದು ಹೆಸರಿತ್ತು. ಕನ್ನಡ ನುಡಿಯು ಶಾಸ್ತ್ರೀಯ ಉದ್ಗ್ರಂಥಗಳನ್ನು ಬರೆಯಲಿಕ್ಕೆ ಯೋಗ್ಯವಾದುದೆಂತಲೂ ಮೊದಲು ಶ್ರೀವರ್ಧದೇವನು ೯೬೦೦೦ ಶ್ಲೋಕಗಳುಳ್ಳ **ಚೂಡಾಮಣಿ**ಯೆಂಬ

ಉಪಲಭ್ಯವಾದ ಮಹಾ ಶಾಸ್ತ್ರ ಗ್ರಂಥವನ್ನು ಆ ಭಾಷೆಯಲ್ಲಿ ಬರೆದಿರು ತ್ತಾನೆಂತಲೂ ಭಟ್ಟಾಕಲಂಕನು ತನ್ನ ಶಬ್ದಾನುಶಾಸನವೆಂಬ ಕನ್ನಡ ನುಡಿಯ ಸಂಸ್ಕೃತ ವ್ಯಾಕರಣ ಗ್ರಂಥದಲ್ಲಿ ಬರೆದಿದ್ದಾನೆ (೧೬೦೪)*. ಇಂದ್ರನಂದಿಯೆಂಬ ಮತ್ತೊಬ್ಬ ಜೈನ ಪಂಡಿತನು ಶ್ರುತಾವತಾರವೆಂಬ ತನ್ನ ಸಂಸ್ಕೃತ ಗ್ರಂಥದಲ್ಲಿ ತುಂಬಲೂರಾಚಾರ್ಯನು ೮೪೦೦೦ ಸಂಖ್ಯೆ ಯುಳ್ಳ ಚೂಡಾಮಣಿ ವ್ಯಾಖ್ಯಾನವನ್ನು ಕನ್ನಡದಲ್ಲಿ ಬರೆದು ಅದರ ೬ ನೆಯ ಖಂಡಕ್ಕೆ ೭೦೦೦ ಗ್ರಂಥ ಸಂಖ್ಯೆಯುಳ್ಳ ಪಂಚಿಕೆಯನ್ನು ಪುನಃ ಮಾಡಿದನೆಂದು ಬರೆದಿದ್ದಾನೆ †. ಈ ಚೂಡಾಮಣಿ ಗ್ರಂಥವು ದೊರೆಯದಿದ್ದರೂ ಈ ಇಬ್ಬರ ಸ್ಪಷ್ಟವಾದ ಬರಹದಿಂದ ಶ್ರೀವರ್ಧದೇವನ **ಚೂಡಾಮಣಿಯು** ಕನ್ನಡ ಗ್ರಂಥವಾಗಿತ್ತೆಂಬುದಕ್ಕೆ ಸಂದೇಹವಿಲ್ಲ. ಇನ್ನು ಶ್ರವಣಬೆಳ್ಗೊಳದ ೬೭ ನೆಯ ಶಾಸನದಲ್ಲಿ ಪ್ರಸಿದ್ಧ ಸಂಸ್ಕೃತ ಕವಿಯಾದ ದಂಡಿಯು ಶ್ರೀವರ್ಧದೇವನನ್ನು ಹೊಗಳಿದನೆಂದು ಬರೆದುದ ರಿಂದ ಈ ತುಂಬಲೂರಾಚಾರ್ಯನು ಸುಮಾರು ೬೫೦ರಲ್ಲಿ ಇದ್ದನೆಂದು ಕವಿಚರಿತೆಕಾರರು ಊಹಿಸುತ್ತಾರೆ. ಈ ಅನುಮಾನವು ಸರಿಯಾಗಿದ್ದರೆ ಚೂಡಾಮಣಿಯೆಂಬ ದೊಡ್ಡ ಶಾಸ್ತ್ರ ಗ್ರಂಥವು ಬಾದಾಮಿ ಚಾಳುಕ್ಯರು ತಮ್ಮ ರಾಜಧಾನಿಯನ್ನು ಕಳೆಕೊಂಡು ತೊಳಲುತ್ತಿರುವಾಗ ರಚಿಸಲ್ಪ ಟ್ಟಿತೆಂದು ಹೇಳಬಹುದು.

ಇದಕ್ಕೂ ೫೦ ವರ್ಷಗಳ ಹಿಂದೆ ದುರ್ವಿನೀತನೆಂಬ ಗಂಗರಸನು ಕನ್ನಡದಲ್ಲಿ ಯಾವುದೋ ಒಂದು ಗ್ರಂಥವನ್ನು ಬರೆದನೋ ಏನೋ ಎಂಬ ಸಂಶಯವು ಮನಸ್ಸನ್ನು ತಲ್ಲಣಿಸುತ್ತವೆ. ಏಕೆಂದರೆ, ನೃಪ

---

* ನಚೈವಾ (ಕರ್ನಾಟಕ ಭಾಷಾ) ಶಾಸ್ತ್ರಾನುಪಯೋಗಿನೀ. ತತ್ತ್ವಾರ್ಥ ಮಹಾ ಶಾಸ್ತ್ರ ವ್ಯಾಖ್ಯಾನಸ್ಯ ಷಣ್ಣವತಿ ಸಹಸ್ರ ಪ್ರಮಿತ ಗ್ರಂಥ ಸಂದರ್ಭರೂಪಸ್ಯ ಚೂಡಾಮಣ್ಯಭಿ ಧಾನಸ್ಯ . . . ಉಪಲಭ್ಯಮಾನತ್ವಾತ್.

† ಕರ್ನಾಟ ಭಾಷಯಾ ಕೃತಮಹತೀಂ ಚೂಡಾಮಣಿಂ ವ್ಯಾಖ್ಯಾಂ।
ಸಪ್ತ ಸಹಸ್ರ ಗ್ರಂಥಾಂ ಷಷ್ಠಸ್ಯ ಚ ಪಂಚಿಕಾಂ ಪುನರಕಾರ್ಷೀತ್ ॥

—ಕವಿಚರಿತೆ ಸಂ. ೧, ಪು. ೮.

ತುಂಗನು ತನ್ನ ಕವಿರಾಜಮಾರ್ಗದಲ್ಲಿ ದುರ್ವಿನೀತನೆಂಬೊಬ್ಬ ಗದ್ಯ ಗ್ರಂಥಕಾರನ ಹೆಸರನ್ನು ಕೊಟ್ಟಿದ್ದಾನೆ. ಆದರೆ ಈ ದುರ್ವಿನೀತನು ಗಂಗರಸನಾಗಿದ್ದನೆಂಬುದಾಗಲಿ ಅವನು ಯಾವ ಕನ್ನಡ ಗ್ರಂಥವನ್ನು ಬರೆದನೆಂಬುದಾಗಲಿ ತಿಳಿದುಕೊಳ್ಳಲಿಕ್ಕೆ ನಮಗೆ ಯಾವ ಆಧಾರವೂ ಇನ್ನೂ ದೊರೆತಿಲ್ಲ.

ಶ್ರೀವರ್ಧದೇವನ ಸಮಕಾಲೀನನಾದ **ಶಾಮಕುಂದಾಚಾರ್ಯ**ನೆಂಬ ಜೈನ ಪಂಡಿತನು **ಪ್ರಾಭೃತ** (ಕಾಣಿಕೆ) ಎಂಬ ಪುಸ್ತಕವನ್ನು ಕನ್ನಡದಲ್ಲಿ ಬರೆದನೆಂದು ಇಂದ್ರನಂದಿಯೆಂಬ ಒಬ್ಬ ಸಂಸ್ಕೃತ ಜೈನ ಕವಿಯು ತನ್ನ ಶ್ರುತಾವತಾರನೆಂಬ ಗ್ರಂಥದಲ್ಲಿ ಬರೆದಿದ್ದಾನೆ*. ಆದರೆ ಈ ಗ್ರಂಥವಾದರೂ ಇನ್ನೂ ದೊರೆತಿಲ್ಲ !!!

ಈ ಮೇರೆಗೆ ಪ್ರಾಭೃತ ಚೂಡಾಮಣಿಗಳೆಂಬ ಎರಡು ಕನ್ನಡ ಗ್ರಂಥಗಳು ಬಾದಾಮಿ ಚಾಳುಕ್ಯರ ಕಾಲದಲ್ಲಿ ಆದವೆಂಬುದಕ್ಕೆ ಸಂದೇಹ ವಿಲ್ಲ. ಆದರೆ ಈ ಗ್ರಂಥಗಳಿಗಾಗಲಿ ಬೇರೆ ಯಾವ ಕನ್ನಡ ಗ್ರಂಥಗಳಿಗಾಗಲಿ ಚಾಳುಕ್ಯ ಸಾರ್ವಭೌಮರು ತಮ್ಮ ಆಶ್ರಯವನ್ನು ಕೊಡದ್ದರಿಂದ ಅವರು ಕನ್ನಡಿಗರಾಗಿದ್ದರೋ ಇಲ್ಲೋ? ಅವರಿಗೆ ಕನ್ನಡದ ಅಭಿಮಾನವಿತ್ತೋ ಇಲ್ಲೋ ಎಂಬ ಪ್ರಶ್ನಗಳು ವಾಚಕರ ಮನಸ್ಸಿನಲ್ಲಿ ಬರಬಹುದು. ನಮಗೆ ತಿಳಿದಮಟ್ಟಿಗೆ ಈ ಪ್ರಶ್ನಗಳನ್ನು ಬಿಡಿಸಿ ಓದುವವರ ಸಂಶಯವನ್ನು ದೂರಮಾಡಲಿಕ್ಕೆ ಯತ್ನಿಸುವೆವು.

ಬಾದಾಮಿ ಚಾಳುಕ್ಯರು ಸುಮಾರು ೨೦೭ ವರ್ಷ (೫೫೦-೭೫೭) ಆಳಿದರು. ಮೊದಲಿನ ನೂರು ವರ್ಷಗಳು ರಾಜ್ಯವನ್ನು ಸ್ಥಾಪಿಸುವುದರಲ್ಲಿಯೂ, ಮಂಗಳೇಶನ ರಾಜ್ಯಲೋಭದ ಮೂಲಕ ಉಂಟಾದ ಒಳಜಗಳದಲ್ಲಿಯೂ ೨ ನೆಯ ಪುಲಕೇಶಿಯ ದಿಗ್ವಿಜಯದಲ್ಲಿಯೂ ಅವನ ಮಕ್ಕಳೊಳಗೆ ಹುಟ್ಟಿದ ಒಳಜಗಳದ ಕಡಾಟದಲ್ಲಿಯೂ ಕಳೆದು

* ಕಾಲೇ ತತಃ ಕಿಯತ್ಯಪಿ ಗತೇ ಪುನಃ ಶ್ಯಾಮಕುಂದಸಂಜ್ಞೇನ।
ಪ್ರಾಕೃತ ಸಂಸ್ಕೃತ ಕರ್ಣಾಟಕ ಭಾಷಯಾ ಪದ್ಧತಿಃ ಪರಾ ರಚಿತಾ ॥
—ಕವಿಚರಿತೆ ಸಂ. ೧, ಪು. ೧೨.

ಹೋದವು. ಚೂಡಾಮಣಿ ಪ್ರಾಭೃತ ಗ್ರಂಥಗಳು ಹೊರಬಿದ್ದಾಗ ಚಾಳುಕ್ಯ ರಾಜಧಾನಿಯಾದ ವಾತಾಪಿಯು ಪಲ್ಲವರ ಕಯ್ಯೇರಿದ್ದರಿಂದ ಚಾಳುಕ್ಯ ಅರಸುಮಕ್ಕಳು ಕಂಗೆಟ್ಟು ಕಳವಳಿಸುತ್ತಿದ್ದರು. ಇಂತಹ ದುರ್ಧರ ಪ್ರಸಂಗದಲ್ಲಿ ಆಶ್ರಯಬೇಡುವುದಕ್ಕಾಗಲಿ ಕೊಡುವುದಕ್ಕಾಗಲಿ ಆಸ್ಪದವಿದ್ದಿಲ್ಲ. ಇದಲ್ಲದೆ ಈ ಜೈನ ಗ್ರಂಥಗಳು ಮತಗ್ರಂಥಗಳಾದ್ದರಿಂದ ವೇದಧರ್ಮಿಗಳಾದ ಚಾಳುಕ್ಯರಿಗೆ ಅವುಗಳನ್ನು ತೋರಿಸಬೇಕೆಂಬ ಇಚ್ಛೆಯಾದರೂ ಆ ಗ್ರಂಥಕರ್ತರ ಮನಸ್ಸಿನಲ್ಲಿ ಹುಟ್ಟಿರಲಿಕ್ಕಿಲ್ಲ. ಮುಂದಿನ ೧೦೭ ವರ್ಷಗಳಲ್ಲಿಯೂ ಸಾಮ್ರಾಜ್ಯದೊಳಗೆ ಶಾಂತಿಯು ನೆಲೆಗೊಂಡಿದ್ದಿಲ್ಲ. ಪಲ್ಲವರ ಪುಂಡಾಟವೂ ಹಗೆಗಳ ಕಾಟವೂ ನಡೆದೇ ಇದ್ದವು. ವಿಜಯಾದಿತ್ಯ ಮಹಾರಾಜನು ಒಮ್ಮೆ ಶತ್ರುಗಳ ಕಯ್ಯಲ್ಲಿ ಸಿಕ್ಕು ಸೆರೆಯಾಳಾಗಿದ್ದನೆಂದು ಹಿಂದೆ ಬರೆದಿರುತ್ತೇವೆ. ಆ ಕಾಲದಲ್ಲಿ ನಮ್ಮ ತಾಯ್ನುಡಿಯ ಬಗ್ಗೆ ನಮ್ಮ ಪೂರ್ವಜರಲ್ಲಿದ್ದ ಉದಾಸೀನತೆಯ ಮತ್ತೊಂದು ಕಾರಣವನ್ನು ಇಲ್ಲಿ ಹೇಳಬಹುದು. ಕ್ರಿಸ್ತ ಶಕದ ೧ ನೆಯ ಶತಮಾನದಿಂದ ೧೨ ನೆಯ ಶತಮಾನದ ವರೆಗೆ ನಮ್ಮ ಪೂರ್ವಜರು ತಮ್ಮ ತಾಯ್ನುಡಿಯಲ್ಲಿ ಉದಾಸೀನರಾಗಿ ತಮ್ಮ ಸಾಕುತಾಯಿಯಾದ ಸಂಸ್ಕೃತವನ್ನೇ ವಿಶ್ವಾಸ ಪ್ರೀತಿಗಳಿಂದ ಒಲೈಸುತ್ತಿದ್ದಿರಬಹುದೆಂದು ತೋರುತ್ತದೆ. ಸಂಸ್ಕೃತವು ದೇವಭಾಷೆಯಾದ್ದರಿಂದ ಅದರಲ್ಲೇ ದೇವರನ್ನು ಸ್ತುತಿಸಬೇಕೆಂತಲೂ ಅದರಲ್ಲೇ ಗ್ರಂಥಗಳನ್ನು ಬರೆಯಬೇಕೆಂತಲೂ ಅದರಿಂದಲೇ ಜನರಿಗೆ ಧರ್ಮೋಪದೇಶಮಾಡಬೇಕೆಂತಲೂ ಅವರು ನೆರೆನಂಬಿದ್ದರು. ಆದ್ದರಿಂದ ಆರಂಭದಿಂದ ೧೨ ನೆಯ ಶತಮಾನದ ವರೆಗೆ ಜೈನೇತರರು ಕನ್ನಡದಲ್ಲಿ ಬರೆದ ಗ್ರಂಥಗಳ ಹೆಸರೇ ಕಂಡುಬರುವುದಿಲ್ಲ. ಜನರು ಮಾತಾಡುವ ನುಡಿಯಲ್ಲೇ ಉಪದೇಶಮಾಡಿದರೆ ತಮ್ಮ ಮತವು ಬೇಗನೆ ಹಬ್ಬುವದೆಂಬ ತತ್ವವನ್ನು ಜೈನರು ಮಾತ್ರ ಕಂಡುಹಿಡಿದು ಕನ್ನಡದಲ್ಲಿ ಸಾವಿರಾರು ಗ್ರಂಥಗಳನ್ನು ಬರೆದರು. ಯಾವುದೇ ಉದ್ದೇಶದಿಂದಾಗಲಿ ಜೈನರು ನಮ್ಮ ತಾಯ್ನುಡಿಯ ಮೇಲೆ ಮಾಡಿದ ಉಪಕಾರವನ್ನು ಎಷ್ಟು ಹೊಗಳಿದರೂ ಕಡಮೆ ಎಂದು ಧಾರಾಳವಾಗಿ ಹೇಳಬಹುದು. ಸನಾ

ತನ ಧರ್ಮದ ನಮ್ಮ ಪೂರ್ವಜರು ಸಂಸ್ಕೃತ ಭಾಷೆಯ ಕಟ್ಟಭಿಮಾನಿಗಳಾಗಿ ಆ ನುಡಿಯಲ್ಲಿ ಹಲವು ಉದ್ಗ್ರಂಥಗಳನ್ನು ಬರೆದು ಹಳೆಗ್ರಂಥಗಳನ್ನು ಜೀವಕ್ಕಿಂತ ಹೆಚ್ಚು ಜತನದಿಂದ ಕಾಪಾಡಿ ಇಟ್ಟುದರಿಂದ ಅವರಿಗೂ ನಮ್ಮ ಜೈನ ಮತದ ಪೂರ್ವಜರು ನಮ್ಮ ತಾಯ್ನುಡಿಯಲ್ಲಿ ನಾನಾ ತರದ ಉತ್ತಮ ಗ್ರಂಥಗಳನ್ನು ಬರೆದು ಅವನ್ನು ಸಂಸ್ಕೃತಕ್ಕೆ ಸಮಾನವಾಗಿ ಮಾಡಲಿಕ್ಕೆ ವಿಶೇಷ ಪ್ರಯತ್ನ ಪಟ್ಟುದರಿಂದ ಅವರಿಗೂ ನಾವು ಅತ್ಯಂತ ಕೃತಜ್ಞರಾಗಿರುವುದು ನಮ್ಮ ಅತಿ ಪವಿತ್ರವಾದ ಕರ್ತವ್ಯವೇ ಸರಿ.

ಇನ್ನು ಚಾಳುಕ್ಯರು ಕನ್ನಡಿಗರಾಗಿದ್ದರೋ ಇಲ್ಲೊ ಎಂಬುದೊಂದು ಪ್ರಶ್ನವು ಮಾತ್ರ ಉಳಿಯಿತು. ಅವರು ಕನ್ನಡಿಗರೇ ಆಗಿದ್ದರೆಂದು ಹಿಂದೆ ಬರೆದಿರುತ್ತೇನಷ್ಟೆ*. ಈ ಸಿದ್ಧಾಂತವನ್ನು ಬಲಪಡಿಸುವ ಕಾರಣಗಳನ್ನು ನನಗೆ ತಿಳಿದ ಮಟ್ಟಿಗೆ ಕೆಳಗೆ ಕೊಡುತ್ತೇನೆ:—

೧. ಬಾದಾಮಿ ಚಾಳುಕ್ಯರು ಭರತಖಂಡದ ಬೇರೆ ಭಾಗದಿಂದ ಕರ್ನಾಟಕದ ಮೇಲೆ ದಂಡೆತ್ತಿಬರಲಿಲ್ಲ. ಆದಕಾರಣ ಅವರು ಇಲ್ಲೇ ವಾಸಮಾಡಿಕೊಂಡಿದ್ದರೆನ್ನಲಿಕ್ಕೆ ಅಡ್ಡಿಯಿಲ್ಲ.

೨. ಬಾದಾಮಿ ಚಾಳುಕ್ಯ ಸಾರ್ವಭೌಮರ ಶಾಸನಗಳು ನಮಗೆ ನೂರಾರು ದೊರೆತಿದ್ದರೂ ಅವುಗಳೊಳಗೆ ಒಂದರಲ್ಲಿಯಾದರೂ ತಮ್ಮ ಮೂಲಪುರುಷರು ಬೇರೆ ಸ್ಥಳದಿಂದ ದಂಡೆತ್ತಿ ಇಲ್ಲಿಗೆ ಬಂದರೆಂಬ ಉಲ್ಲೇಖವಿಲ್ಲ.

೩. ಕಲ್ಯಾಣದ ಚಾಳುಕ್ಯರು ಬಾದಾಮಿ ಚಾಳುಕ್ಯರ ವಂಶದವರಾದರೂ ಅವರು ತಮ್ಮ ೧೧ ನೆಯ ಶತಮಾನದ ಶಾಸನಗಳಲ್ಲಿ ತಮ್ಮ ಮೂಲಪುರುಷರು ಅಯೋಧ್ಯೆಯಲ್ಲಿ ಆಳುತ್ತಿದ್ದರೆಂದು ಹೇಳಿಕೊಂಡುದು ಜಂಬದ ಬಡಿವಾರವೆಂತಲೂ ಕಲ್ಪನೆಯ ತರಂಗವೆಂತಲೂ ಕಟ್ಟುಕಥೆಯೆಂತಲೂ ಸುಳ್ಳುಮಾತೆಂತಲೂ ಎಲ್ಲ ಪ್ರಾಕ್ತನ ವಿಮರ್ಶವಿಚಕ್ಷಣರು ನಿಸ್ಸಂದೇಹವಾಗಿ ಒಪ್ಪಿಕೊಂಡಿದ್ದಾರೆ.

---

* ಹಿಂದೆ ಭಾ. ೨, ಅ. ೨, ಪು. ೧೯೮.

೪. ಮೊದಲನೆಯ ಪುಲಿಕೇಸಿಯ ತಂದೆ ಅಜ್ಜಂದಿರಾದ ರಣರಾಗ ಜಯಸಿಂಹರು ಕದಂಬರ ಕಯ್ಕೆಳಗೆ ಸಾಮಂತರಾಗಿದ್ದರೆಂಬ ಡಾ॥ ಫ್ಲೀಟರ ಊಹೆಯನ್ನು ಎಲ್ಲ ಶೋಧಕರು ಅನುಮೋದಿಸುತ್ತಾರೆ.

೫. ಎರಡುಮೂರು ತಲೆ ಕರ್ನಾಟಕದಲ್ಲಿ ಇದ್ದವರೆಲ್ಲ ಕನ್ನಡಿಗರಾದ್ದರಿಂದ ಜಯಸಿಂಹ ರಣರಾಗರ ಪೌತ್ರಪುತ್ರನಾದ ೧ನೆಯ ಪುಲಿಕೇಸಿಯೂ ಅವನ ಹಿಂದೆ ಆದ ಸಾರ್ವಭೌಮರೂ ಕನ್ನಡಿಗರಾಗಿದ್ದರೆಂದು ಹೇಳಲಿಕ್ಕೆ ಏನೂ ಅಡ್ಡಿಯಿಲ್ಲ.

೬. ಬಾದಾಮಿ ಚಾಳುಕ್ಯರ ಮನೆತನದವರೊಳಗೆ ಕೆಲವು ಗಂಡಸರ ಮತ್ತು ಹೆಂಗಸರ ಹೆಸರುಗಳು ಶುದ್ಧ ಕನ್ನಡ ಹೆಸರುಗಳಾಗಿರುತ್ತವೆ. ಉ. ಪಿರಿಯ ತೈಲಪ, ಮುಕುಂದಿಯ ಕೊಂಡ ಕುಂದಿಯ ಭೀಮ, ಚಾಕವ್ವೆ ಮು.

೭. ಮೊದಲನೆಯ ಕೀರ್ತಿವರ್ಮನ ಆಳಿಕೆಯಲ್ಲಿ ಬಾದಾಮಿಯ ವೈಷ್ಣವಗವಿಯ ಮುಂದೆ ಮಂಗಳೇಶನು ನಿಲ್ಲಿಸಿದ ಶಿಲಾಲೇಖವೇ ವಾತಾಪಿ ಚಾಳುಕ್ಯ ಸಾರ್ವಭೌಮರ ಮೊದಲನೆಯ ಶಿಲಾಲೇಖವಾಗಿದ್ದು ಅದು ಕನ್ನಡ ನುಡಿಯಲ್ಲಿ ಕೊರೆಯಲ್ಪಟ್ಟಿದೆ (೫೬೮). ಇದೇ ಕನ್ನಡ ನುಡಿಯಲ್ಲಿ ಬರೆದ ಮೊದಲನೆಯ ಶಾಸನವೆಂದು ಡಾ॥ ಫ್ಲೀಟರು ಸ್ಪಷ್ಟವಾಗಿ ಬರೆಯುತ್ತಾರೆ*.

೮. ಬಾದಾಮಿ ಚಾಳುಕ್ಯ ಸಾರ್ವಭೌಮರ ಮುಂದಿನ ಎಲ್ಲ ಶಾಸನಗಳು ಕನ್ನಡ ನುಡಿಯಲ್ಲಿಯಾಗಲಿ ಕನ್ನಡ ಲಿಪಿಯಲ್ಲಿಯಾಗಲಿ ಇರುತ್ತವೆ. ೭೫೪ ನೆಯ ಇಸ್ವಿಯ ಪಟ್ಟದಕಲ್ಲಿನ ಶಾಸನದಲ್ಲಿ ಕೆಲ ಭಾಗವು ಕನ್ನಡ ಲಿಪಿಯಲ್ಲಿಯೂ ಕೆಲ ಭಾಗ ನಾಗರೀ ಲಿಪಿಯಲ್ಲಿಯೂ ಇರುತ್ತದೆ. ಇದೇ ಕರ್ನಾಟಕದಲ್ಲಿ ದೊರೆತ ನಾಗರೀಲಿಪಿಯ ಮೊದಲನೆಯ ಶಾಸನವು†.

೯. ವಿಜಯಾದಿತ್ಯ (೬೯೬–೭೩೩) ನ ತಂಗಿಯಾದ ಕುಂಕುಮ ಮಹಾದೇವಿಯು ಲಕ್ಷ್ಮೇಶ್ವರದಲ್ಲಿ ಕಟ್ಟಿಸಿಕೊಟ್ಟ ಜೈನ ಬಸದಿಗೆ

---

* ಮುಂಬಯಿ ಇಲಾಖೆಯ ಗ್ಯಾಜಟಿಯರ ಸಂ. ೧, ಭಾ. ೨, ಪು. ೩೪೮, ಟಿಪ್ಪಣಿ ೧.

† ಸದರ ಪು. ೩೭೭, ಟಿಪ್ಪಣಿ ೩.

ಆನೆ ಸೆಜ್ಜೆಯ ಬಸದಿ ಎಂಬ ಕನ್ನಡ ಹೆಸರಿತ್ತು. ಇದಲ್ಲದೆ ತನ್ನ ಪಟ್ಟದ ರಾಣಿಯ ಗುಡಿಯಾದ ಲೋಕೇಶ್ವರದೇವಾಲಯವನ್ನು ಅಂದವಾಗಿ ಕಟ್ಟಿದ ಗುಂಡನೆಂಬ ಶಿಲ್ಪಿಗೆ ೨ನೆಯ ವಿಕ್ರಮಾದಿತ್ಯನು **ಮೂನೆ ಪೆರ್ಜರೆಪುಪಟ್ಟ**ವೆಂಬ ಅಚ್ಚಗನ್ನಡ ಬಿರುದನ್ನು ಕೊಟ್ಟನು.

೧೦. ಆ ಕಾಲಕ್ಕೆ ಬಾದಾಮಿ ಚಾಳುಕ್ಯರ ದಂಡನ್ನು ಕರ್ನಾಟಕದ ದಂಡೆಂದು ಕರೆಯುತ್ತಿದ್ದರು. ದಂತಿದುರ್ಗನೆಂಬ ರಾಷ್ಟ್ರಕೂಟನು ಈ ಚಾಳುಕ್ಯರ ರಾಜ್ಯವನ್ನು ಕಿತ್ತಿಕೊಂಡನಷ್ಟೇ. ಕಾಂಚಿಯ ದೊರೆಯನ್ನೂ ಕೇರಳ ಚೋಳ ಪಾಂಡ್ಯ ಅರಸರನ್ನೂ ಹರ್ಷನನ್ನೂ ವಜ್ರಟನನ್ನೂ ಸೋಲಿಸಿ ಹೆಸರುವಾಸಿಯಾದ **ಕರ್ನಾಟಕ** ದಂಡನ್ನು ತಾನು ಗೆದ್ದೆನೆಂದು ಸಾಮಾನಗಡದ ಶಾಸನದಲ್ಲಿ ಈ ದಂತಿದುರ್ಗನು ಹೊಗಳಿಕೊಂಡಿದ್ದಾನೆ (೫ ಜನವರಿ, ೭೫೪).

—:0:—

ಪರಿಶಿಷ್ಟ

೨ ನೆಯ ಪುಲಿಕೇಸಿಯ ಕಾಲದ ರವಿಕೀರ್ತಿಯ ಅಯ್ಹೊಳೆಯ ಶಾಸನವು

೧. ಜಯತಿ ಭಗವಾನ್ಜಿನೇನ್ದ್ರೋ ವೀತಜರಾಮರಣಜನ್ಮನೋ ಯಸ್ಯ ಜ್ಞಾನಸಮುದ್ರಾನ್ತರ್ಗ್ಗ[ತ] ಮಖಿಲ ಜ್ಜಗದನ್ತರೀಪಮಿವ ॥ ತದನು ಚಿರಮಪ್ರ[ಮೇ] ಯಶ್ಚಳುಕ್ಯಕುಲವಿಪುಲಜಲನಿಧಿರ್ಜ್ಜಯತಿ ॥ ಪೃಥ್ವೀಮೌಲಿಲಲಾಮ್ನಾಂ ಯಃ ಪ್ರಭವತಿ ಪುರುಷರತ್ನಾನಾಂ ॥ ಶೂರೇ ವಿದುಷಿ ಚ ವಿಭಜನ್ದಾನಮ್ಮಾನಞ್ಚ ಯುಗಪದೇಕತ್ರ ।

೨. ಅವಿಹಿತ ಯಾಥಾಸಂ[ಖ್ಯೋ] [ಜ]ಯತಿ ಚ ಸತ್ಯಾಶ್ರಯಸ್ಸುಚಿರಮ್ ॥ ಪೃಥ್ವೀವಲ್ಲಭಶಬ್ದೋ ಯೇಷಾಮನವರ್ತ್ಥತಾಞ್ಚಿರಞ್ಜಾತಃ । ತದ್ವಂಶೇಷು ಜಿಗೀಷಿಷು ತೇಷು ಬಹುಷ್ವಪ್ಯತೀತೇಷು ॥ ನಾನಾಹೇತಿ ಶತಾಭಿಘಾತ ಪತಿತ ಭ್ರಾಂತಾಶ್ವಪತ್ತಿದ್ವಿಪೇ ನೃತ್ಯದ್ಭೀಮ ಕವನ್ಧ ಖಡ್ಗಕಿರಣ ಜ್ವಾಲಾ ಸಹಸ್ರೇ ರಣೇ ।

೩. ಲಕ್ಷ್ಮೀರ್ಭಾವಿತಚಾಪಲಾಪಿ ಚ ಕೃತಾ ಶೌರ್ಯ್ಯೇಣ ಯೇನಾತ್ಮಸಾದ್ರಾಜಾಸೀಜ್ಜಯಸಿಂಹವಲ್ಲಭ ಇತಿ ಖ್ಯಾತಶ್ಚಳುಕ್ಯಾನ್ವಯಃ ॥ ತದಾತ್ಮಜೋಭೂದ್ರಣರಾಗನಾಮಾ ದಿವ್ಯಾನುಭಾವೋ ಜಗದೇಕನಾಥಃ । ಅಮಾನುಷತ್ವಂ ಕಿಲ ಯಸ್ಯ ಲೋಕಸ್ಸುಪ್ತಸ್ಯ ಜಾನಾತಿ ವಪುಃ ಪ್ರಕರ್ಷಾತ್ ॥ ತಸ್ಯಾಭವತ್ತನೂಜಃ ಪೊಲೆಕೇಶೀ ಯಃ ಶ್ರಿತೇನ್ದುಕಾನ್ತಿರಪಿ ।

೪. ಶ್ರೀವಲ್ಲಭೋಪ್ಯಯಾಸೀದ್ವಾತಾಪಿಪುರೀವಧೂವರತಾಂ ॥ ಯತ್ತ್ರಿವರ್ಗ್ಗಪದವೀಮಲಂ ಕ್ಷಿತೌ ನಾನುಗಂತುಮಧುನಾಪಿ ರಾಜಕಮ್ ॥ ಭೂಶ್ಚ ಯೇನ ಹಯಮೇಧಯಾಜಿನಾ ಪ್ರಾಪಿತಾವಭೃತಮಜ್ಜನಾ ಬಭೌ ॥ ನಳಮೌರ್ಯ್ಯಕದಂಬಕಾಳರಾತ್ರಿಸ್ತನಯಸ್ತಸ್ಯ ಬಭೂವ ಕೀರ್ತ್ತಿವರ್ಮ್ಮಾ । ಪರದಾರ ನಿವೃತ್ತಚಿತ್ತವೃತ್ತೇರಪಿ ಧೀರ್ಯ್ಯಸ್ಯ ರಿಪುಶ್ರೀ—

೫. ಯಾಸುತ್ಪಷ್ಟಾ । ರಣಪರಾಕ್ರಮಲಬ್ಧಜಯಶ್ರಿಯಾ ಸಪದಿ ಯೇನ ವಿರುಗ್ಣಮಶೇಷತಃ । ನೃಪತಿಗನ್ಧಗಜೇವ ಮಹೌಜಸಾ ಪೃಥುಕದಂಬ–ಕದಂಬ–ಕದಂಬಕಮ್ ॥

ತಸ್ಮಿನ್ಸುರೇಶ್ವರ ವಿಭೂತಿಗತಾಭಿಲಾಷೇ ರಾಜಾ—ಭವತ್ತದನುಜಃ ಕಿಲ ಮಙ್ಗಳೀಶಃ। ಯಃ ಪೂರ್ವ್ವ ಪಶ್ಚಿಮ ಸಮುದ್ರತಟೋಷಿತಾಶ್ವ ಸೇನಾರಜಃಪಟವಿನಿರ್ಮ್ಮಿತ ದಿಗ್ವಿತಾನಃ ॥ ಸ್ಫುರನ್ಮಯೂಖೈರಸಿದೀಪಿಕಾಶತೈಃ ॥

೬. ವ್ಯುದಸ್ಯ ಮಾತಂಗತಮಿಸ್ರಸಞ್ಚಯಮ್। ಅವಾಪ್ತವಾನ್ಯೋ ರಣರಂಗಮಂದಿರೇ ಕಟಚ್ಚುರಿಶ್ರೀಲಲನಾಪರಿಗ್ರಹಮ್ ॥ ಪುನರಪಿ ಚ ಜಿಘೃಕ್ಷೋಸ್ಸೈನ್ಯಮಾಕ್ರಾನ್ತಸಾಲಂ ರುಚಿರಬಹುಪತಾಕಂ ರೇವತೀದ್ವೀಪಮಾಶು। ಸಪದಿ ಮಹದುದನ್ವತ್ತೋಯಸಂಕ್ರಾನ್ತಬಿಂಬಂ ವರುಣಬಲಮಿವಾಭೂದಾಗತಂ ಯಸ್ಯವಾಚಾ । ತಸ್ಯಾಗ್ರಜಸ್ಯ ತನಯೋ ನಹುಷಾನುಭಾವೇ ಲಕ್ಷ್ಮ್ಯಾ ಕಿಲಾಭಿ—

೭. ಲಷಿತೇ ಪೊಲೆಕೇಶಿನಾಮ್ನಿ। ಸಾಸೂಯಮಾತ್ಮನಿ ಭವನ್ತಮತಃ ಪಿತೃವ್ಯಂ ಜ್ಞಾತ್ವಾಪರುದ್ಧಚರಿತ ವ್ಯವಸಾಯಬುದ್ಧೌ ॥ ಸ ಯದುಪಚಿತ [ಮ]ನ್ತ್ರೋತ್ಸಾಹಶಕ್ತಿಪ್ರಯೋಗಕ್ಷಪಿತ ಬಲ ವಿಶೇಷೋ ಮಂಗಳೀಶಸ್ಸಮನ್ತಾತ್। ಸ್ವತನಯಗತ ರಾಜ್ಯಾರಂಭಯತ್ನೇನ ಸಾರ್ದ್ಧಂ ನಿಜಮತನು ಚ ರಾಜ್ಯಂಜೀವಿತಞ್ಚೋಜ್ಝತಿಸ್ಮ । ತಾವತ್ತಚ್ಛತ್ರಭಂಗೇ ಜಗದಖಿಲಮರಾತ್ಯನ್ಧಕಾರೋಪರುದ್ಧಂ

೮. ಯಸ್ಯಾಸಹ್ಯಪ್ರತಾಪದ್ಯುತಿತತಿಭಿರಿವಾಕ್ರಾನ್ತಮಾಸೀತ್ಪ್ರಭಾತಮ್। ನೃತ್ಯದ್ವಿದ್ಯುತ್ಪತಾಕೈಃ ಪ್ರಜವಿನಿ ಮರುತಿ ಕ್ಷುಣ್ಣಪರ್ಯ್ಯನ್ತಭಾಗೈರ್ಗ್ಗರ್ಜ್ಜದ್ಭಿರ್ವಾರಿವಾಸ್ಥೈ*ರಳಿಕುಲಮಲಿನಂ ವ್ಯೋಮ ಯಾತಂ ಕದಾ ವಾ ॥ ಲಬ್ಧ್ವಾ ಕಾಲಂ ಭುವಮುಪಗತೇ ಜೇತುಮಾಪ್ಪಾಯಿಕಾಖ್ಯೇ ಗೋವಿನ್ದೇ ಚ ದ್ವಿರದನಿಕರೈರುತ್ತರಾಂ ಭೈಮರಥ್ಯಾಃ। ಯಸ್ಯಾನೀಕೈರ್ಯ್ಯುಧಿ ಭಯರಸಜ್ಞತ್ವಮೇಕಃ ಪ್ರಯಾತಸ್ತತ್ರಾವಾಪ್ತಂ ಫಲಮುಪಕೃತಸ್ಯಾ—

೯. ಪರೇಣಾಪಿ ಸದ್ಯಃ ॥ ವರದಾತುಙ್ಗತರಙ್ಗರಙ್ಗವಿಲಸದ್ಧಂಸಾವಳೀಮೇಖಲಾಂ ವನವಾಸೀಮವಮೃದ್ನತಸ್ಸುರಪುರಪ್ರಸ್ಪರ್ಧಿನೀಂ ಸಮ್ಪದಾ। ಮಹತಾ ಯಸ್ಯ ಬಲಾರ್ಣ್ಣವೇನ ಪರಿತಸ್ಸಞ್ಛಾದಿತೋರ್ವ್ವೀತಲಂ। ಸ್ಥಲದುರ್ಗ್ಗಂಜಲದುರ್ಗ್ಗತಾಮಿವ ಗತಂ ತತ್ತತ್ಕ್ಷಣೇ ಪಶ್ಯತಾಂ ॥ ಗಙ್ಗಾಳುಪೇನ್ದ್ರಾ ವ್ಯಸನಾನಿ ಸಪ್ತ ಹಿತ್ವಾ ಪುರೋಪಾರ್ಜ್ಜಿತ ಸಂಪದೋಪಿ। ಯಸ್ಯಾನುಭಾವೋಪನತಾಸ್ಸದಾಸನ್ನಾ—

---

* Read ವಾಹೈ.

೧೦. ಸನ್ನಸೇವಾಮೃತಪಾನಶೌಂಡಃ ॥ ಕೊಂಕಣೇಷು ಯದಾದಿಷ್ಟಚಣ್ಡದಣ್ಡಾಮ್ಬು
ವೀಚಿಭಿಃ। ಉದಸ್ತಾಸ್ತರಸಾ ಮೌರ್ಯ್ಯಪಲ್ವಲಾಮ್ಬುಸಮೃದ್ಧಯಃ ॥ ಅಪರಜಲ
ಧೇರ್ಲ್ಲಕ್ಷ್ಮೀ [ಂ] ಯಸ್ಮಿನ್ ಪುರೀಮ್ಪುರಭಿತ್ಪ್ರಭೇ ಮದಗಜಘಟಾಕಾರೈರ್ನ್ನಾವಾಂ
ಶತೈರವಮೃದ್ನತಿ। ಜಲದಪಟಲಾನೀಕಾಕೀರ್ಣ್ಣನವೋತ್ಪಲಮೇಚಕಞ್ಜಲಧಿರಿವ
ವ್ಯೋಮ ವ್ಯೋಮ್ನಸ್ಸ—

೧೧. ಮೋ ಭವದಮ್ಬುಭಿಃ † ಪ್ರತಾಪೋಪನತಾ ಯಸ್ಯ ಲಾಟಮಾಳವಗೂರ್ಜ್ಜರಾಃ।
ದಣ್ಡೋಪನತಸಾಮನ್ತಚರ್ಯ್ಯಾಚಾರ್ಯಾ ಇವಾಭವನ್ ॥ ಅಪರಿಮಿತವಿಭೂತಿ
ಸ್ಫೀತ ಸಾಮನ್ತಸೇನಾಮಕುಟ ಮಣಿಮಯೂಖಾಕ್ರಾನ್ತಪಾದಾರವಿನ್ದಃ। ಯುಧಿ
ಪತಿತಗಜೇನ್ದ್ರಾನೀಕ ಬೀಭತ್ಸಭೂತೋ ಭಯವಿಗಳಿತಹರ್ಷೋ ಯೇನಚಾಕಾರಿ
ಹರ್ಷಃ ॥ ಭುವಮುರುಭಿರನೇಕೈಶ್ಶಾ—

೧೨. ಸತೋ ಯಸ್ಯರೇವಾವಿವಿಧಪುಳಿನಶೋಭಾವನ್ಧ್ಯವಿನ್ಧ್ಯೋಪಕಣ್ಠಃ। ಅಧಿಕ
ತರಮುರಾಜತ್ಸ್ವೇನ ತೇಜೋಮಹಿಮ್ನಾ ಶಿಖರಿಭಿರಿಭವರ್ಜ್ಯೋ ವರ್ಷ್ಮಣಾಸ್ಪರ್ದ್ಧ
ಯೇವ ॥ ವಿಧಿವದುಪಚಿತಾಭಿಶ್ಶಕ್ತಿಭಿಶ್ಶಕ್ರಕಲ್ಪಸ್ತಿಸೃಭಿರಪಿ ಗುಣಾಘೈಸ್ಸ್ವೈಶ್ಚ
ಮಾಹಾಕುಲಾದ್ಯೈಃ। ಅಗಮ–ದಧಿಪತಿತ್ತ್ವಂ ಯೋ ಮಹಾರಾಷ್ಟ್ರಕಾಣಾಂ
ನವನವತಿಸಹಸ್ರಗ್ರಾಮಭಾಜಂ ತ್ರಯಾಣಾಂ ॥ ಗೃಹಿಣಾಂ ಸ್ವ—

೧೩. ಸ್ವಗುಣೈಸ್ತ್ರಿವರ್ಗ್ಗತುಙ್ಗಾ ವಿಹಿತಾನ್ಯಕ್ಷಿತಿಪಾಲಮಾನಭಙ್ಗಾ। ಅಭವನ್ನು
ಪಜಾತಭೀತಿಲಿಙ್ಗಾ ಯದನೀಕೇನ ಸಕೋ[ಶ*] ಲಾಃ ಕಲಿಙ್ಗಾಃ ॥ ಪಿಷ್ಟಂ
ಪಿಷ್ಟಪುರಂ ಯೇನ ಜಾತಂ ದುರ್ಗ್ಗಮದುರ್ಗ್ಗಮಞ್ಚಿತ್ರಂ ಯಸ್ಯ ಕಲೇರ್ವೃತ್ತಂ
ಜಾತಂ ದುರ್ಗ್ಗಮದುರ್ಗ್ಗಮಂ ॥ ಸನ್ನದ್ಧವಾರಣಘಟಾಸ್ಥಗಿತಾನ್ತರಾಳಂ
ನಾನಾಯುಧಕ್ಷತನರಕ್ಷತಜಾಙ್ಗರಾಗಂ। ಆಸೀಜ್ಜಲಂ ಯದವಮರ್ದ್ದಿತಮಭ್ರ
ಗರ್ಭಂ ಕೌನಾಳಮಾ—

೧೪. ಮ್ಬರಮಿವೋಜಿತಸಾನ್ಧ್ಯರಾಗಂ ॥ ಉದ್ಧೂತಾಮಲಚಾಮರಧ್ವಜಶತಚ್ಛತ್ರಾನ್ಧ
ಕಾರೈರ್ಬ್ಬಲೈಃಶೌರ್ಯ್ಯೋತ್ಸಾಹರಸೋದ್ಧತಾರಿಮಥನೈರ್ಮ್ಮೌಲಾದಿಭಿಷ್ಷಡ್ವಿಧೈಃ।
ಆಕ್ರಾನ್ತಾತ್ಮಬಲೋನ್ನತಿಂ ಬಲರಜಸ್ಸಞ್ಛನ್ನಕಾಞ್ಚೀಪುರ ಪ್ರಾಕಾರಾ

---

† Read ಧಿಃ.

ನ್ತರಿತಪ್ರತಾಪಮಕರೋದ್ಯಃಪಲ್ಲವಾನಾಮ್ಪತಿಂ ॥ ಕಾವೇರೀ ದ್ರುತಶಫರೀವಿಲೋಲ ನೇತ್ರಾ ಚೋಳಾನಾಂ ಸಪದಿ ಜಯೋದ್ಯತಸ್ಯಯಸ್ಯ । ಪ್ರಶ್ಚ್ಯೋತನ್ಮದಗಜಸೇ—

೧೫. ತುರುದ್ಧನೀರಾ ಸಂಸ್ಪರ್ಶಂ ಪರಿಹರತಿ ಸ್ಮ ರತ್ನರಾಶೇಃ ॥ ಚೋಳಕೇರಳಪಾಣ್ಡ್ಯಾನಾಂ ಯೋಭೂತ್ತತ್ರಮಹರ್ದ್ಧಯೇ । ಪಲ್ಲವಾನೀಕನೀಹಾರತುಹಿನೇತರದೀಧಿತಿಃ ॥ ಉತ್ಸಾಹಪ್ರಭುಮನ್ತ್ರಶಕ್ತಿಸಹಿತೇ ಯಸ್ಮಿನ್ ಸಮಸ್ತಾದಿಶೋ ಜಿತ್ವಾ ಭೂಮಿಪತೀನ್ವಿಸೃಜ್ಯ ಮಹಿತಾನಾರಾಧ್ಯ ದೇವದ್ವಿಜಾನ್ । ವಾತಾಪೀನ್ನಗರಂ ಪ್ರವಿಶ್ಯ ನಗರೀಮೇಕಾಮಿವೋರ್ವ್ವೀಮಿಮಾಂ ಚಞ್ಚನ್ನೀರಧಿನೀಲಪರಿಖಾಂ

೧೬. ಸತ್ಯಾಶ್ರಯೇ ಶಾಸತಿ ॥ ತ್ರಿಂಶತ್ಸು ತ್ರಿಸಹಸ್ರೇಷು ಭಾರತಾದಾಹವಾದಿತಃ । ಸಪ್ತಾಬ್ದಶತಯುಕ್ತೇಷು ಗತೇಷ್ವಬ್ದೇಷು ಪಞ್ಚಸು ॥ ಪಞ್ಚಾಶತ್ಸು ಕಲೌ ಕಾಲೇ ಷಟ್ಸು ಪಞ್ಚಶತಾಸು ಚ । ಸಮಾಸು ಸಮತೀತಾಸು ಶಾಕಾನಾಮಪಿ ಭೂಭುಜಾಂ॥ ತಸ್ಯಾಂಬುಧಿತ್ರಯನಿವಾರಿತ ಶಾಸನಸ್ಯ

೧೭. ಸತ್ಯಾಶ್ರಯಸ್ಯ ಪರಮಾಪ್ತವತಾ ಪ್ರಸಾದಂ। ಶೈಲಂ ಜಿನೇನ್ದ್ರಭವನಂ ಭವನಮ್ಮಹಿಮ್ನಾನ್ನಿರ್ಮ್ಮಾಪಿತಂ ಮತಿಮತಾ ರವಿಕೀರ್ತ್ತಿನೇದಂ ॥ ಪ್ರಶಸ್ತೇರ್ವ್ವಸತೇಶ್ಚಾಶಯಾಃ ಜಿನಸ್ಯ ತ್ರಿಜಗದ್ಗುರೋಃ ಕರ್ತ್ತಾ ಕಾರಯಿತಾಪಿ ರವಿಕೀರ್ತ್ತಿಃ ಕೃತೀಸ್ವಯಂ ॥ ಯೇನಂ ಯೋ ಜಿನವೇಶ್ಮಸ್ಥಿರಮರ್ತ್ಥವಿಧೌ ವಿವೇಕಿನಾ ಜಿನವೇಶ್ಮ । ಸವಿಜಯತಾಂ ರವಿಕೀರ್ತ್ತಿಃ ಕವಿತಾ—

೧೮. ಶ್ರಿತಕಾಳಿದಾಸಭಾರವಿಕೀರ್ತ್ತಿಃ ಶ್ರೀ ಮೂಲವಳ್ಳಿವೆಳ್ಮುತ್ತುಕವಾಡ ಮಚ್ಚನೂಗ್ಗಿಜಗ್ಗವೂಪ್ಪುಲಿಗೇಱಿತಿ ಗಣ್ಡವಗ್ರಾಮಾ ಇತಿ ಅಸ್ಯಭುಕ್ತಿಃ । ಗಿರೇಸ್ತಟಾತ್ಪಶ್ಚಿಮಾಭಿಗತ ನಿಮೂವಾರಿಯ್ಯಾವ [ತ್*] ಮಹಾವಥಾನ್ತಪುರಸ್ಯ ಸೀಮಾ ಉತ್ತರತಃ ದಕ್ಷಿಣತೋ

೧೯. . . . . ಗ . . ನ—

೨. ಮೊದಲನೆಯ ವಿಕ್ರಮಾದಿತ್ಯನ ಕರ್ನೂಲಿನ ತಾಮ್ರ ಶಾಸನಗಳು.

ಮೊದಲನೆಯ ತಗಡು.

೧. ಓಂ [॥*] ಜಯತ್ಯಾವಿಷ್ಕೃತಂ ವಿಷ್ಣೋರ್ವ್ವಾರಾಹಂಕ್ಷೋಭಿತಾರ್ಣ್ಣವಂ ದಕ್ಷಿಣೋನ್ನತದಂಷ್ಟ್ರಾಗ್ರವಿಶ್ರಾಂತ ಭುವ

೨. ನಂ ವಪುಃ [॥*] ಶ್ರೀಮತಾಂ ಸಕಲಭುವನ ಸಂಸ್ತೂಯಮಾನ ಮಾನವ್ಯಸ ಗೋತ್ರಾಣಾಂ ಹಾರಿತೀ—

೩. ಪುತ್ರಾಣಾಂ ಸಪ್ತಲೋಕಮಾತೃ [ಭಿಸ್ಸಪ್ತಮಾತೃ*] ಭಿರಭಿವರ್ದ್ಧಿತಾನಾಂ ಕಾರ್ತ್ತಿಕೇಯಪರಿರ[ಕ್ಷ*] ಣ ಪ್ರಾಪ್ತಕಲ್ಯಾ—

೪. ಣ ಪರಂಪರಾನಾಂ ಭಗವನ್ನಾರಾಯಣ ಪ್ರಸಾದಸಮಾಸಾದಿತವರಾಹಲಾ—

೫. ಞ್ಛನೇಕ್ಷಣಕ್ಷಣ ವಶೀಕೃತಾಶೇಷಮಹೀಭೃತಾಂ ಚಲಿಕ್ಯಾನಾಂ ಕುಲಮ—

೬. ಲಂಕರಿಷ್ಣೋರಶ್ವಮೇಧಾವಭೃತಸ್ನಾನಪವಿತ್ರೀಕೃತಗಾತ್ರಸ್ಯ ಶ್ರೀಪೊಲಿಕೇಶಿವಲ್ಲ-

೭. ಭಮಹಾರಾಜಸ್ಯ ಪ್ರಪೌತ್ರಃ ಪರಾಪ್ರಿ[1]ಮಾಕ್ರಾನ್ತ ವನವಾಸ್ಯಾಧಿಪರನೃಪತಿಮ—

೮. ಣ್ಡಲಪ್ರಣಿಬದ್ಧ ವಿಶುದ್ಧಕೀರ್ತ್ತೇಃ॥ ಶ್ರೀಕೀರ್ತ್ತಿವರ್ಮ್ಮ ಪೃಥ್ವೀವಲ್ಲಭ—

ಎರಡನೆಯ ತಗಡಿನ ಮೇಲ್ಬದಿ.

೯. ಮಹಾರಾಜಸ್ಯ ಪೌತ್ರಸ್ಸಮರಸಂಸಕ್ತ ಸಕಲೋತ್ತರಾಪಥೇಶ್ವರ ಶ್ರಿಹರ್ಷವರ್ದ್ಧ-

೧೦. ನ ಪರಾಜಯೋಪಲಬ್ಧಪರಮೇಶ್ವರಾಪರನಾಷಚೇಯಸ್ಯ[2]ಸತ್ಯಾಶ್ರಯಶ್ರೀಪೃ—

೧೧. ತಿವೀವಲ್ಲಭಮಹಾರಾಜಪರಮೇಶ್ವ [ರ*]ಸ್ಯ ಪ್ರಿಯತನಯಃ ಚಿತ್ರಕಂಠಾಖ್ಯ ಪ್ರವರ—

೧೨. ತುರಂಗಮೇನೇಕೇನೈವ ಪ್ರತೀತಾನೇಕ ಸಮರಮುಖೇಷು ರಿಪು(ಂ) ನೃಪತಿ ರುಧಿರ ಜಲಾಸ್ವಾ—

೧೩. ದನರಸನಾಯಮಾನ ಜ್ವಲದಮಲನಿಶಿತ ನಿಸ್ತ್ರಿಂಶಧಾರಯಾಧೃತಧರಣೀಧರ—

೧೪. ಧರ ಭುಮೆ[3]ಗಭೋಗ ಸದೃಶ ನಿಜಭುಜವಿಜಿತ ವಿಜಿಗೀಷು[ಃ*]॥ ಆತ್ಮಕವಚಾವ—

೧೫. ಮಗ್ನಾನೇಕಪ್ರಹಾರಸ್ಸ್ವಗುರೋಶ್ಶ್ರಿಯಮವನಿಪತಿತ್ರಿತಯಾಂತರಿತಾಮಾತ್ಮಸಾತ್ಕೃತ್ಯ ತ್ಯಕೃತ್ಯ—

೧೬. ಕಾಧಿಷ್ಠಿತಾಶೇಷರಾಜ್ಯಭರಸ್ತಸ್ಮಿನ್ ರಾಜ್ಯತ್ರಯೇ ವಿನಷ್ಟಾನಿ ದೇವಸ್ವ ಬ್ರಹ್ಮದೇ-

೧೭. ಯಾನಿ ಧರ್ಮ್ಮಯಶೋಭಿವೃದ್ಧಯೇ ಸ್ವಮುಖೇನ ಸ್ಥಾಪಿತವಾನ್॥ ರಣಶಿರಸಿ ರಿಪುನರೇಂದ್ರಾನ್

---

1. Read ಪರಾಕ್ರಮಾಕ್ರಾನ್ತ. 2. ಪರಮೇಶ್ವರಾಪರನಾಮಧೇಯಸ್ಯ.

3. ಭುಜಗ. (*) This sign shows that the letters enclosed within the brackets do not exist in the inscription.

ಎರಡನೆಯ ತಗಡಿನ ಹಿಂಬದಿ.

೧೮. ದಿಶಿ ದಿಶಿ ಜಿತ್ವಾ ಸ್ವವಂಶಜಾಂ ಲಕ್ಷ್ಮೀಂ ಪ್ರಾಪ್ಯ ಚ ಪರಮೇಶ್ವ[1]ರ ನಾಮನಿವಾರಿತ ವಿಕ್ರಮಾದಿ—

೧೯. ತ್ಯಃ ವಿಕ್ರಮಾದಿತ್ಯ ಸತ್ಯಾಶ್ರಯ ಶ್ರೀ ಪೃಥ್ವೀವಲ್ಲಭ ಮಹಾರಾಜಾಧಿರಾಜಪರ ಮೇಶ್ವ—

೨೦. ರಸ್ಸರ್ವಾನಾಜ್ಞಾಪಯತಿ [1*] ವಿದಿತಮಸ್ತು ವೋಽಸ್ಮಾಭಿಃ ಪ್ರವರ್ಧಮಾನ ವಿಜಯರಾಜ್ಯತೃತೀಯ ಸಂ—

೨೧. ವ(ಸ)ತ್ಸರೇ ಮಾತಾಪಿತ್ರೋರಾತ್ಮನಶ್ಚ ಪುಣ್ಯಯಶೋಭಿವೃದ್ಧಯೇ ಸಂಗಮ ಮಹಾ ಯಾತ್ರಾಯಾಂ ಪೌ—

೨೨. ರ್ಣ್ಣಮಾಸ್ಯಾಂ ಗೌತಮಸ [ಗೋತ್ರಾಯ*] ಪ್ರಭಾಕರಸ್ವಾಮಿನಃ ಪೌತ್ರಾಯ ವೇದವೇದಗಾಂ[2] ವಿದೇ ಪ್ರಭಾಕ—

೨೩. ರಸ್ವಾಮಿನೇ ನಳವಾಡಿವಿಷಯೇ ರತ್ನಗಿರಿನಾಮಗ್ರಾಮೇ ಗ್ರಾಮತಃ ಪೂರ್ವ್ವಂ ನಿಶ್ರಕ್ಷೋವಿಯಾ ರಾ—

೨೪. ಜಮಾನೇನ ವಿಂಶತ್ಯುತ್ತರಶತಂ ನಿವರ್ತ್ತನಂ ಕ್ಷೇತ್ರಮುದಕಪೂರ್ವ್ವಂ ದತ್ತಃ ಸರ್ವ್ವ ಬಾಧಾಪರಿ—

ಮೂರನೆಯ ತಗಡು.

೨೫. ಹಾರಃ [॥*] ಅಸ್ಮದ್ವ[ಂ]ಶ್ಯೈರನ್ಯೈಶ್ಚಾಗಾಮಿ ನೃಪತಿಭಿಃ ಸ್ವದತ್ತಿನಿರ್ವ್ವಿಶೇಷಂ ಪರಿಪಾಲನೀಯಂ

೨೬. ಅಸ್ಯಚ ಘಾತಕಃ ಪಞ್ಚಮಹಾಪಾತಕ ಸಂಯುಕ್ತೋ ಭವತಿ [॥*] ಸ್ವಂ ದಾತುಂ ಸುಮಹಚ್ಛಕ್ಯಂ

೨೭. ದುಃಖಮನ್ಯಸ್ಯಪಾಲನಂ ದಾನಂ ವಾ ಪಾಲನಂವೇತಿ ದಾನಾಚ್ಛ್ರೇಯೋನುಪಾಲ ನಮಿತಿ ॥ ಉಕ್ತಂಚ ಮನು—

೨೮. ನಾ ಬಹುಭಿರ್ವ್ವಸುಧಾ ಭುಕ್ತಾ ರಾಜಭಿಸ್ಸಗರಾದಿಭಿಃ ಯಸ್ಯ ಯಸ್ಯಯದಾ

೨೯. ಭೂಮಿಸ್ತಸ್ಯ ತಸ್ಯ ತದಾ ಫಲಂ ॥ ಸ್ವದತ್ತಾಂ ಪರದತ್ತಾಂ ವಾ ಯೋ ಹರೇ—

೩೦. ತ ವಸುಂಧರಾಂ ಷಷ್ಟಿಂವರ್ಷಸಹಸ್ರಾಣಿ ವಿಷ್ಠಾಯಾಂ ಜಾಯತೇ ಕ್ರಿಮಿರಿತಿ ॥

---

1. Read ಪರಮೇಶ್ವರ. 2. ವೇದವೇದಾಂಗ. The letters enclosed within ( ) are superfluous.

S

॥ ಶ್ರೀಗಣೇಶಾಯನಮಃ ॥

"ಓವರ್ ಮಾತೃದೇವೋ ಭವ"

ಶ್ರೀ ವಿದ್ಯಾರಣ್ಯ ಪ್ರಕಾಶಕ ಸಂಸ್ಥೆಯೂ ಶ್ರೀ ಶಂಕರ ಕರ್ನಾಟಕ ಪುಸ್ತಕ ಭಾಂಡಾರವೂ

ಕನ್ನಡ ನುಡಿಯ ಸೇವೆಗೋಸ್ಕರ ಹುಟ್ಟಿದ ಈ ಎರಡೂ ಸಂಸ್ಥೆಗಳು ಈಗ ೪, ೫ ವರ್ಷ ಕನ್ನಡಿಗರ ಸೇವೆಯನ್ನು ಮನಮುಟ್ಟಿ ಹುರುಪಿನಿಂದ ಮಾಡುತ್ತಿರುತ್ತವಷ್ಟೇ. ಶ್ರೀ ವಿ. ಪ್ರ. ಸಂಸ್ಥೆಯ ಪಾಲಿನ ಬೆಲೆ ೨೫೦ ರೂಪಾಯಿ. ಶ್ರೀ ಶಂ. ಕ. ಪು. ಭಾಂಡಾರದ ಪಾಲಿನ ಬೆಲೆ ೧೦೦ ರೂಪಾಯಿ ಮಾತ್ರ. ಶ್ರೀ ವಿದ್ಯಾರಣ್ಯ ಪುಸ್ತಕಮಾಲೆಯ ನಾಲ್ಕು ಗ್ರಂಥಗಳು—(೧) ಕರ್ನಾಟಕ ಸಿಂಹಾಸನಸ್ಥಾಪನೆ, ಬೆಲೆ ೧ ರೂ. (೨) ಕಥೆಗಳನ್ನೊಳಗೊಂಡ ಬೀರಬಲ್ಲನ ಚರಿತ್ರೆ (ಪೂರ್ವಾರ್ಧ), ಬೆಲೆ ೧ ರೂ. ೬ ಆ. (೩) ಛತ್ರಪತಿ ಸಿವಾಜಿ ಮಹಾರಾಜ, ಬೆಲೆ ೨ ರೂ. ೧೨ ಆ. (೪) ಕರ್ನಾಟಕ ಸಾಮ್ರಾಜ್ಯ ಸಂಪುಟ ೧.—ಈಗ ಹೊರಬಿದ್ದಿವೆ. ಈ ಮಾಲೆಗೆ ಚಂದಾದಾರರಾಗಲಿಚ್ಛಿಸುವವರು ಒಂದು ರೂಪಾಯಿ ಪ್ರವೇಶ ಫೀ ಕಳಿಸಿ ಬರೆಯಬೇಕು. ಮ॥ ರಾ॥ ದತ್ತಾತ್ರಯ ವೆಂಕಟೇಶ ಬೆಳವಿ, ಬಿ.ಎ., ಎಲ್‌ಎಲ್.ಬಿ. ಇವರು ಈ ಸಂಸ್ಥೆಗೆ ೧೦೦ ರೂಪಾಯಿಗಳನ್ನು ಕಾಣಿಕೆಯಾಗಿ ಕೊಟ್ಟಿರುವರೆಂದು ತಿಳಿಸಲು ಸಂತೋಷವಾಗುತ್ತದೆ.

ಶ್ರೀಶಂಕರ ಕರ್ನಾಟಕ ಪುಸ್ತಕ ಭಾಂಡಾರದಲ್ಲಿ ಎಲ್ಲತರದ ಉತ್ತಮ ಕನ್ನಡ ಗ್ರಂಥಗಳೂ ಶಾಲೋಪಯೋಗಿ ಕಾಯಿದೆ ಪುಸ್ತಕಗಳೂ ಸಕಾಶಿ ಚಿತ್ರಗಳೂ ಬರವಣಗಳೂ ಅಗ್ಗವಾಗಿ ದೊರೆಯುವವು. ಗ್ರಾಹಕರು ೧/೪ ಬೆಲೆಯನ್ನು ಮುಂಗಡವಾಗಿ ಕಳಿಸಿ ತಮಗೆ ಬೇಕಾದವುಗಳನ್ನು ವ್ಹಿ. ಪಿ. ಯಿಂದ ತರಿಸಿಕೊಳ್ಳಬಹುದು. ಯೋಗ್ಯ ಕಂಡ ಅಚ್ಚಾದ ಪುಸ್ತಕಗಳನ್ನು ಭಾಂಡಾರದಲ್ಲಿ ಮಾರಾಟಕ್ಕಿಟ್ಟುಕೊಳ್ಳುವೆವು. ಭಾಂಡಾರದ ಬೆಲೆ ಪಟ್ಟಿಯನ್ನಿಚ್ಛಿಸುವವರು ೪ ಆಣೆ ಅಂಚೆ ತಿಕೀಟುಗಳನ್ನು ರವಾನಿಸಬೇಕು. ಪ್ರತಿಯೊಬ್ಬ ಕನ್ನಡಿಗನು ಅಭಿಮಾನವಿಟ್ಟು ತನಗೆ ಬೇಕಾಗುವ ಪುಸ್ತಕಗಳನ್ನು ಭಾಂಡಾರದಿಂದಲೇ ತರಿಸಿಕೊಂಡು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ಮಾಳಮಡ್ಡಿ, ಧಾರವಾಡ | **ಶ್ರೀಪಾದ ರಾಮಚಂದ್ರ ದೇಶಪಾಂಡೆ,**
ತಾ॥ ೧೮-೧೧-೧೯೨೬ | **ಬಿ. ಎಸ್ ಸಿ., ವ್ಯವಸ್ಥಾಪಕರು.**